ಕರ್ನಾಟಕ ಸರ್ಕಾರ

ಕರ್ನಾಟಕ ಶಾಸನಗಳು ಸಂಪುಟ 2

ಬಳ್ಳಾರಿ ಜಿಲ್ಲೆಯ ಶಾಸನಗಳು

ಸಂಪಾದಕರು

ಚನ್ನಬಸಪ್ಪ ಎಸ್. ಪಾಟೀಲ, ಎಂ.ಎ., ಎಂ.ಫಿ., ಪಿಎಚ್.ಡಿ., ಡಿಪ್.ಆರ್ಕ್., ಡಿಪ್.ಎಪಿ.
ವಿನೋದಾ ಪಾಟೀಲ, ಎಂ.ಎ., ಬಿ.ಎಡ್., ಡಿಪ್.ಎಪಿ.

1997

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಮೈಸೂರು

ಬಳ್ಳಾರಿ ಜಿಲ್ಲೆಯ ಶಾಸನಗಳು

ಕರ್ನಾಟಕ ಸರ್ಕಾರ

ಕರ್ನಾಟಕ ಶಾಸನಗಳು ಸಂಪುಟ 2

ಬಳ್ಳಾರಿ ಜಿಲ್ಲೆಯ ಶಾಸನಗಳು

ಸಂಪಾದಕರು

ಚನ್ನಬಸಪ್ಪ ಎಸ್. ಪಾಟೀಲ, ಎಂ.ಎ., ಎಂ.ಎ., ಪಿಎಚ್.ಡಿ., ಡಿಪ್.ಆರ್ಕಿ., ಡಿಪ್.ಎಪಿ.
ವಿನೋದಾ ಪಾಟೀಲ, ಎಂ.ಎ., ಬಿ.ಎಡ್., ಡಿಪ್.ಎಪಿ.

1997
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಮೈಸೂರು

ಪ್ರಥಮ ಮುದ್ರಣ : 1000 ಪ್ರತಿಗಳು

ಬೆಲೆ: ರೂ. 170.00

ಡಿ.ಟಿ.ಪಿ. ಅಕ್ಷರ ಜೋಡಣೆ: ಕಾಂಪ್‌ಟೆಕ್ ಕಂಪ್ಯೂಟರ್ ಸಿಸ್ಟಮ್ಸ್, ಮೈಸೂರು
ಮುದ್ರಣ: ಎಫ್‌ಓಎಸ್‌ಟಿಆಯ್‌ಎಸ್, ಸಿಎಫ್‌ಟಿಆರ್‌ಆಯ್, ಮೈಸೂರು

ದೂರವಾಣಿ : ಕಛೇರಿ : ೨೨೫೬೩೬
ನಿವಾಸ : ೩೩೪೩೫೦
೩೩೪೪೬೧

ಲೀಲಾದೇವಿ ಆರ್. ಪ್ರಸಾದ್
ಪ್ರವಾಸೋದ್ಯಮ, ಕನ್ನಡ ಮತ್ತು
ಸಂಸ್ಕೃತಿ ರಾಜ್ಯ ಸಚಿವರು

ವಿಧಾನ ಸೌಧ, ಬೆಂಗಳೂರು-೫೬೦ ೦೦

ದಿನಾಂಕ 19-12-97

ಮುನ್ನುಡಿ

ಶಾಸನಗಳ ಸಂಶೋಧನೆ ಮತ್ತು ಪ್ರಕಟಣೆಯಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಕಳೆದ ಒಂದು ಶತಮಾನದಿಂದ ಮಹತ್ತರವಾದ ಕಾರ್ಯವನ್ನು ನಿರ್ವಹಿಸುತ್ತಿದೆ. ಒಂದು ಶತಮಾನದಷ್ಟು ಹಿಂದೆಯೇ ಆಗಿನ ಮೈಸೂರು ರಾಜ್ಯದಲ್ಲಿಯ ಶಾಸನಗಳನ್ನು ಎಪಿಗ್ರಾಫಿಯ ಕರ್ನಾಟಿಕ ಮಾಲಿಕೆಯಲ್ಲಿ ೧೨ ಸಂಪುಟಗಳಲ್ಲಿ ಪ್ರಕಟಿಸಲಾಯಿತು. ಸ್ವಾತಂತ್ರ್ಯಾನಂತರ ೧೯೫೬ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾಗಿ ಉತ್ತರ ಕರ್ನಾಟಕದ ಜಿಲ್ಲೆಗಳು ಈಗಿನ ಕರ್ನಾಟಕಕ್ಕೆ ಸೇರಿದವು. ಈ ಜಿಲ್ಲೆಗಳ ಶಾಸನಗಳನ್ನು ಸಂಗ್ರಹಿಸಿ ಎಪಿಗ್ರಾಫಿಯ ಕರ್ನಾಟಿಕ ಮಾಲಿಕೆಯಲ್ಲಿ ಪ್ರಕಟಿಸುವುದು ಅತ್ಯಾವಶ್ಯಕವಾಗಿದೆ. ಆದರೆ ಈ ಮಹತ್ತರವಾದ ಸಂಶೋಧನಾ ಕಾರ್ಯಕ್ಕೆ ಹಲವು ಅನುಭವಿ ಶಾಸನ ತಜ್ಞರ ಮತ್ತು ಸಾಕಷ್ಟು ಕಾಲಾವಕಾಶದ ಅವಶ್ಯಕತೆ ಇದೆ. ಈಗಾಗಲೇ ಈ ಜಿಲ್ಲೆಗಳ ಅನೇಕ ಶಾಸನಗಳು ವಿವಿಧ ಮಾಲಿಕೆಗಳಲ್ಲಿ ಪ್ರಕಟವಾಗಿ ಹತ್ತಾರು ಕಡೆ ಹಂಚಿಹೋಗಿವೆ. ಈ ಶಾಸನಗಳು ವಿದ್ವಾಂಸರ ಮತ್ತು ಆಸಕ್ತರ ಕೈಗೆ ಸುಲಭವಾಗಿ ಸಿಗುವುದಿಲ್ಲ. ಇವುಗಳನ್ನು ಸಂಗ್ರಹಿಸಿ ವ್ಯವಸ್ಥಿತವಾಗಿ ಜಿಲ್ಲಾವಾರು ಸಂಪುಟಗಳಲ್ಲಿ ಪ್ರಕಟಿಸುವ ಅವಶ್ಯಕತೆ ಇದೆ.

ಡಾ. ಚನ್ನಬಸಪ್ಪ ಎಸ್. ಪಾಟೀಲ ಮತ್ತು ಶ್ರೀಮತಿ ವಿನೋದಾ ಪಾಟೀಲರು ಆಸಕ್ತಿ ವಹಿಸಿ ಉತ್ತರ ಕರ್ನಾಟಕದ ಸುಮಾರು ಹತ್ತು ಸಾವಿರ ಶಾಸನಗಳನ್ನು ಸಂಗ್ರಹಿಸಿ ಜಿಲ್ಲಾವಾರು ವಿಂಗಡಿಸಿ, ಕರ್ನಾಟಕ ಶಾಸನಗಳು ಮಾಲಿಕೆಯಲ್ಲಿ ಪ್ರಕಟಣೆಗೆ ಸಿದ್ಧಗೊಳಿಸಿದ್ದಾರೆ. ಈ ಸಂಪುಟಗಳನ್ನು ಪ್ರಕಟಿಸಲು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಮುಂದೆ ಬಂದಿರುವುದು ಸಂತಸದ ವಿಷಯ. ಕರ್ನಾಟಕ ಶಾಸನಗಳು ಸಂಪುಟ - 1ರಲ್ಲಿ ವಿಜಯನಗರದ (ಹಂಪೆಯ) ೪೭೧ ಶಾಸನಗಳು ಕಳೆದ ವರ್ಷ ಪ್ರಕಟಣೆಗೊಂಡಿವೆ. ಪ್ರಸ್ತುತ ಸಂಪುಟ ೨ ಬಳ್ಳಾರಿ ಜಿಲ್ಲೆಯ ಉಳಿದ ಭಾಗದ ೬೫೧ ಶಾಸನಗಳನ್ನೊಳಗೊಂಡಿದೆ. ಈ ಮಾಲಿಕೆಯನ್ನು ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ಸಂತೋಷದ ಸಂಗತಿ. "Inscriptions of Bellary District" ಆಂಗ್ಲ ಭಾಷೆಯಲ್ಲಿ ಕಳೆದ ತಿಂಗಳ ೩ರಂದು ಹಂಪಿ ಉತ್ಸವ ೧೯೯೭ರಲ್ಲಿ ಬಿಡುಗಡೆಯಾಗಿದೆ. ಇದೇ ತಿಂಗಳಲ್ಲಿ ''ಬಳ್ಳಾರಿ ಜಿಲ್ಲೆಯ ಶಾಸನಗಳು'' ಕನ್ನಡದಲ್ಲಿ ಪ್ರಕಟವಾಗುತ್ತಿರುವುದು ಸಂಪಾದಕರ ಮತ್ತು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯದ ನಿರ್ದೇಶಕರ ಆಸಕ್ತಿ ಮತ್ತು ಪರಿಶ್ರಮದಿಂದ, ಈ ಉತ್ತಮ ಕಾರ್ಯಕ್ಕೆ ಸಂಪಾದಕರನ್ನು ಮತ್ತು ನಿರ್ದೇಶಕರನ್ನು ಅಭಿನಂದಿಸಿ ಈ ಮಾಲಿಕೆಯಲ್ಲಿಯ ಉಳಿದ ಜಿಲ್ಲೆಗಳ ಶಾಸನಗಳನ್ನು ಬೇಗನೆ ಹೊರತರಲೆಂದು ಆಶಿಸುತ್ತೇನೆ.

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಇತ್ತೀಚಿನ ವರ್ಷಗಳಲ್ಲಿ ಅನೇಕ ಸಂಶೋಧನಾ ಗ್ರಂಥಗಳನ್ನು ತ್ವರಿತವಾಗಿ ಪ್ರಕಟಿಸುವ ಉತ್ತಮ ಸಂಪ್ರದಾಯವನ್ನು ಹಾಕಿಕೊಂಡಿದೆ. ಈ ಸಂಪ್ರದಾಯವು ಮುಂದುವರಿಯಲಿ ಎಂದು ಹಾರೈಸುತ್ತೇನೆ.

ಲೀಲಾದೇವಿ ಆರ್. ಪ್ರಸಾದ್

(ಲೀಲಾದೇವಿ ಆರ್. ಪ್ರಸಾದ್)

ಪ್ರಕಾಶಕರ ನುಡಿ

ಎಪಿಗ್ರಾಫಿಯ ಕರ್ನಾಟಿಕ ಮಾಲಿಕೆ ಪ್ರಕಟವಾಗದ ಪ್ರದೇಶದ ಶಾಸನಗಳನ್ನು ಕರ್ನಾಟಕ ಶಾಸನಗಳು ಮಾಲಿಕೆಯು ಒಳಗೊಂಡಿದೆ. ವಿಜಯನಗರದ (ಹಂಪೆಯ) 471 ಶಾಸನಗಳನ್ನೊಳಗೊಂಡ ಈ ಮಾಲಿಕೆಯ ಮೊದಲನೆಯ ಸಂಪುಟವು ಕಳೆದ ವರ್ಷ ಪ್ರಕಟಗೊಂಡಿತು. ಬಳ್ಳಾರಿ ಜಿಲ್ಲೆಯ 657 ಶಾಸನಗಳನ್ನೊಳಗೊಂಡ ಎರಡನೆಯ ಸಂಪುಟವನ್ನು ಈಗ ವಿದ್ವಾಂಸರ ಮತ್ತು ಸಂಶೋಧಕರ ಮುಂದಿಡಲು ನಾನು ಸಂತೋಷಗೊಂಡಿದ್ದೇನೆ.

ಡಾ. ಚನ್ನಬಸಪ್ಪ ಎಸ್. ಪಾಟೀಲ ಮತ್ತು ಶ್ರೀಮತಿ ವಿನೋದಾ ಪಾಟೀಲರು ಬಹಳ ಶ್ರಮವಹಿಸಿ ಈ ಸಂಪುಟವನ್ನು ಸಂಪಾದಿಸಿರುವುದಲ್ಲದೆ ಮುದ್ರಣಕಾರ್ಯದ ಮೇಲ್ವಿಚಾರಣೆಯನ್ನೂ ನಿರ್ವಹಿಸಿದ್ದಾರೆ. ಈ ಉತ್ತಮ ಕೃತಿಗಾಗಿ ನಾನು ಇವರನ್ನು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಪರವಾಗಿ ಅಭಿನಂದಿಸುತ್ತೇನೆ.

ಮೈಸೂರು
15-12-1997

ಎಂ.ಎಲ್. ಶಿವಶಂಕರ
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ

ಪ್ರಸ್ತಾವನೆ

ಈ ಸಂಪುಟವು ಕರ್ನಾಟಕ ಶಾಸನಗಳ ಮಾಲಿಕೆಯಲ್ಲಿ ಎರಡನೆಯದು. ಈ ಮಾಲಿಕೆಯನ್ನು ಕೈಗೆತ್ತಿಕೊಂಡ ಉದ್ದೇಶವನ್ನು ಈ ನಿರ್ದೇಶನಾಲಯ ಪ್ರಕಟಿಸಿರುವ ಮೊದಲನೆಯ ಸಂಪುಟದಲ್ಲಿ ವಿವರಿಸಿದೆ. ಮೊದಲನೆಯ ಸಂಪುಟದಲ್ಲಿ ವಿಜಯನಗರ ಪಟ್ಟಣದ 471 ಶಾಸನಗಳಿವೆ. ಈ ಶಾಸನಗಳು ಈಗಿನ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಆನೆಗೊಂದಿ; ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಬುಕ್ಕಸಾಗರ, ಹಂಪಿ, ಕಡಿರಾಮಪುರ, ಕಮಲಾಪುರ, ವೆಂಕಟಾಪುರ, ನಿಂಬಾಪುರ, ನಾಗೇನಹಳ್ಳಿ, ಅನಂತಶಯನಗುಡಿ, ಹೊಸಪೇಟೆ, ಕೊಂಡನಾಯಕನಹಳ್ಳಿ ಮತ್ತು ಜಂಬುನಾಥನಹಳ್ಳಿಗಳಲ್ಲಿವೆ. ಪ್ರಸ್ತುತ ಸಂಪುಟದಲ್ಲಿ ಬಳ್ಳಾರಿ ಜಿಲ್ಲೆಯ ಇತರ ಸ್ಥಳಗಳ 657 ಶಾಸನಗಳಿವೆ. ಈ ಸಂಪುಟವನ್ನು ಅಚ್ಚಿಗೆ ಕಳಿಸಿದಾಗ ಹರಪನಹಳ್ಳಿ ತಾಲೂಕು ಬಳ್ಳಾರಿ ಜಿಲ್ಲೆಯಲ್ಲಿತ್ತು. ಈಗ ಅದು ದಾವಣಗೆರೆ ಜಿಲ್ಲೆಗೆ ಸೇರಿದೆ.

ಬಳ್ಳಾರಿ ಜಿಲ್ಲೆಯು ನನ್ನ ಸಂಶೋಧನಾ ಜೀವನದಲ್ಲಿ ವಿಶೇಷ ಸ್ಥಾನವನ್ನು ಪಡೆದಿದೆ. ವಿಜಯನಗರದಲ್ಲಿ ಪುರಾತತ್ವ ಸಂಶೋಧನೆಯನ್ನು ಪ್ರಾರಂಭಿಸುವುದಕ್ಕಿಂತ ಮೊದಲು ಈ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಪುರಾತತ್ವ ಅನ್ವೇಷಣೆಯನ್ನು ಕೊಗೊಳ್ಳುವ ಅವಕಾಶ ನನಗೆ ದೊರಕಿತ್ತು. 1978ರಲ್ಲಿ ನಾನು ಪ್ರಥಮ ಅನ್ವೇಷಣಾ ಕಾರ್ಯವನ್ನು ಪ್ರಾರಂಭಿಸಿದಾಗ ಉಡೇಗೊಳ್ಳದಲ್ಲಿಯ ಅಶೋಕನ ಶಾಸನವನ್ನು ಬೆಳಕಿಗೆ ತರುವ ಅದೃಷ್ಟ ನನಗೆ ಲಭಿಸಿತು. ಮೌರ್ಯ ಚಕ್ರವರ್ತಿಯ ಹೆಸರನ್ನು 'ರಾಜ ಅಶೋಕ' ಎಂದು ಉಲ್ಲೇಖಿಸುವ ಈ ಶಾಸನ ಭಾರತದ ಇತಿಹಾಸದಲ್ಲಿ ಬಹಳ ಮಹತ್ವದ್ದಾಗಿದೆ. ಇದು ಚಕ್ರವರ್ತಿಯ ಹೆಸರನ್ನೊಳಗೊಂಡ ನಾಲ್ಕನೆಯ ಶಾಸನ. ಈ ಸಂಶೋಧನೆಯು ನನ್ನ ಸಂಶೋಧನಾ ಜೀವನದಲ್ಲಿ ಒಂದು ಉನ್ನತ ಸ್ಥಾನವನ್ನು ಪಡೆದಿದೆ. ಈ ಹಿನ್ನೆಲೆಯಲ್ಲಿ ಈ ಜಿಲ್ಲೆಯ ಶಾಸನಗಳನ್ನೊಳಗೊಂಡ ಈ ಸಂಪುಟವನ್ನು ವಿದ್ವಾಂಸರ ಮತ್ತು ಆಸಕ್ತರ ಮುಂದಿಡಲು ನಾನು ಹರ್ಷಗೊಂಡಿದ್ದೇನೆ.

ಈ ಮಾಲಿಕೆಯ ಪ್ರಕಟಣೆಯನ್ನು ಅಂದಿನ ನಿರ್ದೇಶಕರಾಗಿದ್ದ ಚಿರಂಜೀವ್ ಸಿಂಗ್ ಅವರು ಪ್ರೋತ್ಸಾಹಿಸಿದರು. ಈ ಸಂಪುಟವನ್ನು ಪ್ರಕಟಿಸಲು ಈಗಿನ ನಿರ್ದೇಶಕರಾದ ಶ್ರೀ ಎಂ.ಎಲ್. ಶಿವಶಂಕರ್ ಅವರು ಪ್ರೋತ್ಸಾಹ ನೀಡಿದ್ದಾರೆ. ಇವರೀರ್ವರಿಗೂ ನಾನು ಋಣಿಯಾಗಿದ್ದೇನೆ. ಶ್ರೀ ಎಂ.ಎನ್. ಕಟ್ಟಿ, ನಿರ್ದೇಶಕರು (ನಿವೃತ್ತ), ಮತ್ತು ಡಾ. ಎಂ.ಡಿ. ಸಂಪತ್, ನಿರ್ದೇಶಕರು, ಶಾಸನ ವಿಭಾಗ, ಭಾರತೀಯ ಪುರಾತತ್ವ ಸರ್ವೇಕ್ಷಣ, ಮೈಸೂರು ಇವರು 1993-94ರವರೆಗಿನ ಪ್ರಕಟಿತ ಮತ್ತು ಅಪ್ರಕಟಿತ ವಾರ್ಷಿಕ ವರದಿಗಳನ್ನು ಪರಾಮರ್ಶಿಸಲು ಅವಕಾಶವಿತ್ತಿದ್ದಾರೆ. ಇವರಿಗೆ ನನ್ನ ಕೃತಜ್ಞತೆಗಳು.

ಕೇಂದ್ರೀಯ ಆಹಾರ ವಿಜ್ಞಾನ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ವಿ. ಪ್ರಕಾಶ್ ಅವರು ಈ ಪುಸ್ತಕದ ಮುದ್ರಣವನ್ನು ಸಂತೋಷದಿಂದ ಒಪ್ಪಿ ಸಕಾಲದಲ್ಲಿ ಮುದ್ರಿಸಿ ಕೊಟ್ಟಿರುವರು. ಶ್ರೀ ಕೆ.ಎ. ರಂಗನಾಥ, ಮುಖ್ಯಸ್ಥರು, ಎಫ್‌ಓಎಸ್‌ಟಿಆಯ್‌ಎಸ್, ಸಿಎಫ್‌ಟಿಆರ್‌ಆಯ್ ಮತ್ತು ಶ್ರೀ ಎಸ್. ಉಮೇಶ್, ಮುದ್ರಣದ ತಾಂತ್ರಿಕ ಅಧಿಕಾರಿ ಅವರು ಶ್ರೀಯುತರಾದ ಜಿ. ವೆಂಕಟೇಶ್ ಮತ್ತು ಸಿ.ಎನ್. ಜನಾರ್ಧನ ಅವರ ನೆರವಿನಿಂದ ಈ ಸಂಪುಟವನ್ನು ಅತ್ಯಂತ ಕಡಿಮೆ ಸಮಯದಲ್ಲಿ ಅಂದವಾಗಿ ಮುದ್ರಿಸಿದ್ದಾರೆ. ಈ ಎಲ್ಲ ಮಹನೀಯರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮೈಸೂರು
15-12-1997

ಚನ್ನಬಸಪ್ಪ ಎಸ್. ಪಾಟೀಲ
ಉಪ ನಿರ್ದೇಶಕ
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಮೈಸೂರು

ಪರಿವಿಡಿ

ಸಂಕ್ಷೇಪಗಳು

ಆ್ಯರಿಎ	:	ಆ್ಯನುವಲ್ ರಿಪೋರ್ಟ್ ಆನ್ ಎಪಿಗ್ರಾಫಿ
ಆ್ಯರಿಇಎ	:	ಆ್ಯನುವಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಾಫಿ
ಆ್ಯರಿಸೌಇಎ	:	ಆ್ಯನುವಲ್ ರಿಪೋರ್ಟ್ ಆನ್ ಸೌತ್ ಇಂಡಿಯನ್ ಎಪಿಗ್ರಾಫಿ
ಎಇ	:	ಎಪಿಗ್ರಾಫಿಯ ಇಂಡಿಕ
ಎಇಅಪಸ	:	ಎಪಿಗ್ರಾಫಿಯ ಇಂಡಿಕ: ಅರೇಬಿಕ್ ಆಂಡ್ ಪರ್ಶಿಯನ್ ಸಪ್ಲೆಮೆಂಟ್
ಎಇಮು	:	ಎಪಿಗ್ರಾಫಿಯ ಇಂಡೋಮುಸ್ಲೆಮಿಕ
ಇದ	:	ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿ ಪತ್ರಿಕೆ
ಜಎಸೊಇ	:	ಜರ್ನಲ್ ಆಫ್ ದಿ ಎಪಿಗ್ರಾಫಿಕಲ್ ಸೊಸಾಯಿಟಿ ಆಫ್ ಇಂಡಿಯ
ಜಮೈಯು	:	ಜರ್ನಲ್ ಆಫ್ ದಿ ಯುನಿವರ್ಸಿಟಿ ಆಫ್ ಮೈಸೂರ್
ಕಭಾ	:	ಕರ್ನಾಟಕ ಭಾರತಿ, ಕರ್ನಾಟಕ ವಿಶ್ವವಿದ್ಯಾಲಯದ ಪತ್ರಿಕೆ
ಕಸಾಪಪ	:	ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ
ಮಾಕ	:	ಮಾನವಿಕ ಕರ್ನಾಟಕ, ಮೈಸೂರು ವಿಶ್ವವಿದ್ಯಾಲಯದ ಪತ್ರಿಕೆ
ಮೈಆರಿ	:	ಆ್ಯನುವಲ್ ರಿಪೋರ್ಟ್ ಆಫ್ ದಿ ಮೈಸೂರ್ ಆರ್ಕಿಯಾಲಜಿಕಲ್ ಡಿಪಾರ್ಟ್‌ಮೆಂಟ್
ಸೌಇಇ	:	ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಶನ್ಸ್
ವಿಪ್ರೊರಿ	:	ವಿಜಯನಗರ: ಪ್ರೋಗ್ರೆಸ್ ಆಫ್ ರೀಸರ್ಚ್, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಊರುಗಳ ಅನುಕ್ರಮದಲ್ಲಿ ಶಾಸನಗಳ ಸೂಚಿ

ಹರಪನಹಳ್ಳಿ ತಾಲೂಕು

ಹೊಸಪೇಟೆ ತಾಲೂಕು

ಕೂಡ್ಲಿಗಿ ತಾಲೂಕು

ಸಂಡೂರು ತಾಲೂಕು

ಸಿರುಗುಪ್ಪ ತಾಲೂಕು

ಅನುಬಂಧ

ವಂಶಾನುಕ್ರಮದಲ್ಲಿ ಶಾಸನಗಳ ಸೂಚಿ

ಅರಸ	ಶಾಸನ ಕಾಲ (ಕ್ರಿ.ಶ. ದಲ್ಲಿ)	ಶಾಸನ ಸಂಖ್ಯೆ
ಮೌರ್ಯ		
ಅಶೋಕ	ಕ್ರಿ.ಪೂ. 3ನೇ ಶತಮಾನ	623, 651
ಪಲ್ಲವ		
ಶಿವಸ್ಕಂದವರ್ಮನ್	ಅರಸನ ಆಡಳಿತದ 8ನೇ ವರ್ಷ	99
ಬಾದಾಮಿ ಚಾಲುಕ್ಯರು		
ಪುಲಕೇಶಿ II	7ನೇ ಶತಮಾನ	60, 270
ರಾಷ್ಟ್ರಕೂಟ		
ಇಂದ್ರ III	920	41
	922	354-355
ಇಂದ್ರವಲ್ಲಭ	--	278
ಗೋವಿಂದ IV	931	396
ಕೃಷ್ಣ III	944-45	280
	947	48
	956	311
	957	560
	964	30
	--	543, 557
ಖೊಟ್ಟಿಗ	967	32
	971	38
	972	285
ಕಲ್ಯಾಣ ಚಾಲುಕ್ಯರು		
ತೈಲ II	976	51
	981	592
	987	287
	991	312
	992	238
	996	44
ವಿಕ್ರಮಾದಿತ್ಯ V	1014	423
ಜಯಸಿಂಹ II (ಜಗದೇಕಮಲ್ಲ)	1017	564, 607
	1018	294, 296
	1022	649
	1025	134
	1032	405
	1033	350
	1034	402
	1034-35	229
	1036	69-70, 176
	1038	198
	1041-42	189
	--	133
ಸೋಮೇಶ್ವರ I	1044	82, 395, 579
	1045	20, 249
	1046	162, 247
	1047	246, 541, 593
	1049	286
	1050	397
	1052	389
	1052-53	205
	1053	376
	1054	373
	1055	239
	1057	101
	1058	187
	1059	348
	1061	349
	1062	130
	1064	411, 415-416
	1065	335
	1066	347
	1068	590
	--	81, 237
ತ್ರೈಲೋಕ್ಯಮಲ್ಲ	--	177
ಸೋಮೇಶ್ವರ II	1068	314
	1074	115
	--	414
ವಿಕ್ರಮಾದಿತ್ಯ VI	850?	104
	1079	274, 385

	1083	217
	1085-86	391
	1087	346, 378
	1090	129
	1091	637
	1091-92	31
	1093	108
	1098	36
	1099	39, 138
	1102	638
	1103	306
	1104	139
	1106	216
	1106-07	17
	1107	304, 381
	1108	303
	1110	195, 203, 380
	1111	232, 334
	1112	336, 580
	1113	131, 279
	1115	282, 308
	1116	155, 188
	1119	45, 317
	1120	600
	1121	194, 625
	1122	281, 309, 394, 417
	1126	307, 333
ತ್ರಿಭುವನಮಲ್ಲ	1071	126
	1075	292
	1131	3
		110-111, 125, 202, 283, 363, 366
ಸೋಮೇಶ್ವರ III	1127	392
	1130	78
	1137	601

ಜಗದೇಕಮಲ್ಲ II	1141	79, 80
	1142	117, 602
	1143	219
	1144	262, 272
	1146	330
	1147	33, 215, 297, 401
	1148	40, 73, 136, 301
	1149	120, 328
	--	185, 340
ತೈಲ III	1154	469
ಸೋಮೇಶ್ವರ IV	1173	63
	--	64
--	--	406

ಹೊಯ್ಸಳ

ಬಲ್ಲಾಳ II	1197-98	325
	1193	298
	1194	112, 143
	1195	147
	1204	148
	1205	146
	1206	523
	1207	52
	1209	153, 332
	1212	102
	1214	371
	1215	156
	1217	72
	1218	540
	1219	47
	--	144
ನರಸಿಂಹ II	1222	269
	1223	242
	1224	382, 542
	1226	191, 193, 464
	1228	277
ನರಸಿಂಹ III	1282	326-327
	1292	318

ವಿವಿಧ

ಬಳ್ಳಾರಿ ಜಿಲ್ಲೆಯ ನಕಾಶೆ



ಪೀಠಿಕೆ

ಈ ಸಂಪುಟವು, ಮೊದಲನೆಯ ಸಂಪುಟದಲ್ಲಿ ಪ್ರಕಟಗೊಂಡ ವಿಜಯನಗರದ (ಹಂಪೆಯ) 471 ಶಾಸನಗಳನ್ನು ಹೊರತುಪಡಿಸಿ, 657 ಶಾಸನಗಳನ್ನೊಳಗೊಂಡಿದೆ. ಈ ಸಂಪುಟದಲ್ಲಿ ಬಳ್ಳಾರಿ (96), ಹಡಗಲಿ (121), ಹಗರಿಬೊಮ್ಮನಹಳ್ಳಿ (52), ಹರಪನಹಳ್ಳಿ (153), ಹೊಸಪೇಟೆ (72), ಸಂಡೂರು (59) ಮತ್ತು ಸಿರುಗುಪ್ಪ (104) ತಾಲೂಕುಗಳ ಶಾಸನಗಳಿವೆ.

ರಾಜಕೀಯ: ಈ ಪ್ರದೇಶದಲ್ಲಿ ಮೌರ್ಯರ ಕಾಲದ ಶಾಸನಗಳೇ ಅತಿ ಪ್ರಾಚೀನ ಶಾಸನಗಳು. ಶಾಸನ ಸಂ. 623 ಮತ್ತು 651 ಕ್ರಿ.ಪೂ. 3ನೇ ಶತಮಾನದಲ್ಲಿ ಈ ಪ್ರದೇಶವನ್ನಾಳುತ್ತಿದ್ದ ಅಶೋಕನ ರಾಜಾಜ್ಞೆಯ ಶಿಲಾಶಾಸನಗಳು. ಇವು ರಾಜನು ಅಧಿಕಾರಿಗಳ ಮೂಲಕ ಧರ್ಮ ಪ್ರಸಾರ ಮಾಡುವ ಶಾಸನಗಳಾಗಿವೆ. ಶಾಸನ ಸಂ. 60 ಮತ್ತು 270ರಿಂದ ಈ ಪ್ರದೇಶವು ಕ್ರಿ.ಶ. 7ನೇ ಶತಮಾನದಲ್ಲಿ ಬಾದಾಮಿ ಚಾಲುಕ್ಯ ಅರಸ ಎರಡನೆಯ ಪುಲಕೇಶಿಯ ಆಡಳಿತದಲ್ಲಿತ್ತೆಂದು ತಿಳಿಯುತ್ತದೆ. ಕ್ರಿ.ಶ. 920ರ ಶಾಸನ ಸಂ. 41 ಮತ್ತು ಕ್ರಿ.ಶ. 922ರ ಶಾಸನ ಸಂ. 354-355 ರಾಷ್ಟ್ರಕೂಟ ಅರಸ ಮೂರನೆಯ ಇಂದ್ರನ ಶಾಸನಗಳು. ಈತನ ಅಧೀನದಲ್ಲಿ ಮಹಾಸಾಮಂತ ಬಿಜ್ಜನು ಕೋಗಳಿ-500 ಮತ್ತು ಮಾಸಿಯವಾಡಿ-140 ಗಳನ್ನಾಳುತ್ತಿದ್ದನು. ಈ ಸಮಯದಲ್ಲಿ ನೊಳಂಬ ಅಯ್ಯಪ್ಪನ ಮಗ ರಾಜಕುಮಾರ ಅಣ್ಣಿಗನು ಉತ್ತರಕ್ಕೆ ದಂಡೆತ್ತಿ ಹೋಗಿ ಪಡುಗಲ್ಲಿನಲ್ಲಿ ಯುದ್ಧ ಮಾಡಿದಾಗ ಕದಂಬ ವಂಶದ ಇಬ್ಬರು ವ್ಯಕ್ತಿಗಳು ಹತರಾದರು. ಶಾಸನ ಸಂ. 278 ಸಹ ಇಂದ್ರವಲ್ಲಭನ ಸಾಮಂತನು ಕೋಗಳಿ-500 ಮತ್ತು ಮಾಸಿಯವಾಡಿ-140 ಗಳನ್ನಾಳುತ್ತಿದ್ದನೆಂದು ತಿಳಿಸುತ್ತದೆ. ಕ್ರಿ.ಶ. 931ರಲ್ಲಿ ಈ ಎರಡೂ ಭಾಗಗಳನ್ನು ರಾಷ್ಟ್ರಕೂಟ ಅರಸ ನಾಲ್ಕನೆಯ ಗೋವಿಂದನ (ಸಂ. 396) ಅಧೀನದಲ್ಲಿ ನೊಳಂಬ ವಂಶದ ಅಯ್ಯಪದೇವನು ಆಳುತ್ತಿದ್ದ. ಆದರೆ ಕ್ರಿ.ಶ. 944-45ರಲ್ಲಿ ಈ ಎರಡೂ ಭಾಗಗಳು ರಾಷ್ಟ್ರಕೂಟ ಅರಸ ಮೂರನೆಯ ಕೃಷ್ಣ (ಸಂ. 280)ನ ಅಧೀನದಲ್ಲಿ ಚಾಲುಕ್ಯ ವಂಶದ ಸಾಮಂತ ಕತ್ಯೇರನ ಆಡಳಿತದಲ್ಲಿದ್ದವು. ಅದೇ ಅರಸನ ಅಧೀನದಲ್ಲಿ ಮಹಾಸಾಮಂತ ರೊಟ್ಟಯ್ಯನೂ ಈ ಭಾಗಗಳನ್ನಾಳುತ್ತಿದ್ದನು (ಸಂ. 311). ಕ್ರಿ.ಶ. 957ರಲ್ಲಿ ಮೂರನೆಯ ಕೃಷ್ಣನ ಪ್ರಧಾನನಾದ ಶತ್ರುಘ್ನನು ಜಿಲ್ಲೆಯ ಉತ್ತರ ಭಾಗದಲ್ಲಿ ಬಲ್ಲಕುಂದೆ-ವಿಷಯವನ್ನಾಳುತ್ತಿದ್ದನು (ಸಂ. 560). ಶಾಸನ ಸಂ. 32 ಕೃಷ್ಣನು ಕ್ರಿ.ಶ. 967ರಲ್ಲಿ ಮರಣ ಹೊಂದಿದ ನಂತರ ಖೊಟ್ಟಿಗನು ಪಟ್ಟಕ್ಕೆ ಬಂದನು ಎಂದು ತಿಳಿಸುತ್ತದೆ. ಗಂಗ ಅರಸ ಎರಡನೆಯ ಮಾರಸಿಂಹನು ಖೊಟ್ಟಿಗನ ಸಾಮಂತನಾಗಿದ್ದನು (ಸಂ. 285). ಈತನಿಗೆ 'ನೊಳಂಬಕುಲಾಂತಕ', ಅಂದರೆ ನೊಳಂಬರ ಸಂಹಾರಕ[1] ಎಂಬ ಬಿರುದು ಇತ್ತು. ಈತನು ಉಚ್ಚಂಗಿ ಕೋಟೆಯನ್ನು ವಶಪಡಿಸಿಕೊಂಡಿದ್ದ.[2] ಇನ್ನೂ ಎರಡು ಶಾಸನಗಳು (ಸಂ. 32 ಮತ್ತು 38) ಖೊಟ್ಟಿಗನ ಆಡಳಿತದ ಕಾಲದವು. ಈತನು ಕುಡತಿನಿಯ ಸ್ಕಂದ ದೇವರ ಪೂಜೆಗೆ ಭೂಮಿ ದಾನ ನೀಡಿದನು (ಸಂ. 38).

ಕಲ್ಯಾಣ ಚಾಲುಕ್ಯರ ಶಾಸನಗಳು ಎರಡನೆಯ ತೈಲನ ಆಳ್ವಿಕೆಯ ಕಾಲದಿಂದ ಕಂಡು ಬರುತ್ತವೆ. ಈ ಅರಸನ ಆರು ಶಾಸನಗಳಿವೆ. ಈತನು ಕ್ರಿ.ಶ. 976ರಲ್ಲಿ ಕುಡತಿನಿಯ ಭೈರವದೇವರಿಗೆ ಭೂಮಿ ದಾನ ನೀಡಿದ್ದಾನೆ (ಸಂ. 51) ಮತ್ತು ಕ್ರಿ.ಶ. 981ರಲ್ಲಿ ಕಂಚಗಾರ ಬೆಳಗಲ್ಲಿನ ಮೂರು ಶಿವ ದೇವಾಲಯಗಳಿಗೆ ಹಳೆಯ ಸ್ಥಾನ-ಮಾನ್ಯವನ್ನು ಊರ್ಜಿತಪಡಿಸಿದನು (ಸಂ. 592). ಈತನ ಅಧೀನದಲ್ಲಿ ಕ್ರಿ.ಶ. 987ರಲ್ಲಿ ಮಹಾಸಾಮಂತ ಆಯ್ತಮರಸ ಕಿಸುಕಾಡು-70 ಮತ್ತು ಕೋಗಳಿ-500 ಆಳುತ್ತಿದ್ದನು (ಸಂ. 287). ಕದಂಬ ವಂಶದ ಮಹಾಸಾಮಂತ ಆದಿತ್ಯವರ್ಮರಸನು ಕ್ರಿ.ಶ. 991 ಮತ್ತು 992ರಲ್ಲಿ ಈತನ ಅಧೀನದಲ್ಲಿ ಕೋಗಳಿ-500 ವನ್ನಾಳುತ್ತಿದ್ದನು (ಸಂ. 312, 238). ಚಾಲುಕ್ಯ ಅರಸ ಐದನೆಯ ವಿಕ್ರಮಾದಿತ್ಯನ ಕ್ರಿ.ಶ. 1014ರ ಒಂದೇ ಒಂದು ಶಾಸನವಿದೆ. ಈತನ ಅಧೀನದಲ್ಲಿ ಇರಿವ-ನೊಳಂಬಾಧಿರಾಜನು ಈ ಪ್ರದೇಶವನ್ನು ಆಳುತ್ತಿದ್ದನು (ಸಂ. 423).

ಚಾಲುಕ್ಯ ಅರಸ ಎರಡನೆಯ ಜಯಸಿಂಹನ ಆಳ್ವಿಕೆಯ ಬಗ್ಗೆ ಹದಿನಾರು ಶಾಸನಗಳು ತಿಳಿಸುತ್ತವೆ. ಈತನ ಅಧೀನದಲ್ಲಿ ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ಉದಯಾದಿತ್ಯದೇವನು ನೊಳಂಬವಾಡಿ-32000, ಕದಂಬಳಿಗೆ-1000, ಕೋಗಳಿ-500, ಬಲ್ಲಕುಂದೆ-300, ಕುಡಿಯಹರವಿ-70 ಮುಂತಾದವುಗಳನ್ನು ಕ್ರಿ.ಶ. 1017ರಿಂದ ಕ್ರಿ.ಶ.1036ರವರೆಗೆ ಆಳುತ್ತಿದ್ದನು (ಸಂ. 69-70, 176, 229, 294, 296, 402, 405, 564). ಈ ನೊಳಂಬ ಅರಸನು ತನ್ನ ರಾಜಧಾನಿ ಕಂಪುಲಿ (ಕಂಪ್ಲಿ)ಯಿಂದ ಕ್ರಿ.ಶ. 1018ರಲ್ಲಿ ಆಳುತ್ತಿದ್ದನು (ಸಂ.

294). ಒರುವಾಯಿಯಲ್ಲಿ ದೊರೆತ ಎರಡು ಶಾಸನಗಳು ಎರಡನೆಯ ಜಯಸಿಂಹನ ರಾಣಿ ದೇವಳದೇವಿಯ ಬಗ್ಗೆ ಪ್ರಸ್ತಾಪಿಸುತ್ತವೆ (ಸಂ. 69-70). ದೇವಳದೇವಿಯು ನೊಳಂಬ ರಾಜಕುಮಾರಿ. ಈ ಶಾಸನಗಳು ಎರಡನೆಯ ಇರಿವ ನೊಳಂಬನ ಪತ್ನಿಯೆಂದು ಗುರುತಿಸಲಾಗಿರುವ ನೊಳಂಬ-ಮಹಾದೇವಿಯ ಶವ ಸಂಸ್ಕಾರದ ವಿಧಿಗಳ ಬಗ್ಗೆಯೂ ತಿಳಿಸುತ್ತವೆ.[3] ಕ್ರಿ.ಶ. 1038ರಲ್ಲಿ ನೊಳಂಬ ಅರಸ ಜಗದೇಕಮಲ್ಲ ಇರ್ಮಡಿ-ನೊಳಂಬನು ಮಾಸೆಯವಾಡಿ-170ನ್ನು ಆಳುತ್ತಿದ್ದನು (ಸಂ. 198).

ಚಾಲುಕ್ಯ ಅರಸ ಒಂದನೆಯ ಸೋಮೇಶ್ವರನು ತನ್ನ ಆಳ್ವಿಕೆಯ ಪ್ರಾರಂಭದ ವರ್ಷಗಳಲ್ಲಿ ಈ ಪ್ರದೇಶದಲ್ಲಿ ಬೀಡು ಬಿಟ್ಟಿದ್ದನು (ಸಂ. 249, 579). ಈತನ ಸಾಮಂತ ನೊಳಂಬ ವಂಶದ ಎರಡನೆಯ ತ್ರೈಲೋಕ್ಯಮಲ್ಲ ನನ್ನಿ ನೊಳಂಬ ಪಲ್ಲವ ಪೆರ್ಮಾನಡಿಯು ಕೋಗಳಿ-500, ಕದಂಬಳಿಗೆ-1000, ಬಲ್ಲಕುಂದೆ-300, ಕಣೆಯಕಲ್ಲು-300, ಕುಡಿಹರವಿ-70 ಮತ್ತು ಕರಿವಿಡಿ-30 ಪ್ರಾಂತಗಳನ್ನು ಆಳುತ್ತಿದ್ದನು (ಸಂ. 205, 247, 249, 373, 395). ಈತನ ಇನ್ನೊಬ್ಬ ಸಾಮಂತ ಗಂಡರಾದಿತ್ಯರಸನು ಸಿಂದವಾಡಿ-1000, ಬೆಣ್ಣೆವೂರು-12 ಮತ್ತು ನರುಗುಂದಗಳನ್ನು ಆಳುತ್ತಿದ್ದ (ಸಂ. 162, 593). ರಾಜಕುಮಾರ ವಿಕ್ರಮಾದಿತ್ಯನು ಗಂಗವಾಡಿ-96000, ಬನವಾಸಿ-12000 ಮತ್ತು ನೊಳಂಬವಾಡಿ-32000ಗಳ ಜವಾಬ್ದಾರಿ ವಹಿಸಿಕೊಂಡಿದ್ದನು (ಸಂ. 101). ವೆಂಗಿ, ನೊಳಂಬವಾಡಿ-32000, ಕದಂಬಳಿಗೆ, ಕೋಗಳಿ-500 ಮತ್ತು ಬಲ್ಲಕುಂದೆ-300 ಇನ್ನೊಬ್ಬ ರಾಜಕುಮಾರ ವಿಷ್ಣುವರ್ಧನ ವಿಜಯಾದಿತ್ಯನ ಮೇಲ್ವಿಚಾರಣೆಯಲ್ಲಿದ್ದವು (ಸಂ. 130, 335, 347, 411). ಒಂದನೆಯ ಸೋಮೇಶ್ವರನು ಕ್ರಿ.ಶ. 1047ರಲ್ಲಿ ವೇಹೂರಿನಲ್ಲಿ ತ್ರೈಪುರುಷ ದೇವಾಲಯಕ್ಕೆ ಭೂಮಿ ದಾನ ನೀಡಿದನು (ಸಂ. 541). ಈತನ ಮಂತ್ರಿ ಮಹಾಮಾತ್ಯ ದೇಮರಸನು ಹಿರೇಹಡಗಲಿಯಲ್ಲಿ ದೇಮೇಶ್ವರ ದೇವಸ್ಥಾನ ಕಟ್ಟಿಸಿದನು (ಸಂ. 101). ಒಂದನೆಯ ಸೋಮೇಶ್ವರನು ವಾಸಿಯಾಗದ ಒಂದು ರೋಗದಿಂದ ಬಳಲುತ್ತಿದ್ದನು. ಅದನ್ನು ಸಹಿಸಲಾರದೆ ಈತ ಕ್ರಿ.ಶ. 1068, ಮಾರ್ಚ್ 29ರಂದು ಪರಮಯೋಗವನ್ನು ಆಚರಿಸುತ್ತ ಕುರವತ್ತಿಯಲ್ಲಿ ತುಂಗಭದ್ರ ನದಿಯಲ್ಲಿ ಮುಳುಗಿ ಮರಣ ಹೊಂದಿದನು.[4] ಕುರುವತ್ತಿಯಲ್ಲಿರುವ ಮಲ್ಲಿಕಾರ್ಜುನ ದೇವಾಲಯವನ್ನು ಈ ಅರಸನಿಗೆ ಸಮರ್ಪಿಸಲಾಗಿದೆ. ಈ ಗುಡಿಯಲ್ಲಿರುವ ದೇವರನ್ನು ಈತನ ಬಿರುದು ಅಹವಮಲ್ಲೇಶ್ವರ ಎಂಬ ಹೆಸರಿನಿಂದ ಶಾಸನಗಳು ಉಲ್ಲೇಖಿಸುತ್ತವೆ (ಸಂ. 140-149). ಈ ದೇವಾಲಯದಲ್ಲಿ ಅರಸನ ಪ್ರತಿಕೃತಿಯ ದೊಡ್ಡ ವಿಗ್ರಹವೂ ಇದೆ.[5] ಒಂದನೆಯ ಸೋಮೇಶ್ವರನ ನಂತರ ಎರಡನೆಯ ಸೋಮೇಶ್ವರನು ಪಟ್ಟಕ್ಕೆ ಬಂದನು. ಎರಡನೆಯ ಸೋಮೇಶ್ವರನ ಅಧೀನದಲ್ಲಿ ತ್ರೈಲೋಕ್ಯಮಲ್ಲ-ನೊಳಂಬ ಪಲ್ಲವ-ಪೆರ್ಮಾಡಿಯು ಕೋಗಳಿ-500, ಕದಂಬಳಿಗೆ-1000 ಮತ್ತು ಬಲ್ಲಕುಂದೆ-300ನ್ನು ಆಳುತ್ತಿದ್ದನು (ಸಂ. 314).

ಈ ಪ್ರದೇಶದಲ್ಲಿ ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಅನೇಕ ಶಾಸನಗಳು ದೊರೆತಿವೆ. ಈತನು ನೀರುಗುಂದ ಮತ್ತು ಕೃಷ್ಣಪಲ್ಲಿಕ ಗ್ರಾಮಗಳನ್ನು ದ್ರಾವಿಡ ಪ್ರದೇಶದಿಂದ ಬಂದ ಮತ್ತು ವೇದಗಳಲ್ಲಿ ಪಾರಂಗತರಾಗಿದ್ದ ಬ್ರಾಹ್ಮಣರಿಗೆ ದಾನ ಮಾಡಿದನು (ಸಂ. 378). ಈತನ ಒಬ್ಬ ರಾಣಿ ಪಿರಿಯ ಕೇತಲದೇವಿಯು ಸಿರುಗುಪ್ಪೆ, ಕೊಳನೂರು ಮತ್ತು ಇನ್ನೊಂದು ಗ್ರಾಮವನ್ನು ಆಳುತ್ತಿದ್ದರೆ (ಸಂ. 637), ಇನ್ನೊಬ್ಬ ರಾಣಿ ಪದ್ಮಲದೇವಿಯು ಅಗ್ರಹಾರ ಮಾಂಗೊಳವನ್ನು ಆಳುತ್ತಿದ್ದಳು (ಸಂ. 188). ರಾರಾವಿಯು ರಾಜಕುಮಾರ ತೈಲಪದೇವನ ಸರ್ವ್ವ-ನಮಸ್ಯದಗ್ರಹಾರವಾಗಿತ್ತು (ಸಂ. 625). ಈ ಸಮಯದಲ್ಲಿ ಮಹಾಸಾಮಂತ ಚಾವುಂಡರಸನು ಹೊಳಗೊಂದಿಯಲ್ಲಿ ಬಾಳೇಶ್ವರ ದೇವಾಲಯವನ್ನು ಕಟ್ಟಿಸಿದನು ಮತ್ತು ಈತನ ಮಗ ಮಹಾಮಂಡಲೇಶ್ವರ ಗಂಗರಸನು ಮಾಸವಾಡಿ-140 ಮತ್ತು ಹೊಳಗೊಂದಿಗಳನ್ನು ಅನುಭವಿಸುತ್ತಿದ್ದನು (ಸಂ. 108). ಸೇನಾಪತಿ ಶಿವರಾಜನು ಅಮ್ಮೆಳೆಯಲ್ಲಿ ಕಲಿದೇವರ ದೇವಾಲಯ (ಸಂ. 217) ಮತ್ತು ರವಿ ದಂಡನಾಯಕನ ಪತ್ನಿ ರೆಬ್ಬಣಬ್ಬೆಯು ಹೂವಿನ ಹಡಗಲಿಯಲ್ಲಿ ಕೇಶವ ದೇವಾಲಯ (ಸಂ. 129) ಕಟ್ಟಿಸಿದರು. ಉಚ್ಚಂಗಿಯ ಪಾಂಡ್ಯ ವಂಶದ ಮಹಾಮಂಡಲೇಶ್ವರ ತ್ರಿಭುವನಮಲ್ಲ ಪಾಂಡ್ಯನು ಕ್ರಿ.ಶ. 1083ರಿಂದ 1126ರವರೆಗೆ ನೊಳಂಬವಾಡಿ-32000 ವನ್ನಾಳುತ್ತಿದ್ದನು (ಸಂ. 129, 131, 194, 217, 232, 281-282, 303, 307-309, 317, 332-334, 391, 639). ಕುರುಗೋಡಿನ ಸಿಂದ ವಂಶದ ಮಹಾಮಂಡಲೇಶ್ವರ ಸೋವಿದೇವನು ಕ್ರಿ.ಶ. 1120ರಲ್ಲಿ ಬಲ್ಲಕುಂದೆ-300ನ್ನು ಆಳುತ್ತಿದ್ದನು (ಸಂ. 600). ಹೊಳಲು ಅಗ್ರಹಾರದ ಮನ್ನೆಯ ಬೊಪ್ಪಯನು ಗ್ರಾಮಕ್ಕೆ ಮುತ್ತಿಗೆ ಹಾಕಿ ಬ್ರಾಹ್ಮಣರನ್ನು ಕೊಂದನು. ಗ್ರಾಮದ ಮಹಾಜನರು ಅರಸನ ಬಳಿಗೆ ಹೋಗಿ ಆತನ ವಿರುದ್ಧ ದೂರಿತ್ತರು. ಆಗ ಅರಸನು ಆತನನ್ನು ಶಿಕ್ಷಿಸಿದನು (ಸಂ. 139).

ಚಾಲುಕ್ಯ ಅರಸ ಮೂರನೆಯ ಸೋಮೇಶ್ವರನ ಆಡಳಿತದ ಕಾಲದಲ್ಲಿ ಕ್ರಿ.ಶ. 1127ರಲ್ಲಿ ಮಹಾಸಾಮಂತಾಧಿಪತಿ ಭೋಗಭಟ್ಟನು ಎರಡು ಆರುನೂರನ್ನು ಮತ್ತು ಬನವಸೆ-12000ವನ್ನು ಮತ್ತು ಕ್ರಿ.ಶ. 1137ರಲ್ಲಿ ಮಹಾಮಂಡಲೇಶ್ವರ ರಾಚಮಲ್ಲರಸನು

ಬಲ್ಲಕುಂದೆ-300ನ್ನು ಆಳುತ್ತಿದ್ದರು (ಸಂ. 392, 601). ಚಾಲುಕ್ಯ ಎರಡನೆಯ ಜಗದೇಕಮಲ್ಲನ ಆಡಳಿತದ ಸಮಯದಲ್ಲಿ ಸಿಂದ ವಂಶದ ಮಹಾಮಂಡಲೇಶ್ವರ ಇಮ್ಮಡಿ ಭೀಮ ಮತ್ತು ಆತನ ಸಹೋದರ ಒಂದನೆಯ ರಾಚಮಲ್ಲ ಕುರುಗೋಡು ಪ್ರದೇಶವನ್ನು (ಸಂ. 80, 602), ಮಹಾಮಂಡಲೇಶ್ವರ ವೀರಪಾಂಡ್ಯನು ರಾಜಧಾನಿ ಉಚ್ಚಂಗಿಯಿಂದ ನೊಳಂಬವಾಡಿ-32000 ವನ್ನು (ಸಂ. 117, 136, 215, 219, 262, 301, 328, 330, 340, 401) ಮತ್ತು ಕದಂಬ ವಂಶದ ನಾಚಿದೇವರಸನು ಕೊಟ್ಟೂರಿನಿಂದ ಕೋಗಳಿ-500 ಮತ್ತು ಕೊಟ್ಟೂರು-12ನ್ನು ಆಳುತ್ತಿದ್ದರು. ನಾಚಿದೇವರಸನು ಮೂರನೆಯ ತೈಲನ ಕಾಲದವರೆಗೂ ಆಳುತ್ತಿದ್ದನು (ಸಂ. 469). ಸಿಂದ ಎರಡನೆಯ ರಾಚಮಲ್ಲನು ಚಾಲುಕ್ಯ ನಾಲ್ಕನೆಯ ಸೋಮೇಶ್ವರನ ಅಧೀನದಲ್ಲಿ ಕುರುಗೋಡು ಪ್ರದೇಶವನ್ನು ಆಳುತ್ತಿದ್ದನು (ಸಂ. 63).

ಹೊಯ್ಸಳ ಎರಡನೆಯ ಬಲ್ಲಾಳನು ಕ್ರಿ.ಶ. 1177ರಲ್ಲಿ ಉಚ್ಚಂಗಿ ಕೋಟೆಗೆ ಮುತ್ತಿಗೆ ಹಾಕಿ ಪಾಂಡ್ಯರನ್ನು ಸೋಲಿಸಿದನು. ಈತನು ಉಚ್ಚಂಗಿಯ ಮೇಲೆ ಸಾಧಿಸಿದ ವಿಜಯವನ್ನು ಅನೇಕ ಹೊಯ್ಸಳ ಶಾಸನಗಳಲ್ಲಿ ಪ್ರಶಂಸಿಸಲಾಗಿದೆ. ಈ ವಿಜಯದ ನೆನಪಿಗಾಗಿ ಆತ ಗಿರಿದುರ್ಗಮಲ್ಲ (ಗಿರಿಯ ಮೇಲಿನ ಕೋಟೆಯನ್ನು ಗೆದ್ದವ) ಮತ್ತು ಶನಿವಾರಸಿದ್ಧಿ ಎಂಬ ಬಿರುದುಗಳನ್ನು ಪಡೆದ.[6] ಈತ ಏಕಾಂಗಿಯಾಗಿ ಸೇವುಣರ ಸೈನ್ಯವನ್ನು ಸೊರಟೂರಿನಿಂದ ಕೃಷ್ಣಾನದಿ ದಂಡೆಯವರೆಗೆ ಹೊಡೆದೋಡಿಸಿದನು (ಸಂ. 382). ಕ್ರಿ.ಶ. 1193 ಮತ್ತು 1194ರಲ್ಲಿ ಈತನು ಬಾಗಳಿಯಲ್ಲಿ ಬೀಡು ಬಿಟ್ಟಿದ್ದ (ಸಂ. 143, 298). ಈತನ ಸಾಮ್ರಾಜ್ಯ ಗಂಗವಾಡಿ-96000, ನೊಳಂಬವಾಡಿ-32000, ಬನವಾಸಿ-12000, ಹುಲಿಗೆರೆ-300 ಮತ್ತು ಎರಡು ಬೆಳ್ವೊಲಗಳನ್ನು ಒಳಗೊಂಡಿತ್ತು (ಸಂ. 102, 153). ಈತನ ರಾಣಿ ಪದ್ಮಲದೇವಿಯು ಹಿರೇಹಡಗಲಿಯನ್ನಾಳುತ್ತಿದ್ದಳು (ಸಂ. 102). ಅಮಿತಯ್ಯ ದಂಡನಾಯಕನು ಬಲ್ಲಾಳನಿಂದ ಸ್ವೀಕರಿಸಿದ ಶ್ರೀಪುರ ಅಗ್ರಹಾರದಲ್ಲಿ ತ್ರಿಕೂಟ ದೇವಾಲಯವನ್ನು ಕಟ್ಟಿಸಿದನು (ಸಂ. 542). ಅಲ್ಲದೆ ಹೊಯ್ಸಳ ಎರಡನೆಯ ಬಲ್ಲಾಳನ ಆಡಳಿತ ಕಾಲದಲ್ಲಿ ಬೆಣ್ಣೆಕಲ್ಲಿನಲ್ಲಿ ಆರು ದೇವಾಲಯಗಳನ್ನೂ ಕಟ್ಟಿಸಿದನು (ಸಂ. 464).

12ನೆಯ ಶತಮಾನದಲ್ಲಿ ಕಲಚೂರ್ಯರು ಈ ಪ್ರದೇಶವನ್ನಾಳುತ್ತಿದ್ದರು. ಮಹಾಮಂಡಲೇಶ್ವರ ತ್ರಿಭುವನಮಲ್ಲ ವೀರ ಪಾಂಡ್ಯನು ಕಲಚೂರ್ಯ ಎರಡನೆಯ ಬಿಜ್ಜಳನ ಅಧೀನದಲ್ಲಿ ಕೋಗಳಿ-500 ಮತ್ತು ಕದಂಬಳಿಕೆ-1000ಗಳನ್ನು ಆಳುತ್ತಿದ್ದನು (ಸಂ. 379). ಸಿಂದ ಅರಸ ರಾಚಮಲ್ಲನು ಕಲಚೂರ್ಯ ಅರಸರಾದ ರಾಯಮುರಾರಿ ಸೋವಿದೇವ (ಸಂ. 57) ಮತ್ತು ಶಂಖವರ್ಮ (ಸಂ. 55)ರ ಅಧೀನದಲ್ಲಿ ರಾಜಧಾನಿ ಕುರುಗೋಡಿನಿಂದ ಬಲ್ಲಕುಂದೆ-ನಾಡನ್ನು ಆಳುತ್ತಿದ್ದನು. ಯಾದವರೂ ಸಹ ಈ ಪ್ರದೇಶವನ್ನು ಆಳುತ್ತಿದ್ದರು.

14ರಿಂದ 16ನೆಯ ಶತಮಾನದವರೆಗೆ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ವಿಜಯನಗರವು ಬಳ್ಳಾರಿ ಜಿಲ್ಲೆಯಲ್ಲಿದೆ. ಈ ನಗರ ಪ್ರದೇಶದ ಹೆಚ್ಚಿನ ಶಾಸನಗಳು ವಿಜಯನಗರ ಕಾಲದವು. ಈ ಶಾಸನಗಳನ್ನು ಈ ಸರಣಿಯ ಮೊದಲನೆಯ ಸಂಪುಟದಲ್ಲಿ ಪ್ರಕಟಿಸಲಾಗಿದೆ.[7] ಬಳ್ಳಾರಿ ಜಿಲ್ಲೆಯಲ್ಲಿ ವಿಜಯನಗರ ಕಾಲದ ಅನೇಕ ಶಾಸನಗಳೂ ಇವೆ. ಇವುಗಳಲ್ಲಿ ಹೆಚ್ಚಿನ ಶಾಸನಗಳು ಅನೇಕ ದೇವಾಲಯಗಳಿಗೆ ದಾನ ಕೊಟ್ಟ ವಿಷಯ ತಿಳಿಸುತ್ತವೆ. ಕ್ರಿ.ಶ. 1527ರ ರಾಮುಗಢ ಶಾಸನ (ಸಂ. 519) ಐತಿಹಾಸಿಕವಾಗಿ ಬಹಳ ಮಹತ್ವದ್ದಾಗಿದೆ. ಇದು ಕಂಪಿಲರಾಯನ ಮಗ ರಾಮನಾಥ (ಕುಮಾರ ರಾಮ)ನ ನೆನಪಿಗಾಗಿ ಹೊಸಮಲೆದುರ್ಗದಲ್ಲಿ ದೇವಾಲಯವನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ. ಈ ಶಾಸನದಿಂದ ಹೊಸಮಲೆದುರ್ಗವು 14ನೇ ಶತಮಾನದ ಪ್ರಾರಂಭದಲ್ಲಿ ಕಂಪಿಲರಾಯನ ರಾಜಧಾನಿಯಾಗಿತ್ತು ಎಂದು ಗುರುತಿಸಲು ಸಹಾಯಕವಾಗಿದೆ.[8]

ಭೌಗೋಳಿಕ: ಈ ಪ್ರದೇಶದ ಭೌಗೋಳಿಕ ವಿವರಗಳನ್ನು ವಿಜಯನಗರ ಪೂರ್ವ ಮತ್ತು ವಿಜಯನಗರ ಕಾಲಗಳಲ್ಲಿ ವಿಂಗಡಿಸಿ ಪರಿಶೀಲಿಸುವುದು ಅನುಕೂಲಕರ. ವಿಜಯನಗರ ಪೂರ್ವಕಾಲದಲ್ಲಿ ಕೋಗಳಿ-500 ಅಥವಾ ಕೋಗಳಿ-ನಾಡು ಅನೇಕ ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಇದು ಕುಂತಳ ದೇಶದ ಉಪವಿಭಾಗವಾದ ನೊಳಂಬವಾಡಿ-ನಾಡು ಅಥವ ನೊಳಂಬವಾಡಿ-32000ರ ಉಪವಿಭಾಗವಾಗಿತ್ತು (ಸಂ. 119, 265, 464). ಕೋಗಳಿ-500 ಉಪವಿಭಾಗವು ಬಿಕ್ಕಿಗ-70 ಅಥವ ವಿಕ್ಕಿಗ-70 (ಸಂ. 333), ಬೆಣ್ಣೆಕಲ್ಲು-12 (ಸಂ. 464), ಹಾಲ್ವೊಳ-12 (ಸಂ. 126) ಮತ್ತು ಮುತ್ತಗೆ-30 (ಸಂ. 328, 336, 371) ಒಳಗೊಂಡಿತ್ತು. ಇದು ಪಾಂಡ್ಯನಾಡಿನ ಉಪವಿಭಾಗವೂ ಆಗಿತ್ತು (ಸಂ. 193). ಕ್ರಿ.ಶ. 1162ರಲ್ಲಿ ನೀಲಗುಂದವು ಕೋಗಳಿ-500ರ ಮುಖ್ಯ ಪಟ್ಟಣವಾಗಿತ್ತು (ಸಂ. 379). ಕೋಗಳಿ-500 ಎಂಬ ಶಬ್ದವು ಹಗರಿಬೊಮ್ಮನಹಳ್ಳಿ ತಾಲೂಕಿನ ಕೋಗಳಿ ಗ್ರಾಮದಿಂದ ಬಂದಿದೆ. ಈ ಭಾಗವು ಈಗಿನ ಹಡಗಲಿ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ ಮತ್ತು ಕೂಡ್ಲಿಗಿ ತಾಲೂಕುಗಳನ್ನೊಳಗೊಂಡಿತ್ತು. ಈಗಿನ ಹರಪನಹಳ್ಳಿ ತಾಲೂಕಿನಲ್ಲಿರುವ ನೀಲಗುಂದ, ದುಗ್ಗತಿ, ಗುಂಡಗತ್ತಿ ಮತ್ತು ತುಂಬಿಗೆರೆಗಳು ಬಿಕ್ಕಿಗ-70 ರಲ್ಲಿದ್ದವು (ಸಂ. 333, 338, 378, 406). ಕೂಡ್ಲಿಗಿ ತಾಲೂಕಿನ

ಬೆಣ್ಣೆಕಲ್, ಬೆಣ್ಣೆಕಲ್ಲು-12ರ ಮುಖ್ಯ ಪಟ್ಟಣವಾಗಿತ್ತು (ಸಂ. 464). ಹಡಗಲಿ ತಾಲೂಕಿನ ಕೊಟ್ಟಕಲ್ (ಕೊಟಿಗನೂರು) ಹಾಲ್ಪೊಳ-12ರಲ್ಲಿತ್ತು (ಸಂ. 126). ಹರಪನಹಳ್ಳಿ ತಾಲೂಕಿನ ಮುತ್ತಿಗಿ (ಮುತ್ತಗೆ)ಯು ಮುತ್ತಗೆ-30ರ ಮುಖ್ಯ ಪಟ್ಟಣವಾಗಿತ್ತು (ಸಂ. 371). ಬೆಣ್ಣೆಗನೂರು, ಅರಸಿಯಕೆರೆ, ಕಡಕೊಳ ಮತ್ತು ನಿಲ್ಲಜಿಗೆ ಮುತ್ತಗೆ-30 ರಲ್ಲಿದ್ದವು (ಸಂ. 328, 335-336, 347). ನೊಳಂಬವಾಡಿ-ನಾಡು ಅಥವ ನೊಳಂಬವಾಡಿ-32000ವು ದೊಡ್ಡ ಪ್ರಾಂತವಾಗಿದ್ದು, ಮುಖ್ಯವಾಗಿ ಚಿತ್ರದುರ್ಗ ತುಮಕೂರು ಮತ್ತು ಕೋಲಾರ ಜಿಲ್ಲೆಗಳನ್ನು ಮತ್ತು ಪಕ್ಕದಲ್ಲಿರುವ ಬಳ್ಳಾರಿ, ಬೆಂಗಳೂರು ಮತ್ತು ಹಾಸನ ಜಿಲ್ಲೆಗಳ ಭಾಗಗಳನ್ನೊಳಗೊಂಡಿತ್ತು. ಇದರಲ್ಲಿ ಆಂಧ್ರಪ್ರದೇಶದ ಅನಂತಪುರ ಮತ್ತು ಚಿತ್ತೂರ್ ಜಿಲ್ಲೆಗಳ ಭಾಗಗಳು ಮತ್ತು ತಮಿಳುನಾಡಿನ ಉತ್ತರ ಆರ್ಕೋಟ್ ಮತ್ತು ಧರ್ಮಪುರಿ ಜಿಲ್ಲೆಗಳ ಭಾಗಗಳೂ ಸೇರಿದ್ದವು.[9] ಅನಂತಪುರ ಜಿಲ್ಲೆಯ ಮಡಕಾಸಿರ ತಾಲೂಕಿನಲ್ಲಿರುವ ಹೇಮಾವತಿ (ಹೆಂಜೇರು) ಇದರ ರಾಜಧಾನಿಯಾಗಿತ್ತು. ಆದರೆ ಕ್ರಿ.ಶ. 1149-50ರಲ್ಲಿ ಬಳ್ಳಾರಿ ಜಿಲ್ಲೆಯ, ಹರಪನಹಳ್ಳಿ ತಾಲೂಕಿನ ಉಚ್ಚಂಗಿದುರ್ಗವು ಇದರ ರಾಜಧಾನಿಯಾಗಿತ್ತು (ಸಂ. 209, 328). ಬೆಣ್ಣೆವೂರು-12 ಸಹ ನೊಳಂಬವಾಡಿ-32000ದಲ್ಲಿ ಸೇರಿತ್ತು (ಸಂ. 139). ಹರಪನಹಳ್ಳಿ ತಾಲೂಕಿನ ಬೆಣ್ಣೆಹಳ್ಳಿಯು ಬೆಣ್ಣೆವೂರು-12ರ ಮುಖ್ಯ ಪಟ್ಟಣವಾಗಿತ್ತು. ಹಡಗಲಿ ತಾಲೂಕಿನ ಕುರುವತ್ತಿ (ಸಂ. 138), ಮಕರಬ್ಬಿ (ಸಂ. 143), ಮತ್ತು ಹರವಿ (ಹರುಹೆ) (ಸಂ. 144) ಮತ್ತು ಹರಪನಹಳ್ಳಿ ತಾಲೂಕಿನ ಬಾಡ (ಸಂ. 143) ಗ್ರಾಮಗಳು ಈ ವಿಭಾಗದಲ್ಲಿದ್ದವು. ಉಚ್ಚಂಗಿ-30ರ ಮುಖ್ಯ ಪಟ್ಟಣ ಹರಪನಹಳ್ಳಿ ತಾಲೂಕಿನ ಉಚ್ಚಂಗಿದುರ್ಗವಾಗಿತ್ತು (ಸಂ. 269). ಕದಂಬಳಿಗೆ-1000 ಬಳ್ಳಾರಿ ಜಿಲ್ಲೆಯ ಭಾಗವನ್ನು ಒಳಗೊಂಡಿತ್ತು. ಹರಪನಹಳ್ಳಿ ತಾಲೂಕಿನ ಕದಂಬಗೆರೆಯು ಬಹುಶಃ ಇದರ ಮುಖ್ಯ ಪಟ್ಟಣವಾಗಿತ್ತು (ಸಂ. 349).

ಬಲ್ಲಕುಂದೆ-ವಿಷಯ ಅಥವ ಬಲ್ಲಕುಂದೆ-300 ಸಿರುಗುಪ್ಪ ಮತ್ತು ಬಳ್ಳಾರಿ ತಾಲೂಕುಗಳನ್ನೊಳಗೊಂಡಿತ್ತು. ಸಿರುಗುಪ್ಪ ತಾಲೂಕಿನ ಬಲಕುಂದೆ ಎಂಬ ಗ್ರಾಮದಿಂದ ಬಲ್ಲಕುಂದೆ-300 ಶಬ್ದ ಬಂದಿದೆ. ಕುರುಗೋಡು ಬಲ್ಲಕುಂದೆ-300ರ ರಾಜಧಾನಿಯಾಗಿತ್ತು (ಸಂ. 645). ತೆಕ್ಕೆಕಲ್ಲು-12 ಬಲ್ಲಕುಂದೆ-300ರ ಒಂದು ಉಪವಿಭಾಗವಾಗಿತ್ತು (ಸಂ. 637). ಸಿರುಗುಪ್ಪ ಗ್ರಾಮವು ತೆಕ್ಕೆಕಲ್ಲು-12 ರಲ್ಲಿತ್ತು. ದೊರವಡಿ ಅಥವ ದೊರವಡಿ-ನಾಡು ಬಳ್ಳಾರಿ ಜಿಲ್ಲೆಯ ಒಂದು ಭಾಗವನ್ನು ಒಳಗೊಂಡಿದ್ದು, ಸಂಡೂರು ತಾಲೂಕಿನ ದೊರವಡಿ (ಈಗಿನ ದರೋಜಿ)ಯು ಇದರ ಮುಖ್ಯ ಪಟ್ಟಣವಾಗಿತ್ತು (ಸಂ. 73).[10]

ವಿಜಯನಗರ ಕಾಲದಲ್ಲಿ ಬಳ್ಳಾರಿ ಜಿಲ್ಲೆಯ ಪ್ರದೇಶವು ಹಸ್ತಿನಾವತಿ-ವಳಿತದಲ್ಲಿತ್ತು. ಹಸ್ತಿನಾವತಿ-ವಳಿತವು ದೊರವಡಿ-ವೇಂಠೆ, ಮೂಗನಾಡ-ವೇಂಠೆ, ಕೋಗಳಿ-ವೇಂಠೆ ಮತ್ತು ಉಚ್ಚಂಗಿ-ವೇಂಠೆಗಳನ್ನೊಳಗೊಂಡಿತ್ತು. ಕುರುಗೋಡು-ಸೀಮೆಯು ಮೂಗನಾಡ-ವೇಂಠೆಯ ಉಪವಿಭಾಗ, ಕವಿಲಿಚೆರಿವಿನ-ಸೀಮೆಯು ಉಚ್ಚಂಗಿ-ವೇಂಠೆಯ ಉಪವಿಭಾಗ ಮತ್ತು ಕೊಟೂರು-ಸೀಮೆ ಮತ್ತು ಕುಂಟೆನೂರ-ಸೀಮೆಗಳು ಕೋಗಳಿ-ವೇಂಠೆಯ ಉಪವಿಭಾಗಗಳಾಗಿದ್ದವು. ಕೊಟ್ಟೂರು-ವಳಿತ, ಯಳಪೆಯ-ಸೀಮೆ, ಬಳ್ಳಾರಿ-ಸೀಮೆ, ಚಿತವಾಡಿ-ಸೀಮೆ, ಆವಿನಮಡುವು-ಸೀಮೆ, ಚೋರಮನೂರು-ಸೀಮೆ, ಗುತ್ತೊಳಲ-ಸೀಮೆ, ಹೊರಮಲೆ ಸೀಮೆ, ರಾಯದುರ್ಗ-ಸೀಮೆ ಮತ್ತು ಹೊಸೂರು-ಮಾಗಣೆಗಳು ಈ ಕಾಲದ ಇತರ ಉಪವಿಭಾಗಗಳಾಗಿದ್ದವು.

ಆರ್ಥಿಕ: ನೀರಾವರಿ ಸೌಕರ್ಯ ಮತ್ತು ಹೊಸ ವಸಾಹತುಗಳ ಸ್ಥಾಪನೆ ಹೆಚ್ಚಾಗಿದ್ದುದು ಶಾಸನಗಳಿಂದ ತಿಳಿಯುತ್ತದೆ. ಕೃಷಿ ಉತ್ಪನ್ನಗಳ ವೃದ್ಧಿಗಾಗಿ ಕೆರೆ, ಕಾಲುವೆ, ಬಾವಿಗಳನ್ನು ಕಟ್ಟುತ್ತಿದ್ದರು. ಮೊದಲೇ ಅಸ್ತಿತ್ವದಲ್ಲಿದ್ದ ಕೆರೆಗಳನ್ನು ದುರಸ್ತಿಗೊಳಿಸಿ ಅವುಗಳ ಸಂರಕ್ಷಣೆಗೆ ದಾನಗಳನ್ನು ನೀಡುತ್ತಿದ್ದರು. ಕ್ರಿ.ಶ. 967ರಲ್ಲಿ ಕೊಳಗಲ್ಲು ಗ್ರಾಮದಲ್ಲಿ ಒಂದು ಕೆರೆ ಮತ್ತು ಬಾವಿಗಳನ್ನು ಕಟ್ಟಲಾಯಿತು (ಸಂ. 32). ಕ್ರಿ.ಶ. 1046ರಲ್ಲಿ ದಂಡನಾಯಕ ಸೋವಿಮಯ್ಯನು ಮೋರಿಗೆರೆಯಲ್ಲಿ ಸೋಮತೀರ್ಥವೆಂಬ ಬಾವಿಯನ್ನು ಕಟ್ಟಿಸಿದನು (ಸಂ. 247). ಮೂವತ್ತೆರಡು ಗದ್ಯಾಣಗಳಷ್ಟು ಗೇಣಿ ಆದಾಯವನ್ನು ಬಾಗಳಿಯ ಒಂದು ಕೆರೆಗೆ ಕ್ರಿ.ಶ. 1068ರಲ್ಲಿ ದಾನ ನೀಡಲಾಯಿತು (ಸಂ. 314). ಕ್ರಿ.ಶ. 115ರಲ್ಲಿ ಸುಂಕದ ಆದಾಯದ ಒಂದು ಭಾಗವನ್ನು ಅದೇ ಗ್ರಾಮದ ಕೆರೆಯ ದುರಸ್ತಿಗೆ ದಾನ ನೀಡಲಾಯಿತು (ಸಂ. 308). ಕ್ರಿ.ಶ. 1188ರಲ್ಲಿ ಅದೇ ಗ್ರಾಮದ ದಾಸೆಯನಾಯಕನ ಕೆರೆಯ ದುರಸ್ತಿಗೆ ಒಂದು ಮತ್ತರು ಭೂಮಿಯನ್ನು ದಾನ ನೀಡಲಾಯಿತು (ಸಂ. 310). ದಂಡನಾಯಕ ಬರ್ಮರಸನು ಕ್ರಿ.ಶ. 1107ರಲ್ಲಿ ಅದೇ ಗ್ರಾಮದ ಹಿರಿಯಕೆರೆಯ ದುರಸ್ತಿಗೆ ಹಣವನ್ನು ದಾನವಾಗಿ ನೀಡಿದನು (ಸಂ. 304). ತಳಕಲ್ಲಿನಲ್ಲಿಯ ಗುಂಡಿಯಕೆರೆಯನ್ನು ಕ್ರಿ.ಶ. 1052-53ರಲ್ಲಿ ದುರಸ್ತಿಗೊಳಿಸಲಾಯಿತು (ಸಂ. 205). ಕ್ರಿ.ಶ. 1068ರಲ್ಲಿ ಕಲ್ಲುಕುಟಿಗನಹಾಳಿನಲ್ಲಿ ಕೆರೆಯ ನಿರ್ವಹಣೆಗಾಗಿ 5 ಮತ್ತರು ಕಪ್ಪು ಮಣ್ಣಿನ ಭೂಮಿಯನ್ನು ದಾನವಾಗಿ ಕೊಡಲಾಯಿತು (ಸಂ. 590). ಮೋರಿಗೆರೆಯಲ್ಲಿ ಬೋವರಸನ ಬಾವಿ ಎಂಬ ಬಾವಿಯ ದುರಸ್ತಿಗಾಗಿ ಕ್ರಿ.ಶ. 1082ರಲ್ಲಿ ಭೂಮಿ ದಾನ ನೀಡಲಾಯಿತು (ಸಂ. 250).

ಸುಂಕದ ಆದಾಯದ ಒಂದು ಭಾಗವನ್ನು ಅಂಬಲಿಯ ಹಿರಿಯ ಕೆರೆಯ ದುರಸ್ತಿಗಾಗಿ ಕ್ರಿ.ಶ. 1106ರಲ್ಲಿ ದಾನ ನೀಡಲಾಯಿತು (ಸಂ. 216). ಕ್ರಿ.ಶ. 1110ರಲ್ಲಿ ಸೋಗಿಯ ಹತ್ತಿರದ ನಾಗಸಮುದ್ರವೆಂಬ ಕೆರೆಯ ನಿರ್ವಹಣೆಗೆ ದಾನ ನೀಡಲಾಯಿತು (ಸಂ. 203). ರಾರಾವಿಯಲ್ಲಿ (?) ಕ್ರಿ.ಶ. 1121ರಲ್ಲಿ ಒಂದು ಬಾವಿಯನ್ನು ಕಟ್ಟಿಸಲಾಯಿತು (ಸಂ. 625). ಕೋಳೂರಿನಲ್ಲಿ ಕ್ರಿ.ಶ. 1147ರಲ್ಲಿ ಒಂದು ಕೆರೆ ಮತ್ತು ಒಂದು ಬಾವಿಯನ್ನು ಕಟ್ಟಿಸಲಾಯಿತು (ಸಂ. 33). ಹಿರೆಹಡಗಲಿಯ ಹಿರಿಯಕೆರೆ ಮತ್ತು ತುಂಬಿಕೆರೆಗಳಿಗೆ ಕ್ರಿ.ಶ. 1212ರಲ್ಲಿ ಭೂಮಿ ದಾನ ನೀಡಲಾಯಿತು (ಸಂ. 102).

ಕ್ರಿ.ಶ. 1419ರಲ್ಲಿ ರಾಜಬವನಹಳ್ಳಿಯಲ್ಲಿ ಒಂದು ಕೆರೆಯನ್ನು ಕಟ್ಟಿಸಲಾಯಿತು (ಸಂ. 393). ಕೆಂಚನಗುಡ್ಡದ ಹತ್ತಿರದ ದೇವರಸನ ಕಾಲುವೆಗೆ ಕಟ್ಟಿದ ಅಣೆಕಟ್ಟು ಒಡೆದುಹೋಗಿತ್ತು. ಕ್ರಿ.ಶ. 1467ರಲ್ಲಿ ಇದನ್ನು ಪುನಃ ಕಟ್ಟಲಾಯಿತು (ಸಂ. 599). ಬಯಕಾರ ರಾಮಪ್ಪಯ್ಯನು ಅಚ್ಯುತಮ್ಮಸಮುದ್ರ, ಬಾಚಸಮುದ್ರ, ರಾಮಸಮುದ್ರ, ಅಕ್ಕಸಮುದ್ರ, ಕಾಮಸಮುದ್ರ, ಅಮ್ಮಸಮುದ್ರ, ವೀರಸಮುದ್ರ, ಅಚ್ಯುತೇಂದ್ರಸಮುದ್ರ, ವೆಂಕಟೇಂದ್ರಸಮುದ್ರ, ಪಿನ-ಲಕ್ಕಸಮುದ್ರ, ಚಿನ್ನ-ತಿಪ್ಪಸಮುದ್ರ, ಪೆದ್ದ-ಲಕ್ಕಸಮುದ್ರ, ಲಿಂಗಾಲಯತಟಾಕ, ವೆಂಕಟಯ್ಯತಟಾಕ, ಪೆದ್ದ-ತಿಮ್ಮಸಮುದ್ರ ಮತ್ತು ಚಿನ-ಬಾಚಸಮುದ್ರ ಎಂಬ ಹದಿನಾರು ಕೆರೆಗಳನ್ನು ಕ್ರಿ.ಶ. 1539ರಲ್ಲಿ ಕಟ್ಟಿಸಿದನು (ಸಂ. 497). ಇವುಗಳಲ್ಲಿ ಕೆಲವು ಕೆರೆಗಳು ಪೋತಲಕಟ್ಟೆ (ಸಂ. 448), ತಿಮ್ಮಲಾಪುರ (ಸಂ. 461), ನಂದಿಬಂಡೆ (ಸಂ. 445), ವಂಟಗೋಡು (ಸಂ. 462), ಚಿಕ್ಕಕೆರಿಯಾಗಿನಹಳ್ಳಿ (ಸಂ. 497) ಮತ್ತು ಮಗಿಮಾವಿನಹಳ್ಳಿ (ಸಂ. 161)ಗಳಲ್ಲಿವೆ. ಈತನು ತಿಮ್ಮಲಾಪುರ (ಸಂ. 459), ಚಿಲಕನಹಟ್ಟಿ (ಸಂ. 419), ಹಾರವನಹಳ್ಳಿ (ಸಂ. 428-430) ಮತ್ತು ಸಿರಸ್ತಹಳ್ಳಿ (ಸಂ. 399) ಗಳಲ್ಲಿಯೂ ಬಾವಿಗಳನ್ನು ಕಟ್ಟಿಸಿದನು. ಕುರುಗೋಡಿನ ಶಾಂತಮಲ್ಲಿಕಾರ್ಜುನ ದೇವಾಲಯದಲ್ಲಿನ ಬಾವಿಯನ್ನು ಕ್ರಿ.ಶ. 1512ರಲ್ಲಿ ದುರಸ್ತಿಗೊಳಿಸಲಾಯಿತು (ಸಂ. 58). ಚಿಕ್ಕಜಾಯಿಗನೂರಿನಲ್ಲಿ ಒಂದು ಕಾಲುವೆಯನ್ನು ಕ್ರಿ.ಶ. 1523ರಲ್ಲಿ ಕಟ್ಟಲಾಯಿತು (ಸಂ. 418). ಗುಡಿಹಳ್ಳಿಯ ಕೆರೆಯ ಒಡೆದ ತೂಬನ್ನು ಕ್ರಿ.ಶ. 1527ರಲ್ಲಿ ಪುನಃ ನಿರ್ಮಿಸಲಾಯಿತು (ಸಂ. 337). ಕ್ರಿ.ಶ. 1529ರಲ್ಲಿ ಹಾವಿನಹಾಳು-ವೀರಾಪುರದ ಕೆರೆಯ ದುರಸ್ತಿಗೆ ಭೂಮಿ ದಾನ ನೀಡಲಾಯಿತು (ಸಂ. 21). ಗಜಾಗೊಂಡ ಎಂಬ ಬಾವಿಯನ್ನು ಸೋಮಸಮುದ್ರದಲ್ಲಿ ಕ್ರಿ.ಶ. 1692ರಲ್ಲಿ (ಸಂ. 86) ಮತ್ತು ಗಜಾಗೊಂಡವೆಂಬ ಇನ್ನೊಂದು ಆಳವಾದ ಕೊಳವನ್ನು ತಂಬ್ರಹಳ್ಳಿಯಲ್ಲಿ (ಸಂ. 261) ಕಟ್ಟಿಸಲಾಯಿತು. ಕಂಚಗಾರಬೆಳಗಲ್ಲಿನ ಹತ್ತಿರ ಆದವಾನಿ ರಸ್ತೆಯಲ್ಲಿ ಒಂದು ಬಾವಿ ಮತ್ತು ಒಂದು ಕೆರೆಯನ್ನು ಕ್ರಿ.ಶ. 1717ರಲ್ಲಿ ಕಟ್ಟಿಸಲಾಯಿತು (ಸಂ. 591). ಮೋರಿಗೇರಿಯ ಕೆರೆಯ ಪುನರ್ನಿರ್ಮಾಣಕ್ಕಾಗಿ ದಾನಗಳನ್ನು ನೀಡಲಾಯಿತು (ಸಂ. 251). ಹಚ್ಚೊಳ್ಳಿಯಲ್ಲಿ ಒಂದು ಬಾವಿಯನ್ನು ಕಟ್ಟಿಸಲಾಯಿತು (ಸಂ. 584).

ಈ ಪ್ರದೇಶದಲ್ಲಿ ಭೂಮಿ ಗೇಣಿ ಪದ್ಧತಿ ರೂಢಿಯಲ್ಲಿತ್ತು. ಕ್ರಿ.ಶ. 1068ರಲ್ಲಿ ಶೂದ್ರರು ಬ್ರಾಹ್ಮಣರ ಭೂಮಿಯನ್ನು ಕೃಷಿಮಾಡಿ 52 ಗದ್ಯಾಣಗಳ ಬೆಲೆಯ ಉತ್ಪನ್ನವನ್ನು ಬ್ರಾಹ್ಮಣರಿಗೆ ಕೊಡುತ್ತಿದ್ದರು (ಸಂ. 314). 15ನೇ ಶತಮಾನದಲ್ಲಿ ಬಾಗವಾಡಿಯ ಆಡಳಿತಗಾರನಾಗಿದ್ದ ಚಿಕಣ-ನಾಯಕ ಮತ್ತು ಅಲ್ಲಿಯ ಜನರು ಕೆಲವು ಕರಾರುಗಳೊಂದಿಗೆ ಗೇಣಿಯ ಹಂಚಿಕೆಯ ಬಗ್ಗೆ ಒಂದು ಒಪ್ಪಂದ ಮಾಡಿಕೊಂಡಿದ್ದರು (ಸಂ. 553). ಕ್ರಿ.ಶ. 1712ರಲ್ಲಿ ಹಾಳು-ತಿಮ್ಮಲಾಪುರದಲ್ಲಿ 10 ಖಂಡುಗ ಭೂಮಿಯನ್ನು 250 ವರಹಗಳಿಗೆ ಬೆಲೆಕಟ್ಟಲಾಗಿತ್ತು (ಸಂ. 98).

ಈ ಪ್ರದೇಶದಲ್ಲಿ ಅನೇಕ ಹೊಸ ವಸಾಹತುಗಳ ಸ್ಥಾಪನೆಯಾದುದು ಶಾಸನಗಳಿಂದ ತಿಳಿಯುತ್ತದೆ. ಈಗಿನ ನೀಲಗುಂದ ಗ್ರಾಮವು ಕ್ರಿ.ಶ. 1079ಕ್ಕಿಂತ ಮೊದಲು ಸ್ಥಾಪನೆಯಾಗಿದೆ. ಭೀಮೇಶ್ವರ ದೇವಸ್ಥಾನದ ಸುತ್ತ ಇದ್ದ ಹಳೆಯ ಗ್ರಾಮ ಪ್ರದೇಶವನ್ನು ಕ್ರಿ.ಶ. 1079ರ ಶಾಸನದಲ್ಲಿ 'ಹಳೆಯ-ಹಾಳು' ಎಂದು ಕರೆಯಲಾಗಿದೆ (ಸಂ. 385). ಮಹಾಜನರು ಅರಣ್ಯ ನಾಶಪಡಿಸಿ ಹರಿಯಸಮುದ್ರ ಗ್ರಾಮವನ್ನು ಕಟ್ಟಿದರು. ಈ ಗ್ರಾಮವನ್ನು ಇವರಿಗೆ ಕ್ರಿ.ಶ. 1419ರಲ್ಲಿ ಶ್ರೋತ್ರಿಯ-ಅಗ್ರಹಾರವಾಗಿ ದಾನ ನೀಡಲಾಯಿತು (ಸಂ. 393). ಅಳಿಯ ರಾಮರಾಜನ ಮಗಳು ತಿರುಮಲಮ್ಮನ ನೆನಪಿಗಾಗಿ ಚಿಕ್ಕತಿಮ್ಮಾಪುರ-ಅಗ್ರಹಾರವನ್ನು ಕಟ್ಟಲಾಯಿತು (ಸಂ. 158). ಅಚ್ಯುತಾಪುರ ಗ್ರಾಮವನ್ನು ಬಯಕಾರ ರಾಮಪ್ಪಯ್ಯನು ಆತನ ಮಗಳು ಅಚ್ಯುತಮ್ಮನ ನೆನಪಿನಲ್ಲಿ ಕಟ್ಟಿಸಿದನು (ಸಂ. 509). ತಿರುಕಪ್ಪನು ಕಸವನಹಳ್ಳಿಯಲ್ಲಿ ಪುನರ್ವಸತಿ ಸ್ಥಾಪಿಸಿ ಕ್ರಿ.ಶ. 1660ರಲ್ಲಿ ಭೂಮಿಯನ್ನು ದಾನವಾಗಿ ಪಡೆದನು (ಸಂ. 361). ನಿಚ್ಚವ್ವನಹಳ್ಳಿಯ ಹೊಸ ಪಟ್ಟಣ (ಹೊಸಪೇಟೆ)ವನ್ನು ಕ್ರಿ.ಶ. 1729ರಲ್ಲಿ ಕಟ್ಟಲಾಯಿತು (ಸಂ. 377). ಮಲ್ಲಣ್ಣನು ಮಹಾಮಂಡಲೇಶ್ವರ ಘಟ್ಟಿದೇವರಸ ಮತ್ತು ಇತರರ ಸಮ್ಮುಖದಲ್ಲಿ ಮೇರೆಯಲ್ಲಿ ನಡೆದು ಕಲ್ಲನ್ನು ನೆಟ್ಟು ಮೊಲೆನೂರು ಗ್ರಾಮದ ಮೇರೆಯನ್ನು ಗುರುತಿಸಿದ್ದನ್ನು ಶಾಸನವು ತಿಳಿಸುತ್ತದೆ (ಸಂ. 482). ಚಿಟಿಕಿನಹಾಳು ಗ್ರಾಮದ ಮೇರೆಯನ್ನು ಲಿಂಗಮುದ್ರೆ ಕಲ್ಲುಗಳನ್ನು ನೆಟ್ಟು ಗುರುತಿಸಲಾಯಿತು (ಸಂ. 15).

ದೇವಾಲಯಗಳಲ್ಲಿ ನಡೆಯುವ ಪೂಜೆ, ನೈವೇದ್ಯಗಳ ವ್ಯವಸ್ಥೆಗಾಗಿ ಗ್ರಾಮ, ಭೂಮಿ, ತೆರಿಗೆ ಮತ್ತು ಹಣದ ದಾನ ನೀಡುತ್ತಿದ್ದುದು ಶಾಸನಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಕೆಲವೊಮ್ಮೆ ಈ ದೇವಾಲಯಗಳಿಗೆ ಸೇರಿದ್ದ ಛತ್ರ, ಮಠಗಳಲ್ಲಿದ್ದ ಬ್ರಾಹ್ಮಣರ, ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಊಟೋಪಚಾರದ ವ್ಯವಸ್ಥೆಗಳನ್ನೂ ಈ ದಾನಗಳು ಒಳಗೊಂಡಿದ್ದವು. ಹಣದ ದಾನವನ್ನು ಅದರಿಂದ ಬರುವ ಬಡ್ಡಿಯನ್ನು ಮಾತ್ರ ಉಪಯೋಗಿಸಬೇಕೆಂಬ ಕರಾರಿನೊಂದಿಗೆ ನೀಡಲಾಗುತ್ತಿತ್ತು (ಸಂ. 295). ಬಾಗಳಿಯಲ್ಲಿ ಕಲ್ಲೇಶ್ವರ ದೇವಾಲಯಕ್ಕೆ ದಾನವಾಗಿ ನೀಡಿದ ಒಂದು ಮನೆಯ ಬಾಡಿಗೆಯು ಕ್ರಿ.ಶ. 1035ರಲ್ಲಿ 2 ಪಣವಾಗಿತ್ತು (ಸಂ. 302).

ಶಾಸನಗಳಲ್ಲಿ ಅನೇಕ ವಿಧದ ನಾಣ್ಯಗಳ ಪ್ರಸ್ತಾಪವಿದೆ. ಉದಾ: ಗದ್ಯಾಣ, ಕಾಸು, ಪಾಗ, ಪಣ, ಪೊನ್ನು, ನವಿಲ-ಪೊನ್, ನವಿಲಚ್ಚಿನ-ಪೊನ್, ತಾರ, ವರಹ ಮತ್ತು ವೀಸ. ಕ್ರಿ.ಶ. 1098ರ ಕುಡತಿನಿ ಶಾಸನದಿಂದ ಕೆಲವು ಅಧಿಕಾರಿಗಳ ಮತ್ತು ಸಾವಿಮೋಜನ ಮಧ್ಯ ಒಂದು ಒಪ್ಪಂದವಾಗಿ ಅದರ ಪ್ರಕಾರ ಸಾವಿಮೋಜನು ಲೊಕ್ಕಿ ಚಿನ್ನದ ನಾಣ್ಯಗಳನ್ನು ನವಿಲ ನಾಣ್ಯ (ನವಿಲಚ್ಚಿನ ಪೊನ್)ಗಳನ್ನಾಗಿ ಪರಿವರ್ತಿಸಲು ಒಪ್ಪಿಗೆ ನೀಡಿದ್ದನ್ನು ತಿಳಿಸುತ್ತದೆ (ಸಂ. 36).

ಅಡಕೆಯ ಸುಂಕ, ಬಾಬಂದಿ, ಬಾಲತೆರಿಗೆ, ಬಿಲುಕೊಡೆ, ಬಿರಾಡ, ಬಿಟ್ಟವಟ್ಟಿ, ಬಿಟ್ಟಿ, ದಸವಂದ, ಹೆಜ್ಜುಂಕ, ಕಡ್ಡಾಯ, ಕಾಣಿಕೆ, ಕಿರುಕುಳ, ಮನ್ನೆಯ-ಸಾಮ್ಯದತೆರೆ, ಮೃತನಗಾಣಿಕೆ, ಮೂಲವೀಸ, ಮೂಲಿಗದೆರೆ, ಪನ್ನಸು, ಪನ್ನಾಯ, ಸಿದ್ದಾಯ, ತೆರಿಗೆ ಮತ್ತು ವಡ್ಡರಾವುಳ ಇವು ಶಾಸನಗಳಲ್ಲಿ ಉಲ್ಲೇಖಗೊಂಡ ತೆರಿಗೆಗಳು.

ಹೊಳಲು ಶಾಸನವು (ಸಂ. 124) ಶಿಲ್ಪಿ ಬೊಮ್ಮೋಜನು ಕಂಬಗಳನ್ನು ಕೆತ್ತಿದ್ದಕ್ಕಾಗಿ ಕೊಟ್ಟ ಸಂಬಳದ ಬಗ್ಗೆ ತಿಳಿಸುತ್ತದೆ. ಶ್ರೀಕಾರ ಮಾದರಿಯ ಒಂದು ಕಂಬವನ್ನು ಕೆತ್ತಿದ್ದಕ್ಕೆ ಆತನಿಗೆ 20 ಗದ್ಯಾಣಗಳನ್ನು ಕೊಡಲಾಗಿದೆ. ಆತನು ನಾಲ್ಕು ಕಂಬಗಳನ್ನು ಕೆತ್ತಿ 80 ಗದ್ಯಾಣಗಳನ್ನು ಪಡೆದನು.

ಧಾನ್ಯ, ಎಣ್ಣೆ ಮತ್ತು ಭೂಮಿಯನ್ನು ಅಳೆಯುವ ಮಾನಗಳನ್ನು ಸಹ ಈ ಶಾಸನಗಳಿಂದ ತಿಳಿಯಬಹುದಾಗಿದೆ. ಖಂಡುಗ, ಬಳ್ಳ (ಸಂ. 228, 302) ಮತ್ತು ಮಾನಗಳು ಧಾನ್ಯಗಳನ್ನು ಅಳೆಯುವ ಮಾನಗಳು. ಖಂಡುಗ (ಸಂ. 98) ಮತ್ತು ಮಾನ (ಸಂ. 604)ಗಳನ್ನು ಭೂಮಿಯನ್ನು ಅಳೆಯಲೂ ಬಳಸುತ್ತಿದ್ದರು. ಒಂದು ಖಂಡುಗ ಭೂಮಿ ಎಂದರೆ ಒಂದು ಖಂಡುಗ ಬೀಜ ಬಿತ್ತುವಷ್ಟು ವಿಶಾಲವಾದ ಭೂಮಿ ಎಂದು ಅರ್ಥ. ಭೂಮಿಯನ್ನು ಅಳೆಯುವ ಇತರ ಮಾನಗಳೆಂದರೆ ಚವರ (ಸಂ. 632), ಗಣೆಗನ-ಮತ್ತರ (ಸಂ. 148), ಕಂಬ (ಸಂ. 111, 218, 486) ಅಥವ ಕಮ್ಮ (ಸಂ. 120, 192, 293, 316), ಖಾರ್ (ಸಂ. 565), ಕುಳ (ಸಂ. 615), ಮತ್ತರ (ಸಂ. 3, 27, 48, 82 ಮುಂ.) ಮತ್ತು ನಿವರ್ತ್ತನ (ಸಂ. 541, 563). ಭೂಮಿಯನ್ನು ಅಳೆಯಲು ವಿವಿಧ ಬಗೆಯ ಕೋಲುಗಳನ್ನು ಉಪಯೋಗಿಸುತ್ತಿದ್ದರು. ಕುರುಗೋಡಿನ ಒಂದು ಶಾಸನವು 18 ಗೇಣು ಅಳತೆಯ ಒಂದು ಕೋಲಿನ ಬಗ್ಗೆ ತಿಳಿಸುತ್ತದೆ (ಸಂ. 60) ಮತ್ತು ಹಚ್ಚೊಳ್ಳಿಯ ಇನ್ನೊಂದು ಶಾಸನವು ಆದಿತ್ಯದೇವರ ಕೋಲು ಎಂಬ ಕೋಲಿನ ಬಗ್ಗೆ ಪ್ರಸ್ತಾಪಿಸುತ್ತದೆ (ಸಂ. 580). ಮಾನವನ್ನು ಎಣ್ಣೆಯನ್ನು ಅಳೆಯಲೂ ಉಪಯೋಗಿಸುತ್ತಿದ್ದರು (ಸಂ. 194). ವೀಳ್ಯದೆಲೆಯನ್ನು ತೂಕ ಮಾಡಲು 'ಹೇರು' ಅಳತೆಯನ್ನು ಉಪಯೋಗಿಸುತ್ತಿದ್ದರು (ಸಂ. 118). ಒಂದು ಹೇರು ಎಂದರೆ ಒಬ್ಬ ಮನುಷ್ಯ ಅಥವಾ ಒಂದು ಪ್ರಾಣಿ ಸಾಗಿಸುವಷ್ಟು ತೂಕವುಳ್ಳದ್ದು ಎಂದು ಅರ್ಥ.

ಸಮಾಜ: ಶಾಸನಗಳು ಆಗಿನ ಜನರ ಜೀವನದ ರೀತಿ, ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ, ವಿವಿಧ ಉದ್ಯೋಗಗಳು, ದಾನ, ಪೂಜೆ, ಉತ್ಸವ, ಶಿಕ್ಷಣ, ಸಂಗೀತ, ಛತ್ರ, ಅರವಟ್ಟಿಗೆ ಮತ್ತು ಕಾನೂನು ವ್ಯವಸ್ಥೆಗಳ ಬಗ್ಗೆ ತಿಳಿಸುತ್ತವೆ.

ಗ್ರಾಮಗಳ (ಸಂ. 268, 396) ಮತ್ತು ಹಸುಗಳ (ಸಂ. 386) ಸಂರಕ್ಷಣೆಯಲ್ಲಿ, ಯುದ್ಧ ಭೂಮಿಯಲ್ಲಿ (ಸಂ. 122, 245, 332, 344, 354-355, 388, 507), ಮರಣ ಹೊಂದುವುದು ಬಹಳ ಮಹತ್ವದ ಕಾರ್ಯವೆಂದು ತಿಳಿಯಲಾಗುತ್ತಿತ್ತು. ಈ ರೀತಿ ಮರಣ ಹೊಂದಿದ ವೀರರು ನಂತರ ಸ್ವರ್ಗ ಸೇರುತ್ತಾರೆಂಬ ನಂಬಿಕೆಯಿತ್ತು. ಪತಿ ಮರಣ ಹೊಂದಿದರೆ ಆತನ ಪತ್ನಿ ಸತಿ ಹೋಗುವ ಪದ್ಧತಿಯಿತ್ತು (ಸಂ. 63). ಕೆಲವರು ಕಳ್ಳರ ಜೊತೆಗೆ ಹೋರಾಡಿ ಮರಣಹೊಂದಿದ್ದಾರೆ (ಸಂ. 112). ಜೈನರು ಉಪವಾಸ ವ್ರತ ಮಾಡಿ ಮರಣಹೊಂದಿದಾಗ ಅವರ ನೆನಪಿಗಾಗಿ ನಿಸಿಧಿ ಕಲ್ಲುಗಳನ್ನು ನಿಲ್ಲಿಸುತ್ತಿದ್ದರು (ಸಂ. 270, 478, 546). ಮಹಿಳೆಯರು ಸಮಾಜದಲ್ಲಿ

ಮಹತ್ವದ ಪಾತ್ರವಹಿಸುತ್ತಿದ್ದರು. ರಾಜ್ಯದ ಆಡಳಿತ ನಡೆಸುವುದರಲ್ಲಿಯೂ ಅವರು ದಕ್ಷರಾಗಿದ್ದರು. ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ರಾಣಿಯರಾದ ಪಿರಿಯ ಕೇತಲದೇವಿ ಮತ್ತು ಪದ್ಮಲದೇವಿಯರು ಸಿರುಗುಪ್ಪೆ (ಸಂ. 637) ಮತ್ತು ಮಾಂಗೊಳ (ಸಂ. 188)ಗಳನ್ನು ಆಳುತ್ತಿದ್ದರು. ಹೊಯ್ಸಳ ಅರಸ ಎರಡನೆಯ ಬಲ್ಲಾಳನ ರಾಣಿ ಪದುಮಲದೇವಿಯು ಹೊಸ ಹಡಂಗಿಲೆಯನ್ನಾಳುತ್ತಿದ್ದಳು (ಸಂ. 102). ಮಹಿಳೆಯರು ದೇವರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ್ದಾರೆ (ಸಂ. 16, 172), ದೇವಾಲಯಗಳನ್ನು ಕಟ್ಟಿಸಿದ್ದಾರೆ (ಸಂ. 129, 174, 519), ದೇವಾಲಯಗಳಿಗೆ ದಾನ ನೀಡಿದ್ದಾರೆ (ಸಂ. 50, 128-129, 188, 282, 292, 302, 307, 362, 389, 580, 592, 637), ನೀರೆತ್ತುವ ಏತ (ಸಂ. 201), ಅರವಟ್ಟಿಗೆ (ಸಂ. 323), ಛತ್ರ (ಸಂ. 237) ಮತ್ತು ಕೆಲವು ವ್ಯಕ್ತಿಗಳಿಗೆ (ಸಂ. 98, 225, 442) ದಾನ ನೀಡಿದ್ದಾರೆ. ದೇವಾಲಯಗಳಲ್ಲಿ ನೃತ್ಯ, ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತಿದ್ದ ಮಹಿಳೆಯರಿಗೆ ದೇವದಾಸಿಯರೆಂದು ಕರೆಯುತ್ತಿದ್ದರು. ಬಾಗಳಿಯ ಕಲ್ಲೇಶ್ವರ ದೇವಾಲಯ (ಸಂ. 294) ಮತ್ತು ಮೋರಿಗೆರೆಯ ನೊಳಂಬೇಶ್ವರ ಮತ್ತು ಲಂಕೇಶ್ವರ ದೇವಾಲಯಗಳಲ್ಲಿ (ಸಂ. 249) ದೇವದಾಸಿಯರು ಮತ್ತು ಅವರ ಸಂಗೀತ ವಾದ್ಯ ತಂಡದವರು ಇದ್ದರು. ಈ ದೇವದಾಸಿ ಮತ್ತು ಅವರ ವಾದ್ಯದವರನ್ನು ಪಾತ್ರ-ಪಾವುಳ ಎಂದೂ ಕರೆಯುತ್ತಿದ್ದರು. ಸಿಂದವೂರಿನ ಮಲ್ಲಿಕಾರ್ಜುನ ದೇವಾಲಯದಲ್ಲಿ ಇಂಥಹ ಪಾತ್ರ-ಪಾವುಳದವರಿದ್ದರು (ಸಂ. 574). ಹಿರೆಮೇಗಲಗೇರಿಯ ಸ್ವಯಂಭುದೇವ ದೇವಾಲಯದಲ್ಲಿ ನಾಲ್ಕು ಜನ ದೇವದಾಸಿಯರಿದ್ದರು (ಸಂ. 351).

ರಾಜಕೀಯ, ಶೈಕ್ಷಣಿಕ ಮತ್ತು ಸಾಮಾಜಿಕ ಜೀವನದಲ್ಲಿ ಬ್ರಾಹ್ಮಣರು ವಿಶಿಷ್ಟ ಸ್ಥಾನ ಪಡೆದಿದ್ದರು. ಇವರು ಮಂತ್ರಿ, ಅಧಿಕಾರಿ ಮತ್ತು ಗುರುಗಳ ಹುದ್ದೆಯಲ್ಲಿದ್ದರು. ರವಿ-ದಂಡನಾಯಕನು ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕೆಳಗೆ ಸೈನ್ಯಾಧಿಕಾರಿಯಾಗಿದ್ದನು (ಸಂ. 129). ಧಾರ್ಮಿಕ ವಿಧಿಗಳಲ್ಲಿ ಮತ್ತು ಯೋಗದಲ್ಲಿ ನಿರತರಾಗಿದ್ದ ಗಂಡರಾದಿತ್ಯನ-ಪೊಳಲು (ಹೊಳಲು)ವಿನ ಮಹಾಜನರು ಶೂರ ಸೈನಿಕರೂ ಆಗಿದ್ದರು (ಸಂ. 110). ಅನೇಕ ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಮಾಡಿ ಬ್ರಾಹ್ಮಣರಿಗೆ ಕೊಟ್ಟಿದ್ದರು. ಈ ಅಗ್ರಹಾರಗಳಲ್ಲಿ ವಾಸಿಸುವ ಬ್ರಾಹ್ಮಣರಿಗೆ ಮಹಾಜನರೆಂದು ಕರೆಯಲಾಗುತ್ತಿತ್ತು. ಈ ಅಗ್ರಹಾರಗಳು ವಿದ್ಯಾ ಕೇಂದ್ರಗಳಾಗಿದ್ದವು. ಅರಸರು, ಮಂತ್ರಿಗಳು, ಅಧಿಕಾರಿಗಳು ಮತ್ತು ಶ್ರೀಮಂತ ಜನರು ಬ್ರಾಹ್ಮಣರಿಗೆ ದಾನಗಳನ್ನು ನೀಡುತ್ತಿದ್ದರು. ಬ್ರಾಹ್ಮಣರು ತಮ್ಮ ವೇಳೆಯನ್ನು ಧಾರ್ಮಿಕ ವಿಧಿಗಳನ್ನು ನಡೆಸುವುದರಲ್ಲಿ ಮತ್ತು ಶಿಕ್ಷಣ ನೀಡುವುದರಲ್ಲಿ ವ್ಯಯಿಸುತ್ತಿದ್ದರು.

ಸೈನಿಕರನ್ನು ಲೆಂಕರು ಎಂದು ಕರೆಯುತ್ತಿದ್ದರು. ಒಂದು ಸಾವಿರ ಲೆಂಕರ ಸಂಘವನ್ನು ಲೆಂಕ-ಸಾಸಿರ್ವರು ಅಥವ ಲೆಂಕ-1000 ಎಂದು ಕರೆಯುತ್ತಿದ್ದರು. ಲೆಂಕ-1000ಗಳು ಮೋರಿಗೆರೆಯನ್ನೊಳಗೊಂಡು ಆರು ಗ್ರಾಮಗಳನ್ನು ಅನುಭೋಗಿಸುತ್ತಿದ್ದರು.

ಸೆಟ್ಟಿ (ಸಂ. 115, 142, 145, 238, 392), ಸೆಟ್ಟಿಗುತ್ತ (ಸಂ. 392), ಮುಮ್ಮುರಿದಂಡ (ಸಂ. 52, 55, 57, 115, 342, 476), ನಖರ (ಸಂ. 57, 120, 237) ಮತ್ತು ಬಣಜಿಗರು (ಸಂ. 385) ವ್ಯಾಪಾರಿಗಳಾಗಿದ್ದರು ಮತ್ತು 500 ವ್ಯಾಪಾರಿಗಳ ಒಂದು ಸಂಘಕ್ಕೆ ಅಯ್ಯಾವಳೆ-ಐನೂರ್ವ್ವರು ಅಥವ ಐಪೊಳೆ ಸೆಟ್ಟಿಗಳು ಎಂದು ಕರೆಯುತ್ತಿದ್ದರು (ಸಂ. 342). 500 ವ್ಯಾಪಾರಿಗಳಿದ್ದ ಹೊಳಲು ಗ್ರಾಮವನ್ನು ದಕ್ಷಿಣದ ಅಯ್ಯಾವಳೆ ಎಂದು ಕರೆಯುತ್ತಿದ್ದರು (ಸಂ. 119). ವೈದ್ಯ (ಸಂ. 13), ಗಾಣಿಗ (ತೆಲ್ಲಿಗ) (ಸಂ. 47, 115), ಉಪ್ಪಾರ (ಸಂ. 157, 228), ತುಂಬುಲಿಗ (ಸಂ. 312), ಕ್ಷೌರಿಕ (ಸಂ. 319, 369, 473), ಅಕ್ಕಸಾಲಿಗ (ಸಂ. 467, 486, 520), ಕಂಚುಗಾರ (ಸಂ. 232), ಕಮ್ಮಾರ (ಸಂ. 228), ವಾಸ್ತು ಶಿಲ್ಪಿ (ಸಂ. 124, 154, 540, 656) ಮತ್ತು ಶಿಲ್ಪಿ (ಸಂ. 124, 127, 484, 596, 604, 656) ಉದ್ಯೋಗಗಳಲ್ಲಿದ್ದ ಜನರ ಉಲ್ಲೇಖವೂ ಈ ಶಾಸನಗಳಲ್ಲಿ ದೊರೆಯುತ್ತದೆ. ಹೊಳಲಿನಲ್ಲಿ ದೊರೆತ ಒಂದು ಶಾಸನವು ಶಿಲ್ಪಿ ಸೋಗೆಯ ಪದ್ಮೋಜನ ಬಗ್ಗೆ ಒಂದು ಸ್ವಾರಸ್ಯಕರವಾದ ವಿಷಯವನ್ನು ತಿಳಿಸುತ್ತದೆ (ಸಂ. 124). ಈತನು 64 ಕಲೆಗಳಲ್ಲಿ, 64 ವಿಧದ ಪ್ರಾಸಾದ (ಪವಿತ್ರ ಕಟ್ಟಡ)ಗಳನ್ನು ಕಟ್ಟುವುದರಲ್ಲಿ ಮತ್ತು ನಾಗರ, ಕಳಿಂಗ, ದ್ರಾವಿಳ (ದ್ರಾವಿಡ) ಮತ್ತು ವೇಸರ ಎಂಬ ನಾಲ್ಕು ವಿಧದ ದೇವಾಲಯಗಳನ್ನು ಕಟ್ಟುವುದರಲ್ಲಿ ಪರಿಣಿತನಾಗಿದ್ದನು.

ಅರಸರು, ಮಂತ್ರಿಗಳು ಮತ್ತು ಇತರರು ಪುಣ್ಯವನ್ನು ಪಡೆಯುವದಕ್ಕೋಸ್ಕರ ಆನಂದನಿಧಿ (ಸಂ. 487), ಕಟ್ಟುಗುತ್ತಗೆ-ಪಿಂಡದಾನ (ಸಂ. 542), ಪರಮೇಶ್ವರ-ದತ್ತಿ (ಸಂ. 39) ಮತ್ತು ವಿಶ್ವಚಕ್ರ (ಸಂ. 129) ಎಂಬ ವಿವಿಧ ದಾನಗಳನ್ನು ನೀಡಿದ ವಿಷಯ ಶಾಸನಗಳಿಂದ ತಿಳಿಯುತ್ತದೆ.

ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಲಾಗಿತ್ತು. ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನು ದ್ರಾವಿಡ ಪ್ರದೇಶದಿಂದ ಬಂದ ಮತ್ತು ವೇದ ಪಾರಂಗತರಾದ 300 ಬ್ರಾಹ್ಮಣರಿಗೆ ನೀಲಗುಂದ ಗ್ರಾಮವನ್ನು ದಾನ ನೀಡಿದನು (ಸಂ. 378). ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಅಭಿವೃದ್ಧಿಗೊಳಿಸಿ ಶಿಕ್ಷಣ ನೀಡುತ್ತಿದ್ದ ಬ್ರಾಹ್ಮಣರಿಗೆ ದಾನ ಕೊಡುತ್ತಿದ್ದರು. ವಿಜಯನಗರ ಅರಸ ಕೃಷ್ಣದೇವರಾಯನು ಕೃಷ್ಣರಾಯಪುರವೆಂಬ ಉಪನಾಮಹೊಂದಿದ ಹಂಪದೇವನಹಳ್ಳಿಯನ್ನು 105 ವೃತ್ತಿಗಳ ಅಗ್ರಹಾರವಾಗಿ ಸುಶಿಕ್ಷಿತ ಬ್ರಾಹ್ಮಣರಿಗೆ ನೀಡಿದನು (ಸಂ. 426). ಸೋಮಸಮುದ್ರ (ಸಂ. 85), ಹೊಳಲು (ಸಂ. 139), ಚಿಕ-ತಿಮ್ಮಾಪುರ (ಸಂ. 158-159, 497), ನರುಗುಂದ (ಸಂ. 162), ತಿಮ್ಮಲಾಪುರ (ಸಂ. 184), ಮಾಗಳ (ಸಂ. 188), ಬಾಗಳಿ (ಸಂ. 294, 306-308, 320), ಬುಕ್ಕಸಾಗರ (ಸಂ. 353), ಹರಿಯಸಮುದ್ರ (ಸಂ. 393), ನಿಡುಗುಲ ಅಥವಾ ಅಪಿನಾಯಕಪುರ (ಸಂ. 446), ತಿಮ್ಮಾಪುರ (ಸಂ. 497), ಮಗಿಮಾವಿನಹಳ್ಳಿ (ಸಂ 497), ಕುರಿಕುಪ್ಪೆ (ಸಂ. 514), ಶ್ರೀಪುರ (ಸಂ. 542), ಬಗ್ಗೂರು (ಸಂ. 554), ಗುಂಡಿಗನೂರು (ಸಂ. 572), ಆದವಾನಿ (ಸಂ. 575), ಲಕ್ಷ್ಮೀಪುರ ಅಥವಾ ಹಿರಯಹಾಳು (ಸಂ. 618) ಮತ್ತು ರಾರಾವಿ (ಸಂ. 625) ಶಾಸನಗಳಲ್ಲಿ ಉಲ್ಲೇಖಗೊಂಡ ಇತರ ಅಗ್ರಹಾರಗಳು. ಬ್ರಾಹ್ಮಣ ವಿದ್ವಾಂಸರು ವಾಸಿಸುವ ಪಟ್ಟಣದ ಭಾಗವನ್ನು ಬ್ರಹ್ಮಪುರಿ ಎಂದು ಕರೆಯುತ್ತಿದ್ದರು. ಬೆಣ್ಣೆಹಳ್ಳಿಯಲ್ಲಿ ಸ್ವಯಂಭುದೇವ ದೇವಾಲಯದ ಬ್ರಹ್ಮಪುರಿಯಲ್ಲಿ 12 ಜನ ಬ್ರಾಹ್ಮಣರಿದ್ದರು (ಸಂ. 328). ಕುರುವತ್ತಿಯು ಬ್ರಹ್ಮಪುರಿ ಗ್ರಾಮವಾಗಿತ್ತು (ಸಂ. 150).

ದೇವಾಲಯಗಳಲ್ಲಿ ವಿದ್ಯೆಯನ್ನು ಬೋಧಿಸಲಾಗುತ್ತಿತ್ತು. ದೇವಾಲಯಗಳಿಗೆ ಸೇರಿದ ಛತ್ರ ಮತ್ತು ಮಠಗಳಲ್ಲಿ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆಯೂ ಇತ್ತು. ವೇಹೂರಿನ ತ್ರೈಪುರುಷ ದೇವಸ್ಥಾನದಲ್ಲಿದ್ದ ವಿವಿಧ ಶಾಸ್ತ್ರಗಳಲ್ಲಿ ಪಾರಂಗತರಾಗಿದ್ದ ಐವರು ಶಿಕ್ಷಕರು ಮತ್ತು ಇನ್ನೂರು ವಿದ್ಯಾರ್ಥಿಗಳು ಇದ್ದರು (ಸಂ. 541). ಬಾಗಳಿಯ ಅನೇಕ ದೇವಾಲಯಗಳಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು, ಪುರಾಣಗಳನ್ನು ಓದುವವರು ಮತ್ತು ಐಂದ್ರ ಸ್ತೋತ್ರಗಳನ್ನು ಪಠಿಸುವವರು ಇದ್ದರು (ಸಂ. 294, 306-308, 320-321). ಹನಸಿಯ ಪರಶುರಾಮೇಶ್ವರ ದೇವಾಲಯ (ಸಂ. 232), ಕೋಗಳಿಯ ಜೈನ ಬಸದಿ (ಸಂ. 239) ಮತ್ತು ಮೋರಿಗೇರಿಯ ನೊಳಂಬೇಶ್ವರ ಮತ್ತು ಲೆಂಕೇಶ್ವರ ದೇವಾಲಯಗಳಲ್ಲಿ (ಸಂ. 247, 249), ಶಿಕ್ಷಣ ನೀಡಲಾಗುತ್ತಿತ್ತು. ಕೊಳಗಲ್ಲಿನಲ್ಲಿ ಒಂದು ಮಠದಲ್ಲಿದ್ದ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆಯಿದ್ದ ಮನೆಗೆ ವಿದ್ಯಾದಾನ ಛತ್ರ ಎನ್ನುತ್ತಿದ್ದರು (ಸಂ. 30). ಹೂವಿನಹಡಗಲಿಯಲ್ಲಿ ವಿದ್ಯಾರ್ಥಿಗಳಿಗೆ ಊಟ ಮತ್ತು ಬಟ್ಟೆಯ ವ್ಯವಸ್ಥೆಯಿತ್ತು (ಸಂ. 126).

ಹಾಡು ಮತ್ತು ನೃತ್ಯಗಳು ದೇವಾಲಯಗಳಲ್ಲಿ ನಡೆಯುವ ರಂಗಭೋಗ ಪೂಜೆಯ ಭಾಗಗಳಾಗಿದ್ದವು. ಸಂಗೀತ, ನೃತ್ಯಗಳಲ್ಲಿ ತೊಡಗಿದ ಮಹಿಳೆಯರಿಗೆ ದೇವದಾಸಿಯರೆಂದು ಕರೆಯುತ್ತಿದ್ದರು. ಮೋರಿಗೇರಿ (ಸಂ. 249), ಬಾಗಳಿ (ಸಂ. 294), ಹಿರೇಮೇಗಲಗೇರಿ (ಸಂ. 351) ಮತ್ತು ಸಿಂದವೂರ (ಸಂ. 574)ಗಳಲ್ಲಿ ದೇವಾಲಯಗಳಲ್ಲಿ ದೇವದಾಸಿಯರು ಮತ್ತು ಸಂಗೀತ ವೃಂದದವರಿದ್ದರೆಂದು ಈಗಾಗಲೇ ಮೇಲೆ ತಿಳಿಸಿದೆ. ಹೂವಿನಹಡಗಲಿಯ ಕಲ್ಲೇಶ್ವರ ದೇವಾಲಯದಲ್ಲಿ (ಸಂ. 126) ಹಾಡುಗಾರರು ಮತ್ತು ತಲವಾಗಲಿನ ಭೋಗೇಶ್ವರ ದೇವಸ್ಥಾನದಲ್ಲಿ ಸಂಗೀತ ವೃಂದದವರು (ಸಂ. 402) ಇದ್ದರು. ದೇವಲಾಪುರದ ವಸಂತ ಮಲ್ಲಿಕಾರ್ಜುನ ದೇವರಿಗೆ ದಾನವಾಗಿ ನೀಡಿದ್ದ ಪನ್ನುಲ-ನುಂಕನಹಳ್ಳಿ ಗ್ರಾಮವನ್ನು ಆ ದೇವಾಲಯದಲ್ಲಿ ಎರಡು ನಾಗಸ್ವರ ಮತ್ತು ಎರಡು ಡೋಲುಗಳನ್ನು ನುಡಿಸುತ್ತಿದ್ದ ಮುಸಿಯರಾವುತನು ಅನುಭವಿಸುತ್ತಿದ್ದನು (ಸಂ. 467). ದಾನ-ಧರ್ಮಗಳಿಗೆ ಹೆಸರಾಗಿದ್ದ ಬಯಕಾರ ರಾಮಪ್ಪಯ್ಯನು ಸಂಗೀತದ ಬಗ್ಗೆ ಒಂದು ಗ್ರಂಥ ಬರೆದನು (ಸಂ. 497).

ಬ್ರಾಹ್ಮಣ, ಸನ್ಯಾಸಿ, ಯಾತ್ರಿಕ, ವಿದ್ಯಾರ್ಥಿಗಳಿಗೆ ಛತ್ರಗಳಲ್ಲಿ ಊಟದ ವ್ಯವಸ್ಥೆಯಿತ್ತು. ಈ ಛತ್ರಗಳು ದೇವಸ್ಥಾನ ಮತ್ತು ಮಠಗಳಿಗೆ ಸೇರಿದ್ದವು. ಇಂತಹ ಛತ್ರಗಳು ಕೊಳಗಲ್ಲು (ಸಂ. 30), ಕುಡತಿನಿ (ಸಂ. 40, 45), ಕುರುಗೋಡು (ಸಂ. 57), ಸಿಂದಿಗೇರಿ (ಸಂ. 79-80), ಯಳಪಿ (ಸಂ. 87), ಹೂವಿನ ಹಡಗಲಿ (ಸಂ. 126, 129-130), ಕೋಗಳಿ (ಸಂ. 237), ಮೋರಿಗೇರಿ (ಸಂ. 249), ಬಾಗಳಿ (ಸಂ. 283, 302, 308), ಮಾಕೆರೆ (ಸಂ. 330) ಮತ್ತು ಕೊಟ್ಟೂರು (ಸಂ. 476)ಗಳಲ್ಲಿದ್ದವು. ಕೊಟ್ನಕಲ್ಲು (ಸಂ. 136), ಕುರುವತ್ತಿ (ಸಂ. 138), ಹನಸಿ (ಸಂ. 232), ಬೆಣ್ಣೆಹಳ್ಳಿ (ಸಂ. 325, 327), ಗುಡಿಹಳ್ಳಿ (ಸಂ. 334-335) ಕೂಚಿಗೋಳ (ಸಂ. 401) ಮತ್ತು ಸಿರುಗುಪ್ಪ (ಸಂ. 637) ಗಳಲ್ಲಿ ಇಂತಹ ಊಟದ ವ್ಯವಸ್ಥೆ ಇದ್ದುದು ಶಾಸನಗಳಿಂದ ತಿಳಿಯುತ್ತದೆ. ಯಾತ್ರಿಕರ ಅನುಕೂಲಕ್ಕಾಗಿ ಕುರುಗೋಡು (ಸಂ. 57), ಬೆಣ್ಣೆಹಳ್ಳಿ (ಸಂ. 323), ಮುತ್ತಿಗಿ (ಸಂ. 371), ಚಿಲಕನಹಟ್ಟಿ (ಸಂ. 419) ಮತ್ತು ಹಾರವನಹಳ್ಳಿ (ಸಂ. 428-430) ಗಳಲ್ಲಿ

ಅರವಟ್ಟಿಗೆಗಳಲ್ಲಿದ್ದುದು ಶಾಸನಗಳಿಂದ ತಿಳಿಯುತ್ತದೆ. ದರೋಜಿಯಲ್ಲಿ ಕೆರೆಯ ನೀರನ್ನು ಬಾಯಾರಿದ ಯಾತ್ರಿಕರಿಗೆ ಹಂಚಲಾಗುತ್ತಿತ್ತು (ಸಂ. 502). ಛತ್ರದಹಳ್ಳಿಯಲ್ಲಿ ನೀರನ್ನು ಧರ್ಮದ ತೊಟ್ಟಿಗೆ ಬಿಡಲಾಗುತ್ತಿತ್ತು (ಸಂ. 228). ಮೈದೂರಿನಲ್ಲಿ ಒಂದು ಬಾವಿ ಮತ್ತು ಒಂದು ನೀರಿನ ತೊಟ್ಟಿಯನ್ನು ಕಟ್ಟಿದ್ದರು (ಸಂ. 367). ಸಿಂದಗೇರಿ (ಸಂ. 81), ಸೋಗಿ (ಸಂ. 201) ಮತ್ತು ಕೆಂಚೆತಿನಹಳ್ಳಿ (ಸಂ. 234)ಗಳಲ್ಲಿ ಧರ್ಮೇತಗಳ ವ್ಯವಸ್ಥೆ ಮಾಡಲಾಗಿತ್ತು. ಸೋಗಿಯ ಧರ್ಮೇತವನ್ನು ಪ್ರಾಣಿಗಳಿಗೆ ಉಪಯೋಗಿಸುತ್ತಿದ್ದರು. ಯಾತ್ರಿಕರ ವಿಶ್ರಾಂತಿಗೆ ಒಂದು ಮಂಟಪವನ್ನು ಯೆತ್ತಿನ ಬೂದಿಹಾಳದಲ್ಲಿ ಕಟ್ಟಿಸಿದ್ದರು (ಸಂ. 91).

ವಿವಾದಗಳನ್ನು ಬಗೆಹರಿಸಿ ಕಾನೂನು ವ್ಯವಸ್ಥೆಯನ್ನು ಕಾಪಾಡಿದ ಸಂದರ್ಭಗಳ ಮೇಲೆಯೂ ಶಾಸನಗಳು ಬೆಳಕು ಚಲ್ಲುತ್ತವೆ. ಕೆಲವೊಮ್ಮೆ ಅರಸರೇ ಇಂತಹ ವ್ಯಾಜ್ಯಗಳನ್ನು ಪರಿಹರಿಸುತ್ತಿದ್ದರು. ಗಂಡರಾದಿತ್ಯನ ಹೊಳಲು ಅಗ್ರಹಾರದ ಮಹಾಜನರು ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಬಳಿ ಹೋಗಿ ಮನ್ನೆಯ ಬೊಪ್ಪಯ್ಯನು ಹೊಳಲು ಗ್ರಾಮವನ್ನು ವಶಪಡಿಸಿಕೊಂಡು, ಗ್ರಾಮವನ್ನು ಲೂಟಿಮಾಡಿ ಬ್ರಾಹ್ಮಣರನ್ನು ಕೊಲ್ಲುತ್ತಿದ್ದಾನೆಂದು ದೂರು ಹೇಳಲು ಅರಸನು ಆತನನ್ನು ಕರೆಯಿಸಿ ಆತ ಮತ್ತು ಆತನ ವಂಶದವರಿಗೆ ಹೊಳಲು ಮನ್ನೆಯದ ಮೇಲೆ ಯಾವುದೇ ಅಧಿಕಾರವಿಲ್ಲವೆಂದು ಭಾಷೆ ತೆಗೆದುಕೊಂಡದ್ದನ್ನು ಕುರುವತ್ತಿಯ ಒಂದು ಶಾಸನ ತಿಳಿಸುತ್ತದೆ (ಸಂ. 139). ಐದು ವರ್ಗಗಳು, ಎಳ್ಕೋಟಿ-ಮಹಾದೇವರು, ಅಸಂಖ್ಯಾತ ಗಣಗಳು ಮತ್ತು ಮುಮ್ಮುರಿದಂಡರು ವಿಷ್ಣುಕರ-ಬ್ರಹ್ಮಚಾರಿಯ ಅಧ್ಯಕ್ಷತೆಯಲ್ಲಿ ಸಭೆ ಸೇರಿ ನಡತೆಗೆಟ್ಟದ್ದನ್ನು ಮತ್ತು ಅಪರಾಧ ಎಸಗಿದ್ದನ್ನು ಸ್ಥಳೀಯ ತಪೋಧನರಾದ ವಿಷ್ಣುಕರ ಬ್ರಹ್ಮಚಾರಿಯ ಬಳಿಗೆ ಒಯ್ಯಬೇಕೆಂದು ನಿರ್ಣಯಿಸಿದ್ದನ್ನು ಕುಡತಿನಿ ಶಾಸನವು ತಿಳಿಸುತ್ತದೆ (ಸಂ. 52). ಈ ಶಾಸನವನ್ನು ಆಜ್ಞೆಯ ಶಾಸನವೆಂದು ಕರೆಯಲಾಗಿದೆ. ಮೈಲಾರದ ಒಂದು ಶಾಸನವು ಅವಮಾನ ಮಾಡಿದವರಿಗೆ, ಹೊಡೆದವರಿಗೆ, ರಕ್ತಪಾತಕ್ಕೆ ಕಾರಣರಾದವರಿಗೆ, ಲೂಟಿ, ಕಳ್ಳತನ ಮಾಡಿದವರ ಜೊತೆಗೆ ಸೇರಿದವರಿಗೆ ದಂಡ ವಿಧಿಸಲಾಗುತ್ತಿತ್ತೆಂದು ತಿಳಿಸುತ್ತದೆ (ಸಂ. 162). ಸಂಪ್ರದಾಯಗಳ ಉಲ್ಲಂಘನೆ ಮಾಡಿದವರಿಗೆ ಮತ್ತು ಅಪರಾಧ ಎಸಗಿದವರಿಗೆ ದಂಡ ವಿಧಿಸಿದ್ದನ್ನು ಕೋಗಳಿಯ ಶಾಸನವೂ ತಿಳಿಸುತ್ತದೆ (ಸಂ. 238). ಯಾವುದೇ ಒಬ್ಬ ಮಹಿಳೆ ವ್ಯಭಿಚಾರ ಮಾಡಿದರೆ ಅವಳ ಮೂಗನ್ನು ಕತ್ತರಿಸುವುದು ಮತ್ತು ವ್ಯಭಿಚಾರಕ್ಕೆ ಕಾರಣನಾದವನನ್ನು ಮರಣದಂಡನೆಗೆ ಗುರಿಪಡಿಸುವುದು, ಕಳ್ಳತನ ಮಾಡಿದವನನ್ನು ಮರಣದಂಡನೆಗೆ ಗುರಿಪಡಿಸುವುದು ಮತ್ತು ಹಿಂಸೆ, ರಕ್ತಪಾತಕ್ಕೆ ಕಾರಣರಾದವರಿಗೆ 8 ಪಣ ದಂಡ ವಿಧಿಸುವುದನ್ನು ಈ ಶಾಸನ ತಿಳಿಸುತ್ತದೆ.

ಧಾರ್ಮಿಕ: ಸಾಂಪ್ರದಾಯಿಕ ಧರ್ಮಗಳಾದ ಶೈವ, ವೈಷ್ಣವ ಮತ್ತು ಜೈನ ಧರ್ಮಗಳು ಈ ಪ್ರದೇಶದಲ್ಲಿ ಆಚರಣೆಯಲ್ಲಿದ್ದವು. ಇವುಗಳಲ್ಲಿ ಶೈವಧರ್ಮವು ಹೆಚ್ಚು ಆಚರಣೆಯಲ್ಲಿತ್ತು. ಅರಸರ ಮತ್ತು ಇತರರ ಪ್ರೋತ್ಸಾಹದಿಂದ ಧಾರ್ಮಿಕ ಸಾಮರಸ್ಯವಿತ್ತು. ಈ ಧರ್ಮಗಳ ದೇವಾಲಯಗಳನ್ನು ಕಟ್ಟಿಸಿದ, ವಿಗ್ರಹಗಳನ್ನು ಪ್ರತಿಷ್ಠಾಪಿಸಿ ದಾನಗಳನ್ನು ನೀಡಿದ ವಿಷಯಗಳು ಶಾಸನಗಳಿಂದ ತಿಳಿದು ಬರುತ್ತವೆ. ಕುರುಗೋಡಿನಲ್ಲಿ ಗವರೇಶ್ವರ, ಮಲ್ಲಿಕಾರ್ಜುನ, ಮುದ್ದೇಶ್ವರ, ಕಲಿದೇವ, ಶಿವಸ್ವಯಂಭು ಮತ್ತು ಉದ್ಭವ ರಾಚಮಲ್ಲೇಶ್ವರ (ಸಂ. 55, 57, 63-64), ಓರುವಾಯಿಯಲ್ಲಿ ವಿಘ್ನೇಶ್ವರ ಮತ್ತು ಇಮ್ಮಡಿ ರಾಚಮಲ್ಲೇಶ್ವರ, ವಿರೂಪಾಕ್ಷ ಮತ್ತು ಭೋಗೇಶ್ವರ (ಸಂ. 71, 73), ಹಿರೇಹಡಗಲಿಯಲ್ಲಿ ದೇಮೇಶ್ವರ (ಸಂ. 101), ಹೊಳಗೊಂದಿಯಲ್ಲಿ ಮಲ್ಲಿನಾಥ (ಸಂ. 108), ಉತ್ತಂಗಿಯಲ್ಲಿ ಬಸವೇಶ್ವರ (ಸಂ. 209), ಅಂಬಲಿಯಲ್ಲಿ ಕಲಿದೇವ (ಸಂ. 217), ರಾಮಘಟ್ಟದಲ್ಲಿ ರಾಮೇಶ್ವರ (ಸಂ. 394), ಕಂಪ್ಲಿಯಲ್ಲಿ ವಿರೂಪಾಕ್ಷ (ಸಂ. 438), ತಿಮ್ಮಲಾಪುರದಲ್ಲಿ ಮಲ್ಲಿಕಾರ್ಜುನ, ಬಾಚೇಶ್ವರ, ಅಮ್ಮೇಶ್ವರ ಮತ್ತು ಕೃಷ್ಣೇಶ್ವರ (ಸಂ. 455, 457), ಬೆಣ್ಣೆಕಲ್ಲಿನಲ್ಲಿ ಪದ್ಮಲೇಶ್ವರ, ಅಮೃತೇಶ್ವರ, ವಾಮೇಶ್ವರ ಮತ್ತು ಬಲ್ಲಾಳೇಶ್ವರ (ಸಂ. 464), ಕುರಿಕುಪ್ಪೆಯಲ್ಲಿ ವಿರೂಪಾಕ್ಷ (ಸಂ. 514), ರಾಮಗಢದಲ್ಲಿ ರಾಮನಾಥ (ಸಂ. 519), ತಾಳೂರಿನಲ್ಲಿ ಈಶ್ವರ (ಸಂ. 540), ಕಂಚಗಾರ ಬೆಳಗಲ್ಲಿನಲ್ಲಿ ಭೋಗೇಶ್ವರ (ಸಂ. 591), ರಾರಾವಿಯಲ್ಲಿ ಮೂಲಸ್ಥಾನದೇವ, ಕರ್ಮ್ಮಟೇಶ್ವರ, ರಾಮೇಶ್ವರ, ಗೌರೇಶ್ವರ ಮತ್ತು ವಾಹಾದಿ ಬಸವೇಶ್ವರ (ಸಂ. 625, 627) ದೇವಸ್ಥಾನಗಳನ್ನು ಕಟ್ಟಿಸಿದ ವಿಷಯ ಶಾಸನಗಳಿಂದ ತಿಳಿಯುತ್ತದೆ. ಅಲ್ಲದೇ ಕುಡತಿನಿಯಲ್ಲಿ ಸ್ಕಂದ (ಸಂ. 38), ಸಿಂದವಾಳದಲ್ಲಿ ಸೋಮೇಶ್ವರ (ಸಂ. 78), ಮೈಲಾರದಲ್ಲಿ ನಂದಿಕೇಶ್ವರ (ನಂದಿ) (ಸಂ. 165), ಮೋರಿಗೇರಿಯಲ್ಲಿ ಲೆಂಕೇಶ್ವರ ಮತ್ತು ನೊಳಂಬೇಶ್ವರ (ಸಂ. 249), ಬಾಗಳಿಯಲ್ಲಿ ಸುಪರ್ಣವೇಗಾಮೃತೇಶ್ವರ (ಸಂ. 284), ಮಾಕೆರೆಯಲ್ಲಿ ನೊಯ್ಯೇಶ್ವರ (ಸಂ. 330), ಕಂಚಿಕೆರೆಯಲ್ಲಿ ಲಿಂಗ (ಸಂ. 360), ರಾಗಿ ಮಸಲವಾಡದಲ್ಲಿ ರತ್ನಭೂಷಣ ವಿನಾಯಕ (ಸಂ. 392), ಚಿಕ್ಕ ಜಾಯಿಗನೂರಿನಲ್ಲಿ ವಿರೂಪಾಕ್ಷ (ಸಂ. 418) ಮತ್ತು ಟಿ.ರಾಮಪುರದಲ್ಲಿ ಮಹಾದೇವ (ಸಂ. 649) ವಿಗ್ರಹಗಳ ಪ್ರತಿಷ್ಠಾಪನೆಯಾದುದೂ ಸಹ ಶಾಸನಗಳಿಂದ ತಿಳಿಯುತ್ತದೆ.

ವೈಷ್ಣವ ದೇವಾಲಯಗಳಾದ ಗುತ್ತಿಗನೂರಿನ ಹನುಮಂತ (ಸಂ. 19), ಕುರುಗೋಡಿನ ಹನುಮಂತ (ಸಂ. 59), ಹೂವಿನ ಹಡಗಲಿಯ ಕೇಶವ (ಸಂ. 129), ಕತ್ತೆಬೆನ್ನೂರಿನ ಹನುಮಂತ (ಸಂ. 135), ಸೋಗಿಯ ಕೇಶವ (ಸಂ. 194), ಇಟ್ಟಗಿ ಮುದ್ದಾಪುರದ ತಿರುವೆಂಗಳನಾಥ (ಸಂ. 436), ಬೆಣ್ಣಿಕಲ್ಲಿನ ಲಕ್ಷ್ಮೀನಾರಾಯಣ ಮತ್ತು ನರಸಿಂಹ (ಸಂ. 464), ಮತ್ತು ಹುಲಿಗುಂಟದ ಬಾಲಕೃಷ್ಣ (ಸಂ. 509) ದೇವಾಲಯಗಳ ಸ್ಥಾಪನೆಯೂ ಶಾಸನಗಳಿಂದ ತಿಳಿಯುತ್ತದೆ. ರೂಪನಗುಡಿಯಲ್ಲಿ ಹನುಮಂತನ ವಿಗ್ರಹ (ಸಂ. 74) ಮತ್ತು ಮಾಗಳದಲ್ಲಿ ಗೋಪಾಲನ (ಸಂ. 156) ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಯಿತು.

ಕೆಲವು ಸಮಯ ಬೇರೆ ಬೇರೆ ಧರ್ಮಗಳ ದೇವತೆಗಳನ್ನು ಒಂದೇ ದೇವಾಲಯದಲ್ಲಿ ಪ್ರತಿಷ್ಠಾಪಿಸಿ ಪೂಜಿಸಿದ್ದು ಅಥವ ಒಂದೇ ಧರ್ಮದ ಪೋಷಕರು ಬೇರೆ ಬೇರೆ ಧರ್ಮಗಳ ದೇವಸ್ಥಾನಗಳಲ್ಲಿ ದೇವತೆಗಳನ್ನು ಪ್ರತಿಷ್ಠಾಪಿಸಿ ಪೂಜಿಸಿದ್ದನ್ನು ಶಾಸನಗಳಲ್ಲಿ ಕಾಣಬಹುದು. ಗದಾಧರನು ಕೊಳಗಲ್ಲಿನಲ್ಲಿ ಕಾರ್ತಿಕೇಯ, ಅರ್ಕ (ಸೂರ್ಯ), ಬ್ರಹ್ಮ, ವಿಷ್ಣು, ಮಹೇಶ್ವರ, ಪಾರ್ವತಿ ಮತ್ತು ವಿನಾಯಕ ವಿಗ್ರಹಗಳನ್ನು ಪ್ರತಿಷ್ಠಾಪಿಸಿದನು (ಸಂ. 32). ರೇವಗಾವುಂಡನು ತನ್ನ ಎಲ್ಲ ಆಸ್ತಿಯನ್ನು ಮಾರಿ ಬಂದ ಹಣವನ್ನು ದಾನ ಧರ್ಮಗಳಿಗೆ ವ್ಯಯ ಮಾಡಿದ್ದಾನೆ. ಈತನು ಸೋಮೇಶ್ವರ, ಕಾಳೇಶ್ವರ, ಮಲ್ಲಿಕಾರ್ಜುನ, ಆದಿತ್ಯ, ವಿಘ್ನೇಶ್ವರ, ಭೈರವ ಮತ್ತು ಮೇಳೇಶ್ವರ ದೇವಾಲಯಗಳನ್ನು ಕೋಳೂರಿನಲ್ಲಿ ಕಟ್ಟಿಸಿದನು (ಸಂ. 33). ಮಾರ್ತಂಡಯ್ಯ ನಾಯಕನು ಕುಡತಿನಿಯಲ್ಲಿ ಶಿವ, ಸರಸ್ವತಿ ಮತ್ತು ವಿನಾಯಕ ದೇವಾಲಯಗಳನ್ನು ಕಟ್ಟಿಸಿದನು (ಸಂ. 45). ಮಾಗಳದಲ್ಲಿ ಮರ್ಮ್ಮರಸನು ಶಿವ, ವಿಷ್ಣು ಮತ್ತು ಸೂರ್ಯ ದೇವತೆಗಳಿಗೆ ಒಂದು ದೇವಸ್ಥಾನ ಕಟ್ಟಿಸಿದನು (ಸಂ. 153). ಬಯಕಾರ ರಾಮಪ್ಪಯ್ಯನು ತಿಮ್ಮಲಾಪುರದಲ್ಲಿ ಬಾಚೇಶ್ವರ ಮತ್ತು ಗೋಪಿನಾಥ ದೇವಸ್ಥಾನಗಳನ್ನು ಕಟ್ಟಿಸಿದನು (ಸಂ. 184, 453). ಅಮಿತಯ್ಯ ದಂಡನಾಯಕನು ಶ್ರೀಪುರದಲ್ಲಿ ಒಂದು ತ್ರಿಕೂಟ ದೇವಸ್ಥಾನ ಕಟ್ಟಿಸಿ ಅದರಲ್ಲಿ ಅಮೃತೇಶ್ವರ, ವಾಮೇಶ್ವರ ಮತ್ತು ಲಕ್ಷ್ಮೀನಾರಾಯಣ ದೇವರುಗಳನ್ನು ಪ್ರತಿಷ್ಠಾಪಿಸಿದನು (ಸಂ. 542). ಕೇತಯ ಸಾಹಣಿಯು ಸಿದ್ಧನಾಥ, ನರಸಿಂಹ ಮತ್ತು ವಿನಾಯಕ ದೇವರಿಗೆ ದೇವಾಲಯ ಕಟ್ಟಿಸಿದನು (ಸಂ. 645).

ಜೈನ ಧರ್ಮದ ಬಗ್ಗೆ ತಿಳಿಸುವ ಶಾಸನಗಳು ಬಹಳ ಕಡಿಮೆ. ನಂದಿಬೇವೂರು (ಸಂ. 373) ಮತ್ತು ಬಲಕುಂದೆ (ಸಂ. 563)ಗಳಲ್ಲಿ ಜೈನ ದೇವಾಲಯಗಳನ್ನು ಕಟ್ಟಿಸಲಾಯಿತು.

ಕೊಳಗಲ್ಲು ಮತ್ತು ಕುಡತಿನಿಯ ಶಾಸನಗಳು ಕಾರ್ತಿಕೇಯ ತಪೋವನದ ಬಗ್ಗೆಯೂ ತಿಳಿಸುತ್ತವೆ (ಸಂ. 30, 44, 47-48, 51). ಈ ಪ್ರದೇಶದಲ್ಲಿ ಕಾರ್ತಿಕೇಯನ ಪೂಜೆ ಬಹಳ ಪ್ರಸಿದ್ಧವಾಗಿತ್ತು ಮತ್ತು ಆ ದೇವರ ಹೆಸರನ್ನೇ ಒಂದು ತಪೋವನಕ್ಕೆ ಇಡಲಾಗಿತ್ತು.

ದೇವಸ್ಥಾನವು ಸಾಮಾಜಿಕ-ಧಾರ್ಮಿಕ ಸಂಸ್ಥೆಯಾಗಿದ್ದು, ಜನರ ಅವಶ್ಯಕತೆಗಳನ್ನು ಪೂರೈಸುವುದರಲ್ಲಿ ಅನೇಕ ರೀತಿಯಲ್ಲಿ ಸಹಾಯಕವಾಗಿತ್ತು. ಇದು ಬ್ಯಾಂಕು, ಉದ್ಯೋಗ ಒದಗಿಸುವುದು, ಕಲೆಗಳನ್ನು ಪ್ರದರ್ಶಿಸುವ ಸ್ಥಾನ, ಶೈಕ್ಷಣಿಕ ಕೇಂದ್ರ, ಛತ್ರ ಮತ್ತು ನ್ಯಾಯಾಲಯಗಳ ಕಾರ್ಯವನ್ನು ನಿರ್ವಹಿಸುತ್ತಿತ್ತು.[11] ದೇವಸ್ಥಾನಗಳಲ್ಲಿ ನಡೆಯುವ ಪೂಜೆ, ಉತ್ಸವ ಮತ್ತು ಇನ್ನಿತರ ಅನೇಕ ಕಲಾಪಗಳಿಗೆ ದಾನ ನೀಡಿದ್ದನ್ನು ಶಾಸನಗಳು ತಿಳಿಸುತ್ತವೆ.

ಟಿಪ್ಪಣಿಗಳು

1. ಕೃಷ್ಣಮೂರ್ತಿ ಎಂ.ಎಸ್., 1980, *ದಿ ನೊಳಂಬಾಸ್,* ಮೈಸೂರು, ಪು. 121.
2. *ಎಪಿಗ್ರಾಫಿಯ ಕರ್ನಾಟಿಕ,* V, ಪು. 171.
3. ಕೃಷ್ಣಮೂರ್ತಿ, *ಅದೇ,* ಪು. 130.
4. ಶಾಸ್ತ್ರಿ ಕೆ.ಎ. ನೀಲಕಂಠ, 1966, *ಎ ಹಿಸ್ಟರಿ ಆಫ್ ಸೌತ್ ಇಂಡಿಯ,* ಬಾಂಬೆ, ಪು. 187.
5. ಪಾಟೀಲ ಚನ್ನಬಸಪ್ಪ ಎಸ್., 1993, ''ಎ ಪೊರ್ಟ್ರೇಟ್ ಆಫ್ ಆಹವಮಲ್ಲ (ಚಾಲುಕ್ಯ ಸೋಮೇಶ್ವರ I) ಅಟ್ ಕುರುವತ್ತಿ,'' *ಶ್ರೀರಾಮಚಂದ್ರಿಕ (ಪ್ರೊಫೆಸರ್ ಓರುಗಂಟಿ ರಾಮಚಂದ್ರಯ್ಯ ಫೆಸ್ಟ್ಸ್ಕ್ರಿಪ್ಟ್),* (ಸಂ.) ಎ.ವಿ.ಎನ್.ಮೂರ್ತಿ ಮತ್ತು ಐ.ಕೆ.ಶರ್ಮ, ದೆಹಲಿ, ಪು. 287-292.

6. ಪಾಟೀಲ ಚನ್ನಬಸಪ್ಪ ಎಸ್., 1995, ''ಹೊಯ್ಸಳರಿಗೆ ''ಗಿರಿದುರ್ಗಮಲ್ಲ ಶನಿವಾರಸಿದ್ಧಿ'' ಬಿರುದುಗಳನ್ನಿತ್ತ ಉಚ್ಚಂಗಿ ದುರ್ಗ'', *ಇತಿಹಾಸ ದರ್ಶನ,* ಸಂ. 10/1995, ಪು. 157-160.

7. ಪಾಟೀಲ ಚನ್ನಬಸಪ್ಪ ಎಸ್. ಮತ್ತು ವಿನೋದಾ ಪಾಟೀಲ, 1996, *ವಿಜಯನಗರದ (ಹಂಪೆಯ) ಶಾಸನಗಳು,* ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

8. ಪಾಟೀಲ ಚನ್ನಬಸಪ್ಪ ಎಸ್., 1996, ''ಹೊಸಮಲೆದುರ್ಗ'', *ವಿಜಯನಗರ: ಪ್ರೊಗ್ರೆಸ್ ಆಫ್ ರೀಸರ್ಚ್, 1988-91,* (ಸಂ.) ಡಿ.ವಿ.ದೇವರಾಜ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಡೈರೆಕ್ಟೊರೇಟ್ ಆಫ್ ಆರ್ಕಿಯಾಲಜಿ ಆಂಡ್ ಮ್ಯೂಜಿಯಮ್ಸ್, ಮೈಸೂರು, ಪು. 236-242.

9. ಕೃಷ್ಣಮೂರ್ತಿ, *ಅದೇ,* ಪು. 197.

10. ಪಾಟೀಲ ಚನ್ನಬಸಪ್ಪ ಎಸ್., 1996, ''ದೊರವಡಿ'', *ವಿಜಯನಗರ: ಪ್ರೊಗ್ರೆಸ್ ಆಫ್ ರೀಸರ್ಚ್, 1988-91,* (ಸಂ.) ಡಿ.ವಿ. ದೇವರಾಜ್ ಮತ್ತು ಪಾಟೀಲ ಚನ್ನಬಸಪ್ಪ ಎಸ್., ಪು. 243-247.

11. ಪಾಟೀಲ ಚನ್ನಬಸಪ್ಪ ಎಸ್., 1992, *ಟೆಂಪಲ್ಸ್ ಆಫ್ ರಾಯಚೂರ್ ಆಂಡ್ ಬಳ್ಳಾರಿ ಡಿಸ್ಟ್ರಿಕ್ಟ್ಸ್,* ಡೈರೆಕ್ಟೊರೇಟ್ ಆಫ್ ಆರ್ಕಿಯಾಲಜಿ ಆಂಡ್ ಮ್ಯೂಜಿಯಮ್ಸ್, ಮೈಸೂರು, ಪು. 20-56.

ಬಳ್ಳಾರಿ ತಾಲೂಕು

ಅಂದ್ರಹಾಳು

ಸಂ. 1

ಸ್ಥಳ : ಆಂಜನೇಯ ದೇವಸ್ಥಾನದ ಮುಂದೆ ಕಲ್ಲಿನ ಮೇಲೆ

ವಂಶ ಮತ್ತು ಅರಸ : --, ಹಂಡೆ ಚಿಕಮಲು[ಕ]ಪ ನಾಯಕ

ಕಾಲ : ಶಕ 1584, ಶುಭಕೃತ, ಕಾರ್ತ್ತಿಕ ಶು. 15, ಚಂದ್ರಗ್ರಹಣ = ಕ್ರಿ.ಶ. 1662-63 (ಕಾರ್ತಿಕದಲ್ಲಿ ಚಂದ್ರಗ್ರಹಣವಿಲ್ಲ)

ಭಾಷೆ ಮತ್ತು ಲಿಪಿ : ಕನ್ನಡ

ಸಾರಾಂಶ : ಅರಸನು ಹಂದರಹಾಳು ಗ್ರಾಮವನ್ನು ರೊದಮ ಶಿವಬಸವಪ್ಪನಿಗೆ ದಾನ ಮಾಡಿದ ವಿಷಯ ತಿಳಿಸುತ್ತದೆ. ಈ ಗ್ರಾಮವನ್ನು ಮೊದಲು ಅಲಮಶನ್ವ ಸಾಹೇಬನು ಅರಸನಿಗೆ (?) ವಜೀರಿಕೆ ಕೆಲಸ ಮಾಡಿದ ಕಾರಣಕ್ಕಾಗಿ ದಾನವಾಗಿ ಕೊಟ್ಟದ್ದನೆಂದು ತಿಳಿಸುತ್ತದೆ.

ಉಲ್ಲೇಖ : ಆ್ಯರಿಎ, 1913-14, ಸಂ. 1913 ರ 237.

ಬಾದನಹಟ್ಟಿ

ಸಂ. 2

ವಿಘ್ನೇಶ್ವರ ದೇವಸ್ಥಾನದ ಮುಂದೆ ನೆಟ್ಟ ಕಲ್ಲಿನ ಮೇಲೆ

--

ಶಕ 949, ಪ್ರ(ಭವ), ವೈಶಾಖ ಶು. 5, ಗುರುವಾರ = ಕ್ರಿ.ಶ. 1027, ಎಪ್ರಿಲ್ 14, ಶುಕ್ರವಾರ

ಕನ್ನಡ

ತುಂಬ ಹಾಳಾಗಿದೆ. ಬಲ್ಲಕುಂದೆ-ನಾಡಿನ ಪ್ರಸ್ತಾಪವಿದೆ, ಪಲ್ಲವ ಅರಸ ಜಗದೇಕಮಲ್ಲ ನೊಳಂಬ-ಪಲ್ಲವ ಪೆರ್ಮನಡಿಯು ಭೂಮಿ ದಾನ ಮಾಡಿದ್ದನ್ನು ದಾಖಲಿಸಿದಂತೆ ತೋರುತ್ತದೆ.

ಆ್ಯರಿಎ, 1913-14, ಸಂ. 1913 ರ 199.

ಬೈಲೂರು

ಸಂ. 3

ಬಸವೇಶ್ವರ ದೇವಸ್ಥಾನದ ಮೊಗಸಾಲೆಯಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

(ಚಾಲುಕ್ಯ ವಿಕ್ರಮ ವರ್ಷ) 56, ದುಂದುಭಿ, ಆಷಾಢ ಬ. 10, ಆದಿವಾರ = ಕ್ರಿ.ಶ. 1131 ಜನವರಿ 25

ಕನ್ನಡ

ಮಹಾಮಂಡಲೇಶ್ವರ ಬೀವರಸನು ಬಳ್ಳರೆಯನ್ನು ಆಳುತ್ತಿರುವ ಸಮಯದಲ್ಲಿ, ಹಟ್ಟನದ ಬೀರಗವುಡನು, 2 ಮತ್ತರು ಭೂಮಿಯನ್ನು ಮಲ್ಲಿಕಾರ್ಜುನ ದೇವರ ಸೇವೆಗೆ ದಾನಮಾಡಿ, ಅದನ್ನು ದೋಣಿಯಬೀಡಿನ ದೇವರಾಸಿ-ಪಂಡಿತರಿಗೆ ವಹಿಸಿಕೊಟ್ಟನೆಂದು ತಿಳಿಸುತ್ತದೆ.

ಶಾಸನದಲ್ಲಿ ತಿಳಿಸಿರುವ ವರ್ಷದಲ್ಲಿ ಮೂರನೆಯ ಸೋಮೇಶ್ವರನು ಆಳುತ್ತಿದ್ದನು. ಅವನು ತ್ರಿಭುವನಮಲ್ಲನೆಂಬ ಉಪನಾಮವನ್ನು ಹೊಂದಿರಲಿಲ್ಲ.

ಆ್ಯರಿಎ, 1913-14, ಸಂ. 1913ರ 204; ಸೌಇಇ, IX i, ಸಂ. 225.

ಬಳ್ಳಾರಿ

ಸಂ. 4

ಖೂನಿ ಮಸೀದಿಯ ಹತ್ತಿರ ಬಾಬಾ ಇರ್ಷಾದ್ ಅಲಿಯ ದರ್ಗಾದಲ್ಲಿ ಸಮಾಧಿಯ ಮೇಲಿರುವ ಕಂಬದ ಮೇಲೆ

--

(i) ಹಿಜರೀ 1270, ರಬಿ I 1 = ಕ್ರಿ.ಶ. 1853, ಡಿಸೆಂಬರ್ 2

(ii) ಹಿಜರೀ 1316 = ಕ್ರಿ.ಶ. 1898-99

ಉರ್ದು ಗದ್ಯ ಮತ್ತು ಪದ್ಯ, ನಸ್ತಾಲಿಕ್

ಮೇಲೆ ತಿಳಿಸಿದ ಮೊದಲನೆಯ ದಿನಾಂಕದಂದು ಮರಣಹೊಂದಿದ ಇರ್ಷಾದ್ ಅಲಿ ಶಾಹನ ಸಮಾಧಿ ಮತ್ತು ಅದರ ಸುತ್ತ ಆವರಣವನ್ನು (ಹಿಸಾರ್) ಮದ್ರಾಸ್ ಸೈನ್ಯ ಪಡೆಯ ಸುಬೇದಾರ-ಮೇಜರ ರಹಮಾನನು ಎರಡನೆಯ ದಿನಾಂಕದಂದು ಕಟ್ಟಿಸಿದ ಉಲ್ಲೇಖವಿದೆ.

ಆ್ಯರಿಇಎ, 1978-79, ಸಂ. ಸಿ 56.

ಸಂ. 5

ಕೌಲ ಬಜಾರದ ಜಾಮಿ ಮಸೀದಿಯ ಮುಂಭಾಗದ ಮೇಲೆ

--

ಹಿಜರೀ 1267 = ಕ್ರಿ.ಶ. 1850-51

ಪರ್ಶಿಯನ್ ಪದ್ಯ, ನಸ್ತಾಲಿಕ್ ಮತ್ತು ನಸ್ಕ್

ಮಸೀದಿಯನ್ನು ಕಟ್ಟಿಸಿದ ದಿನಾಂಕವನ್ನು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಸಿ 57.

ಸಂ. 6

ಪಾಲಿಟೆಕ್ನಿಕ್ ಕಾಲೇಜಿನ ಮುಂದೆ ಟೀಪು ಸುಲ್ತಾನನ ಮಸೀದಿಯ ಮಧ್ಯದ ಮಿಹ್ರಾಬ ಮೇಲೆ

--

ಹಿಜರೀ 1204 = ಕ್ರಿ.ಶ. 1789-90

ಅರೇಬಿಕ್, ನಸ್ಕ್

ಧಾರ್ಮಿಕ ಗ್ರಂಥ (ಮೊದಲನೆ ಮತಾಭಿಪ್ರಾಯ)

ಆ್ಯರಿಇಎ, 1978-79, ಸಂ. ಸಿ 58.

ಸಂ. 7

ಮೊಹಲ್ಲ ನಲಗುಡ್ಡದಲ್ಲಿ ಕಾದಿರಿಯ ಮಸೀದಿಯ ಮುಖ್ಯ ದ್ವಾರದ ಮೇಲೆ

--

ಹಿಜರೀ 1294 = ಕ್ರಿ.ಶ. 1877-78

ಉರ್ದು ಪದ್ಯ, ನಸ್ಕ್

ಮಸೀದಿಯನ್ನು ಕಟ್ಟಿದ ವಿಷಯ ತಿಳಿಸುತ್ತದೆ. ಶಾಸನವನ್ನು ಶರೀಫ್‌ನು ರಚಿಸಿದನು.

ಆ್ಯರಿಇಎ, 1978-79, ಸಂ. ಸಿ 59.

ಸಂ. 8

ಅದೇ ಮಸೀದಿಯ ಮುಂಭಾಗದಲ್ಲಿ

--

ಹಿಜರೀ 1294 = ಕ್ರಿ.ಶ. 1877-78

ಅರೇಬಿಕ್ ಗದ್ಯ ಮತ್ತು ಪರ್ಶಿಯನ್ ಪದ್ಯ, ನಸ್ಕ್ ಮತ್ತು ನಸ್ತಾಲಿಕ್

ಒಂದು ಹೌದ್ (ನೀರಿನ ತೊಟ್ಟಿ), ಒಂದು ಸರೈ (ಛತ್ರ) ಮತ್ತು ಮದ್ರಸ (ಶಾಲೆ)ಗಳನ್ನೊಳಗೊಂಡ ಒಂದು ಹೊಸ ಮಸೀದಿಯನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಸಿ 60.

ಸಂ. 9

ಬ್ರೂಸ್‌ಪೇಟೆಯಲ್ಲಿರುವ ಜಾಮಿ ಮಸೀದಿಯ ಎಡಗಡೆಯ ಸ್ತಂಭ ಗೋಪುರದ ಮೇಲೆ

--

ಹಿಜರೀ 1221 (ಶಬ್ದಗಳಲ್ಲಿ) = ಕ್ರಿ.ಶ. 1806-07

ಪರ್ಶಿಯನ್ ಪದ್ಯ, ನಸ್ತಾಲಿಕ್

(ಈಸ್ಟ್ ಇಂಡಿಯಾ) ಕಂಪನಿ ಆಡಳಿತದ ಸಮಯದಲ್ಲಿ ಪೀಟರ್ ಬ್ರೂಸ್‌ನ ಪ್ರಯತ್ನದ ಫಲವಾಗಿ ಒಂದು ಮಸೀದಿಯನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1978-79; ಸಂ. ಸಿ 61.

ಸಂ. 10

ಅದೇ ಸ್ತಂಭ ಗೋಪುರದ ಎಡಕ್ಕೆ ಗೋಡೆಯಲ್ಲಿ

--

19ನೇ ಶತಮಾನ

ಪರ್ಶಿಯನ್ ಪದ್ಯ, ನಸ್ತಾಲಿಕ್

ಇಸ್ಲಾಮ್ ಮತ್ತು ಕ್ರಿಶ್ಚಿಯನ್ ಧರ್ಮಗಳಿಗೆ ಜ್ಞಾನದ ಮಾರ್ಗವನ್ನು ತಿಳಿಸಲು ಥಾಮಸ್ ಮನ್ರೊ ಎಂಬುವವನು ಮಸೀದಿ ಮತ್ತು ಚರ್ಚುಗಳನ್ನು ಕಟ್ಟಿಸಲು ಆಸಕ್ತಿ ವಹಿಸಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಸಿ 62.

ಸಂ. 11

ಸ್ಮಶಾನದಲ್ಲಿರುವ ಒಂದು ಸಮಾಧಿಯ ದಕ್ಷಿಣ ಬಾಗಿಲ ಮೇಲೆ

--

ಹಿಜರೀ 1300 = ಕ್ರಿ.ಶ. 1882, ನವೆಂಬರ್ 12; 1883 ನವೆಂಬರ್ 1

ಅರೇಬಿಕ್, ಉರ್ದು ಪದ್ಯ-ಗದ್ಯ, ನಸ್ತಾಲಿಕ್

ಹುತಾತ್ಮನಾದ ಅಬ್ದುಲ್ ಬಾಸಿತ್‌ನ ಗೋರಿಯನ್ನು ಕಟ್ಟಿಸಿದ ದಿನಾಂಕವನ್ನು ತಿಳಿಸುತ್ತದೆ. ಅವನ ತಂದೆ ಬಿಲ್‌ಹಾರಿ (ಬಳ್ಳಾರಿ)ಯ ಕಂದಾಯ ಅಧಿಕಾರಿ (ಅಮಲ್ದಾರ್)ನಾದ ಘುಲಾಮ್ ಖಾದಿರ್ ತಾಬಾನ್ ಶಾಸನವನ್ನು ರಚಿಸಿದನು.

ಆ್ಯರಿಇಎ, 1985-86, ಸಂ. ಸಿ 23.

ಸಂ. 12

ಅದೇ ಸ್ಮಶಾನದಲ್ಲಿ ಒಂದು ಹಳೆ ಗೋರಿಯ ತಲೆಭಾಗದಲ್ಲಿ

--

ಹಿಜರೀ 1319, ಶಾವ್ವಾಲ್ 1 = ಕ್ರಿ.ಶ. 1902, ಜನವರಿ 11

ಪರ್ಶಿಯನ್ ಮತ್ತು ಉರ್ದು, ನಸ್ತಾಲಿಕ್

ಸಯ್ಯಿದ್ ಮರ್ಘೂರ್ ಅಲೀ ಶಾಹ ಸಾಹಿಬ್‌ನ ಮರಣವನ್ನು ತಿಳಿಸುತ್ತದೆ.

ಆ್ಯರಿಇಎ, 1985-86, ಸಂ. ಸಿ 24.

ಸಂ. 13

ತಹಸಿಲ್ದಾರ್‌ರ ವಶದಲ್ಲಿರುವ ತಾಮ್ರ ಶಾಸನ

ವಿಜಯನಗರ, ವಿರೂಪಾಕ್ಷ

ಶಕ 1389, ಸರ್ವಜಿತ್, ಕಾರ್ತ್ತಿಕ ಶು. ಉತ್ಥಾನ-ದ್ವಾದಶಿ = ಕ್ರಿ.ಶ. 1467, ನವೆಂಬರ್ 9, ಸೋಮವಾರ

ಸಂಸ್ಕೃತ, ನಾಗರಿ

ಇಬ್ಬರು ಬ್ರಾಹ್ಮಣರಿಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಅವರಲ್ಲಿ ಒಬ್ಬ ವೈದ್ಯನಾಗಿದ್ದ. ಅಲ್ಲದೆ ವಿರೂಪಾಕ್ಷಪುರವೆಂದು ಕರೆಯಲ್ಪಡುತ್ತಿದ್ದ ಸೋಮಲಾಪುರವನ್ನು 60 ವೃತ್ತಿಗಳಲ್ಲಿ ವಿಭಾಗಿಸಿ ವೀರಣಾರ್ಯನಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ ಎ 2.

ಭಟ್ಟರಹಳ್ಳಿ (ಹಳೆಯ)

ಸಂ. 14

ಗ್ರಾಮದಲ್ಲಿ ನೆಟ್ಟ ಒಂದು ಕಲ್ಲಿನ ಮೇಲೆ

--

--

ಕನ್ನಡ

ಅಪೂರ್ಣವಾಗಿದ್ದು ಹಾಳಾಗಿದೆ. ಸಿಂದ ವಂಶದ ಒಬ್ಬ ಅರಸನ ಬಿರುದುಗಳ ಒಂದು ದೊಡ್ಡ ಪಟ್ಟಿಯೇ ಇದೆ. ಆ ಬಿರುದುಗಳಲ್ಲಿ ಒಂದು ಆತನು ದೃಷ್ಟಿವಿಷ ಕುಲದಲ್ಲಿ ಹುಟ್ಟಿದನೆಂದು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 198.

ಚಿಟಿಕಿನಹಾಳು

ಸಂ. 15

ಆಂಜನೇಯ ದೇವಸ್ಥಾನದ ಮುಂದೆ ನಂದಿ ಕಲ್ಲಿನ ಮೇಲೆ

ವಿಜಯನಗರ, ಅಚ್ಯುತರಾಯ

16ನೇ ಶತಮಾನ

ಕನ್ನಡ

ಅಚ್ಯುತರಾಯನು ತನ್ನ ತಂದೆ ನರಸಣ-ನಾಯಕನಿಗೆ ಪುಣ್ಯವಾಗಲೆಂದು ಚಿಟಿಕಿನಹಾಳು ಗ್ರಾಮವನ್ನು ಜೆಂತೆಗಲ್ಲಿನ ಪ್ರಸನ್ನ ವಿರೂಪಾಕ್ಷ ದೇವರಿಗೆ ದಾನ ಮಾಡಿದ್ದನ್ನು ತಿಳಿಸುತ್ತದೆ. ಇದನ್ನು ತಾಮ್ರ ಪಟದ ಮೇಲೆ ಬರೆದು ಗ್ರಾಮದ ಮೇರೆಯಲ್ಲಿ ಲಿಂಗಮುದ್ರೆಯಿರುವ ಕಲ್ಲುಗಳನ್ನು ನಿಲ್ಲಿಸಿದರು.

ಆ್ಯರಿಎ, 1913-14, ಸಂ. 1913 ರ 196; ಸೌಇಇ, IX ii, ಸಂ. 599.

ದಮ್ಮೂರು

ಸಂ. 16

ವೀರಭದ್ರಸ್ವಾಮಿಯ ಕಲ್ಲಿನ ಪೀಠದ ಮೇಲೆ

--

ಶಕ . . . . ವೈಶಾಖ ಬ. 5, ಸೋಮವಾರ

ಕನ್ನಡ

ಮಹಾಮಂಡಲೇಶ್ವರನ ಪತ್ನಿ ಪೊಮ್ಮಾಯಿಅವ್ವೆಯ ತಾಯಿ ಕನ್ನಮರಸವ್ವೆಯು ಈ ವೀರಭದ್ರದೇವರ ವಿಗ್ರಹವನ್ನು ಪ್ರತಿಷ್ಠಾಪಿಸಿದಳೆಂದು ತಿಳಿಸುತ್ತದೆ.

ಎಆರಿಎ, 1913-14, ಸಂ. 1913 ರ 209.

ಸಂ. 17

ರಾಮಲಿಂಗೇಶ್ವರ ದೇವಸ್ಥಾನದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ (ವಿಕ್ರಮಾದಿತ್ಯ VI)

(ಚಾಲುಕ್ಯ) ವಿಕ್ರಮ ವರ್ಷ 31, ವ್ಯಯ, ಶ್ರಾವಣ = ಕ್ರಿ.ಶ. 1106-07

ಕನ್ನಡ

ಮಹಾಮಂಡಲೇಶ್ವರ ಮಲ್ಲರಸನು ದಮ್ಮರದ ದೇವರಿಗೆ (ಹೆಸರು ಇಲ್ಲ) ದಾನ ಮಾಡಿದ್ದನ್ನು ತಿಳಿಸುತ್ತದೆ.

ಎಆರಿಎ, 1913-14, ಸಂ. 1913 ರ 209; ಸೌಇಇ, IX i, ಸಂ. 171.

ಗುಡದೂರು

ಸಂ. 18

ಗ್ರಾಮದಲ್ಲಿ ಬೀದಿಯ ಕಲ್ಲಿನ ಮೇಲೆ

--

ಶಕ 1589, ಪ್ರಭವ, ಮಾಘ ಬ. 10 = ಕ್ರಿ.ಶ. 1667, ಫೆಬ್ರವರಿ 8, ಶುಕ್ರವಾರ (ಶಕ 1588)

ಕನ್ನಡ

ಹಾಳಾಗಿದೆ. ಮೋಕೆ-ಸೀಮೆಯಲ್ಲಿರುವ ಗುಡದೂರು ಗ್ರಾಮದ ಕಾವಲುಗಾರನ ಸಂಬಳದ (ತಳವಾರಿಕೆ) ಬಗ್ಗೆ ತಿಳಿಸುತ್ತದೆ.

ಎಆರಿಎ, 1913-14, ಸಂ. 1913 ರ 231.

ಗುತ್ತಿಗನೂರು

ಸಂ. 19

ಆಂಜನೇಯ ದೇವಸ್ಥಾನದ ಮುಂದಿನ ಕಲ್ಲಿನ ಮೇಲೆ

--

ಶಕ 1461, ವಿಕಾರಿ, ಜ್ಯೇ(ಷ್ಠ) ಬ. 5, ಶುಕ್ರವಾರ = ಕ್ರಿ.ಶ. 1539 ಜೂನ್ 6, ಶುಕ್ರವಾರ

ಕನ್ನಡ

ಕುರುಗೋಡಿನಿಂದ ವಿಜಯನಗರಕ್ಕೆ ಹೋಗುವ ಮಾರ್ಗದಲ್ಲಿರುವ ಯೆಮ್ಮಿಗೆನೂರಿನ ಪಶ್ಚಿಮಕ್ಕೆ ರಾಮರಸಯ್ಯನು ತಾನು ಕಟ್ಟಿಸಿದ ಮುಖ್ಯಪ್ರಾಣನಾಥನ (ಹನುಮಾನ) ದೇವಸ್ಥಾನಕ್ಕೆ, ಸಲಕಯದೇವ-ಮಹಾಅರಸನ ಮಗನಾದ ಹಿರಿಯ ತಿರುಮಲರಾಜಯ್ಯ-ಮಹಾಅರಸುಗೆ ಪುಣ್ಯವಾಗಲೆಂದು ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913ರ 202.

ಹಾವಿನಹಾಳು-ವೀರಾಪುರ

ಸಂ. 20

ಆಂಜನೇಯ ದೇವಸ್ಥಾನದ ಮುಂದಿನ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲ ಆಹವಮಲ್ಲದೇವ

ಶಕ 967, ಪಾರ್ಥಿವ, ಶ್ರಾವಣ ಬ. 5, ಸೋಮವಾರ = ಕ್ರಿ.ಶ. 1045, ಆಗಸ್ಟ್ 5

ಕನ್ನಡ

ಅರಸನ ಸಾಮಂತನಾಗಿದ್ದ, ಪಟ್ಟಣಗಳಲ್ಲಿಯೇ ಅತೀ ಶ್ರೇಷ್ಠ ಪಟ್ಟಣವೆನಿಸಿದ ಕಾಂಚೀಪುರವರೇಶ್ವರ ಮತ್ತು ತ್ರೈಲೋಕ್ಯಮಲ್ಲ ನನ್ನಿ ನೊಳಂಬ-ಪಲ್ಲವ ಪೆರ್ಮಾನಡಿದೇವನ ಸಾಮಂತನಾದ 'ಭೋಗಾವತೀ ಪುರವರೇಶ್ವರ' ಉದಯಾದಿತ್ಯ ಸಿಂದರಸನು ಮೊಂಡವಟ್ಟಿಯಲ್ಲಿ ಮನ್ನೆಯ-ಸಾಮ್ಯದ ತೆರೆಯನ್ನು ಸಂಗ್ರಹಿಸುವ ಅಧಿಕಾರವನ್ನು ಪಾಲಿಮಯ್ಯನಿಗೆ ಕೊಟ್ಟನೆಂದು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 193; ಸೌಇಇ, IX i, ಸಂ. 100.

ಸಂ. 21

ಅದೇ ದೇವಸ್ಥಾನದ ಮುಂದೆ ಇನ್ನೊಂದು ಕಲ್ಲಿನ ಮೇಲೆ

ವಿಜಯನಗರ, ಕೃಷ್ಣರಾಯ

ಶಕ 1450, ಸರ್ವಧಾರಿ, ಮಾಘ ಶು. 6 = ಕ್ರಿ.ಶ. 1529, ಜನವರಿ 15, ಶುಕ್ರವಾರ

ಕನ್ನಡ

ದೊಂಡವಟೆ ಗ್ರಾಮವನ್ನು ರಾಜನಿಂದ ಉಂಬಳಿಯಾಗಿ ಪಡೆದ ಮುದಣ-ನಾಯಕನ ಆಜ್ಞೆಯ ಮೇರೆಗೆ ಅಲ್ಲಿಯ ಜನರು ಗುಂಡಪನ ಮಗ ಮಲೆಸಾಣಿಗೆ ಆ ಗ್ರಾಮದ ಒಂದು ಕೆರೆಯನ್ನು ದುರಸ್ತಿಗೊಳಿಸಲು ಭೂಮಿದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 194; ಸೌಇಇ, IX ii, ಸಂ. 528.

ಸಂ. 22

ಅದೇ ದೇವಸ್ಥಾನದ ಹತ್ತಿರ ಕಾಲುವೆಯಲ್ಲಿ ಕಟ್ಟಿರುವ ಒಂದು ಕಲ್ಲಿನ ಮೇಲೆ

ವಿಜಯನಗರ, ಅಚ್ಯುತರಾಯ

ಶಕ 1455, ಜಯ, ವೈಶಾಖ ಶು. 15 = ಕ್ರಿ.ಶ. 1534, ಏಪ್ರಿಲ್ 28, ಮಂಗಳವಾರ

ಕನ್ನಡ

ಅರಸನು ತನ್ನ ತಾತ ಈಶ್ವರ ನಾಯಕ ಮತ್ತು ಅಜ್ಜಿ ಬುಕ್ಕಾಜಿ ಅಮ್ಮನವರಿಗೆ ಪುಣ್ಯವಾಗಲೆಂದು ವಿರೂಪಾಕ್ಷದೇವರ ದೇವಸ್ಥಾನದ ಪಶ್ಚಿಮಕ್ಕೆ ಸೋಮಣನಾಯಕನ ಗೋಪುರದಲ್ಲಿ ಬುಕ್ಕೇಶ್ವರದೇವರ ಸಿಂಹಾಸನವನ್ನು ಸ್ಥಾಪಿಸಿ ದೇವರ ಸೇವೆಗೆ ದೊಂಡವಟಿ ಗ್ರಾಮವನ್ನು ದಾನ ಮಾಡಿದನೆಂದು ತಿಳಿಸುತ್ತದೆ. ಈ ವಿಷಯಕ್ಕೆ ಸಂಬಂಧಿಸಿದ ಒಂದು ತಾಮ್ರ ಪಟವನ್ನು ಕೊಟ್ಟು ಊರಿನ ಮೇರೆಗಳಲ್ಲಿ ಲಿಂಗಮುದ್ರೆ ಮತ್ತು ನಂದಿ ಕಲ್ಲುಗಳನ್ನು ನಿಲ್ಲಿಸಿದ್ದನ್ನೂ ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913ರ 195; ಸೌಇಇ, IX ii, ಸಂ. 565.

ಕಗ್ಗಲ್ಲು

ಸಂ. 23

ಗ್ರಾಮದ ಹತ್ತಿರ ಬಿದ್ದಿರುವ ಒಂದು ಕಲ್ಲಿನ ಮೇಲೆ

--

ಶಕ 955, ಶ್ರೀಮುಖ, ಮಾಘ ಶು. 5, ಸೋಮವಾರ, ಉತ್ತರಾಯಣ ಸಂಕ್ರಾಂತಿ = ಕ್ರಿ.ಶ. 1033, ಡಿಸೆಂಬರ್ 29, (ಶನಿವಾರ). ಆದರೆ ಉತ್ತರಾಯಣ ಸಂಕ್ರಾಂತಿಯು ಡಿಸೆಂಬರ್ 23ರಂದು ಇತ್ತು.

ಕನ್ನಡ

ಸಿಗದೇವಿಯ ಪತಿ ಉದಯಾದಿತ್ಯಯ್ಯನು ಮಹಾದೇವ ದೇವರ ಪೂಜೆಗೆಂದು ಉತ್ತಮರಾಶಿಪಂಡಿತನಿಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ. ಉದಯಾದಿತ್ಯಯ್ಯನು ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ಎಂಬ ಬಿರುದು ಹೊಂದಿದ್ದು ಕಂಪಿಲಿಯನ್ನು ಶಾಶ್ವತ ರಾಜಧಾನಿಯನ್ನಾಗಿ (ಇಕ್ಕವೀಡು) ಮಾಡಿಕೊಂಡು ಆಳುತ್ತಿದ್ದನು.

ಆ್ಯರಿಎ; 1913-14, ಸಂ. 1913 ರ 208.

ಕಲ್ಲಕಂಭ

ಸಂ. 24

ಕಲ್ಲೇಶ್ವರ ದೇವಸ್ಥಾನದ ಹತ್ತಿರ ನೆಟ್ಟ ಕಲ್ಲಿನ ಮೇಲೆ

--

ಶಕ 949, ಪ್ರಭವ, ಚೈತ್ರ ಶು. 1, ಬೃಹಸ್ಪತಿವಾರ = ಕ್ರಿ.ಶ. 1028, ಫೆಬ್ರವರಿ 29

ಕನ್ನಡ

ಜಗದೇಕಮಲ್ಲ ನೊಳಂಬ ಪೆರ್ಮಾನಡಿಯು ತನ್ನ ರಾಜಧಾನಿ ವಿಪ್ರನಾರಾಯಣದಿಂದ ಆಳುತ್ತಿರುವ ಸಮಯದಲ್ಲಿ ಸಹಲೆಗೌಡನು ಚಿಹನಪಟ್ಟಿ ಮಹಾದೇವ ದೇವರಿಗೆ ಭೂಮಿ ದಾನ ಮಾಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 64; ಸೌಇಇ, IX i, ಸಂ. 42.

ಸಂ. 25

ಗ್ರಾಮದ ಚಾವಡಿಯ ಹತ್ತಿರ ಒಂದು ಕಲ್ಲಿನ ಮೇಲೆ

ಶಕ 952, ಪ್ರ[ಮೋದೂತ], ಚೈತ್ರ ಶು. 5, ಬೃಹಸ್ಪತಿವಾರ = ಕ್ರಿ.ಶ. 1030, ಮಾರ್ಚ್ 12, ಗುರುವಾರ

ಕನ್ನಡ

ತ್ರುಟಿತ. ಜಗದೇಕಮಲ್ಲ-ನೊಳಂಬ-ಪಲ್ಲವ-ಪೆರ್ಮಾನಡಿ ಮತ್ತು ಧರ್ಮ ಪ್ರತಿಷ್ಠೆಯ ಉಲ್ಲೇಖವಿದೆ.

ಆ್ಯರಿಎ, 1903-04, ಸಂ. 1904 ರ 95; ಸೌಇಇ, IX i, ಸಂ. 84.

ಸಂ. 26

ಗ್ರಾಮದ ಹತ್ತಿರವಿರುವ ಒಂದು ದಿನ್ನೆಯ ಹತ್ತಿರ ಬಿದ್ದಿರುವ ಕಲ್ಲಿನ ಮೇಲೆ

--

ಪ್ರಾಚೀನ ಅಕ್ಷರಗಳಲ್ಲಿದೆ

--

ಹಾಳಾಗಿದೆ.

ಆ್ಯರಿಎ, 1903-04, ಸಂ. 1904 ರ 66.

ಸಂ. 27

ಗ್ರಾಮದಲ್ಲಿ ಗೋಪಿಕಲ್ಲುಹೊಲದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

--

ಶಕ 970, ಸರ್ವಧಾರಿ, ಕಾರ್ತಿಕ ಶು. 7, ಬೃಹಸ್ಪತಿವಾರ = ಕ್ರಿ.ಶ. 1049, ಅಕ್ಟೋಬರ್ 5

ಕನ್ನಡ

ತ್ರೈಲೋಕ್ಯಮಲ್ಲ-ನನ್ನಿ-ನೊಳಂಬ-ಪಲ್ಲವ-ಪೆರ್ಮಾನಡಿಯ ಆಡಳಿತ ಸಮಯದಲ್ಲಿ ಮೂಲಿಗ ಪೊ....ಯ್ಯ-ಗಾವುಂಡನು ಚೆಯನಪಟ್ಟಿಯ ವಿಷ್ಣು ದೇವಸ್ಥಾನಕ್ಕೆ ಭೂಮಿ ದಾನ ಮಾಡಿದನು ಮತ್ತು ಮೂರು ಮತ್ತರು ಭೂಮಿಯನ್ನು (ಶಾಸನವನ್ನು ಬರೆದ?) ಹಾಲೋಜನಿಗೆ ದಾನ ಮಾಡಿದನೆಂದು ದಾಖಲಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 67; ಸೌಇಇ, IX i, ಸಂ. 44.

ಕರೇಕಲ್ಲು

ಸಂ. 28

ವೀರಭದ್ರ ದೇವಸ್ಥಾನದ ಹತ್ತಿರ ಕಲ್ಲಿನ ಮೇಲೆ

--

ಶಕ 1477, ರಾಕ್ಷಸ, ಜ್ಯೇಷ್ಠ ಶು. 10 = ಕ್ರಿ.ಶ. 1555, ಮೇ 30, ಗುರುವಾರ

ಕನ್ನಡ

ಒಬ್ಬ ವ್ಯಕ್ತಿಯು ಕರೇಕಲ್ಲು ಗ್ರಾಮದ ಪ್ರಸನ್ನ-ಕೇಶವನಾಥ ದೇವಸ್ಥಾನಕ್ಕೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 228.

ಕರೇಕಲ್ಲು-ವೀರಾಪುರ

ಸಂ. 29

ಗ್ರಾಮದ ಹತ್ತಿರ ಜಮೀನಿನಲ್ಲಿರುವ ಕಲ್ಲಿನ ಮೇಲೆ

--

ಶಕ 1615, ಶ್ರೀಮುಖ, ಶ್ರಾವಣ ಶು. 15 = ಕ್ರಿ.ಶ. 1693, ಆಗಸ್ಟ್ 5, ಶನಿವಾರ

ಕನ್ನಡ

ಮೋಕೆ-ಸೀಮೆಯ ದೇಸಾಯಿಗಳು ಮತ್ತು ನಾಡುಕುಲಕರ್ಣಿಗಳು ವೀರ ಮಲ್ಲಿಕೇಶಾಯಿಯ ಮಗ ಮಲ್ಲಿಕೇಶಾಯಿಗೆ ಕರಾರುಪತ್ರವನ್ನು ಕೊಟ್ಟದ್ದನ್ನು ತಿಳಿಸುತ್ತದೆ. ವೀರ ಮಲ್ಲಿಕೇಶಾಯಿಯು ಮೋಕೆ-ಸೀಮೆಯ ಸಣ್ಣ ಹುಡೆಗಳ ಉಸ್ತುವಾರಿ ಹೊಂದಿದ್ದನು.

ಆ್ಯರಿಎ, 1913-14, ಸಂ. 1913 ರ 229.

ಕೊಳಗಲ್ಲು

ಸಂ. 30

ಗ್ರಾಮದ ಬೀದಿಯಲ್ಲಿ ಒಂದು ಕಲ್ಲಿನ ಮೇಲೆ

ರಾಷ್ಟ್ರಕೂಟ, ಅಕಾಲವರ್ಷ ಚಲಕ್ಕೆನಲ್ಲಾತ (ಕೃಷ್ಣ III)

ಶಕ 888, ರಕ್ತಾಕ್ಷಿ, ಆಷಾಢ ಶು. 5, ಬೃಹಸ್ಪತಿವಾರ = ಕ್ರಿ.ಶ. 964, ಜೂನ್ 16, ಶುಕ್ರವಾರ

ಕನ್ನಡ

ಚಂಗ-ಗಾವುಂಡನು ಸತ್ಯರಾಶಿ-ಭಟಾರನಿಗೆ ವಿದ್ಯಾದಾನ ಸತ್ರದ ನಿರ್ವಹಣೆಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ. ಈ ದಾನವನ್ನು ಕೊಳಗಲ್ಲನ್ನು ಆಳುತ್ತಿದ್ದ ಕಾರ್ತಿಕೇಯ ತಪೋವನದ ಗಜಧರಯ್ಯನು ಧೃಢೀಕರಿಸಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 234; ಸೌಇಇ, IX i, ಸಂ. 67.

ಸಂ. 31

ಗ್ರಾಮದಲ್ಲಿ ಬಾವಿಯ ಹತ್ತಿರ ಒಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ (ವಿಕ್ರಮಾದಿತ್ಯ VI)

ಚಾಲುಕ್ಯ-ವಿಕ್ರಮ ವರ್ಷ 16, ಪ್ರಜಾಪತಿ .... 10, ಬೃಹಸ್ಪತಿವಾರ = ಕ್ರಿ.ಶ. 1091-92

ಕನ್ನಡ

ಸಾಂಖ್ಯಾಯನ-ಗೋತ್ರ ಮತ್ತು ವಾಜಿ-ಕುಲದ ಏಚರಾಜನ ಮರಿಮಗ, ದುರ್ಗಸಿಂಹನ ಮೊಮ್ಮಗ ಪಂಪರಾಜನ ಮಗನಾದ ಬ್ರಾಹ್ಮಣ ದುರ್ಗರಾಜನು ಮೂಲಸ್ಥಾನ ದುರ್ಗೇಶ್ವರ ದೇವರಿಗೆ ಒಂದು ಮಠಕ್ಕೆ ಹಾಗೂ ವಿದ್ಯಾದಾನಕ್ಕೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913ರ 235; ಸೌಇಇ, IX i, ಸಂ. 160.

ಸಂ. 32

ಗ್ರಾಮದ ಇನ್ನೊಂದು ಬೀದಿಯಲ್ಲಿ ಒಂದು ಕಲ್ಲಿನ ಮೇಲೆ

ರಾಷ್ಟ್ರಕೂಟ, ಖೊಟ್ಟಿಗ

ಶಕ 889, ಕ್ಷಯ, ಫಾಲ್ಗುಣ ಶು. 6, ಅರ್ಕದಿನ = ಕ್ರಿ.ಶ. 967, ಫೆಬ್ರವರಿ 17, ಆದಿವಾರ

ಸಂಸ್ಕೃತ, ನಾಗರಿ

ಕೃಷ್ಣನು ಈ ವರ್ಷದಲ್ಲಿ ಮರಣಹೊಂದಿದನು ಮತ್ತು ನಂತರ ಖೊಟ್ಟಿಗನು ಪಟ್ಟಕ್ಕೆ ಬಂದನೆಂದು ತಿಳಿಸುತ್ತದೆ. ಅಲ್ಲದೆ ಗದಾಧರನು ಕೊಳಗಲ್ಲು ಗ್ರಾಮದಲ್ಲಿ ಕಾರ್ತಿಕೇಯ, ಅರ್ಕ (ಸೂರ್ಯ), ಬ್ರಹ್ಮ, ವಿಷ್ಣು, ಮಹೇಶ್ವರ, ಪಾರ್ವತಿ ಮತ್ತು ವಿನಾಯಕರ ವಿಗ್ರಹಗಳನ್ನು ಪ್ರತಿಷ್ಠಾಪಿಸಿ, ಒಂದು ಕೆರೆ, ಮಠ ಮತ್ತು ಬಾವಿಗಳನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ. ಕುಮಾರ ದೇವರ ಸ್ತುತಿಯೂ ಇದೆ.

ಆ್ಯರಿಎ, 1913-14, ಸಂ. 1913 ರ 236; ಎಇ, XXI, ಸಂ. 40, ಪು. 260-267.

ಕೋಳೂರು

ಸಂ. 33

ಸೂರ್ಯನಾರಾಯಣಸ್ವಾಮಿ ದೇವಸ್ಥಾನದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ

10ನೇ ವರ್ಷ, ಪ್ರಭವ, ಪುಷ್ಯ ಶು. 2 = ಬೃಹಸ್ಪತಿವಾರ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1147, ಡಿಸೆಂಬರ್ 25, ಗುರುವಾರ

ಕನ್ನಡ

ಬಲ್ಲಕುಂದೆನಾಡನ್ನಾಳುತ್ತಿದ್ದ ಸಿಂದ ಅರಸನಾದ ಇರ್ಮ್ಮಡಿ ಭೀಮ ಹಾಗೂ ಆತನ ಸಹೋದರ ರಾಚಮಲ್ಲನ ಉಲ್ಲೇಖವಿದೆ. ರೇವಗಾವುಂಡನು ಸೋಮೇಶ್ವರ, ಕಾಳೇಶ್ವರ, ಮಲ್ಲಿಕಾರ್ಜುನ, ಆದಿತ್ಯ, ವಿಘ್ನೇಶ್ವರ, ಭೈರವ ಮತ್ತು ಮೇಳೇಶ್ವರ ದೇವರ ದೇವಸ್ಥಾನಗಳನ್ನು, ಐದು ಶಿವ ದೇವಾಲಯಗಳುಳ್ಳ ಒಂದು ಬಾವಿಯನ್ನು ಮತ್ತು ಒಂದು ಕೆರೆಯನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ. ತನ್ನ ಭಾವ ವಿಟ್ಟಿಸೆಟ್ಟಿಯೊಂದಿಗೆ ವಿಷ್ಣುವಿನ ದೇವಸ್ಥಾನ ಕಟ್ಟಿಸಿದ್ದನ್ನು ತಿಳಿಸುತ್ತದೆ. ರೇವಗಾವುಂಡನು ತನ್ನ ಎಲ್ಲ ಆಸ್ತಿಯನ್ನು ಮಾರಿ ಧರ್ಮಕಾರ್ಯಗಳಿಗೆ ವಿನಿಯೋಗಿಸಿದನು. ಇರ್ಮ್ಮಡಿ ಭೀಮರಸನು ಈ ಎಲ್ಲ ದೇವರಿಗೆ ಭೂಮಿ ದಾನಮಾಡಿದನು.

ಆ್ಯರಿಎ, 1913-14, ಸಂ. 1913 ರ 211; ಸೌಇಇ, IX i, ಸಂ. 249.

ಸಂ. 34

ಗಂಗಾಧರಸ್ವಾಮಿ ದೇವಸ್ಥಾನದಲ್ಲಿ ಒಂದು ಕಂಬದ ಮೇಲೆ

--

12ನೇ ಶತಮಾನ

ಕನ್ನಡ

''ಬೊಲ್ಲೋಜನ ಕಂಭ'' ಎಂದು ಬರೆದಿದೆ.

ಪಾಟೀಲ ಚನ್ನಬಸಪ್ಪ ಎಸ್., 1992, ಟೆಂಪಲ್ಸ್ ಆಫ್ ರಾಯಚೂರ್ ಆಂಡ್ ಬಳ್ಳಾರಿ ಡಿಸ್ಟ್ರಿಕ್ಟ್ಸ್, ಪು. 148.

ಸಂ. 35

ಅದೇ ದೇವಸ್ಥಾನದಲ್ಲಿ ಇನ್ನೊಂದು ಕಂಬದ ಮೇಲೆ

--

12ನೇ ಶತಮಾನ

ಕನ್ನಡ

''ಮದುವಣಿಗ ಷೋಮನ ಕಂಬ'' ಎಂದು ಬರೆದಿದೆ.

ಪಾಟೀಲ ಚನ್ನಬಸಪ್ಪ ಎಸ್., 1992, ಟೆಂಪಲ್ಸ್ ಆಫ್ ರಾಯಚೂರ್ ಆಂಡ್ ಬಳ್ಳಾರಿ ಡಿಸ್ಟ್ರಿಕ್ಟ್ಸ್, ಪು. 148.

ಕುಡತಿನಿ

ಸಂ. 36

ಕುಮಾರಸ್ವಾಮಿ ದೇವಸ್ಥಾನದಲ್ಲಿ ಮಧ್ಯದ ಗುಡಿಯ ಮುಂದೆ ನೆಟ್ಟ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

ಚಾಲುಕ್ಯ-ವಿಕ್ರಮ ವರ್ಷ 23, ಬಹುಧಾನ್ಯ, ಮಾರ್ಗಶಿರ ಬ. 7, ಬೃಹಸ್ಪತಿವಾರ = ಕ್ರಿ.ಶ. 1098, ನವೆಂಬರ್ 18, ಗುರುವಾರ

ಕನ್ನಡ

ಮಹಾಪ್ರಧಾನ ದಂಡನಾಯಕ ಸೋಮೇಶ್ವರ ಭಟ್ಟೋಪಾಧ್ಯಾಯ ಮತ್ತು ದಂಡನಾಯಕ ಮಹಾವಿಷ್ಣುವರಸ, ವಿಶ್ವರೂಪ-ಬ್ರಹ್ಮಚಾರಿ, ಎಲ್ಲ ದೇಸಿಕಜನರು ಮತ್ತು ಕೊಟ್ಟತೊಣೆಯ ಐದು ವರ್ಗದವರು ಎರಣಿಗ-ಮಾದೋಜನ ಮಗ ಸಾವಿಮೋಜ ಮತ್ತು ಬೇಚೋಜನ ಮಗ ಚಿಕ್ಕ ಮಾದೋಜರು ಲೊಕ್ಕಿ ಚಿನ್ನದ ನಾಣ್ಯಗಳನ್ನು ನವಿಲು-ನಾಣ್ಯಗಳನ್ನಾಗಿ ಪರಿವರ್ತಿಸಿ ಅಷ್ಟೇ ತೂಕದ ನವಿಲು-ನಾಣ್ಯಗಳನ್ನು ಕೊಡಬೇಕು ಮತ್ತು ಅವರು ಸ್ವಾಮಿದೇವರ ದೇವಸ್ಥಾನಕ್ಕೆ 12 ಗದ್ಯಾಣಗಳನ್ನು ಕೊಡಬೇಕೆಂದು ಒಪ್ಪಂದ ಮಾಡಿಕೊಂಡಿದ್ದನ್ನು ತಿಳಿಸುತ್ತದೆ. ಮಹಾವಿಷ್ಣುವರಸನು ಅದೇ ದೇವರ ಸೇವೆಗೆ ಸುಂಕ-ಆದಾಯವನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 42; ಸೌಇಇ, IX i, ಸಂ. 164.

ಸಂ. 37

ಅದೇ ದೇವಸ್ಥಾನದ ಮುಂದೆ ಕಟ್ಟೆಯ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 113[2], ಪ್ರಮೋದ = ಕ್ರಿ.ಶ. 1210

ಕನ್ನಡ

ನಾಗೇಶ ದೇವಸ್ಥಾನದ ಭೂಮಿ ಮತ್ತು ಆಸ್ತಿಯನ್ನು ದಾಖಲಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 43.

ಸಂ. 38

ಅದೇ ದೇವಸ್ಥಾನದ ಜಗಲಿಗೆ ಹಾಕಿದ ಕಲ್ಲಿನ ಮೇಲೆ

ರಾಷ್ಟ್ರಕೂಟ, ಖೊಟ್ಟಿಗ

ಶಕ 893, ಪ್ರಜಾಪತಿ, ಫಾಲ್ಗುಣ (ಬ?) ತ್ರಯೋದಶಿ, ಗುರುದಿನ = ಕ್ರಿ.ಶ. 971, ಫೆಬ್ರವರಿ 28, ಗುರುವಾರ

ಸಂಸ್ಕೃತ, ಕನ್ನಡ

ಭಟ್ಟ-ತಳದ (?) ಗದಾಧರನು ಸ್ಕಂದ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದನ್ನು ಮತ್ತು ಅರಸನು ದೇವರ ಪೂಜೆಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 44; ಸೌಇಇ, IX i, ಸಂ. 70.

ಸಂ. 39

ಅದೇ ದೇವಸ್ಥಾನದ ಜಗಲಿಯಲ್ಲಿರುವ ಇನ್ನೊಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

ಚಾಲುಕ್ಯ ವಿಕ್ರಮ ವರ್ಷ 24, ಪ್ರಮಾಥಿ, ಶ್ರಾವಣ ಶು. 5, ಆದಿವಾರ = ಕ್ರಿ.ಶ. 1099, ಜುಲೈ 24, ಆದಿವಾರ

ಕನ್ನಡ

ವಿಶ್ವರೂಪ ಬ್ರಹ್ಮಚಾರಿ, ಐದು ವರ್ಗಗಳು ಮತ್ತು ಸಾಜಾವಿ ಚಕ್ರಪಾಣಿಯರ ಸಮಕ್ಷಮದಲ್ಲಿ ಪೂರ್ವದಲ್ಲಿ ಪರಮೇಶ್ವರ ದತ್ತಿಯಾಗಿದ್ದುದನ್ನು ಕೊಟ್ಟತ್ತೊಣೆಯ ಭಗವತಿದೇವಿಗೆ ಕೊಟ್ಟದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 45; ಸೌಇಇ, IX i, ಸಂ. 166.

ಸಂ. 40

ಅದೇ ದೇವಸ್ಥಾನದ ಜಗಲಿಯಲ್ಲಿಯ ಮೂರನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ

10ನೇ ವರ್ಷ, ವಿಭವ, ಸಂಕ್ರಾಂತಿ, ಸೂರ್ಯಗ್ರಹಣ = ಕ್ರಿ.ಶ. 1148, ಏಪ್ರಿಲ್ 20

ಕನ್ನಡ

ಶಾಂಡಿಲ್ಯ ಗೋತ್ರ ಮತ್ತು ವಿಪ್ರ ವಂಶದ ದೇಕರಸನ ಮಗ ಮತ್ತು ಪಂಡಿತ ಪಾರಿಜಾತ ಕೇಶವ ಅಥವಾ ಕೇಶಿರಾಜನ ತಂದೆಯಾದ ಮಲ್ಲಿದೇವನು ಮಾಧವ-ಬ್ರಹ್ಮಚಾರಿಯರಸ ಮತ್ತು ಕೊಟ್ಟತೊಣೆಯ ಐದು ವರ್ಗಗಳ ಸಮಕ್ಷಮದಲ್ಲಿ ಕೊಟ್ಟತೊಣೆಯ ಶತಕೋಟಿ ತೀರ್ಥಕ್ಕೆ ಬರುವ ಕಪ್ಪಡಿ ಯಾತ್ರಿಕರಿಗೆ ಅನ್ನದಾನ ಮಾಡುವದಕ್ಕಾಗಿ ಸತ್ರಕ್ಕೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 46; ಸೌಇಇ, IX i, ಸಂ. 252.

ಸಂ. 41

ಅದೇ ದೇವಸ್ಥಾನದ ಜಗಲಿಯಲ್ಲಿರುವ ತುಂಡುಕಲ್ಲಿನ ಮೇಲೆ

ರಾಷ್ಟ್ರಕೂಟ, ನಿತ್ಯವರ್ಷ (ಇಂದ್ರ, III)

ಶಕ [842], ವಿಕ್ರಮ = ಕ್ರಿ.ಶ. 920

ಸಂಸ್ಕೃತ, ನಾಗರಿ

ತ್ರುಟಿತ. ದಶವರ್ಮನ ತಂದೆ ಚಾಲುಕ್ಯ ಬಲವರ್ಮನ ಬಗ್ಗೆ ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 47.

ಸಂ. 42

ಅದೇ ದೇವಸ್ಥಾನದ ಜಗಲಿಯಲ್ಲಿರುವ ತುಂಡುಕಲ್ಲಿನ ಮೇಲೆ

--

ಶಕ 1090, ಸರ್ವಜಿತ್ = ಕ್ರಿ.ಶ. 1167 (ಶಕ 1089)

ಕನ್ನಡ

ಹಾಳಾಗಿದೆ.

ಆ್ಯರಿಎ, 1903-04, ಸಂ. 1904 ರ 48.

ಸಂ. 43

ಅದೇ ದೇವಸ್ಥಾನದ ಮುಂದಿನ ಮಂಟಪದ ಪಶ್ಚಿಮದ ಗೋಡೆಯಲ್ಲಿರುವ ತುಂಡು ಕಲ್ಲಿನ ಮೇಲೆ

--

ಶಕ 903, ವೃಷ = ಕ್ರಿ.ಶ. 981

ಕನ್ನಡ

ಹಾಳಾಗಿದೆ.

ಆ್ಯರಿಎ, 1903-04, ಸಂ. 1904 ರ 49.

ಸಂ. 44

ಅದೇ ದೇವಸ್ಥಾನದ ಮಂಟಪದಲ್ಲಿ ಬಿದ್ದಿರುವ ಒಡೆದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಆಹವಮಲ್ಲ (ತೈಲ II)

ಶಕ 918, ದುರ್ಮುಖಿ, ಶ್ರಾವಣ ಶು. 5, . . ಸ್ಪತಿವಾರ = ಕ್ರಿ.ಶ. 996, ಜುಲೈ 23, ಗುರುವಾರ

ಕನ್ನಡ

ಹಾಳಾಗಿದೆ. [ಕಾರ್ತಿಕೇಯ] ತಪೋವನದ ಮುಖ್ಯಸ್ಥ ಮತ್ತು ಕೊಟ್ಟತೊ[ಣೆ]ಯ ಐದು ವರ್ಗಗಳ ಸಮ್ಮುಖದಲ್ಲಿ ಒಂದು ತೋಟವನ್ನು ದಾನ ಕೊಟ್ಟಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 55-ಸಿ ; ಸೌಇಇ, IX i, ಸಂ. 78.

ಸಂ. 45

ವೀರಭದ್ರ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

ಚಾಲುಕ್ಯ-ವಿಕ್ರಮ ವರ್ಷ 44, ವಿಕಾರಿ, ವೈಶಾಖ, ಅಮವಾಸ್ಯೆ, ಆದಿತ್ಯವಾರ, ಸೂರ್ಯಗ್ರಹಣ = ಕ್ರಿ.ಶ. 1119, ಮೇ 11, ಆದಿತ್ಯವಾರ

ಕನ್ನಡ

ವಾಜಿ ವಂಶ ಮತ್ತು ಶ್ರೀವತ್ಸ ಗೋತ್ರದ ಬ್ರಾಹ್ಮಣ ಕೇಶವರಾಜನ ಮಗ ಮಾಳಪ ನಾಯಕನ ಮಗ ಮಾರ್ತಂಡಯ್ಯ ನಾಯಕನು ಶಿವ ದೇವಸ್ಥಾನವನ್ನು ಕಟ್ಟಿಸಿ, ಮಾರ್ತಾಂಡೇಶ್ವರ ದೇವರನ್ನು ಪ್ರತಿಷ್ಠಾಪಿಸಿ, ದೇವರ ಸೇವೆಗೆ ದಂಡಸಾನಿ ಯಶೋಧರ ಬ್ರಹ್ಮಚಾರಿ ಮತ್ತು ಕೊಟ್ಟಿತೊಣೆಯ ಐದು ವರ್ಗಗಳ ಸಾನಿಧ್ಯದಲ್ಲಿ ಭೂಮಿ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ಆತನು ದೇವಸ್ಥಾನದಲ್ಲಿ ತಪೋಧನರಿಗೆ, ಊಟದ ವ್ಯವಸ್ಥೆ ಮಾಡಿದ್ದನ್ನೂ ತಿಳಿಸುತ್ತದೆ. ಬದ್ದೆಮಯ್ಯನ ಮಗ ಮಾಚೆಗಾವುಂಡನು ಅದೇ ದೇವರಿಗೆ ಭೂಮಿ ದಾನ ಮಾಡಿದನು. ಮಾರ್ತಂಡಯ್ಯ ನಾಯಕನು ಸರಸ್ವತಿ ಮತ್ತು ವಿನಾಯಕ ದೇವಸ್ಥಾನಗಳನ್ನು, ಒಂದು ಸುಂದರವಾದ ಸಭಾಮಂಟಪ ಮತ್ತು ಇಂದ್ರ-ದೀಪಸ್ತಂಭವನ್ನು ಸಹ ಕಟ್ಟಿಸಿದನು.

ಆ್ಯರಿಎ, 1903-04, ಸಂ. 1904 ರ 50; ಸೌಇಇ, IX i, ಸಂ. 197.

ಸಂ. 46

ಅದೇ ದೇವಸ್ಥಾನದ ಹತ್ತಿರ ನಂದಿ ಪೀಠದ ಮೇಲೆ

ವಿಜಯನಗರ, ಅಚ್ಯುತದೇವರಾಯ

ಶಕ 1454, ನಂದನ, ಅಧಿಕ ಭಾದ್ರಪದ ಬ. 30, ಶು[ಕ್ರವಾರ] = ಕಿ.ಶ. 1532, ಆಗಸ್ಟ್ 30, ಶುಕ್ರವಾರ

ಕನ್ನಡ

ಭಂಡಾರದ ತಿಮ್ಮಪ-ಅಯ್ಯನ ಮೈದುನ ಕೊಂಡಪನು ತಿಮ್ಮಪ-ಅಯ್ಯನಿಗೆ ಪುಣ್ಯವಾಗಲೆಂದು ಕುಡುತಣಿಯ ವೀರಭದ್ರ ದೇವರಿಗೆ ಕೆಲವು ತೆರಿಗೆಗಳ ಸಹಿತ ಭೂಮಿಯನ್ನು ದಾನ ಕೊಟ್ಟಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, 1904 ರ 51; ಸೌಇಇ, IX ii, ಸಂ. 553.

ಸಂ. 47

ಬೊಳು ಬಸವ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ

ಹೊಯ್ಸಳ, ವೀರಬಲ್ಲಾಳ (II)

ಶಕ 1140, ಬಹುಧಾನ್ಯ, ಕಾರ್ತಿಕ, ಪುಣ್ಣಿಮೆ, ಬೃಹಸ್ಪತಿವಾರ, ಸೋಮಗ್ರಹಣ = ಕ್ರಿ.ಶ. 1219, ಅಕ್ಟೋಬರ್ 24, ಗುರುವಾರ, ಗ್ರಹಣವಿಲ್ಲ

ಕನ್ನಡ

ಕಾರ್ತಿಕೇಯ ತಪೊವನದ ಮುಖ್ಯಸ್ಥ ಉದಯಾಕರದೇವ ಬ್ರಹ್ಮಚಾರಿಯರಸ, ಕೊಟ್ಟಿತೊಣೆ ಸ್ಥಾನದ ಐದು ವರ್ಗಗಳು, ಐದು ಮಠಗಳ ತಪೋಧನರು ಮತ್ತು ಅಸಂಖ್ಯಾತ ಗಣಗಳು ಸಭೆ ಸೇರಿದಾಗ ಗಾಣಿಗರ ಅರವತ್ತು ಕುಟುಂಬಗಳು ತೆಲ್ಲಿಗೇಶ್ವರ ದೇವರನ್ನು ಪ್ರತಿಷ್ಠಾಪಿಸಿ,

ಸಂಸ್ಥೆಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಶೈವ ಗುರು ಕಲ್ಯಾಣಶಕ್ತಿಯ ಪಾದ ತೊಳೆದು, ದೇವರ ಸೇವೆಗೆಂದು ಪ್ರತಿಯೊಂದು ಮಾರಾಟ ಮತ್ತು ಕೊಳ್ಳುವಿಕೆ ಮೇಲಿನ ತೆರಿಗೆಯನ್ನು ದಾನ ಮಾಡಿದ ವಿಷಯ ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 52; ಸೌಇಇ, IX i, ಸಂ. 336.

ಸಂ. 48

ಗ್ರಾಮದ ಪ್ರವೇಶ ದ್ವಾರದ ಬಳಿ ನಿಲ್ಲಿಸಿರುವ ಕಲ್ಲಿನ ಮೇಲೆ

ರಾಷ್ಟ್ರಕೂಟ, ಅಕಾಲವರ್ಷ-ಚಲಕೆನಲ್ಲಾತ (ಕೃಷ್ಣ III)

ಶಕ 870, ಕೀಲಕ, ಶ್ರಾವಣ ಶು. ಪಂಚಮಿ, ಆದಿತ್ಯವಾರ = ಕ್ರಿ.ಶ. 947, ಜುಲೈ 25, ಆದಿತ್ಯವಾರ

ಕನ್ನಡ

ಕುರುಂಗೋಡಿನ ಮಹಾಜನರು ದೇಕಮ್ಮನ ದೇವಸ್ಥಾನದ 62 ಮತ್ತರ ತೆರಿಗೆ ರಹಿತ ಭೂಮಿ ದಾನವು ರದ್ದಾಗಿದ್ದು ರುದ್ರರಾಶಿ ಭಟಾರರ ವಿನಂತಿಯ ಮೇರೆಗೆ ಅರಸನು ಅದೇ ದಾನವನ್ನು ಪುನಃ ಮಾಡಿದ್ದನ್ನು ತಿಳಿಸುತ್ತದೆ. ಕಾರ್ತಿಕೇಯ ತಪೋವನದ ಮುಖ್ಯಸ್ಥ ಲೋಕಯ್ಯ ಗಾವುಂಡನು ದೇವಸ್ಥಾನಕ್ಕೆ ಎಣ್ಣೆ ಗಾಣವನ್ನು ಕೊಟ್ಟಿದ್ದನ್ನೂ ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 53; ಸೌಇಇ, IX i, ಸಂ. 65.

ಸಂ. 49

ಗ್ರಾಮದಲ್ಲಿರುವ ಜಕ್ಕೇರು-ಬಾವಿಯ ಹತ್ತಿರ ನಿಲ್ಲಿಸಿರುವ ಕಲ್ಲಿನ ಮೇಲೆ

--

ಶಕ 97[1], ವಿರೋಧಿ = ಕ್ರಿ.ಶ. 1049

ಕನ್ನಡ

ಸೋಮೇಶ್ವರ ದೇವಸ್ಥಾನಕ್ಕೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 54.

ಸಂ. 50

ಗ್ರಾಮದಲ್ಲಿ ದರ್ಗಾದಲ್ಲಿ ನೆಲಕ್ಕೆ ಹಾಸಿದ ಕಲ್ಲಿನ ಮೇಲೆ

--

ಚಾಲುಕ್ಯ-ವಿಕ್ರಮ ವರ್ಷ 4[5], ಶಾರ್ವರಿ, ಆಶ್ವಿಜ, ಹುಣ್ಣಿಮೆ, ಶುಕ್ರವಾರ = ಕ್ರಿ.ಶ. 1120, ಅಕ್ಟೋಬರ್ 8, ಶುಕ್ರವಾರ

ಕನ್ನಡ

ಬಹಳ ಹಾಳಾಗಿದೆ. ದುರ್ಗರಾಜ ದಂಡನಾಯಕ ಮತ್ತು ಆತನ ಮಗಳು ಚಾವಣದೇವಿಯರು ದುರ್ಗೇಶ್ವರ ದೇವಸ್ಥಾನಕ್ಕೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 55; ಸೌಇಇ, IX i, ಸಂ. 199.

ಸಂ. 51

ದುರ್ಗೇಶ್ವರಿ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ ಆಹವಮಲ್ಲ (ತೈಲ II)

ಶಕ 897,. ಯುವ, [ಪುಣ್ಣ]ಮೆ, ಶುಕ್ರವಾರ = ಕ್ರಿ.ಶ. 976, ಫೆಬ್ರವರಿ 18, ಶುಕ್ರವಾರ

ಕನ್ನಡ

[ಕಾರ್ತಿಕೇಯ]-ತಪೋವನದ ಮುಖ್ಯಸ್ಥನಾಗಿದ್ದ ದಂಡಸಾನಿ ಗದಾಧರ ಬ್ರಹ್ಮಚಾರಿ, ಐದು ವರ್ಗಗಳು ಮತ್ತು ಹಂಪಣ ಭಟ್ಟೋಪಾಧ್ಯಾಯರ ಸನ್ನಿಧಿಯಲ್ಲಿ ಅರಸನು ಭೈರವ ದೇವರ ಸೇವೆಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 55-ಎ; ಸೌಇಇ, IX i, ಸಂ. 73.

ಸಂ. 52

ಬೇವಿನ ಮರದ ಕೆಳಗೆ ನಿಲ್ಲಿಸಿದ ಕಲ್ಲಿನ ಮೇಲೆ

ಹೊಯ್ಸಳ, ವೀರ ಬಲ್ಲಾಳ (II)

ಪ್ರಭವ, ಆಷಾಢ ಬ. 15, ಬೃಹವಾರ = ಕ್ರಿ.ಶ. 1207, ಜುಲೈ 26, ಗುರುವಾರ

ಕನ್ನಡ

ಹಾಳಾಗಿದೆ. ಕಾರ್ತಿಕೇಯ ತಪೋವನದ ಅಧಿಪತಿಯಾದ ವಿಷ್ಣುಕರ-ಬ್ರಹ್ಮಚಾರಿಯ ಅಧ್ಯಕ್ಷತೆಯಲ್ಲಿ ಐದು ವರ್ಗಗಳು, ಏಳ್ಕೋಟಿ ಮಹಾದೇವರು, ಅಸಂಖ್ಯಾತ ಗಣಗಳು ಮತ್ತು ಮುಮ್ಮುರಿದಂಡರು ಸಭೆ ಸೇರಿ ನಡತೆ ತಪ್ಪುವುದನ್ನು ಮತ್ತು ಅಪರಾಧಗಳನ್ನು ನಿರ್ಧರಿಸುವ ಹಕ್ಕನ್ನು ಸ್ಥಳೀಯ ತಪೋಧನರಿಗೆ ಅಂದರೆ ವಿಷ್ಣುಕರ-ಬ್ರಹ್ಮಚಾರಿಗೆ ಒಪ್ಪಿಸಬೇಕೆಂದು ನಿರ್ಧರಿಸಲಾಯಿತೆಂದು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 55-ಡಿ; ಸೌಇಇ, IX i, ಸಂ. 327.

ಕುಂಟನಹಾಳು

ಸಂ. 53

ಗ್ರಾಮದ ಪೂರ್ವಕ್ಕೆ ಐದು ಮೈಲು ದೂರದಲ್ಲಿ ಒಂದು ಹೊಲದಲ್ಲಿರುವ ಕಲ್ಲಿನ ಮೇಲೆ

--

ಕ್ರೋಧಿ, ಫಾಲ್ಗುಣ, ಬ. 2

ತೆಲುಗು

ಹಾಳಾಗಿದೆ. ಮುಸ್ಲಿಮ್ ನಾಯಕ ಇಭುರಾಮ ಬೇಕು ಸಾಹೇಬನ ಮತ್ತು ಭೂಮಿ ದಾನದ ಉಲ್ಲೇಖವಿದೆ.

ಆ್ಯರಿಎ, 1913-14, ಸಂ. 1913 ರ 219.

ಸಂ. 54

ಗ್ರಾಮದಿಂದ ಐದು ಮೈಲು ದೂರದಲ್ಲಿರುವ ಇನ್ನೊಂದು ಹೊಲದಲ್ಲಿರುವ ಕಲ್ಲಿನ ಮೇಲೆ

--

[ಶು]ಭಕೃತ, ಪುಷ್ಯ ಬ. 2

ತೆಲುಗು

ಬಹಳ ಹಾಳಾಗಿದೆ. ಒಬ್ಬ ಮುಸ್ಲಿಮ್ ಮುಖ್ಯಸ್ಥನ ಉಲ್ಲೇಖವಿದೆ. ಆತನ ಹೆಸರು ಸ್ಪಷ್ಟವಾಗಿಲ್ಲ. ಬೆಣ್ಣೆಕಲ್ಲ ಬು(ಡ)ಸಾಬಿಗೆ ಭೂಮಿ ದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 220.

ಕುರುಗೋಡು

ಸಂ. 55

ಬಸವೇಶ್ವರ ದೇವಸ್ಥಾನದ ದಕ್ಷಿಣಕ್ಕೆ ನಿಲ್ಲಿಸಿದ ಕಲ್ಲಿನ ಮೇಲೆ

ಕಲಚೂರ್ಯ, ಶಂಖವರ್ಮ

ಶಕ 1099, ಹೇಮಲಂಬಿ, ಆಷಾಢ ಬ. ಕೃಷ್ಣಾಂಗಾರಕ-ಚತುರ್ದಶಿ = ಕ್ರಿ.ಶ. 1177, ಜೂನ್ 26, ಆದಿತ್ಯವಾರ

ಕನ್ನಡ

ಕುರುಗೋಡಿನ ಮುಮ್ಮುರಿದಂಡರು, ಸಿಂದ ಅರಸ ಮಹಾಮಂಡಲೇಶ್ವರ ರಾಚಮಲ್ಲನ ಒಪ್ಪಿಗೆ ಪಡೆದು ಒಂದು ತ್ರಿಕೂಟ ದೇವಸ್ಥಾನವನ್ನು ಕಟ್ಟಿಸಿ, ಗವರೇಶ್ವರ ದೇವರನ್ನು ಪ್ರತಿಷ್ಠಾಪಿಸಿ, ಭೂಮಿ ಮತ್ತು ನಗರದಲ್ಲಿ ಪ್ರತಿಯೊಂದು ಮಾರಾಟವಾದ ಮತ್ತು ಕೊಂಡ ವಸ್ತುವಿನ ಮೇಲಿನ ತೆರಿಗೆಯನ್ನು ಮತ್ತು ಆಯಾತ ಮಾಡಿಕೊಂಡ ಪ್ರತಿಯೊಂದು ವಸ್ತುವಿನ ಮೇಲಿನ ತೆರಿಗೆಯನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ. ಮಲ್ಲಿಸೆಟ್ಟಿಯು ಮಲ್ಲಿಕಾರ್ಜುನ ದೇವರನ್ನು ಪ್ರತಿಷ್ಠಾಪಿಸಿ ದೇವರ ಸೇವೆಗೆ ದಾನ ನೀಡಿದ್ದನ್ನು ತಿಳಿಸುತ್ತದೆ. ಮುದ್ದರಸನು ಮುದ್ದೇಶ್ವರ ದೇವರನ್ನು ಪ್ರತಿಷ್ಠಾಪಿಸಿ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 56; ಸೌಇಇ, IX i, ಸಂ. 297.

ಸಂ. 56

ಬಸವೇಶ್ವರ ದೇವಸ್ಥಾನದ ದಕ್ಷಿಣಕ್ಕೆ ಬಂಡೆಯ ಮೇಲೆ

ವಿಜಯನಗರ, ಕೃಷ್ಣರಾಯ

ಶಕ 1450, ಸರ್ವಧಾರಿ, ಭಾದ್ರಪದ ಬ. 1 = ಕ್ರಿ.ಶ. 1528, ಆಗಸ್ಟ್ 30, ಆದಿತ್ಯವಾರ

ಕನ್ನಡ

ಬಾಗಿಲ ಕೃಷ್ಣರಾಯನಾಯಕನು ಅರಸನಿಗೆ ಪುಣ್ಯವಾಗಲೆಂದು ದೊಡ್ಡ ಬಸವಣ್ಣ ದೇವರಿಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 57; ಸೌಇಇ, IX ii, ಸಂ. 524.

ಸಂ. 57

ಕಲ್ಲೇಶ್ವರ ದೇವಸ್ಥಾನದ ಮುಂದಿನ ಮಂಟಪದ ಉತ್ತರಕ್ಕೆ ನಿಲ್ಲಿಸಿದ ಕಲ್ಲಿನ ಮೇಲೆ

ಕಲಚೂರ್ಯ, ರಾಯಮುರಾರಿ-ಸೋವಿದೇವ

ಶಕ 1097, ಮನ್ಮಥ, ಪುಷ್ಯ, ಅಮಾವಾಸ್ಯೆ, ಸೋಮವಾರ, ಸೂರ್ಯಗ್ರಹಣ, ಉತ್ತರಾಯಣ ಸಂಕ್ರಮಣ = ಕ್ರಿ.ಶ. 1176, ಜನವರಿ 13, ಮಂಗಳವಾರ

ಕನ್ನಡ

ಕುರುಗೋಡಿನ ಮುಮ್ಮುರಿದಂಡಗಳಲ್ಲಿ ಒಬ್ಬನಾದ ಕಲ್ಲಿಸೆಟ್ಟಿಯು ಪ್ರತಿಷ್ಠಾಪಿಸಿದ ಕಲಿದೇವರ ಪೂಜೆಗೆ ಸಿಂದ ವಂಶದ ಮಹಾಮಂಡಲೇಶ್ವರ ರಾಚಮಲ್ಲನು ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ. ಬಳ್ಳರೆಯ ಮಹಾಮಂಡಲೇಶ್ವರ ಅಜ್ಜರಸನು ಯಾತ್ರಿಕರ ಅರವಟ್ಟಿಗೆ ಮತ್ತು ಸತ್ರಕ್ಕೆ ಮತ್ತು ದೇವರ ಪೂಜೆಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ. ಮುಮ್ಮುರಿದಂಡಗಳು ಮತ್ತು ನಖರಗಳು ವ್ಯಾಪಾರದ ಮೇಲಿನ ತೆರಿಗೆಯನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ. ಕಾಳಾಮುಖ ಮತದ ಅಮೃತರಾಶಿದೇವನನ್ನು ಉಲ್ಲೇಖಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 58; ಸೌಇಇ, IX i, ಸಂ. 296.

ಸಂ. 58

ಗ್ರಾಮದ ಬಜಾರ ಬೀದಿಯಲ್ಲಿರುವ ಕಂಬದ ಎರಡು ಮುಖಗಳ ಮೇಲೆ

--

ಶಕ 14[3]5, ಅಂಗಿರಸ = ಕ್ರಿ.ಶ. 1512 (ಶಕ 1434)

ಕನ್ನಡ

ಒಬ್ಬ ಸ್ತ್ರೀಯು ಶಾಂತಮಲ್ಲಿಕಾರ್ಜುನದೇವರ ದೇವಸ್ಥಾನದ ಬಾವಿಯನ್ನು ದುರಸ್ತಿಗೊಳಿಸಿ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 59.

ಸಂ. 59

ಗ್ರಾಮದಲ್ಲಿಯ ಹನುಮಂತ ಗುಡ್ಡದ ಮೇಲಿರುವ ಹನುಮಂತನ ಗುಡಿಯ ಪೂರ್ವದ ಗೋಡೆಯ ಮೇಲೆ

--, ಹೈದರ್ ಅಲಿ ಖಾನ

ಶಕ 1702, ಶಾರ್ವರಿ, ಆಶ್ವಿನ ಶು. 1 = ಕ್ರಿ.ಶ. 1780, ಸೆಪ್ಟೆಂಬರ್ 29

ಕನ್ನಡ

ಹನುಮಂತ ದೇವರ ದೇವಸ್ಥಾನದ ನಿರ್ಮಾಣವು ಪೂರ್ಣಗೊಂಡದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 60; ಸೌಇಇ, IX ii, ಸಂ. 706.

ಸಂ. 60

ಹನುಮಂತ ಗುಡ್ಡದ ಈಶಾನ್ಯ ದಿಕ್ಕಿಗೆ ಕತ್ತೆ ಬಂಡೆಯ ಮೇಲೆ

[ಬಾದಾಮಿ ಚಾಲುಕ್ಯ], ಸತ್ಯಾಶ್ರಯ (ಪುಲಕೇಶಿ II)

7ನೆಯ ಶತಮಾನ

ಕನ್ನಡ

ಕುರುಗೋಡಿನಲ್ಲಿ ಭೂಮಿಯನ್ನು ಅಳೆಯಲು 18 ಗೇಣು ಕೋಲು ಮತ್ತು ನವಿಲಪೊನ್ ನಾಣ್ಯಗಳನ್ನು ಉಪಯೋಗಿಸಬೇಕೆಂದು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 61; ಸೌಇಇ, IX i, ಸಂ. 53

ಸಂ. 61

ಸಂಗಮೇಶ್ವರ ದೇವಸ್ಥಾನದ ಮಂಟಪದಲ್ಲಿ ಬಿದ್ದಿರುವ ಒಡೆದ ಕಲ್ಲಿನ ಮೇಲೆ

ವಿಜಯನಗರ, ಸದಾಶಿವ

ಶಕ 1466, ಶೋಭಕೃತ, ದ್ವಿತೀಯ ಶ್ರಾವಣ ಶು. 10 = ಕ್ರಿ.ಶ. 1543, ಆಗಸ್ಟ್ 9, ಗುರುವಾರ

ಕನ್ನಡ

ಕೃಷ್ಣರಾಯನು ಸಂಗಮೇಶ್ವರ ದೇವರ ಸೇವೆಗೆಂದು ಚೆನಕುಂಟೆ ಗ್ರಾಮವನ್ನು ಹಿಂದೆ ದಾನ ಮಾಡಿದ್ದನ್ನು ಅರಸನ ಕಾರ್ಯಕರ್ತ ಅಳಿಯ ಲಿಂಗರಾಜನು ನವೀಕರಿಸಿದ್ದನ್ನು ತಿಳಿಸುತ್ತದೆ. ಅಚ್ಯುತರಾಯನ ಕಾಲದಲ್ಲಿ ಈ ಗ್ರಾಮವು ಸಂಕುಚಿತ ಮನೋಭಾವದ ಜನರ ಕಿರುಕುಳದಿಂದ ಹಾಳಾಗಿತ್ತು.

ಆ್ಯರಿಎ, 1903-04, ಸಂ. 1904 ರ 62; ಸೌಇಇ, IX ii, ಸಂ. 606.

ಸಂ. 62

ಸಂಗಮೇಶ್ವರ ದೇವಸ್ಥಾನದ ಹತ್ತಿರವಿರುವ ಪಾಳುಬಿದ್ದ ದೇವಸ್ಥಾನದ ದಕ್ಷಿಣದ ಗೋಡೆಯ ಮೇಲೆ

ವಿಜಯನಗರ, ಸದಾಶಿವರಾಯ

ಶಕ 1467, ವಿಶ್ವಾವಸು, ಪುಷ್ಯ ಬ. 10, ಸೋಮವಾರ = ಕ್ರಿ.ಶ. 1545, ಡಿಸೆಂಬರ್ 28, ಸೋಮವಾರ

ಕನ್ನಡ

ರಾಮರಾಜ-ಒಡೆಯನ ಮೊಮ್ಮಗ ಮತ್ತು ಅಳಿಯ-ಲಿಂಗರಾಜಯ್ಯನ ಅಣ್ಣ ರಾಮರಾಜಯ್ಯನು ತನ್ನ ತಂದೆ ಮಲ್ಲಿಕಾರ್ಜುನ ಒಡೆಯನಿಗೆ ಪುಣ್ಯವಾಗಲೆಂದು ಕುರುಗೋಡಿನ ಬಸ್ತಿಯಲ್ಲಿರುವ ಜಿನ್ನದೇವರ ಸೇವೆಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ. ಅದೇ ವರ್ಷ ಫಾಲ್ಗುಣ ಶು. 8, ಸೋಮವಾರದಂದು (ಕ್ರಿ.ಶ. 1546, ಫೆಬ್ರವರಿ 8, ಸೋಮವಾರ) ಮೂಲಸಂಘ ಮತ್ತು ಬಲಾತ್ಕಾರ ಗಣದ ಸೂರಿಯಪ್ಪಸೆಟ್ಟಿಯ ಮಗ ಗೋಮಿಸೆಟ್ಟಿಯು ಅದೇ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 63; ಸೌಇಇ, IX ii, ಸಂ. 618.

ಸಂ. 63

ಈಗ ಕಲ್ಕತ್ತಾದ ಇಂಡಿಯನ್ ಮ್ಯೂಸಿಯಂನಲ್ಲಿರುವ ಒಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಸೋಮೇಶ್ವರ (IV)

(i) ಶಕ 1095, ವಿಜಯ, ಮಾರ್ಗಶಿರ, ಅಮಾವಾಸ್ಯೆ, ಸೋಮವಾರ, ಸೂರ್ಯಗ್ರಹಣ = ಕ್ರಿ.ಶ. 1173, ಡಿಸೆಂಬರ್ 6, ಗುರುವಾರ

(ii) ಶಕ 1103, ಪ್ಲವ, ಕಾರ್ತಿಕ, ಪುಣ್ಣಮಿ, ಸೋಮವಾರ, ಸೋಮಗ್ರಹಣ = ಕ್ರಿ.ಶ. 1181, ಅಕ್ಟೋಬರ್ 24, ಶನಿವಾರ

ಕನ್ನಡ

ಸಿಂದ ವಂಶದ ವಂಶಾವಳಿಯಿದೆ. ಒಂದನೆಯ ರಾಚಮಲ್ಲನ ಮಹಾಪ್ರಧಾನ ದಂಡನಾಯಕ ಮತ್ತು ಹಡಪವಳ (ರಾಜವಂಶದವರ ಅಡಿಕೆ ಚೀಲದ ಉಸ್ತುವಾರಿಯಾಗಿದ್ದ) ಬೇಚಿರಾಜನು ಶಿವಸ್ವಯಂಭುದೇವರ ದೇವಸ್ಥಾನವನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ. ಒಂದನೆಯ ರಾಚಮಲ್ಲನು ಶಕ 1095ರಲ್ಲಿ ದೇವರ ಸೇವೆಗೆ ಭೂಮಿ ದಾನ ಮಾಡಿದ್ದನ್ನು ದಾಖಲಿಸುತ್ತದೆ. ಎರಡನೆಯ ರಾಚಮಲ್ಲನು ಶಕ 1103ರಲ್ಲಿ ಅದೇ ದೇವಸ್ಥಾನಕ್ಕೆ ಜಂತೆ ಗ್ರಾಮವನ್ನು ದತ್ತಿ ಬಿಟ್ಟದ್ದನ್ನು ಮತ್ತು ದೇವಸ್ಥಾನಕ್ಕೆ ಕೆಲವು ರಿಯಾಯಿತಿಗಳನ್ನು ಕೊಟ್ಟದ್ದನ್ನು ದಾಖಲಿಸುತ್ತದೆ. ಬೇಚಿರಾಜನ ಮರಣದ ನಂತರ ಆತನ ಮಡದಿಯರಾದ ಬೈಳಿಯಕ್ಕ ಮತ್ತು ಮಲ್ಲಾನಿಯಕ್ಕರು ಆತ್ಮಾಹುತಿ ಮಾಡಿಕೊಂಡದ್ದನ್ನು ತಿಳಿಸುತ್ತದೆ.

ಎ.ಇ., XIV, ಪು. 265-278.

ಸಂ. 64

ಅದೇ ಕಲ್ಲಿನ ಇನ್ನೊಂದು ಬದಿಗೆ

ಕಲ್ಯಾಣ ಚಾಲುಕ್ಯ, ಸೋಮೇಶ್ವರ (IV)

--

ಕನ್ನಡ

ಸಿಂದ ರಾಚಮಲ್ಲ (I)ನು ಮರಣಹೊಂದಿದ ನಂತರ ಈ ಭೂಮಿಯ ಮೇಲೆ ಲಿಂಗದ ರೂಪದಲ್ಲಿ ಉದ್ಭವವಾಗಿ ಕುರುಗೋಡಿನ ಸ್ವಯಂಭು (ಶಿವ) ದೇವಸ್ಥಾನದ ಪಶ್ಚಿಮ ಭಾಗದಲ್ಲಿ ಕಾಣಿಸಿಕೊಂಡದ್ದನ್ನು ಮತ್ತು ಆ ಸ್ಥಳದಲ್ಲಿ ಒಂದು ದೇವಸ್ಥಾನ ಕಟ್ಟಿಸಿ ಉದ್ಭವ ರಾಚಮಲ್ಲೇಶ್ವರ ಎಂಬ ಹೆಸರಿನಲ್ಲಿ ಪೂಜೆ ಮಾಡಿದ್ದನ್ನು ತಿಳಿಸುತ್ತದೆ.

ಎಇ., XVI, ಪು. 278-284.

ಸಂ. 65

ಉಜ್ವಲೇಶ್ವರ ದೇವಸ್ಥಾನದ ಗರ್ಭಗೃಹದ ಬಾಗಿಲಿನ ಮೇಲೆ ಚೌರಿ ಹಿಡಿದಿರುವ ಮಹಿಳೆಯ ಶಿಲ್ಪದ ಕೆಳಗೆ

--

12ನೇ ಶತಮಾನ

ಕನ್ನಡ

''ಲೋಕಾಹುರದ ಜೋ.ಲದೇವಿ'' ಎಂದು ಬರೆದಿದೆ.

ಪಾಟೀಲ ಚನ್ನಬಸಪ್ಪ ಎಸ್., 1992, *ಟೆಂಪಲ್ಸ್ ಆಫ್ ರಾಯಚೂರ್ ಆಂಡ್ ಬಳ್ಳಾರಿ ಡಿಸ್ಟ್ರಿಕ್ಟ್ಸ್*, ಪು. 163.

ಸಂ. 66

ಅದೇ ಸ್ಥಳದಲ್ಲಿ ಚೌರಿ ಹಿಡಿದಿರುವ ಇನ್ನೊಂದು ಮಹಿಳೆಯ ಶಿಲ್ಪದ ಕೆಳಗೆ

--

12ನೇ ಶತಮಾನ

ಕನ್ನಡ

''ಲೋಕಾಹುರದ ದೇವಲದೇವಿ'' ಎಂದು ಬರೆದಿದೆ.

ಪಾಟೀಲ ಚನ್ನಬಸಪ್ಪ ಎಸ್., 1992, *ಟೆಂಪಲ್ಸ್ ಆಫ್ ರಾಯಚೂರ್ ಆಂಡ್ ಬಳ್ಳಾರಿ ಡಿಸ್ಟ್ರಿಕ್ಟ್ಸ್*, ಪು. 163

ಮೋಕ

ಸಂ. 67

ಮಲ್ಲೇಶ್ವರ ದೇವಸ್ಥಾನದ ಹತ್ತಿರ ಬಿದ್ದಿರುವ ಕಲ್ಲಿನ ಮೇಲೆ

ವಿಜಯನಗರ, ಕೃಷ್ಣರಾಯ

ಶಕ [1431], ಶುಕ್ಲ, ಮಾಘ ಬ. 14, ಶಿವರಾತ್ರಿ = ಕ್ರಿ.ಶ. 1510, ಫೆಬ್ರವರಿ 7, ಗುರುವಾರ

ಕನ್ನಡ

ಅರಸನು ತನಗೆ ಒಳ್ಳೆಯದಾಗಲೆಂದು ಮಲುಕಣ ಗ್ರಾಮವನ್ನು ದಾನ ಕೊಟ್ಟ ದಾಖಲೆಯಿದೆ.

ಆ್ಯರಿಎ, 1913-14, ಸಂ. 1913 ರ 227; ಸೌಇಇ, IX ii, ಸಂ. 481.

ನಲ್ಲುಡಿ

ಸಂ. 68

ಸಿದ್ಧೇಶ್ವರ ದೇವಸ್ಥಾನದ ಹತ್ತಿರವಿರುವ ವೀರಗಲ್ಲಿನ ಮೇಲೆ

--

ಪ್ರಾಚೀನ ಲಿಪಿಯಲ್ಲಿದೆ

ಕನ್ನಡ

ಗುಮ್ಮನ ಗಾವುಂಡ ಎಂಬ ವ್ಯಕ್ತಿಯ ಉಲ್ಲೇಖವಿದೆ.

ಆ್ಯರಿಎ, 1913-14, ಸಂ. 1913 ರ 203.

ಓರುವಾಯಿ

ಸಂ. 69

ರಾಮಲಿಂಗೇಶ್ವರ ದೇವಸ್ಥಾನದ ಹತ್ತಿರ ಬಿದ್ದಿರುವ ಒಡೆದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಪೊಟ್ಟಳಕೆರೆಯಲ್ಲಿ ಆಳುತ್ತಿದ್ದ ಜಗದೇಕಮಲ್ಲ

ಶಕ 958, ಧಾತು, ಉತ್ತರಾಯಣ ಸಂಕ್ರಾಂತಿ = ಕ್ರಿ.ಶ. 1036, ಡಿಸೆಂಬರ್ 24

ಕನ್ನಡ

ನೊಳಂಬ ಮಹಾದೇವಿಯ ದೇಹವನ್ನು ಗಂಗಾನದಿಯಲ್ಲಿ ಬಿಟ್ಟ ಮಹಾದೇವಶಣಂಗಿ, ಕೃಷ್ಣಯ್ಯ ಮತ್ತು ತುಪ್ಪದ ದೇವಯ್ಯ ಇವರಿಗೆ ಓರುವಾಯಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಜಗದೇಕಮಲ್ಲನ ರಾಣಿ ದೇವಳದೇವಿಯ ಮತ್ತು ನೊಳಂಬ ಪಲ್ಲವ ಅರಸ ಕಾಂಚೀಪುರವರೇಶ್ವರ ಉದಯಾದಿತ್ಯನ ಉಲ್ಲೇಖವಿದೆ.

ಆ್ಯರಿಎ, 1913-14, ಸಂ. 1913 ರ 200; ಸೌಇಇ, IX i, ಸಂ. 92.

ಸಂ. 70

ಅದೇ ದೇವಸ್ಥಾನದ ಹತ್ತಿರ ಬಿದ್ದಿರುವ ಇನ್ನೊಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ ಜಗದೇಕ[ಮಲ್ಲ] (ಜಯಸಿಂಹ II)

ಶಕ 958, ಧಾತು, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1036, ಡಿಸೆಂಬರ್ 24, ಶುಕ್ರವಾರ

ಕನ್ನಡ

ಹಾಳಾಗಿದೆ. ಇದು ಶಾಸನ ಸಂ. 69ರ ನಕಲು. ನೊಳಂಬ ಮಹಾದೇವಿಯ ದೇಹವನ್ನು ಗಂಗಾ ನದಿಯಲ್ಲಿ ಬಿಟ್ಟ ಮೂವರು ಬ್ರಾಹ್ಮಣರಿಗೆ ಓರುವಾಯಿಯನ್ನು ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ನೊಣಂಬ ರಾಜಕುಮಾರಿಯಾದ ಅರಸನ ಪತ್ನಿ ರಾಣಿ ದೇವಳದೇವಿ ಮತ್ತು ಕಾಂಚೀಪುರವರೇಶ್ವರ ಎಂದು ಕರೆಯಲ್ಪಡುವ ನೊಳಂಬ ಪಲ್ಲವ ಉದಯಾದಿತ್ಯರ ಉಲ್ಲೇಖವಿದೆ.

ಆ್ಯರಿಎ, 1913-14, ಸಂ. 1913 ರ 201; ಸೌಇಇ, IX i, ಸಂ. 91.

ಸಂ. 71

ಬೆನಕಪ್ಪ ದೇವಸ್ಥಾನದ ಮಧ್ಯದ ಗುಡಿಯ ಬಾಗಿಲ ಬಲಕ್ಕೆ ಬಿದ್ದಿರುವ ಕಲ್ಲಿನ ಮೇಲೆ

--

ಆನಂದ, ಫಾಲ್ಗುಣ ಶು. 15, ಆದಿವಾರ = ಬಹುಶಃ ಕ್ರಿ.ಶ. 1195, ಫೆಬ್ರವರಿ 26, ಆದಿವಾರ

ಕನ್ನಡ

ಏಚಿಸೆಟ್ಟಿಯು ವಿಘ್ನೇಶ್ವರ ದೇವಸ್ಥಾನವನ್ನು ಕಟ್ಟಿಸಿದ್ದನ್ನು ಮತ್ತು ಕುರುಗೋಡನ್ನು ಆಳುತ್ತಿದ್ದ ಸಿಂದ ವಂಶದ ಇರ್ಮಡಿ ರಾಚಮಲ್ಲನು ಭೂಮಿ ಮತ್ತು ಕೆಲ ತೆರಿಗೆಯ ಮೊತ್ತವನ್ನು ಅದೇ ದೇವರ ಸೇವೆಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 68; ಸೌಇಇ, IX i, ಸಂ. 322.

ಸಂ. 72

ಅದೇ ಕಲ್ಲಿನ ಮೇಲೆ

ಹೊಯ್ಸಳ, ವೀರ-ಬಲ್ಲಾಳ (II)

ಈಶ್ವರ, ಶ್ರಾವಣ ಬ. 30, ಶುಕ್ರವಾರ, ಸೂರ್ಯಗ್ರಹಣ = ಕ್ರಿ.ಶ. 1217, ಆಗಸ್ಟ್ 4, ಶುಕ್ರವಾರ

ಕನ್ನಡ

ವಿನಾಯಕ ದೇವರ ಸೇವೆಗೆ ಬಸವಣ್ಣ-ದಂಡನಾಯಕನು ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಭೀಮರಾಶಿ-ಗುರುವಿನ ಶಿಷ್ಯ ಚೀಲರಾಶಿ-ಗುರುವಿಗೆ ಏಚಸೆಟ್ಟಿಯು ವಿನಾಯಕ-ಸ್ಥಾನವನ್ನು ಕೊಟ್ಟದ್ದನ್ನು ಮತ್ತು ಕಂಪಿಲೆ-ಸ್ಥಳ ಮತ್ತು ನಾಲ್ಕು ನಾಡುಗಳು ಏಚಿಸೆಟ್ಟಿಗೆ ಎತ್ತಿನ ಮೇಲೆ ವಿಧಿಸಿದ ತೆರಿಗೆಯನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 68-ಎ; ಸೌಇಇ, IX i, ಸಂ. 334.

ಸಂ. 73

ಅದೇ ದೇವಸ್ಥಾನದಲ್ಲಿ ಮಧ್ಯದ ಗುಡಿಯ ಬಾಗಿಲ ಎಡಕ್ಕೆ ಬಿದ್ದಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ (II)

ಶಕ 1071, ವಿಭವ, ಪುಷ್ಯ ಶು. 10, ಸೋಮವಾರ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1148, ಡಿಸೆಂಬರ್ 22, ಬುಧವಾರ, (ಶಕ 1070)

ಕನ್ನಡ

ದೊರವಡಿನಾಡಿನ ಮಹಾಮಂಡಲೇಶ್ವರರಾದ ಕಾಚರಸ, ಗಂಗರಸ, ಲೋಕರಸರು, ಲಖೆಯನಾಯಕ ಮತ್ತು ಆತನ ಸಹೋದರರಾದ ಮಾದೆಯ ನಾಯಕ, ವಿರುಪೆಯ ನಾಯಕ ಮತ್ತು ಆಚೆಯ ನಾಯಕರು, ಪ್ರಭು-ಗಾವುಂಡರು, ಮೂಲಿಗರು ಮತ್ತು ಎಂಟು ಹಿಟ್ಟುಗಳೊಡಗೂಡಿ ಕುತ..ಕನೂರಿನಲ್ಲಿಯ ವಿರೂಪಾಕ್ಷದೇವರ ದೇವಸ್ಥಾನವನ್ನು ಮತ್ತು ಕುರುಗೋಡಿನಲ್ಲಿಯ ಭೋಗೇಶ್ವರ ದೇವರ ದೇವಸ್ಥಾನಗಳನ್ನು ಕಟ್ಟಿಸಿ, ಭೀವರಾಶಿ ಪಂಡಿತನ ಪಾದ ತೊಳೆದು ಈ ದೇವರುಗಳ ಸೇವೆಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ. ಭೀವರಾಶಿ ಪಂಡಿತನು ಬ್ರಹ್ಮೇಶ್ವರ ದೇವರನ್ನು ಮತ್ತು ನೀಲಕಂಠ ದೇವರನ್ನು ಹೊಸಕುತ್ತುಕನೂರಿನಲ್ಲಿ ಪ್ರತಿಷ್ಠಾಪಿಸಿ ಆ ದೇವಸ್ಥಾನಗಳಿಗೆ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 69; ಸೌಇಇ, IX i, ಸಂ. 253.

ರೂಪನಗುಡಿ

ಸಂ. 74

ಗ್ರಾಮದಲ್ಲಿ ಬೈಲು ಆಂಜನೇಯ ವಿಗ್ರಹದ ಹತ್ತಿರ ಬಂಡೆಯ ಮೇಲೆ

--

ಬಹುಧಾನ್ಯ, ಚೈತ್ರ ಶು. 1

ಕನ್ನಡ

ಈ ಡೋಣೆ ಮತ್ತು ಹನುಮಂತನ ವಿಗ್ರಹಗಳನ್ನು ಗೋವಿಂದವಾಡಿಯ ಸಿರುಮಣನ ಮಗ ಮಲಪನು ಮಾಡಿಸಿದನೆಂದು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 221.

ಸಂ. 75

ಪೋತಲಪ್ಪನ ಗುಡಿಯ ಹತ್ತಿರ ಕಲ್ಲಿನ ಮೇಲೆ

--

ಶಕ 170[9], ಪ್ಲವಂಗ, ವೈಶಾಖ ಶು. 1, ಬುಧವಾರ = ಕ್ರಿ.ಶ. 1787, ಏಪ್ರಿಲ್ 18, ಬುಧವಾರ

ತೆಲುಗು

ಇಬ್ಬರು ಖಾಸಗಿ ವ್ಯಕ್ತಿಗಳು ಪೋತುಲಿಂಗಸ್ವಾಮಿಯ ದೇವಸ್ಥಾನ ಮತ್ತು ಕಲ್ಲಿನ ಮಂಟಪವನ್ನು ಕಟ್ಟಿಸಿದ್ದನ್ನು (?) ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 222.

ಸಂ. 76

ಗ್ರಾಮದಲ್ಲಿಯ ಒಂದು ಬಾವಿಯ ಹತ್ತಿರ ಕಲ್ಲಿನ ಮೇಲೆ

ವಿಜಯನಗರ, ಅಚ್ಯುತದೇವ

16ನೆಯ ಶತಮಾನ

ಕನ್ನಡ

ಹಾಳಾಗಿದೆ. [ನಾರಾ]ಯಣದೇವರ ದೇವಸ್ಥಾನಕ್ಕೆ ಯಳಪೆ ಗ್ರಾಮದಲ್ಲಿ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. [ಯಳಪೆ]ಯ-ಸೀಮೆಯಲ್ಲಿ ರೂಪಲಗುಡಿಯ-ಠಾಣ್ಯದ ಮೂಲಕ ಹೋಗುವ ಧಾನ್ಯಗಳ ಮೇಲಿನ ತೆರಿಗೆ (ಮೂಲವೀಸ)ವನ್ನು ಇದೇ ದೇವಸ್ಥಾನಕ್ಕೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 223; ಸೌಇಇ, IX ii, ಸಂ. 601.

ಸಂಜೀವರಾಯನಕೋಟೆ

ಸಂ. 77

ಗ್ರಾಮದ ಒಂದು ಹೊಲದಲ್ಲಿಯ ಕಲ್ಲಿನ ಮೇಲೆ

--

ಪ್ರಾಚೀನ ಲಿಪಿಯಲ್ಲಿದೆ

ಕನ್ನಡ

ಬೂದವಾಗಿಲು-8000 ಮತ್ತು ಮಹಾಸಾಮಂತಾಧಿಪತಿ ರಾಜಿಯಣ್ಣ ಎರೆಯಮ್ಮಮ್‌ನ ಉಲ್ಲೇಖವಿದೆ. ಕದಂಬ ಕಾಮರಸ ಮತ್ತು ಇತರ ಗಾಮುಂಡಗಳು ಒಂದು ದೇವಸ್ಥಾನಕ್ಕೆ ಭೂಮಿ ದಾನ ನೀಡಿದ್ದನ್ನೂ ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 233.

ಸಿಂದವಾಳ

ಸಂ. 78

ರಾಮಲಿಂಗೇಶ್ವರ ದೇವಸ್ಥಾನದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಭೂಲೋಕಮಲ್ಲ

5ನೇ ವರ್ಷ, ಸಾಧಾರಣ, ಕಾರ್ತ್ತಿಕ ಶು. 1, ಸೋಮವಾರ, ಸೂರ್ಯಗ್ರಹಣ = ಕ್ರಿ.ಶ. 1130, ಅಕ್ಟೋಬರ್ 4, ಶನಿವಾರ

ಕನ್ನಡ

ಮಹಾಪ್ರಧಾನ ಬಾಣಸುವೆರ್ಗಡೆ ಮನೆವೆರ್ಗಡೆ ಸೇನಾಧಿಪತಿ ದಂಡನಾಯಕ ಅನಂತಪಾಲಯ್ಯನು ಸಿಂದವಾಡಿ-1000ದ ಸಿಂದವೊಳಲಿನ ಕೇಶಿಯಣ, ಕೇತ-ಗಾವುಂಡ, ಮಾಚ-ಗಾವುಂಡ ಮತ್ತು ಚೋಕಿಸೆಟ್ಟಿಯರು ಪ್ರತಿಷ್ಠಾಪಿಸಿದ ಸೋಮೇಶ್ವರ ದೇವರಿಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ. ಮಂತ್ರಿ ಅನಂತಪಾಳಯ್ಯನು ಈ ದಾನವನ್ನು ಕಾರ್ಯರೂಪಕ್ಕೆ ತರಲು ಪೆರ್ಗಡೆ ಚಾಕಣಯ್ಯನಿಗೆ ಆಜ್ಞೆ ಮಾಡಿದನು. ಒಂದು ತೋಟ, ಎಣ್ಣೆ ಗಾಣ ಮತ್ತು ಮನೆ-ನಿವೇಶನಗಳನ್ನೂ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 230; ಸೌಇಇ, IX i, ಸಂ. 224.

ಸಿಂದಿಗೇರಿ

ಸಂ. 79

ಮಲ್ಲೇಶ್ವರ ದೇವಸ್ಥಾನದ ಮುಂದೆ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ (II)

4ನೇ ವರ್ಷ, ದುರ್ಮತಿ, ಭಾದ್ರಪದ ಶು. 6, ಆದಿತ್ಯವಾರ = ಕ್ರಿ.ಶ. 1141, ಆಗಸ್ಟ್ 9, ಶನಿವಾರ

ಕನ್ನಡ

ಬಹುಶಃ ಸಿಂದಂಗೆರೆಯ ಛತ್ರಕ್ಕೆ ಭೂಮಿ ದಾನದ ದಾಖಲೆಯಿದೆ. ಗುರು ನಿರ್ವಾಣದೇವ ಮತ್ತು ಬಳ್ಳಾರೆಯನ್ನು ಉಲ್ಲೇಖಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 205; ಸೌಇಇ, IX i, ಸಂ. 237.

ಸಂ. 80

ಮಲ್ಲೇಶ್ವರ ದೇವಸ್ಥಾನದ ಹತ್ತಿರ ಮತ್ತೊಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ (II)

4ನೇ ವರ್ಷ, ದುರ್ಮತಿ, ಭಾದ್ರಪದ ಶು. 6, ಆದಿವಾರ = ಕ್ರಿ.ಶ. 1141, ಆಗಸ್ಟ್ 9, ಶನಿವಾರ

ಕನ್ನಡ

ಬಳ್ಳಾರೆಯ ಸಿಂದ ಮಹಾಮಂಡಲೇಶ್ವರ ರಾಚಮಲ್ಲದೇವರಸ ಮತ್ತು ಆತನ ಅಧೀನ ಅಧಿಕಾರಿ ಕೇಶಿಯಣ್ಣ ಒಂದು ಸತ್ರಕ್ಕೆ ಭೂಮಿ ದಾನ ಕೊಟ್ಟದ್ದನ್ನು ಮತ್ತು ಇದನ್ನು ನಿರ್ವಾಣದೇವನ ಉಸ್ತುವಾರಿಗೆ ಬಿಟ್ಟದ್ದನ್ನು ತಿಳಿಸುತ್ತದೆ. ನಿರ್ವಾಣದೇವನು ಕಾಳಾಮುಖ ಗುರುವಾಗಿದ್ದು, ಮುಳುಗುಂದದ ಸ್ವಯಂಭುದೇವರ ದೇವಸ್ಥಾನದ ಆಚಾರ್ಯ ವಾಮದೇವ ಅಥವಾ ಏರ್ಕೋಟಿ-ಚಕ್ರವರ್ತಿಯ ಮೂರನೆಯ ಉತ್ತರಾಧಿಕಾರಿಯಾಗಿದ್ದನು.

ಆ್ಯರಿಎ, 1913-14, ಸಂ. 1913 ರ 206; ಸೌಇಇ, IX i, ಸಂ. 235.

ಸಂ. 81

ಬಸವೇಶ್ವರ ದೇವಸ್ಥಾನದ ಹತ್ತಿರ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ (ಸೋಮೇಶ್ವರ I)

11ನೇ ಶತಮಾನ

ಕನ್ನಡ

ನೊಳಂಬ ಅರಸ 'ಕಾಂಚೀಪುರವರೇಶ್ವರ' ತ್ರೈಲೋಕ್ಯಮಲ್ಲ ಇರಿವನೊಳಂಬ ನರಸಿಂಗದೇವನ ಸಾಮಂತನಾಗಿದ್ದ ವೈದುಂಬ ಅರಸ ಮಣಿಬೇತ ಮಹಾರಾಜನು ಬಲ್ಲಕುಂದೆ-300ರ ಪಟ್ಟಣದ ಧರ್ಮೇತಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 207; ಸೌಇಇ, IX i, ಸಂ. 131.

ಸಿರಿವಾರ

ಸಂ. 82

ಈಶ್ವರ ದೇವಸ್ಥಾನದ ಮುಂದೆ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಪೊಟ್ಟಳಕೆರೆಯಿಂದ ಆಳುತ್ತಿದ್ದ ತ್ರೈಲೋಕ್ಯಮಲ್ಲ ಆಹವಮಲ್ಲ (ಸೋಮೇಶ್ವರ I)

ಶಕ 966, ತಾರಣ, ವೈಶಾಖ ಶು. 5, ಬೃಹಸ್ಪತಿವಾರ = ಕ್ರಿ.ಶ. 1044, ಏಪ್ರಿಲ್ 5, ಗುರುವಾರ

ಕನ್ನಡ

ತ್ರೈಲೋಕ್ಯಮಲ್ಲ-ನನ್ನಿ-ನೊಳಂಬಾಧಿರಾಜನ ಪಟ್ಟಾಭಿಷೇಕ ನಡೆದಾಗ ಬಲ್ಲಕುಂದೆ-300ರಲ್ಲಿರುವ ಕಪ್ಪೆಕಲ್ಲಿನ ಮುಖ್ಯಸ್ಥ ಪುಲಿಯಣ್ಣ ಮತ್ತು ಒದೆಯಾದಿತ್ಯದೇವನ ಸಾಮಂತನಾಗಿದ್ದ ಪಲ್ಲವರಸನು ಕಪ್ಪೆಕಲ್ಲು ಗ್ರಾಮವನ್ನು ಜೇಷ್ಠರಾಶಿ ಭಳಾರರಿಗೆ, 8 ಮತ್ತರು ಭೂಮಿಯನ್ನು ಮಹಾದೇವ ದೇವರಿಗೆ ಮತ್ತು 8 ಮತ್ತರು ಭೂಮಿಯನ್ನು ಮಠಕ್ಕೆ ದಾನ ನೀಡಿದ್ದನ್ನು ತಿಳಿಸುತ್ತದೆ. ಅಲ್ಲದೆ ಒಂದು ತೋಟ, ಎಣ್ಣೆ ಗಾಣವನ್ನೂ ಮತ್ತು ಶ್ರೀಧರಯ್ಯನಿಗೆ ಬ್ರಹ್ಮಪುರಿ ಭೂಮಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 232; ಸೌಇಇ, IX i, ಸಂ. 98.

ಸೋಮಲಾಪುರ

ಸಂ. 83

ಗ್ರಾಮದಲ್ಲಿ ಬಾವಿಯ ಹತ್ತಿರ ಕಲ್ಲಿನ ಮೇಲೆ

ನೊಳಂಬ, ಕಾಂಚೀಪುರವರೇಶ್ವರ ಕನಕರಸ

ಶಕ 953, ಪ್ರಮೋದ, ಆಷಾಢ ಬ. 10, ಆದಿತ್ಯವಾರ = ಕ್ರಿ.ಶ. 1030, ಜೂನ್ 28, ಆದಿತ್ಯವಾರ

ಕನ್ನಡ

ಅರಕೆರೆಯ ಮಹಾದೇವರ ಸೇವೆಗೆ ಅರಸನು ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 197; ಸೌಇಇ, IX i, ಸಂ. 43.

ಸಂ. 84

ಕುರುಬ ರೈತನಿಂದ ಪಡೆದುಕೊಂಡ ತಾಮ್ರಪತ್ರ

ವಿಜಯನಗರ, ವಿರೂಪಾಕ್ಷ

ಶಕ 1389, ಸರ್ವಜಿತ್, ಕಾರ್ತಿಕ ಶು. 12 = ಕ್ರಿ.ಶ. 1467, ನವಂಬರ್ 9, ಸೋಮವಾರ

ಸಂಸ್ಕೃತ, ನಾಗರಿ

ನಿಟ್ಟೂರಿನ ನಿವಾಸಿಯಾದ ಒಬ್ಬ ಬ್ರಾಹ್ಮಣನಿಗೆ ಹಸ್ತಿನಾವತಿ-ವಳಿತದ ಉಪ-ವಿಭಾಗವಾದ ಮೂಡನಾಡಿನ ಯಮ್ಮೆಗನೂರು ಗ್ರಾಮವನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ. ಇನ್ನೊಬ್ಬ ಬ್ರಾಹ್ಮಣ ವಿರೂಪಾಕ್ಷಾರ್ಯನಿಗೆ ಕೃಷ್ಣತಟಾಕ ಮತ್ತು ಕರಿಯಕೆರೆಯ ಕೆಳಗೆ ಇರುವ ಭೂಮಿಯನ್ನು ಮತ್ತು ಚಿಟುಕನಹಾಳು ಗ್ರಾಮದಲ್ಲಿರುವ ಭೂಮಿಯನ್ನೂ ದಾನ ನೀಡಿದ್ದನ್ನು ತಿಳಿಸುತ್ತದೆ. ವಿರೂಪಾಕ್ಷಪುರಂ ಎಂದು

ಬದಲಾವಣೆ ಹೊಂದಿದ ಸೋಮಲಾಪುರವನ್ನು ವೀರಣಾರ್ಯನಿಗೆ ದಾನ ನೀಡಿದ್ದನ್ನು ಮತ್ತು ಈತ ಈ ಭೂಮಿಯನ್ನು ಇತರ ಬ್ರಾಹ್ಮಣರಿಗೆ ಹಂಚಿದ್ದನ್ನೂ ಉಲ್ಲೇಖಿಸುತ್ತದೆ.

ಆ್ಯರಿಎ, 1913-1914, ಸಂ. ಎ 2; ಎಇ, XVII, ಪು. 193-204.

ಸೋಮಸಮುದ್ರ

ಸಂ. 85

ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನದ ಮುಂದೆ ಮಣ್ಣಿನ ಗೋಡೆಯಲ್ಲಿ ಕಟ್ಟಿರುವ ಕಲ್ಲಿನ ಮೇಲೆ

ವಿಜಯನಗರ, ಸದಾಶಿವದೇವ

ಶಕ 1478, ನಳ, ಆಷಾಢ, ಶು. 11, ಗುರುವಾರ = ಕ್ರಿ.ಶ. 1556, ಜೂನ್ 18, ಗುರುವಾರ

ಕನ್ನಡ

ಈ ಗ್ರಾಮದ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಏಕಾದಶಿ ದಿನಗಳಂದು ನಡೆಯುವ ಪಲ್ಲಕ್ಕಿ ಉತ್ಸವಕ್ಕೆ ಹಸ್ತಿನಾವತಿ-ವಳಿತದ ಉಪವಿಭಾಗವಾದ ಮೂಗನಾಡ-ವೆಂಟೆಯದ ಉಪವಿಭಾಗವಾದ ಕುರುಗೋಡು ಸೀಮೆಯ ಸೋಮಸಮುದ್ರ ಅಗ್ರಹಾರದ ಮಹಾಜನರು ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 212; ಸೌಇಇ, IX ii, ಸಂ. 662.

ಸಂ. 86

ಗ್ರಾಮದ ಒಂದು ಹೊಲದಲ್ಲಿ ಬಂಡೆಯ ಮೇಲೆ

--

ಶಕ 161[4], ಆಂಗಿರಸ, ಚೈತ್ರ ಬ. 15, ಮಂಗಳವಾರ = ಕ್ರಿ.ಶ. 1692, ಏಪ್ರಿಲ್ 25, ಮಂಗಳವಾರ

ಕನ್ನಡ

ಹಾಳಾಗಿದೆ. ಸೋಮಸಮುದ್ರದ ನಿವಾಸಿಗಳು ಒಂದು ಬಾವಿ (ಗಜಾಗೊಂಡ)ವನ್ನು ಕಟ್ಟಿಸಿದ ಉಲ್ಲೇಖವಿದೆ.

ಆ್ಯರಿಎ, 1913-14, ಸಂ. 1913 ರ 213.

ಯಳಪಿ

ಸಂ. 87

ಆಂಜನೇಯ ದೇವಸ್ಥಾನದ ಮುಂದೆ ಒಂದು ಕಲ್ಲಿನ ಮೇಲೆ

ವಿಜಯನಗರ, ಅಚ್ಯುತರಾಯ

ಶಕ 1451, ವಿರೋಧಿ, ಮಾಘ ಶು. 1[1] = ಕ್ರಿ.ಶ. 1530, ಜನವರಿ 9, ಆದಿತ್ಯವಾರ

ಕನ್ನಡ

ಕೃಷ್ಣರಾಯನಿಂದ ಕುದುರೆಗಳನ್ನು ಸಾಕಲು, ತನಗೆ ದಾನವಾಗಿ ಬಂದ ಮುಖಾಸ-ಗ್ರಾಮ ಯಳಪೆಯಿಂದ ಬರುವ ಆದಾಯದಲ್ಲಿ 36 ವರಹಗಳನ್ನು ದಣ್ಣಾಯಕರ ತಿಮ್ಮರಸನು ಸತ್ರದಲ್ಲಿ ಹನ್ನೆರಡು ಜನ ಬ್ರಾಹ್ಮಣರ ಊಟದ ವ್ಯವಸ್ಥೆಗಾಗಿ ದಾನ ನೀಡಿದ್ದನ್ನು ತಿಳಿಸುತ್ತದೆ. ಈ ದಾನವನ್ನು ಅರಸ ಅಚ್ಯುತರಾಯ ಮಹಾರಾಯನಿಗೆ ಪುಣ್ಯವಾಗಲೆಂದು ಮಾಡಲಾಯಿತು.

ಆ್ಯರಿಎ, 1913-14, ಸಂ. 1913 ರ 216; ಸೌಇಇ, IX ii, ಸಂ. 529.

ಸಂ. 88

ಆಂಜನೇಯ ದೇವಸ್ಥಾನದ ಹತ್ತಿರ ಇನ್ನೊಂದು ಕಲ್ಲಿನ ಮೇಲೆ

ವಿಜಯನಗರ, ಕೃಷ್ಣರಾಯ

ಶಕ 1431, ಶುಕ್ಲ, ಮಾಘ ಬ. 14, ಶಿವರಾತ್ರಿ = ಕ್ರಿ.ಶ. 1510, ಫೆಬ್ರವರಿ 7, ಗುರುವಾರ

ಕನ್ನಡ

ಹಾಳಾಗಿದೆ. ಅರಸನಿಗೆ ಪುಣ್ಯವಾಗಲೆಂದು ಮದುವೆಗೆ ವಿಧಿಸುತ್ತಿದ್ದ ತೆರಿಗೆಯನ್ನು ವಿನಾಯಿತಿ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 217; ಸೌಇಇ, IX ii, ಸಂ. 480.

ಸಂ. 89

ಆಂಜನೇಯ ದೇವಸ್ಥಾನದ ಹತ್ತಿರ ಕಲ್ಲು ಬಂಡೆಯ ಮೇಲೆ

ವಿಜಯನಗರ, ಸದಾಶಿವದೇವ

ಶಕ 1465, ಶೋಭಕೃತ, ಫಾಲ್ಗುಣ ಶು, 10 = ಕ್ರಿ.ಶ. 1544, ಮಾರ್ಚ್ 4, ಮಂಗಳವಾರ

ಕನ್ನಡ

ಅರಸನ ಕಾರ್ಯಕರ್ತ ಮಹಾಮಂಡಲೇಶ್ವರ ರಾಮರಾಜಯ್ಯದೇವ ಮಹಾಅರಸು ಯಳಪ್ಪೆಯ-ಸೀಮೆಯ ಕ್ಷೌರಿಕರಿಗೆ ಸಿದ್ಧಾಯ, ತೆರಿಗೆ, ಬಿಟ್ಟಿ, ಬಿರಾಡ ಮತ್ತು ಇತರ ತೆರಿಗೆಗಳ ವಿನಾಯಿತಿ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 218; ಸೌಇಇ, IX ii, ಸಂ. 608.

ಯಳಪಿಕಗ್ಗಲ್ಲು

ಸಂ. 90

ಆಂಜನೇಯ ದೇವಸ್ಥಾನದ ಮುಂದೆ ಕಲ್ಲಿನ ಮೇಲೆ

ವಿಜಯನಗರ, ಸದಾಶಿವದೇವ

ಶಕ 1485, ರುಧಿರೋದ್ಗಾರಿ, ಚೈತ್ರ ಶು. 10, ಶು[ಕ್ರವಾರ] = ಕ್ರಿ.ಶ. 1563, ಏಪ್ರಿಲ್ 2, ಶುಕ್ರವಾರ

ಕನ್ನಡ

ಮಹಾಮಂಡಲೇಶ್ವರ ತಿರುಮಲರಾಜಯ್ಯ-ಮಹಾಅರಸನ ಮಗ ರಘುನಾಥರಾಜಯ್ಯನು ಕೇಮನ-ಬೆಳಗಲ್ಲಿನ ಸಿದ್ದೇಶ್ವರ ದೇವಸ್ಥಾನಕ್ಕೆ ನಳ ಸಂವತ್ಸರ (ಕ್ರಿ.ಶ. 1556)ದಲ್ಲಿ ಕಗ್ಗಲ್ಲಿನಲ್ಲಿ ಮಾಡಿದ ಭೂಮಿ ದಾನವನ್ನು ದೃಢೀಕರಿಸಿದ್ದನ್ನು ತಿಳಿಸುತ್ತದೆ. ದಾನ ನೀಡಿದ ಈ ಭೂಮಿಯು ರಾಯದುರ್ಗ-ಸೀಮೆಯಲ್ಲಿ ಹಗರಿ ನದಿಯ ದಂಡೆಯ ಮೇಲಿರುವ ಕಗ್ಗಲ್ಲಿನಲ್ಲಿತ್ತೆಂದು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 215; ಸೌಇಇ, IX ii, ಸಂ. 677.

ಯೆತ್ತಿನ ಬೂದಿಹಾಳು

ಸಂ. 91

ಆಂಜನೇಯ ದೇವಸ್ಥಾನದ ಮುಂದಿನ ಕಲ್ಲಿನ ಮೇಲೆ

--

ಚಾಲುಕ್ಯ-ವಿಕ್ರಮ ವರ್ಷ 32, ಸರ್ವಜಿತ, ಕಾರ್ತಿಕ ಶು. 5, ಶುಕ್ರವಾರ = ಕ್ರಿ.ಶ. 1107, ಅಕ್ಟೋಬರ್ 22, ಮಂಗಳವಾರ

ಕನ್ನಡ

ಸೋವರಸ-ಕಾವರಸ ಮತ್ತು ದುರ್ಗರಾಜರು ಬಹುಶಃ ಯಾತ್ರಿಕರ ಉಪಯೋಗಕ್ಕಾಗಿ ಒಂದು ಮಂಟಪವನ್ನು ಕಟ್ಟಿಸಿ, ಅದರ ನಿರ್ವಹಣೆಗೆ ಭೂಮಿ ದಾನ ನೀಡಿದ ಉಲ್ಲೇಖವಿದೆ.

ಆ್ಯರಿಎ, 1913-14, ಸಂ. 1913 ರ 224.

ಸಂ. 92

ಆಂಜನೇಯ ದೇವಸ್ಥಾನದ ಮುಂದೆ ಇನ್ನೊಂದು ಕಲ್ಲಿನ ಮೇಲೆ

ವಿಜಯನಗರ, ಕೃಷ್ಣರಾಯ

ಶಕ 1445 (1440) ಬಹುಧಾನ್ಯ, ಶ್ರಾವಣ ಬ. 10 = ಕ್ರಿ.ಶ. 1518, ಆಗಸ್ಟ್ 1, ರವಿವಾರ

ಕನ್ನಡ

ಅಪೂರ್ಣವಾಗಿದೆ.

ಆ್ಯರಿಎ, 1913-14, ಸಂ. 1913 ರ 225; ಸೌಇಇ, IX ii, ಸಂ. 509.

ಸಂ. 93

ಬಸವೇಶ್ವರ ದೇವಸ್ಥಾನದ ಮುಂದೆ ಬಿದ್ದಿರುವ ಕಲ್ಲಿನ ಮೇಲೆ

--

ಪ್ರಾಚೀನ ಲಿಪಿಯಲ್ಲಿದೆ

ಕನ್ನಡ

ಬಹಳ ಹಾಳಾಗಿದೆ. ಸಳುಕಿ ಎರೆಯಮ್ಮ ಮತ್ತು ಒಂದು ಕಲ್ಲನ್ನು ಸೀಳಿದ ಆತನ ಸೇವಕನ ಬಗ್ಗೆ ತಿಳಿಸುತ್ತದೆ. ಬಹುಶಃ ಬುದವಾಗಿಲು 8000ರು ಮಾಡಿದ ಭೂಮಿ ದಾನವನ್ನು ದಾಖಲಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 226.

ಹಡಗಲಿ ತಾಲೂಕು

ಬನ್ನಿಮಟ್ಟಿ

ಸಂ. 94

ಈಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿರುವ ಕಂಬದ ಮೇಲೆ

--

--

ಕನ್ನಡ (ಪ್ರಾಚೀನ)

ಚಂದನ ಎಂಬ ವೀರ ಪುರುಷನ ಮರಣದ ಉಲ್ಲೇಖವಿದೆ.

ಆ್ಯರಿಎ, 1914-15, ಸಂ. 1914 ರ 469.

ಬಸರಕೋಡು
(ಶಿವಲಿಂಗನಹಳ್ಳಿಯ ಉಪ ಗ್ರಾಮ)

ಸಂ. 95

ಕಲ್ಲೇಶ್ವರ ದೇವಾಲಯದ ಮುಂದೆ ನಿಲ್ಲಿಸಿದ ವೀರಗಲ್ಲಿನ ಮೇಲೆ

ವಿಜಯನಗರ, ಬುಕ್ಕರಾಯ

ಶಕ 1295, ಪರಿಧಾವಿ, ಪ್ರಥಮ-ಭಾದ್ರಪದ ಬ. 12, ಗು[ರುವಾರ] = ಕ್ರಿ.ಶ. 1372, ಆಗಸ್ಟ್ 26, ಗುರುವಾರ

ಕನ್ನಡ

ಪ್ರಧಾನಿ ಕೇಚರಿದೇವನು ಸೈನ್ಯದ ನೇತೃತ್ವವಹಿಸಿ ಮುನ್ನಡೆಸಿದಾಗ ಚಂದಪನು ಮರಣ ಹೊಂದಿದನೆಂದು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 259; ಸೌಇಇ, IX ii, ಸಂ. 414.

ದೇವಗೊಂಡನಹಳ್ಳಿ

ಸಂ. 96

ಈಶ್ವರ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಂಬದ ಮೇಲೆ

--

ಶಕ 1678, ವ್ಯಯ, ಚೈತ್ರ ಶು. 1 = ಕ್ರಿ.ಶ. 1755, ಮಾರ್ಚ್ 13, ಗುರುವಾರ (ಶಕ 1677, ಯುವ, ಚೈತ್ರ ಶು. 1)

ಕನ್ನಡ

ಬಾಗಳಿಯ ಮುಮ್ಮಡಿ ಬಸವಪ್ಪನಾಯಕನು ರಾಮಣ್ಣನಾಯಕನಿಗೆ ದೇವಗೊಂಡನಹಳ್ಳಿ ಗ್ರಾಮವನ್ನು ದಾನ ಮಾಡಿದ ಉಲ್ಲೇಖವಿದೆ.

ಆ್ಯರಿಎ, 1914-15, ಸಂ. 1914 ರ 465.

ಹಗರನೂರು

ಸಂ. 97

ಕೆರೆಯ ದಂಡೆಯ ಹತ್ತಿರ ಹೊಲದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ವಿಜಯನಗರ, ಸದಾಶಿವರಾಯ

ಶಕ 1469, ಪ್ಲವಂಗ, ಕಾರ್ತಿಕ ಶು. 2, ಬುಧವಾರ = ಕ್ರಿ.ಶ. 1547, ಅಕ್ಟೋಬರ್ 15, ಶನಿವಾರ

ಕನ್ನಡ

ಬಯಪ-ನಾಯಕನ ಮಗ ಕೃಷ್ಣಪ್ಪ-ನಾಯಕನಿಗೆ ಪುಣ್ಯವಾಗಲೆಂದು ಮುದುಗಂದಲ ತಮ್ಮರಸ-ನಾಯಕನ ಮಗ ಬೆಮ್ಮನಾಯಕನು ಮಯಿಲಾರದ ಕಪಿಲಮುನಿ-ಹೆಗ್ಗಪ-ಶಿವಾಚಾರ್ಯ-ವೊಡೆಯನ ಮಗ ವರುಣಕಾಂತವೊಡೆಯನಿಗೆ ಕೊಟೂರ-ಸೀಮೆಯಲ್ಲಿರುವ ರಂಗಾಪುರ-ಸ್ಥಳದಲ್ಲಿಯ ಅಮರಗೆರೆ ಗ್ರಾಮವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 260; ಸೌಇಇ, IX ii, ಸಂ. 626.

ಹಾಳು-ತಿಮ್ಮಲಾಪುರ

ಸಂ. 98

ಗ್ರಾಮದ ಹತ್ತಿರ ಕಾಲುವೆಯಲ್ಲಿ ಬಿದ್ದಿರುವ ಕಲ್ಲಿನ ಮೇಲೆ

--

ಶಕ 1634, ನಂದನ, ಆಶ್ವಿಜ ಶು. 5 = ಕ್ರಿ.ಶ. 1712, ಸೆಪ್ಟೆಂಬರ್ 24, ಬುಧವಾರ

ಕನ್ನಡ

ಮರಿಯಣ್ಣನ ಮಗ ಬರಮಯ್ಯನಿಗೆ ಬಾಗಳಿಯ ಹತಿಯಮ್ಮಾಜಿಯು ಹಂವಿನ (ಹೂವಿನ)-ಹಡಗಲಿ ಒಳಗಿನ ತಿಮ್ಮಲಾಪುರ ಗ್ರಾಮದಲ್ಲಿಯ 250 ವರಹ ಬೆಲೆಯ 10 ಖಂಡುಗ ಭೂಮಿಯನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 492.

ಹಿರೇಹಡಗಲಿ

ಸಂ. 99

ವ್ಯಾಪಾರಿ ಚೆನ್ನಪ್ಪನಿಂದ ಕೊಂಡ ತಾಮ್ರಪಟಗಳು

ಪಲ್ಲವ, ಶಿವಸ್ಕಂದವರ್ಮ

ಆತನ ಆಡಳಿತದ 8ನೇ ವರ್ಷ

ಪ್ರಾಕೃತ, ಬ್ರಾಹ್ಮಿ

ಚಿಲ್ಲರೆಕಕೊಡುಂಕ ಅಥವಾ ಚಿಲ್ಲೆರಕಕೊಡುಂಕ ಗ್ರಾಮದ ಭೋಜಕರಾದ ಆಪಿಟ್ಟಿ ಅಥವಾ ಆಪಿಟ್ಟೀಯಲ್ಲಿ ವಾಸಿಸಿದ ಬ್ರಾಹ್ಮಣರಿಗೆ ಬಪ್ಪದ ಅಧಿಪತಿಯಾದ ಅರಸನು ಮೊದಲೇ ನೀಡಿದ ದಾನವನ್ನು ಅರಸನು ಧೃಢೀಕರಿಸಿದ್ದನ್ನು ಮತ್ತು ದಾನವನ್ನು ವೃದ್ಧಿಸಿದ್ದನ್ನು ತಿಳಿಸುತ್ತದೆ. ಚಿಲ್ಲೆರಕಕೊಡುಂಕ ಗ್ರಾಮವು ಸಾತಾಹನಿ (ರಟ್ಠ) ಜಿಲ್ಲೆಯಲ್ಲಿತ್ತು. ಈ ದಾನವು ಚಿಲ್ಲರೆಕಕೋಡುಂಕದಲ್ಲಿ ಒಂದು ತೋಟ,

ಅದರ ಆದಾಯವನ್ನು ವಿವರಿಸಿದ ರೀತಿಯಲ್ಲಿ ವಿಂಗಡಿಸಲ್ಪಟ್ಟು, ಆಪಿಟ್ಟಿಯಲ್ಲಿ ಎರಡು ತುಂಡು ಭೂಮಿ ಮತ್ತು ಕೆಲವು ಆಳುಗಳನ್ನೊಳಗೊಂಡಿತ್ತು.

ಎಇ, I, ಸಂ. I, ಪು. 2-10.

ಸಂ. 100

ಕಲ್ಲೇಶ್ವರ ದೇವಸ್ಥಾನದಲ್ಲಿ ಸರಸ್ವತಿ ವಿಗ್ರಹದ ಪೀಠದ ಮೇಲೆ

--

11ನೇ ಶತಮಾನ

ಕನ್ನಡ

ವೈನತೇಯ, ಆಂಜನೇಯ ಮತ್ತು ಕಾರ್ತ್ತಿಕೇಯರೊಂದಿಗೆ ಹೋಲಿಸಲ್ಪಟ್ಟ ಒಬ್ಬ ವ್ಯಕ್ತಿಯ ಹೊಗಳಿಕೆಯಿದೆ.

ಆ್ಯರಿಎ, 1914-15, ಸಂ. 1914 ರ 493; ಆ್ಯರಿಇಎ, 1949-50, ಸಂ. ಬಿ 199.

ಸಂ. 101

ಅದೇ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ

(i) ಶಕ 978, ಹೇಮಳಂಬಿ, ವೈಶಾಖ, ಪುಣ್ಣಮಿ, ಆದಿತ್ಯವಾರ, ಸೋಮಗ್ರಹಣ = ಕ್ರಿ.ಶ. 1057, ಏಪ್ರಿಲ್ 21, ಸೋಮವಾರ, (ಚಂದ್ರಗ್ರಹಣ ಚೈತ್ರದಲ್ಲಿ, ಅಂದರೆ ಮಾರ್ಚ್ 23, ಆದಿತ್ಯವಾರ ಸಂಭವಿಸಿದೆ)

(ii) ಚಾಲುಕ್ಯ-ವಿಕ್ರಮ ವರ್ಷ 31, ಸರ್ವಜಿತ್, ಚೈತ್ರ ಅಮವಾಸ್ಯೆ, ಸೋಮವಾರ, ಸೂರ್ಯಗ್ರಹಣ, ವಿಶು-ಸಂಕ್ರಮಣ = ಕ್ರಿ.ಶ. 1107, ಮಾರ್ಚ್ 25, ಸೋಮವಾರ

ಕನ್ನಡ

ಆಹವಮಲ್ಲನ ಮಗ ಯುವರಾಜ ವಿಕ್ರಮಾದಿತ್ಯ ಗಂಗ-ಪೆರ್ಮಾಡಿಯು ಗಂಗವಾಡಿ-96000, ಬನವಾಸಿ-12000 ಮತ್ತು ನೊಳಂಬವಾಡಿ-32000 ಪ್ರಾಂತಗಳನ್ನು ಆಳುತ್ತಿದ್ದ. ಮಹಾಮಾತ್ಯ ದೇಮರಸನು ಜನಮೇಜಯನ ಕಾಲದಿಂದಲೂ ಬ್ರಾಹ್ಮಣರ ಗ್ರಾಮವಾದ ಪೊಸ-ವಡಂಗಿಲೆಯಲ್ಲಿ ಒಂದು ದೇವಸ್ಥಾನ ಕಟ್ಟಿಸಿ, ದೇಮೇಶ್ವರ ದೇವರನ್ನು ಪ್ರತಿಷ್ಠಾಪಿಸಿದನು. ಮೇಲೆ ತಿಳಿಸಿದ ಎರಡನೆ ದಿನಾಂಕದಂದು ದಂಡನಾಯಕ ಮಾಚಿದೇವನು ಅದೇ ದೇವರ ಸೇವೆಗೆ ತೆರಿಗೆ-ಆದಾಯವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಕೊನೆಯಲ್ಲಿ ಹೊಯ್ಸಳ ಅರಸ ವಿಷ್ಣು ಅಥವಾ ವೀರ-ವಿಷ್ಣು ತ್ರಿಭುವನಮಲ್ಲ ಭೂಮಿ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 494; ಸೌಇಇ, IX i, ಸಂ. 118.

ಸಂ. 102

ಅದೇ ದೇವಸ್ಥಾನದ ಮುಂದೆ ನಿಲ್ಲಿಸಿದ ಇನ್ನೊಂದು ಕಲ್ಲಿನ ಮೇಲೆ

ಹೋಯ್ಸಳ, ವಿಷ್ಣುರ್ಧನ-ವೀರ-ಬಲ್ಲಾಳದೇವ (II)

ಶಕ 1133, ಪ್ರಜಾಪತಿ, ಮಾಘ ಶು. 3, ಆದಿತ್ಯವಾರ = ಕ್ರಿ.ಶ. 1212, ಜನವರಿ 8, ಆದಿತ್ಯವಾರ

ಕನ್ನಡ

ಅರಸನು ನೊಳಂಬವಾಡಿ-32000, ಬನವಾಸಿ-12000, ಹುಲಿಗೆರೆ-300, ಹೆದ್ದೊರೆವರೆಗಿನ ಎರಡು ಬೆಳುವಲ ಮತ್ತು ಮಾಸವಾಡಿಗಳನ್ನು ತನ್ನ ನೆಲೆವೀಡು ಹಳ್ಳವೂರ ಅಥವಾ ವಿಜಯಸಮುದ್ರದಿಂದ ಆಳುತ್ತಿದ್ದನೆಂದು ತಿಳಿಸುತ್ತದೆ. ಆತನ ರಾಣಿ (ಪಟ್ಟದರಸಿ) ಪದುಮಲದೇವಿ ಹೊಸಹಡಂಗಿಲೆಯನ್ನು ಆಳುತ್ತಿದ್ದಳು. ದೇವಣ್ಣ ದಂಡನಾಯಕನು ಹಿರಿಯಕೆರೆ ಮತ್ತು ತುಂಬಿನಕೆರೆ ಎಂಬ ಎರಡು ಕೆರೆಗಳಿಗೆ ಭೂಮಿ ದಾನ ಮಾಡಿದ್ದನ್ನೂ ತಿಳಿಸುತ್ತದೆ.

ಆರಿಎ, 1914-15, ಸಂ. 1914 ರ 495; ಸೌಇಇ, IX i, ಸಂ. 330.

ಸಂ. 103

ಅದೇ ದೇವಸ್ಥಾನದ ದಕ್ಷಿಣ ಗೋಡೆಯ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ [1]081, ಬಹುಧಾನ್ಯ, ವೈಶಾಖ ಪೌರ್ಣಮಾಸೆ, ಚಂದ್ರಗ್ರಹಣ = ಕ್ರಿ.ಶ. 1158, ಏಪ್ರಿಲ್ 15, ಮಂಗಳವಾರ

ಕನ್ನಡ

ಪಶ್ಚಿಮ ಚಾಲುಕ್ಯರ ವಂಶಾವಳಿಯಿದ್ದು ಪೆರ್ಮ-(ಜಗದೇಕಮಲ್ಲ II)ನ ಹೆಸರಿನೊಂದಿಗೆ ಕೊನೆಗೊಂಡಿದೆ. ಮಹಾಮಂಡಲೇಶ್ವರ ವೀರ-ಪಾಂಡ್ಯದೇವನು ಕದಂಬಳಿಗೆ-1000, ಬಲ್ಲಕುಂದೆ-300 ಮತ್ತು ಕೋಗಳಿ-500ಗಳನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಈತನ ಚಿಕ್ಕಪ್ಪ(ದೊಡ್ಡಪ್ಪ) ವಿಕ್ರಮ-ಪಾಂಡ್ಯನು ತನ್ನ ಪತ್ನಿ ಬಾಚಲದೇವಿ ಮತ್ತು ಮಗಳು ಮಹಾದೇವಿಯರಸಿಯರಿಗೆ ಪುಣ್ಯವಾಗಲೆಂದು ಭೂಮಿದಾನ ನೀಡಿದ್ದನ್ನು ದಾಖಲಿಸುತ್ತದೆ.

ಆರಿಎ, 1914-15, ಸಂ. 1914 ರ 496.

ಸಂ. 104

ವೀರಭದ್ರ ದೇವಸ್ಥಾನದ ಮುಂದೆ ಬಿದ್ದಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

ಶಕ 772, ಪ್ರಜಾಪತಿ, ಪುಷ್ಯ ಅಮಾವಾಸ್ಯೆ, ಸೋಮವಾರ, ವ್ಯತಿಪಾತ, ಉತ್ತರಾಯಣ-ಸಂಕ್ರಮಣ = ಕ್ರಿ.ಶ. 850, ಡಿಸೆಂಬರ್ 22, ಸೋಮವಾರ (ಪ್ರಮೋದ)

ಕನ್ನಡ

ಆರನೆಯ ತ್ರಿಭುವನಮಲ್ಲ ವಿಕ್ರಮಾದಿತ್ಯನ ಕಾಲದ ಲಿಪಿಯಲ್ಲಿದೆ. ಯದು ವಂಶದ ಅರಸ ಮಹೇಂದ್ರನು ಹೊಸ-ವಡಂಗಿಲೆಯ ಮೂಲಸ್ಥಾನ ದೇವರ ದೇವಸ್ಥಾನಕ್ಕೆ ಭೂಮಿ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಮಲಿಯಣ್ಣನು ಅದೇ ವರ್ಷ ಚೈತ್ರ ಶು. ಪಡಿ[ವೆ] (ಪ್ರಥಮ), ಸೋಮವಾರದಂದು ಮಲ್ಲಿಕಾರ್ಜುನ ದೇವರ ದೇವಸ್ಥಾನಕ್ಕೆ ಹಳುಗಿ ಮತ್ತು ಇತರ ಪ್ರದೇಶಗಳಲ್ಲಿ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆರಿಎ, 1914-15, ಸಂ. 1914 ರ 497.

ಸಂ. 105

ಗ್ರಾಮದಲ್ಲಿಯ ಬಡಿಗೇರ ವೀರಭದ್ರಪ್ಪನ ಮನೆಯ ಮುಂದೆ ಬಿದ್ದಿರುವ ಕಲ್ಲಿನ ಮೇಲೆ

--

ಶಕ 1187, ಕ್ರೋಧನ, ಚೈತ್ರ ಬ. 5, ಗುರುವಾರ = ಕ್ರಿ.ಶ. 1265, ಏಪ್ರಿಲ್ 7, ಮಂಗಳವಾರ

ಕನ್ನಡ

(ಹೊಸ ಹಡಂಗಿಲೆಯ) 120 ಜನ ನಿವಾಸಿಗಳು, ಬೆಣ್ಣೆವೂರಿನ ಮಾಧವದೇವ ಮತ್ತು ಗೋಪಾಲದೇವರ ದೇವಸ್ಥಾನಗಳಿಗೆ ಸೇರಿದ ಮನೆ ನಿವೇಶನಗಳಿಗೆ ಸಂಬಂಧಪಟ್ಟ ಒಪ್ಪಂದ ಮಾಡಿಕೊಂಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 498.

ಸಂ. 106

ಅದೇ ಕಲ್ಲಿನ ಮೇಲೆ

--

ಶಕ 1201, ಪ್ರಮಾದಿ, ವೈಶಾಖ ಶು. 15, ಸೋಮವಾರ, ಸಂಕ್ರಮಣ-ವ್ಯತಿಪಾತ = ಕ್ರಿ.ಶ. 1279, ಮೇ 3, ಶುಕ್ರವಾರ (ವೈಶಾಖ ಶು. 5 = ಏಪ್ರಿಲ್ 17, ಸೋಮವಾರ)

ಕನ್ನಡ

ಹೊಸ-ಹಡಂಗಿಲಿಯ ನಾಗರಿಕರು (ಮಹಾಜನರು) ಬೆಣ್ಣೆವೂರಿನ ಮಾಧವದೇವರ ದೇವಸ್ಥಾನಕ್ಕೆ ಭೂಮಿಯನ್ನು ಕೊಡಲು ಒಪ್ಪಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 499.

ಸಂ. 107

ಗ್ರಾಮದಲ್ಲಿ ಪುರಾಣದ ಚನ್ನವೀರಪ್ಪನ ಮನೆಯ ಹಿತ್ತಲದಲ್ಲಿ ಬಿದ್ದಿರುವ ಒಡೆದ ಕಲ್ಲಿನ ಮೇಲೆ

--

. . . . ಫಾಲ್ಗುಣ, ಶು. 3

ಕನ್ನಡ

ವ್ಯಾಪಾರಿ (ನಗರ)ಗಳು ನಗರೇಶ್ವರ ದೇವರ ದೇವಸ್ಥಾನಕ್ಕೆ ಭೂಮಿದಾನ ನೀಡಿದ್ದನ್ನು ದಾಖಲಿಸುವಂತೆ ತೋರುತ್ತದೆ.

ಆ್ಯರಿಎ, 1914-15, ಸಂ. 1914 ರ 500.

ಹೊಳಗೊಂದಿ

ಸಂ. 108

ಬಲ್ಲೇಶ್ವರ ದೇವಸ್ಥಾನದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ (ವಿಕ್ರಮಾದಿತ್ಯ VI)

ಚಾಲುಕ್ಯ-ವಿಕ್ರಮ ವರ್ಷ 17, ಶ್ರೀಮುಖ, ಭಾದ್ರಪದ, ಅಮಾವಾಸ್ಯೆ, ಬೃಹಸ್ಪತಿವಾರ, ಸೂರ್ಯಗ್ರಹಣ, ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1093, ಸೆಪ್ಟೆಂಬರ್ 23, ಶುಕ್ರವಾರ

ಕನ್ನಡ

ಮಹಾಸಾಮಂತ ಚಾವುಂಡರಸನ ಮಗ ಮಹಾಮಂಡಲೇಶ್ವರ ಗಂಗರಸನು ತನ್ನ ತಂದೆ ಕಟ್ಟಿಸಿದ ಬಾಳೇಶ್ವರ ದೇವಸ್ಥಾನಕ್ಕೆ ಭೂಮಿ ದಾನ ಮಾಡಿದ್ದನ್ನು ದಾಖಲಿಸುತ್ತದೆ. ಗಂಗರಸನು ತನ್ನ ತಂದೆಯ ಮರಣದ ನಂತರ ಮಾಸವಾಡಿ-140, ಪೊಳಲ್‌ಗುಂದೆ, ಏಳುವರೆ

ಲಕ್ಷ (ಪ್ರದೇಶ)ದಲ್ಲಿ ಅಂಕಗದ್ಯಾಣ ಮತ್ತು ಅರಮನೆಯ ಸೇವಕರ (ಅರಮನೆಯ ಅಂಕ) ಭೂಮಿ ಆಸ್ತಿಯ (ಜೀವಿತ) ಮೇಲಿನ ದಸವಂದವನ್ನು ಅನುಭವಿಸುತ್ತಿದ್ದನೆಂದು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 527; ಸೌಇಇ, IX i, ಸಂ. 163.

ಸಂ. 109

ಸೋಮೇಶ್ವರ ದೇವಸ್ಥಾನದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

--, ವಿಜಯ ಪಾಂಡ್ಯದೇವ

4ನೇ ವರ್ಷ, ಸರ್ವಧಾರಿ, ಫಾಲ್ಗುಣ ಶು. ಪಂಚಮಿ, ಗುರುವಾರ, ಉತ್ತರಾಯಣ-ಸಂಕ್ರಾಂತಿ, ವ್ಯತಿಪಾತ (12ನೇ ಶತಮಾನ)

ಕನ್ನಡ

ಹೊಳಲಗುಂದೆಯ ಮುಖ್ಯಸ್ಥ ಮಲ್ಲಗಾವುಂಡನು ಮಲ್ಲಿನಾಥ ದೇವರ ದೇವಸ್ಥಾನ ಕಟ್ಟಿಸಿ ಅದರ ನಿರ್ವಹಣೆಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಈತನು ಬಳಿಯ-ಕುಲದಲ್ಲಿ ಹುಟ್ಟಿದ್ದನು.

ಆ್ಯರಿಎ, 1914-15, ಸಂ. 1914 ರ 528.

ಹೊಳಲು

ಸಂ. 110

ವೀರಭದ್ರ ದೇವಸ್ಥಾನದ ಆವರಣದೊಳಗೆ ಪ್ರವೇಶ ದ್ವಾರದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

11ನೇ ಶತಮಾನ

ಕನ್ನಡ

ಹಾಳಾಗಿದೆ ಮತ್ತು ತ್ರುಟಿತವಾಗಿದೆ. ದೇವರ (ಹೆಸರು ಇಲ್ಲ) ಸೇವೆಗೆ ಭೂಮಿ ದಾನ ನೀಡಿದ ಉಲ್ಲೇಖವಿದೆ. ಗಂಡರಾದಿತ್ಯ-ಪೊಳಲ ಗ್ರಾಮದ ಮಹಾಜನರು ಧಾರ್ಮಿಕ ವಿಧಿಗಳನ್ನು ಆಚರಿಸುತ್ತಿದ್ದರು ಮತ್ತು ಯೋಗಾಭ್ಯಾಸ ಮಾಡುತ್ತಿದ್ದರೆಂದು ತಿಳಿಸುತ್ತದೆ. ಅವರು ಶೂರ ಸೈನಿಕರೂ ಆಗಿದ್ದರು.

ಆ್ಯರಿಎ, 1914-15, ಸಂ. 1914 ರ 470; ಸೌಇಇ, IX i, ಸಂ. 285.

ಸಂ. 111

ಅದೇ ದೇವಸ್ಥಾನದ ಆವರಣದೊಳಗೆ ಪ್ರವೇಶದ್ವಾರದಲ್ಲಿ ನಿಲ್ಲಿಸಿದ ಇನ್ನೊಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

11ನೇ ಶತಮಾನ

ಕನ್ನಡ

ಅಪೂರ್ಣವಾಗಿದೆ. ಗಂಡರಾದಿತ್ಯನ-ಪೊಳಲ ಗ್ರಾಮದ ಕೊಯ್ಯೂಳಿದೇವ ಮತ್ತು 120 ಮಹಾಜನರು ಕೋಲೇಶ್ವರ ದೇವರ ದೇವಸ್ಥಾನಕ್ಕೆ ಗೌಡಗೆರೆಯಲ್ಲಿ 100 ಕಂಬ ಭೂಮಿಯನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 471; ಸೌಇಇ, IX i, ಸಂ. 286.

ಸಂ. 112

ಅದೇ ದೇವಸ್ಥಾನದ ಪೂರ್ವದ ಗೋಡೆಯ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಹೊಯ್ಸಳ, ವೀರಬಲ್ಲಾಳ (II)

ಶಕ 1116, ರಾಕ್ಷಸ, ಶ್ರಾವಣ ಶು. 13, ಆದಿವಾರ = ಕ್ರಿ.ಶ. 1194, ಜುಲೈ 31, ಆದಿವಾರ

ಕನ್ನಡ

ಹಾಳಾಗಿದೆ. ರಣರಂಗ-ಭೈರವ ಬಸವೆಯ ನಾಯಕನ ಮಗ ಚೌಡೆಯ ನಾಯಕನಿಗೆ ಮಹಾಜನರು ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 472; ಸೌಇಇ, IX i, ಸಂ. 321.

ಸಂ. 113

ಅದೇ ದೇವಸ್ಥಾನದ ಮೊಗಸಾಲೆಯಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1781, ಸಿದ್ಧಾರ್ಥಿ, ಆಶ್ವಿಜ ಶು... = ಕ್ರಿ.ಶ. 1859

ಕನ್ನಡ

ಹಿರೇಮಠದ ಗಂಗಾಧರಯ್ಯನು ವೀರಭದ್ರ ದೇವಸ್ಥಾನವನ್ನು ಕಟ್ಟಿಸಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 473.

ಸಂ. 114

ಅದೇ ದೇವಸ್ಥಾನದ ಮೊಗಸಾಲೆಯಲ್ಲಿ ನಿಲ್ಲಿಸಿದ ಎರಡನೆ ಕಲ್ಲಿನ ಮೇಲೆ

--

--

ಕನ್ನಡ

ಹಾಳಾಗಿದೆ. ಪ್ರಧಾನ ಹವಳಿ-ನಾಯಕ-ವಡೆಯನು ಕಲಿನಾಥ, ವುಮ್ಮಯ ಮತ್ತು ವೀರಭದ್ರ ದೇವಸ್ಥಾನಗಳನ್ನು ಹೊಳಲಿನಲ್ಲಿ ಕಟ್ಟಿಸಿದ (?) ಬಗ್ಗೆ ತಿಳಿಸುವಂತೆ ತೋರುತ್ತದೆ.

ಆ್ಯರಿಎ, 1914-15, ಸಂ. 1914 ರ 474.

ಸಂ. 115

ಅದೇ ದೇವಸ್ಥಾನದ ಪಶ್ಚಿಮ ಗೋಡೆಯ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಭುವನೈಕಮಲ್ಲದೇವ (ಸೋಮೇಶ್ವರ II)

ಶಕ 996, ಆನಂದ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1074, ಮೇ 31, ಮಂಗಳವಾರ

ಕನ್ನಡ

ಗಂಡರಾದಿತ್ಯನ-ಚತುರ್ವೇದಿಮಂಗಲ ಗ್ರಾಮದ 120 ಮಹಾಜನರು, ತೆಲ್ಲಿಗ, ಮುಮ್ಮುರಿದಂಡ ಮತ್ತು ಶೆಟ್ಟಿಗಳೊಡಗೂಡಿ ಗವರೇಶ್ವರ ದೇವರ ಸೇವೆಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಐನೂರು ಸ್ವಾಮಿಗಳು ವಾಣಿಜ್ಯ ಸರಕುಗಳ ಮೇಲಿನ ಕೆಲವು ತೆರಿಗೆಗಳನ್ನು ಸ್ವಸಂತೋಷದಿಂದ ದಾನ ಮಾಡಿದ್ದನ್ನೂ ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 475; ಸೌಇಇ, IX i, ಸಂ. 139.

ಸಂ. 116

ಅದೇ ಕಲ್ಲಿನ ಮೇಲೆ

--

ಶಕ 996, ಆನಂದ, ಪುಷ್ಯ ಶು. 2, ಬುಧವಾರ, ಉತ್ತರಾಯಣ ಸಂಕ್ರಾಂತಿ = ಕ್ರಿ.ಶ. 1074, ಡಿಸೆಂಬರ್ 24, ಬುಧವಾರ

ಕನ್ನಡ

ಅಪೂರ್ಣವಾಗಿದೆ.

ಆ್ಯರಿಎ, 1914-15, ಸಂ. 1914 ರ 475-ಎ, ಸೌಇಇ, IX i, ಸಂ. 140.

ಸಂ. 117

ಅದೇ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ (II)

5ನೇ ವರ್ಷ, ದುಂದುಭಿ, ಆಷಾಢ ಶು. 1, ಸೋಮವಾರ, ವ್ಯತಿಪಾತ, ಸಂಕ್ರಮಣ = ಕ್ರಿ.ಶ. 1142, ಮೇ 27, ಬುಧವಾರ

ಕನ್ನಡ

ವೀರಪಾಂಡ್ಯದೇವನ ಅಧೀನ ಅಧಿಕಾರಿ ಅಣುಕ ಪಲ್ಲವರಾಯ, ಸಾವಿದೇವ ಮತ್ತು ಆತನ ತಂದೆ ಉಯ್ಯವಂದ-ದಂಡನಾಯಕ ಗಂಡರಾದಿತ್ಯನ-ಹೊಳಲ ಅದೇ ದೇವಸ್ಥಾನಕ್ಕೆ ಮೂರು ಲಕ್ಷ ಅಡಕೆಯ ಸುಂಕ, ವಡ್ಡರಾವುಳ ಮತ್ತು ಹೆಜ್ಜುಂಕಗಳ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 476, ಸೌಇಇ, IX i, ಸಂ. 238.

ಸಂ. 118

ಅದೇ ಕಲ್ಲಿನ ಮೇಲೆ

--

ಚಾಲುಕ್ಯ ವಿಕ್ರಮ ವರ್ಷ 2, ಕಾಳಯುಕ್ತಿ, [ಉತ್ತ]ರಾಯಣ = ಕ್ರಿ.ಶ. 1078

ಕನ್ನಡ

ಚಟ್ಟಿಮಯ್ಯನು ಅದೇ ದೇವಸ್ಥಾನಕ್ಕೆ ಒಂದು ಹೇರು ವೀಳ್ಯದೆಲೆಯನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಆ್ಯರಿಎ, 1914-14, ಸಂ. 1914 ರ 477.

ಸಂ. 119

ಗೌರೀಶ್ವರ ದೇವಸ್ಥಾನದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1100, ವಿಳಂಬಿ, ಮಾರ್ಗಶಿರ ಶು. 5, ಗುರುವಾರ, ಉತ್ತರಾಯಣ-ಸಂಕ್ರಮಣ, ವ್ಯತಿಪಾತ = ಕ್ರಿ.ಶ. 1178, ನವೆಂಬರ್ 16, ಗುರುವಾರ

ಕನ್ನಡ

ಕುಂತಳ ದೇಶದಲ್ಲಿಯ ನೊಳಂಬವಾಡಿ-32000 ದ ಅಧಿಪತಿಯಾದ ವಿಜಯ ಪಾಂಡ್ಯನ ಸಾಮಂತ ಮತ್ತು ಮಧುವರಸನ ಮಗನಾದ ಶಂಕರ ಪಾಂಡ್ಯನು, ಗಂಡರಾದಿತ್ಯನ-ಹೊಳಲ ಗೌರೇಶ್ವರ ದೇವಸ್ಥಾನದಲ್ಲಿ ಪ್ರತಿನಿತ್ಯ ನಡೆಯುವ ಪೂಜೆಗೆ, ಅಡಿಕೆಯ ಮೇಲಿನ ಹೆಜ್ಜುಂಕ ಮತ್ತು ಇತರ ಕೆಲವು ಸುಂಕಗಳನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಗಂಡರಾದಿತ್ಯನ-ಹೊಳಲ ಗ್ರಾಮವು ಗ್ರಾಮ ಚಕ್ರವರ್ತಿ ಎಂಬ ಹೆಸರು ಪಡೆದು ಶ್ರೇಷ್ಠ ಗ್ರಾಮವಾಗಿತ್ತು ಮತ್ತು 500 ಜನ ವ್ಯಾಪಾರಿಗಳು ವಾಸಿಸುತ್ತಿದ್ದರಿಂದ ದಕ್ಷಿಣ ಅಯ್ಯಾವಳೆ ಎಂದು ಕರೆಸಿಕೊಳ್ಳುತಿತ್ತೆಂದು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914ರ 478.

ಸಂ. 120

ಗ್ರಾಮದಲ್ಲಿ ಹೊಂಡದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲದೇವ (II)

12ನೇ ವರ್ಷ ಶುಕ್ಲ, ವೈಶಾಖ ಶು. ಪುಣ್ಣಮೆ, ಸೋಮವಾರ = ಕ್ರಿ.ಶ. 1141 (ಶಕ 1071ರಲ್ಲಿ ಶುಕ್ಲ ಸಂವತ್ಸರವಿತ್ತು = ಕ್ರಿ.ಶ. 1149)

ಕನ್ನಡ

ಸೋ[ಮಿದೇ]ವರಸನು ಹನ್ನೆರಡು (ಗ್ರಾಮಗಳನ್ನು) ಆಳುತ್ತಿದ್ದ ಸಮಯದಲ್ಲಿ ಗಂಡರಾದಿತ್ಯನ-ಹೊಳಲಿನ 120 ನಾಗರಿಕರು ವಾಮನೇಶ್ವರ ದೇವಸ್ಥಾನದಲ್ಲಿ ನಡೆಯುತ್ತಿದ್ದ ದಿನ ನಿತ್ಯದ ಪೂಜೆಗೆ 220 ಕಮ್ಮ ತೋಟದ ಭೂಮಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಈ ದಾನವನ್ನು ಗ್ರಾಮದ ನಖರಗಳು ಸಂರಕ್ಷಿಸಿಕೊಳ್ಳಬೇಕೆಂದು ತಿಳಿಸುತ್ತದೆ.

ಆ್ಯರಿಎ, 1914-15, 1914ರ 479.

ಸಂ. 121

ಅದೇ ಕಲ್ಲಿನ ಮೇಲೆ

--

--

ಕನ್ನಡ

ದಕ್ಷಿಣ ಪ್ರಾಂತದ ಚಕ್ರವರ್ತಿಯಾದ ವೀರ ಪಾಂಡ್ಯದೇವನು ಗಂಡರಾದಿತ್ಯನ-ಹೊಳಲಿನ ವಾಮನಾಥದೇವರ ದೇವಸ್ಥಾನಕ್ಕೆ ಭೇಟಿ ನೀಡಿ ಮಹಾಪ್ರಧಾನ ಕಲ್ಲಿಮೆಯ-ದಂಡನಾಯಕನ ಕೋರಿಕೆಯಂತೆ ಎರಡು ಲಕ್ಷ ಅಡಿಕೆಯ ಮೇಲಿನ ಸುಂಕ (ಅಡಿಕೆಯ ಸುಂಕ)ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1914-15, ಸಂ. 1914ರ 480.

ಸಂ. 122

ಗ್ರಾಮದಲ್ಲಿ ದೊಡ್ಡಬೇವಿನಕಟ್ಟ-ಬಸವಣ್ಣ ಎಂಬ ನಂದಿಯ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

--

ರಕ್ತಾಕ್ಷಿ, ಬನದ-ಹುಣ್ಣಿವೆ

ಕನ್ನಡ

ಉಚ್ಚಂಗಿಯ ಆಲಂಪುರಿ ಕಮಲೆಯ ನಾಯಕನ ಮಗ ಲಕೆಯ ನಾಯಕನು ವೈರಿಗಳನ್ನು ಕೊಂದು ತಾನೂ ಮರಣಹೊಂದಿದನೆಂದು ತಿಳಿಸುತ್ತದೆ. ಅಲ್ಲದೆ (ನಾ)ಗೆಯ ನಾಯಕನ ಮಗ ಇನ್ನೊಬ್ಬ ಲಕೆಯ ನಾಯಕನ ಉಲ್ಲೇಖವೂ ಇದೆ.

ಆ್ಯರಿಎ, 1914-15, ಸಂ. 1914ರ 481.

ಸಂ. 123

ಹನುಮಂತ ದೇವಸ್ಥಾನದಲ್ಲಿ ಹನುಮಂತ ದೇವರ ವಿಗ್ರಹದ ಮೇಲೆ

--

ಶಕ ..4[0], ... ಫಾಲ್ಗುಣ, ಶು. 13

ಕನ್ನಡ

ಹಾಳಾಗಿದೆ. ಬಹುಶಃ ಗ್ರಾಮ ಚಕ್ರವರ್ತಿ ಗಂಡರಾದಿತ್ಯನ ಹೊಳಲಿನಲ್ಲಿ ಹನು(ಮಂತ)ದೇವರ ವಿಗ್ರಹದ ಪ್ರತಿಷ್ಠಾಪನೆ ಮಾಡಿದ್ದನ್ನು ಉಲ್ಲೇಖಿಸುತ್ತದೆ.

ಆ್ಯರಿಎ, 1914-15, 1914ರ 482.

ಸಂ. 124

ಅಮೃತೇಶ್ವರ ದೇವಸ್ಥಾನದ ಮುಖ ಮಂಟಪದ ಕಂಬದ ಮೇಲೆ

--

12-13ನೇ ಶತಮಾನ

ಕನ್ನಡ

ಶಿವಪಾದಶೇಖರ, ಕಲಿಯುಗ ವಿಶ್ವಕರ್ಮ, ಅರವತ್ತನಾಲ್ಕು ಕಲೆಗಳಲ್ಲಿ ಪ್ರವೀಣ, ಅರವತ್ತ ನಾಲ್ಕು ಪ್ರಾಸಾದ ವಿಶಾರದ ಮತ್ತು ನಾಗರ, ಕಲಿಂಗ, ದ್ರಾವಿಳ (ದ್ರಾವಿಡ) ಮತ್ತು ವೇಸರ ಎಂಬ ನಾಲ್ಕು ವಿಧದ ದೇವಸ್ಥಾನಗಳನ್ನು ಕಟ್ಟುವುದರಲ್ಲಿ ನಿಪುಣನಾದ ಸೂತ್ರಧಾರಿ ಸೋಗೆಯ ಪದ್ಮೋಜನ ಶಿಷ್ಯ ಬಮ್ಮೋಜನು ಬೋಕೋಜನ ಮಗನು ಮತ್ತು ಬಮ್ಮೋಜನು ಪ್ರತಿಯೊಂದಕ್ಕೆ ಅಲಂಕಾರ ಸಹಿತ 20 ಗದ್ಯಾಣದಂತೆ ನಾಲ್ಕು ಕಂಬಗಳನ್ನು 80 ಗದ್ಯಾಣಗಳಿಗೆ ಮಾಡಿದನೆಂದು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 483; ಪಾಟೀಲ ಚನ್ನಬಸಪ್ಪ ಎಸ್, 1992, ಟೆಂಪಲ್ಸ್ ಆಫ್ ರಾಯಚೂರ್ ಆಂಡ್ ಬಳ್ಳಾರಿ ಡಿಸ್ಟ್ರಿಕ್ಟ್ಸ್, ಪು. 57-58.

ಹೂವಿನಹಡಗಲಿ

ಸಂ. 125

ಕರೆಯ ಹತ್ತಿರ ದೂರೆತ ಕಲ್ಲಿನ ತುಂಡಿನ ಮೇಲೆ (ಈಗ ಪ್ರವಾಸಿ ಮಂದಿರದಲ್ಲಿದೆ)

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

11 ನೆಯ ಶತಮಾನ

ಕನ್ನಡ

ಅರಸನ ಪ್ರಶಸ್ತಿಯ ಮತ್ತು ಮಹಾಸಾಮಂತನ ಸ್ತುತಿಯ ಭಾಗಗಳು ಮಾತ್ರ ಇವೆ.

ಆ್ಯರಿಇಎ, 1952-53, ಸಂ. ಬಿ 215.

ಸಂ. 126

ಕಲ್ಲೇಶ್ವರ ದೇವಸ್ಥಾನದ ದಕ್ಷಿಣ ಗೋಡೆಯ ಹತ್ತಿರವಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

ಶಕ 993, ಸಾಧಾರಣ, ಫಾಲ್ಗುಣ 8, ಶುಕ್ರವಾರ, ವ್ಯತಿಪಾತ = ಕ್ರಿ.ಶ. 1071, ಫೆಬ್ರವರಿ 25, ಶುಕ್ರವಾರ

ಕನ್ನಡ

ಅರಸನು ದಂಡನಾಯಕ ಚಿದ್ದಯ್ಯನ ಮೇಲೆ ವಿಜಯ ಸಾಧಿಸಿದ ನಂತರ ಗೋವಿಂದವಾಡಿಯಿಂದ ಆಳುತ್ತಿದ್ದನು. ಅರಸನ ಬಳಿಗೆ ಆತನನ್ನು ಆಶೀರ್ವದಿಸಲು ಹೋಗಿದ್ದ ಗ್ರಾಮದ ಮಹಾಜನರ ಮನವಿಯ ಮೇರೆಗೆ ಅರಸನು ಕೋಗಳಿ-500 ರ ಉಪ-ವಿಭಾಗವಾದ ಹಾಲ್ವೊಳ-12ರಲ್ಲಿಯ ಕೋಟಿಗನೂರು ಗ್ರಾಮವನ್ನು ಪೂವಿನ ಪಡಂಗಿಲೆಯ ಕಲಿದೇವರ ಸೇವೆಗೆ, ಲಾಕುಳೇಶ್ವರ-ಪಂಡಿತರ ಮಠದ ತಪೋಧನರ ಊಟಕ್ಕೆ ಮತ್ತು ವಿದ್ಯಾರ್ಥಿಗಳ, ಸೇವಕರ, ಸಂಗೀತಗಾರರ ಆಹಾರ ಮತ್ತು ಬಟ್ಟೆಗಾಗಿ ದಾನ ನೀಡಿದ್ದನ್ನು ತಿಳಿಸುತ್ತದೆ. ಮಹಾಸಾಮಂತ ಘಟ್ಟಿಯರಸನು ಅದೇ ದೇವರಿಗೆ ಕೋಟಿಗನೂರಿನ ಮನ್ನೆಯ-ಸಾಮ್ಯವನ್ನು ದಾನ ನೀಡಿದ್ದನ್ನೂ ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 127; ಸೌಇಇ, IX i, ಸಂ. 135.

ಸಂ. 127

ಅದೇ ದೇವಸ್ಥಾನದ ಕಂಬದ ಮೇಲೆ

--

11 ನೆಯ ಶತಮಾನ?

ಕನ್ನಡ

ತಿಪೋಜನು ನಂದಿಯನ್ನು ಮಾಡಿದನೆಂದು ತಿಳಿಸುತ್ತದೆ.

ಪಾಟೀಲ ಚನ್ನಬಸಪ್ಪ ಎಸ್., 1992, ಟೆಂಪಲ್ಸ್ ಆಫ್ ರಾಯಚೂರ್ ಆಂಡ್ ಬಳ್ಳಾರಿ ಡಿಸ್ಟ್ರಿಕ್ಟ್ಸ್, ಪು. 143.

ಸಂ. 128

ಅದೇ ದೇವಸ್ಥಾನದ ಅರೆಗಂಬದ ಮೇಲೆ

--

11ನೆಯ ಶತಮಾನ

ಕನ್ನಡ

ಶಾಂತರಾಶಿ ಪಂಡಿತರ ಮಗಳು ಗೊರವಬ್ಬೆಯ ಕಂಭ ಎಂದು ತಿಳಿಸುತ್ತದೆ.

ಪಾಟೀಲ, ಅದೇ, ಪು. 143.

ಸಂ. 129

ಕೇಶವಸ್ವಾಮಿ ದೇವಸ್ಥಾನದಲ್ಲಿ ಪಶ್ಚಿಮ ದ್ವಾರದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ (ವಿಕ್ರಮಾದಿತ್ಯ VI)

(i) (ಚಾಲುಕ್ಯ)-ವಿಕ್ರಮ ವರ್ಷ 15, ಪ್ರಮೋದ, ಆಶ್ವಿಜ, ಅಮಾವಾಸ್ಯೆ, ಆದಿವಾರ, ಸೂರ್ಯಗ್ರಹಣ, ಉತ್ತರಾಯಣ-ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1090, ನವಂಬರ್ 24.

(ii) ಚಾಲುಕ್ಯ-ವಿಕ್ರಮ ವರ್ಷ 17, ಆಂಗಿರಸ, ವೈಶಾಖ ಶು. 3, ಸೋಮವಾರ, ಯುಗಾದಿ = ಕ್ರಿ.ಶ. 1092, ಏಪ್ರಿಲ್ 12, ಸೋಮವಾರ.

(iii) (ಚಾಲುಕ್ಯ-ವಿಕ್ರಮ ವರ್ಷ) 50, ವಿಶ್ವಾವಸು, ಬನದ-ಪುಣ್ಣಮಿ, ಸೋಮವಾರ = ಕ್ರಿ.ಶ. 1126, ಜನವರಿ 11, ಸೋಮವಾರ.

(iv) (ಚಾಲುಕ್ಯ-ವಿಕ್ರಮ ವರ್ಷ) 53, ಕೀಲಕ, ಕಾರ್ತ್ತಿಕ, ಪೂರ್ಣಮಾಸ್ಯೆ, ಬೃಹಸ್ಪತಿವಾರ, (ಸೋಮಗ್ರಹಣ) = ಕ್ರಿ.ಶ. 1128, ನವಂಬರ್ 8, ಗುರುವಾರ.

ಕನ್ನಡ

ಪ್ರಾರಂಭದಲ್ಲಿ ಈ ಶಾಸನವು ಮೊದಲು ತ್ರಿಭುವನಮಲ್ಲ-ಪಾಂಡ್ಯದೇವನು ನೊಳಂಬವಾಡಿ-32000 ಮತ್ತು ಮಾಸವಾಡಿ-140 ಗಳನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ನಂತರ ಅರಸನ ಬ್ರಾಹ್ಮಣ ಸೈನ್ಯಾಧಿಕಾರಿ ರವಿ-ದಂಡನಾಯಕನ ಸ್ತುತಿ ಇದೆ. ಆತನ ಹೆಂಡತಿ ಪೂವಿನ-ಪಡಂಗಿಲೆ (ಹೂವಿನಹಡಗಲಿ)ಯ ರೆಬ್ಬಣಬ್ಬೆ ಅಥವಾ ರೆಬ್ಬಲದೇವಿಯು ಆ ಗ್ರಾಮದಲ್ಲಿ ಕೇಶವ ದೇವರ ದೇವಸ್ಥಾನವನ್ನು ಕಟ್ಟಿಸಿ ದೇವರ ಸೇವೆಗೆ ಭೂಮಿ ದಾನ, ಬ್ರಾಹ್ಮಣರ ಸತ್ರಕ್ಕೆ ಭೂಮಿ, ಒಂದು ಹೂವಿನ ತೋಟ, ಒಂದು ಮನೆಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಮೇಲೆ ತಿಳಿಸಿದ ಎರಡನೆ ದಿನದಂದು ವಿಶ್ವಚಕ್ರ ದಾನ ಮಾಡುತ್ತಿದ್ದ ಸಮಯದಲ್ಲಿ ರವಿಯಣಭಟ್ಟ (ರವಿಗ ದಂಡನಾಥ)ನ ಕೋರಿಕೆಯ ಮೇರೆಗೆ ರಾಜಾಶ್ರಯನೆಲೆವೀಡಿನಲ್ಲಿ ವಾಸ್ತವ್ಯ ಮಾಡಿದ್ದ ಅರಸನು ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಮತ್ತು ಪೂಜೆಗಾಗಿ ಒಂದು ಗ್ರಾಮವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಮೂರನೆ ಮತ್ತು ನಾಲ್ಕನೆ ದಿನಾಂಕಗಳಂದು ಅನೇಕ ವ್ಯಕ್ತಿಗಳು ವೀಳ್ಯದ ಎಲೆ, ಗಂಧ, ಪೂಜೆ, ದೀಪ, ಚೈತ್ರ ಪೂಜೆಗಳಿಗೆ ಭೂಮಿ ಮತ್ತು ಹಣ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 128; ಸೌಇಇ, IX i, ಸಂ. 158.

ಸಂ. 130

ಕಲ್ಲೇಶ್ವರ ದೇವಸ್ಥಾನದ ನೈರುತ್ಯ ದಿಕ್ಕಿಗಿರುವ ಬಾವಿಯ ಹತ್ತಿರದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ (ಸೋಮೇಶ್ವರ I)

ಶಕ 994, ಶುಭಕೃತ್, ಮಾರ್ಗಶಿರ ಪುಣ್ಣಮಿ, ಮಂಗಳವಾರ, ಸೂರ್ಯಗ್ರಹಣ = ಕ್ರಿ.ಶ. 1062, ನವಂಬರ್ 19, ಮಂಗಳವಾರ (ಶಕ 984)

ಕನ್ನಡ

ವಿಷ್ಣುವರ್ಧನ ವಿಜಯಾದಿತ್ಯನು ವೆಂಗಿ ಮತ್ತು ನೊಳಂಬವಾಡಿ-32000ವನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಕಲಿದೇವ ದೇವರ ಸೇವೆಗೆ ಮತ್ತು ಸತ್ರಕ್ಕೆ ಪುಲಿರುಯ(?)-ಅಗ್ರಹಾರವನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.

ಇದ, 11, ಪು. 118-121.

ಸಂ. 131

ಪಾಂಡುರಂಗ ದೇವಸ್ಥಾನದಲ್ಲಿಯ ಶಾಸನ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ (ವಿಕ್ರಮಾದಿತ್ಯ VI)

ಚಾಲುಕ್ಯ ವಿಕ್ರಮ ವರ್ಷ 35, ವಿಕೃತ, ಉತ್ತರಾಯಣ ಸಂಕ್ರಾಂತಿ = ಕ್ರಿ.ಶ. 1113

ಕನ್ನಡ

ಮಹಾಮಂಡಲೇಶ್ವರ ತ್ರಿಭುವನಮಲ್ಲ ಪಾಂಡ್ಯದೇವನು ನೊಳಂಬವಾಡಿ-32000ವನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಆತನ ಅಧೀನದಲ್ಲಿ ದಂಡನಾಯಕ [ಮುದ್ದ]ರಸನು ನೊಳಂಬವಾಡಿ-32000ದ ತೆರಿಗೆ (ಸುಂಕ?) ಅಧಿಕಾರವನ್ನು ನಿರ್ವಹಿಸುತ್ತಿದ್ದನು. ಆತನು ಪೂವಿನಪಡಂಗಿಲಿಯ 120 ಮಹಾಜನರ ಸಮಕ್ಷಮದಲ್ಲಿ ಕಲಿಸ್ವಾಮಿ ದೇವರ ಸ್ಥಾನಾಚಾರ್ಯರಾದ ಖಳೇಶ್ವರಪಂಡಿತರ ಪಾದ ತೊಳೆದು ಸೋಮೇಶ್ವರ ದೇವರಿಗೆ ಪನ್ನಾಯ ತೆರಿಗೆಯನ್ನು ದಾನ ಮಾಡಿದನೆಂದು ತಿಳಿಸುತ್ತದೆ.

ಕರ್ನಾಟಕ ಇತಿಹಾಸ ಅಕಾಡೆಮಿಯ 10ನೇ ಸಮ್ಮೇಳನ, ಧಾರವಾಡ 1996ರಲ್ಲಿ ಕುಮಾರಿ ಎಂ.ಪಿ. ವೀಣಾ ಅವರು ಮಂಡಿಸಿದ ಪ್ರಬಂಧ.

ಹ್ಯಾರದ

ಸಂ. 132

ಗ್ರಾಮದ ಆಗ್ನೇಯಕ್ಕಿಗಿರುವ ಒಂದು ಹೊಲದಲ್ಲಿ ಬಿದ್ದಿರುವ ನಂದಿ ಕಂಬದ ಮೇಲೆ

ಯಾದವ ಮಹಾದೇವರಾಯ

ಶಕ 1184, ದುಂದುಭಿ, ಚೈತ್ರ ಬ. ಅಮಾವಾಸೆ, ಸೋಮವಾರ, ಸೂರ್ಯಗ್ರಹಣ = ಕ್ರಿ.ಶ. 1263, ಏಪ್ರಿಲ್ 9, ಸೋಮವಾರ (ಈ ವರ್ಷ ರುಧಿರೋದ್ಗಾರಿಯಾಗಿತ್ತು ಮತ್ತು ಆಗ ಗ್ರಹಣವಿರಲಿಲ್ಲ)

ಕನ್ನಡ

ಹಾಳಾಗಿದೆ. ಶ್ರೀಪರ್ವತದಲ್ಲಿ ಮಲ್ಲಿಕಾರ್ಜುನ ದೇವರ ಸೇವೆಗೆ ಹೆರದ ಗ್ರಾಮವನ್ನು ಮಹಾಪಸಾಯಿತ ದಳವಯ್ಯ . . . . ಸೋವಿದೇವನು ದಾನ ನೀಡಿದ್ದನ್ನು ತಿಳಿಸುವಂತೆ ತೋರುತ್ತದೆ. ಬೆಣ್ಣೆವೂರ-12ರ ಉಲ್ಲೇಖವಿದೆ.

ಆ್ಯರಿಎ, 1914-15, ಸಂ. 1914 ರ 488; ಸೌಇಇ, IX i, ಸಂ. 373.

ಕತ್ತೆಬೆನ್ನೂರು

ಸಂ. 133

ಗ್ರಾಮದ ಕೆರೆಯ ಅಂಗಳದಲ್ಲಿ ನಿಲ್ಲಿಸಿದ 'ಆಕಳ ಕಲ್ಲು' ಎಂದು ಕರೆಯಲ್ಪಡುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲದೇವ (ಜಯಸಿಂಹ II)

.ಂದನ, ಮಾರ್ಗಶಿರ, ... ಮಂಗಳವಾರ, ಸೂರ್ಯಗ್ರಹಣ (11ನೇ ಶತಮಾನ)

ಕನ್ನಡ

ತುಬ ಹಾಳಾಗಿದೆ. ತಂತ್ರಪಾಲ ಮಾಚಯ್ಯನು ಭೂಮಿ ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 489, ಸೌಇಇ, IX i, ಸಂ. 97.

ಸಂ. 134

ಉಡುಚುಲವ್ವ ದೇವಸ್ಥಾನದ ಮೊಗಸಾಲೆಯಲ್ಲಿ ಬಿದ್ದಿರುವ ಕಂಬದ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲದೇವ (ಜಯಸಿಂಹ II)

ಶಕ 947, ಕ್ರೋಧನ, ಮಾರ್ಗಶಿರ, ಸೂರ್ಯಗ್ರಹಣ = ಕ್ರಿ.ಶ. 1025, ನವಂಬರ್ 23, ಮಂಗಳವಾರ

ಕನ್ನಡ

ಹಾಳಾಗಿದೆ. ಬೆಣ್ಣೆವೂರು-12ನ್ನು ಆಳುತ್ತಿದ್ದ ಮಧುವರ್ಮ್ಮದೇವ ಮತ್ತು ಮನ್ನೆಯ ಮಲ್ಲಪನ ಬಗ್ಗೆ ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 490; ಸೌಇಇ, IX i, ಸಂ. 83.

ಸಂ. 135

ಆಂಜನೇಯ ದೇವಸ್ಥಾನದ ಪ್ರವೇಶದ್ವಾರದ ಎಡಭಾಗದ ಕಂಬದ ತಳ ಭಾಗದಲ್ಲಿ

--

ನಂದನ, ಫಾಲ್ಗುಣ ಶು. 5, ಸೋಮವಾರ

ಕನ್ನಡ

ಅಲೋಜನು ಜೈನಬಸ್ತಿಗೆ ಸೇರಿದ ಕೊಂಡದಕಟ್ಟೆಯ ಭೋಗೇಶ್ವರ ದೇವಸ್ಥಾನದ ಕಲ್ಲುಗಳನ್ನು ತಂದು ಈ ಹನುಮಪ್ಪನ ದೇವಸ್ಥಾನವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ಆ್ಯರಿಎ, 1914-15, 1914ರ 491.

ಕೊಟ್ನಕಲ್ಲು

ಸಂ. 136

ಕೋಟೀಶ್ವರ ದೇವಸ್ಥಾನದ ಗೋಡೆಯಲ್ಲಿ ಕಟ್ಟಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ

11ನೇ ವರ್ಷ, ವಿಭವ, ಪುಷ್ಯ ಶು. 13, ಶುಕ್ರವಾರ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1148, ಡಿಸೆಂಬರ್ 24, ಶುಕ್ರವಾರ

ಕನ್ನಡ

ಎರಡನೆಯ ತೈಲನಿಂದ ಪ್ರಾರಂಭವಾದ ಚಾಲುಕ್ಯ ವಂಶಾವಳಿಯ ಪಟ್ಟಿಯನ್ನು ಕೊಡುತ್ತದೆ. ವೀರಪಾಂಡ್ಯನು ಪೆರ್ಮ (ಜಗದೇಕಮಲ್ಲ II)ನ ಸಾಮಂತನಾಗಿದ್ದನು. ಬಿಲ್ಲವರಾಯನ ಮಗ ವಿಕ್ರಮಾದಿತ್ಯನು ವೀರಪಾಂಡ್ಯನ ಸೋದರ ಮಾವನಾಗಿದ್ದನು. ಈ ವಿಕ್ರಮಾದಿತ್ಯನು ತುಂಗಭದ್ರ ನದಿಯ ದಂಡೆಯ ಮೇಲೆ ಹೂವಿನ ಹಡಂಗಿಲೆಯ ಉತ್ತರಕ್ಕಿರುವ ಕೋಟಿ ಶಂಕರದೇವರ ಸೇವೆಗೆ ಮತ್ತು ಬ್ರಾಹ್ಮಣರ ಊಟದ ವ್ಯವಸ್ಥೆಗಾಗಿ ಕೊಟ್ಟಿಗನೂರು ಗ್ರಾಮವನ್ನು ದಾನ ಮಾಡಿದನು. ಅದೇ ದೇವಸ್ಥಾನಕ್ಕೆ 6ನೇ ವರ್ಷ, ರುಧಿರೋದ್ಗಾರಿ, ಮಾಘ ಶು. 5, ಸೋಮವಾರ (= ಕ್ರಿ.ಶ. 1144, ಜನವರಿ 11, ಮಂಗಳವಾರ) ದಂದು ಮಹಾಜನರು ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ವಿರೋಧಿ, ಆಷಾಢ ಶು. 8, ಸೋಮವಾರ (= ಕ್ರಿ.ಶ. 1169, ಜೂನ್ 4, ಬುಧವಾರ) ದಿನದಂದು ವಿಕ್ರಮಾದಿತ್ಯನು ಶ್ರೀ ವೀರಕೇಶವ ದೇವರ ಸೇವೆಗೆ ಭೂಮಿದಾನ ನೀಡಿದ್ದನ್ನು ತಿಳಿಸುತ್ತದೆ. ವಿಳಂಬಿ, ಶ್ರಾವಣ ಶು. 11, ಶುಕ್ರವಾರ (= ಕ್ರಿ.ಶ. 1178, ಜುಲೈ 27,

ಗುರುವಾರ)ದ ದಿವಸ ಮಹಾಮಂಡಲೇಶ್ವರ ವಿಜಯಪಾಂಡ್ಯನು ತನ್ನ ಮಾವ ವಿಕ್ರಮಾದಿತ್ಯನಿಗೆ ಪುಣ್ಯವಾಗಲೆಂದು ಕೋಟಿ ಶಂಕರ ದೇವರ ಸೇವೆಗೆ ಭೂಮಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 445, ಸೌಇಇ, IX i, ಸಂ. 254.

ಸಂ. 137

ಅದೇ ದೇವಸ್ಥಾನದ ಗೋಡೆಯಲ್ಲಿ ಕಟ್ಟಿರುವ ಅದೇ ಕಲ್ಲಿನ ಮೇಲೆ

ಯಾದವ, ಮಹಾದೇವರಾಯ

ಶಕ 1185, ದುಂದುಭಿ, ಕಾರ್ತಿಕ ಶು. 15, ಸೋಮವಾರ, ವ್ಯತಿಪಾತ, ಸಂಕ್ರಾಂತಿ, ಗ್ರಹಣ = ಕ್ರಿ.ಶ. 1262, ಅಕ್ಟೋಬರ್ 28, ಶನಿವಾರ, ಆಗ ಚಂದ್ರಗ್ರಹಣವಿರಲಿಲ್ಲ.

ಕನ್ನಡ

ಕೊಟ್ಟಿಗನೂರಿನ ಮಧುವಯ್ಯನು ಮಾಸವಾಡಿ-140ರಲ್ಲಿರುವ ಕೌರವ ಗ್ರಾಮದ 500 ಮಹಾಜನರಿಂದ ಪಡೆದ ಐದು ಮತ್ತರು ಭೂಮಿಯನ್ನು ಕೋಟಿಶಂಕರ ದೇವರ ಸೇವೆಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 446; ಸೌಇಇ, IX i, ಸಂ. 372.

ಕುರುವತ್ತಿ

ಸಂ. 138

ಕಲ್ಲೇಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

ಚಾಲುಕ್ಯ ವಿಕ್ರಮ ವರ್ಷ 24, ಪ್ರಮಾಥಿ, ಜ್ಯೇಷ್ಠ ಶು. ಪೌರ್ಣಮಾಸಿ, ಆದಿತ್ಯವಾರ, ಸೋಮಗ್ರಹಣ = ಕ್ರಿ.ಶ. 1099, ಜೂನ್ 5, ಆದಿತ್ಯವಾರ

ಕನ್ನಡ (ಗದ್ಯ ಮತ್ತು ಪದ್ಯ)

ಗ್ರಾಮದ 200 ಮಹಾಜನರು ಮತ್ತು ಗ್ರಾಮದ ಮುಖ್ಯಸ್ಥ ಕಾಳಿದಾಸನು ಲಕುಳೀಶ್ವರ ಪಂಡಿತರ ಸಮ್ಮುಖದಲ್ಲಿ ಅಭಿನವ-ಸೋಮೇಶ್ವರ ದೇವಸ್ಥಾನದಲ್ಲಿ ನಡೆಯುವ ಪೂಜೆ, ಉತ್ಸವ, ಧೂಪಗಳಿಗೆ ಮತ್ತು ತಪೋಧನರ ಊಟಕ್ಕೆ ಭೂಮಿ ಮತ್ತು ಗ್ರಾಮದಿಂದ ಹೊರಗೆ ಹೋಗುವ ಮತ್ತು ಒಳಗೆ ಬರುವ ಹುಲ್ಲು, ಸೌದೆ, ತರಕಾರಿ, ಹಣ್ಣು ಮತ್ತು ಹತ್ತಿಯ ಮೇಲೆ ವಿಧಿಸಿದ ತೆರಿಗೆ ಮತ್ತು ಹಣವನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ. ಈ ಗ್ರಾಮವು ಸುರೇಶ್ವರ-ಪಂಡಿತನು ಆಳುತ್ತಿದ್ದ ಬೆಣ್ಣೆವೂರು-12ಕ್ಕೆ ಸೇರಿತ್ತು.

ಆ್ಯರಿಎ, 1918-19, ಸಂ. 1918 ರ 213; ಸೌಇಇ, IX i, ಸಂ. 165.

ಸಂ. 139

ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

ಚಾಲುಕ್ಯ ವಿಕ್ರಮ 29, ತಾರಣ, ವೈಶಾಖ ಶು. 3, ಆದಿತ್ಯವಾರ = ಕ್ರಿ.ಶ. 1104, ಮಾರ್ಚ್ 30, ಬುಧವಾರ

ಕನ್ನಡ

ಗಂಡರಾದಿತ್ಯನ ಹೊಳಲು ಗ್ರಾಮದ ಮಹಾಜನರು ಚಕ್ರವರ್ತಿಯ ಹತ್ತಿರ ಹೋಗಿ ಮನ್ನೆಯ ಬೊಪ್ಪಯ್ಯನು ಹೊಳಲು ಗ್ರಾಮವನ್ನು ವಶಪಡಿಸಿಕೊಂಡು, ಗ್ರಾಮವನ್ನು ಕೊಳ್ಳೆಹೊಡೆದು, ಬ್ರಾಹ್ಮಣರನ್ನು ಕೊಲ್ಲುತ್ತಿರುವ ವಿಷಯ ತಿಳಿಸಲು, ಚಕ್ರವರ್ತಿಯು ಮನ್ನೆಯನನ್ನು ಕರೆಯಿಸಿ ಆತನಾಗಲಿ, ಆತನ ವಂಶದವರಾಗಲಿ ಹೊಳಲು ಗ್ರಾಮದ ಮನ್ನೆಯರಾಗುವ ಹಕ್ಕಿಲ್ಲ ಎಂದು ಆತನಿಂದ ಬರೆಸಿಕೊಂಡಿದ್ದುದನ್ನು ತಿಳಿಸುತ್ತದೆ. ಬೊಪ್ಪಯ್ಯನು ಬೆಣ್ಣೆವೂರು-12, ನಿರುಗುಂದ, ಎರಡು ಹಡಂಗಿಲೆಗಳು, ಮಾಂಗೊಳ, ಬಿದಿರಹಳ್ಳಿ, ಹಹನೂರು, ಹೊನ್ನವಳ್ಳಿ, ಕುರುವತ್ತಿ ಮತ್ತು ಬಾಳ್ಗುಳಿಯನ್ನೊಳಗೊಂಡ 32000 ಪ್ರಾಂತದ ಸಮಕ್ಷಮದಲ್ಲಿ ಮೇಲೆ ತಿಳಿಸಿದಂತೆ ಮಾಡಿದನು ಮತ್ತು ತ್ರಿಪುರಾಂತಕದೇವರ ದೇವಸ್ಥಾನದಲ್ಲಿ ನೀರು ಕುಡಿದು ಈ ಕಲ್ಲನ್ನು ನಿಲ್ಲಿಸಿದನು.

ಆ್ಯರಿಎ, 1918-19, ಸಂ. 1918 ರ 214; ಸೌಇಇ, IX i, ಸಂ. 169.

ಸಂ. 140

ಅದೇ ದೇವಸ್ಥಾನದಲ್ಲಿ ತೊಲೆಯ ಮೇಲೆ

ಉಜ್ಜನೀಪುರವರೇಶ್ವರ ಗುತ್ತ ವಿಕ್ರಮಾದಿತ್ಯದೇವ (II)

ಶಕ 1104, ಪ್ಲವ, ಪುಷ್ಯ, ಬ. 3, ಶು(ಕ್ರವಾರ), ಸಂಕ್ರಮಣ = ಕ್ರಿ.ಶ. 1181, ಡಿಸೆಂಬರ್ 25, ಶುಕ್ರವಾರ

ಕನ್ನಡ

ಅರಸನು ಬೆಳುಹುಗೆ-70 ಮತ್ತು ಬೆಣ್ಣೆವೂರು-12ನ್ನು ಆಳುತ್ತಿದ್ದಾಗ ಆತನ ಪ್ರಧಾನ ಸುಸಂಗ ದಣ್ಣಾಯಕನು, ಮಹಾಮಂಡಲೇಶ್ವರ ವಿಜಯ ಪಾಂಡ್ಯರಸನ ಒಪ್ಪಿಗೆ ಪಡೆದು ಆಹವಮಲ್ಲೇಶ್ವರ ದೇವರ ಸೇವೆಗೆ 70 ಮತ್ತರು ಭೂಮಿಯನ್ನು ಕುರುವತ್ತಿಯ ಮಹಾಜನರು ಮತ್ತು ಬೆಣ್ಣೆವೂರಿನ ಬಾಚರಸನ ಸಮ್ಮುಖದಲ್ಲಿ ನವೀಕರಿಸಿದ್ದನ್ನು ತಿಳಿಸುತ್ತದೆ. ಈ ಭೂಮಿಯನ್ನು ಮೊದಲು ಹಿರಿಯ ವಿಕ್ರಮಾದಿತ್ಯನು ದಾನ ನೀಡಿದ್ದನು.

ಆ್ಯರಿಎ, 1918-19, ಸಂ. 1918 ರ 215; ಸೌಇಇ, IX i, ಸಂ. 389.

ಸಂ. 141

ಅದೇ ತೊಲೆಯ ಮೇಲೆ

--

ಶಕ 1117 = ಕ್ರಿ.ಶ. 1195

ಕನ್ನಡ

ಬಹುಶಃ ಗುತ್ತ ಅರಸ ಎರಡನೆಯ ವಿಕ್ರಮಾದಿತ್ಯನ ಅಳಿಯನಾದ ಬಲ್ಲಾಳ-ಭೂಪನು ಆಹವಮಲ್ಲೇಶ್ವರ ದೇವರ ಸೇವೆಗೆ ಲೋಕಾಭರಣ ಮುನೀಂದ್ರನಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 215ಎ; ಸೌಇಇ, IX i, ಸಂ. 390.

ಸಂ. 142

ಅದೇ ತೊಲೆಯ ಮೇಲೆ

--

12ನೆಯ ಶತಮಾನ

ಕನ್ನಡ (ಗದ್ಯ ಮತ್ತು ಪದ್ಯ)

ಅಯ್ಯಾವಳೆಯ ಐನೂರು ಸ್ವಾಮಿಗಳು, ನಾನಾದೇಶಿಗಳು, ಶೆಟ್ಟಿಗಳು ಮುಂತಾದವರು ಕುರುವತ್ತಿಯಲ್ಲಿ ಸಭೆ ಸೇರಿ ಆಹವಮಲ್ಲೇಶ್ವರ ದೇವರ ಪೂಜೆಗೆ ಲೋಕಾಭರಣ ಮುನಿಗೆ ಹೆಜ್ಜುಂಕ ತೆರಿಗೆಯ ಒಂದು ಭಾಗವನ್ನು ದಾನ ಕೊಟ್ಟಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, 1918 ರ 216; ಸೌಇಇ, IX i, ಸಂ. 391.

ಸಂ. 143

ಅದೇ ತೊಲೆಯ ಮೇಲೆ

ಹೊಯ್ಸಳ, ವೀರ ಬಲ್ಲಾಳದೇವ (II) ತನ್ನ ನೆಲೆವೀಡು ಬಾಗುಳಿಯಲ್ಲಿ ವಾಸಿಸುತ್ತಿದ್ದ

ಶಕ 1117, ಆನಂದ, ಚೈತ್ರ ಶು. 1, ಶುಕ್ರವಾರ = ಕ್ರಿ.ಶ. 1194, ಮಾರ್ಚ್ 25, ಶುಕ್ರವಾರ

ಕನ್ನಡ (ಗದ್ಯ ಮತ್ತು ಪದ್ಯ)

ಅರಸನು ಬೆಣ್ಣೆವೂರು-12 ರಲ್ಲಿಯ ಬಾಡ ಮತ್ತು ಮುಕ್ಕರಬ್ಬೆ ಗ್ರಾಮಗಳನ್ನು ಆಹವಮಲ್ಲೇಶ್ವರ ದೇವಸ್ಥಾನದ ದುರಸ್ತಿ, ಉತ್ಸವ, ಪೂಜೆಗಳಿಗಾಗಿ ಲೋಕಾಭರಣ ಮುನೀಂದ್ರನಿಗೆ ದಾನ ಮಾಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 217; ಸೌಇಇ, IX i, ಸಂ. 320.

ಸಂ. 144

ಅದೇ ತೊಲೆಯ ಮೇಲೆ

ಹೊಯ್ಸಳ, ರಾಯನಾರಾಯಣ ವೀರ ಬಲ್ಲಾಳದೇವ (II)

--

ಕನ್ನಡ (ಪದ್ಯ ಮತ್ತು-ಗದ್ಯ)

ಮಹಾಮಂಡಲೇಶ್ವರ ಗೊಮ್ಮದೇವನು ಆಹವಮಲ್ಲೇಶ್ವರ ದೇವಸ್ಥಾನದ ದುರಸ್ತಿ ಮತ್ತು ದೇವರ ಸೇವೆಗೆ ಬೆಣ್ಣೆವೂರು-12 ರಲ್ಲಿಯ ಹರುಹೆಯ ಉತ್ತರಕ್ಕೆ 36 ಮತ್ತರು ಭೂಮಿಯನ್ನು ದಾನ ನೀಡಿ ಅದನ್ನು ಲೋಕಾಭರಣನ ವಶದಲ್ಲಿ ಬಿಟ್ಟಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 218; ಸೌಇಇ, IX i, ಸಂ. 337.

ಸಂ. 145

ಅದೇ ದೇವಸ್ಥಾನದಲ್ಲಿ ಇನ್ನೊಂದು ತೊಲೆಯ ಮೇಲೆ

--

--

ಕನ್ನಡ

ಇಬ್ಬರು ಸೆಟ್ಟಿಗಳು ಆಹವಮಲ್ಲೇಶ್ವರ ದೇವಸ್ಥಾನಕ್ಕೆ ಭೂಮಿಯನ್ನು ಕ್ರಯಕ್ಕೆ ತೆಗೆದುಕೊಂಡು ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 219.

ಸಂ. 146

ಅದೇ ದೇವಸ್ಥಾನದ ದಕ್ಷಿಣದ ಪ್ರವೇಶ ದ್ವಾರದ ಬಲಗಡೆ ಗೋಡೆಯ ಮೇಲೆ

ಹೊಯ್ಸಳ, ವೀರ ಬಲ್ಲಾಳದೇವ (II)

15ನೇ ವರ್ಷ, ಕ್ರೋಧನ, ಜ್ಯೇಷ್ಠ ಶು. ಪೌರ್ಣಮಿ, ಆದಿವಾರ, ಸೋಮಗ್ರಹಣ = ಕ್ರಿ.ಶ. 1205, ಜೂನ್ 9, ಶುಕ್ರವಾರ

ಕನ್ನಡ

ರಾಣಿ ಪದುಮಲದೇವಿಯ ಮಹಾಪ್ರಧಾನ ಭಂಡಾರಿ ಸೋವರಸನು ದಕ್ಷಿಣ-ವಾರಣಾಸಿಯೆಂದು ಕರೆಯಲ್ಪಡುತ್ತಿದ್ದ ಹಿರಿಯ ಕುರುವತ್ತಿಯ ಆಹವಮಲ್ಲದೇವರ ದೇವಸ್ಥಾನದ ಪೂಜೆಗಾಗಿ ರಾಜಗುರು ಲೋಕಾಭರಣದೇವನಿಗೆ ಭೂಮಿದಾನ ನೀಡಿದ್ದನ್ನು ತಿಳಿಸುತ್ತದೆ. ಮಹಾಪ್ರಧಾನನು ಗುತ್ತೊಳಲ-ನಾಡಿನ ಆಡಳಿತ ನಿರ್ವಹಿಸುತ್ತಿದ್ದನು.

ಆ್ಯರಿಎ, 1918-19, ಸಂ. 1918 ರ 220; ಸೌಇಇ, IX i, ಸಂ. 325.

ಸಂ. 147

ಅದೇ ದೇವಸ್ಥಾನದ ಅದೇ ಗೋಡೆಯ ಮೇಲೆ

ಹೊಯ್ಸಳ, ವೀರ ಬಲ್ಲಾಳದೇವ (II)

7ನೇ ವರ್ಷ, ಪಿಂಗಳ, ಜ್ಯೇಷ್ಠ ಶು. ಪುಣ್ಣಮಿ, ಸೋಮವಾರ, ಸೋಮಗ್ರಹಣ, ಸಂಕ್ರಮಣ = ಕ್ರಿ.ಶ. 1197

ಕನ್ನಡ

ಅರಸಿಯಕೆರೆಯ ಮಹಾಪ್ರಧಾನ ಉತ್ತಾರಕ್ಕ-ಹೆಗ್ಗಡೆ, ಮಹಾದೇವ-ದಣ್ಣಾಯಕ ಮತ್ತು ಹೆಗ್ಗಡೆ ಜನ್ನಯ್ಯರು ಅದೇ ದೇವಸ್ಥಾನದ ದೀಪ ಮತ್ತು ಧೂಪದ ವ್ಯವಸ್ಥೆಗಾಗಿ ಮಗ್ಗ, ಎಣ್ಣೆ ಗಾಣ ಮತ್ತು ಪಂಚಕಾರುಕ ಮೇಲಿನ ಸುಂಕವನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ. ಈ ದಾನವನ್ನು ರಾಜಗುರು ಲೋಕಾಭರಣ ಗುರುದೇವನಿಗೆ ವಹಿಸಲಾಯಿತು.

ಆ್ಯರಿಎ, 1918-19, ಸಂ. 1918 ರ 221; ಸೌಇಇ, IX i, ಸಂ. 323.

ಸಂ. 148

ಅದೇ ದೇವಸ್ಥಾನದ ಬಲಭಾಗದ ಕಂಬದ ಬೋದಿಗೆ ಮೇಲೆ

ಹೊಯ್ಸಳ, ವೀರ ಬಲ್ಲಾಳ (II)

ವರ್ಷ 15, ರಕ್ತಾಕ್ಷಿ, ವೈಶಾಖ ಪುಣ್ಣಮೆ, ಸೋಮವಾರ, ಚಂದ್ರಗ್ರಹಣ = ಕ್ರಿ.ಶ. 1204, ಏಪ್ರಿಲ್ 15, ಗುರುವಾರ

ಕನ್ನಡ

ಕುರೇತಿ ಗ್ರಾಮದ ಮಹಾಜನರು ಊರೊಡೆಯ ಮುಂತಾದವರ ನೇತೃತ್ವದಲ್ಲಿ ಅಹುಮಲ್ಲೇಶ್ವರ ದೇವರಿಗೆ 2 ಗಣಿಗನ-ಮತ್ತರು ಭೂಮಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1952-53, ಸಂ. ಬಿ 216.

ಸಂ. 149

ಅದೇ ದೇವಸ್ಥಾನದ ಎಡಗಡೆಗೆ ಕಂಬದ ಬೋದಿಗೆ ಮೇಲೆ

--

--

ಕನ್ನಡ

ಗುಡಯ್ಯಸೆಟ್ಟಿ ಮತ್ತು ಕರ್ಣಸೆಟ್ಟಿ ಎಂಬ ಇಬ್ಬರು ಸಹೋದರರ ಉಲ್ಲೇಖವಿದೆ. ಬಹುಶಃ 26 ಮತ್ತರು ಭೂಮಿಯಲ್ಲಿ ಒಂದು ಮತ್ತರು ಭೂಮಿಯನ್ನು ಆಹ[ವ]ಮಲ್ಲೇಶ್ವರ ದೇವರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1952-53, ಸಂ. ಬಿ 217.

ಸಂ. 150

ಅದೇ ದೇವಸ್ಥಾನದಲ್ಲಿ ದಕ್ಷಿಣ ಪ್ರವೇಶದ್ವಾರದಲ್ಲಿ ರಾಜವಂಶದ ವ್ಯಕ್ತಿಯ ವಿಗ್ರಹದ ಹಿಂಭಾಗದ ಗೋಡೆಯ ಮೇಲೆ

--

ಚಾಲುಕ್ಯ ವಿಕ್ರಮ ವರ್ಷ 11, ನಳ, ಆಷಾಢ, ಪುಣ್ಣಮೆ, ಸೋಮವಾರ, ಚಂದ್ರಗ್ರಹಣ, ವ್ಯತಿಪಾತ = ಕ್ರಿ.ಶ. 1087

ಕನ್ನಡ

ಹಾಳಾಗಿದೆ. ಬ್ರಹ್ಮಪುರಿ ಗ್ರಾಮ ಕುರುವತ್ತಿಯ ಊರೊಡೆಯ ಮತ್ತಿತರರು ಒಂದು ಹೂವಿನ ತೋಟಕ್ಕಾಗಿ ಭೂಮಿಯನ್ನು ದಾನ ನೀಡಿ ಅದನ್ನು ಅಭಿನವ ವಾ[ಜ]ದೇವನಿಗೆ ಒಪ್ಪಿಸಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1952-53, ಸಂ. ಬಿ 218.

ಸಂ. 151

ಆಂಜನೇಯ ದೇವಸ್ಥಾನದ ಹತ್ತಿರ ಬಿದ್ದಿರುವ ಒಡೆದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

ತಾರಣ, ವೈಶಾಖ . . . (12ನೇ ಶತಮಾನ)

ಕನ್ನಡ

ಹಾಳಾಗಿದೆ. ಮಹಾಮಂಡಲೇಶ್ವರ ಶಂಕರದೇವನನ್ನು ಉಲ್ಲೇಖಿಸುತ್ತದೆ ಮತ್ತು ಭೂಮಿ ದಾನವನ್ನು ದಾಖಲಿಸುತ್ತದೆ.

ಆ್ಯರಿಎ, 1919-20, ಸಂ. 1919 ರ 728; ಸೌಇಇ, IX i, ಸಂ. 290.

ಮಾಗಳ

ಸಂ. 152

ಸಿಬಾರದಕಟ್ಟೆಯ ಹತ್ತಿರ ವೀರಗಲ್ಲಿನ ಮೇಲೆ

--

--

ಕನ್ನಡ

ತುಂಬ ಹಾಳಾಗಿದೆ.

ಆ್ಯರಿಇಎ, 1949-50, ಸಂ. ಬಿ 200.

ಸಂ. 153

ಸೂರ್ಯನಾರಾಯಣ ದೇವಸ್ಥಾನದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ಹೊಯ್ಸಳ, ವಿಷ್ಣುವರ್ಧನ ಬಲ್ಲಾಳ (II)

ಶಕ 1131, ಶುಕ್ಲ, ಶ್ರಾವಣ ಶು. ಪೌರ್ಣಮಿ, ಸೋಮವಾರ, ಸೋಮಗ್ರಹಣ, ಕರ್ಕಾಟಕ-ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1209, ಜುಲೈ 18, ಶನಿವಾರ

ಕನ್ನಡ

ಅರಸನು ಹೆರ್ದೊರೆಯವರೆಗಿನ ಗಂಗವಾಡಿ-96000, ನೊಣಂಬವಾಡಿ-32000, ಮತ್ತು ಮಾಸವಾಡಿಗಳನ್ನು ಆಳುತ್ತಿದ್ದನು ಮತ್ತು ವಿಜಯಸಮುದ್ರವೆಂದು ಕರೆಯಲ್ಪಡುತ್ತಿದ್ದ ಹಳ್ಳವೂರಿನಲ್ಲಿ ತಂಗಿದ್ದನೆಂದು ತಿಳಿಸುತ್ತದೆ. ಮಾಂಗೊಳದ ಮರ್ಮ್ಮರಸನು ಶಿವ, ವಿಷ್ಣು ಮತ್ತು ಸೂರ್ಯದೇವರಿಗೆ ದೇವಸ್ಥಾನವನ್ನು ಕಟ್ಟಿಸಿದ್ದನ್ನು ಮತ್ತು ಅರಸನ ಭಂಡಾರಿ ಬ್ರಾಹ್ಮಣ ಸಿಂಗಯ್ಯ ಮತ್ತು ಮಾಂಗೊಳದ ಇತರ ಮಹಾಜನರು ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 123; ಸೌಇಇ, IX i, ಸಂ. 329.

ಸಂ. 154

ಅದೇ ದೇವಸ್ಥಾನದಲ್ಲಿ ಕಂಬದ ಮೇಲೆ

--

ವಿಕೃತ, ಶ್ರಾವಣ ಶು. ಪೌರ್ಣಮಿ, ಸೋಮವಾರ

ಕನ್ನಡ

ಸಮೆಯದ-ಗರುಡ ಮಮ್ಮರಸನು ಸೋಮನಾಥದೇವರ ದೇವಸ್ಥಾನಕ್ಕೆ ಸೇರಿದ ಕಂದಾಯರಹಿತ ಭೂಮಿಯ ಒಂದು ಭಾಗವನ್ನು ಆ ದೇವಸ್ಥಾನವನ್ನು ಕಟ್ಟಿದ ಆಚಾರಿ ಬಮ್ಮೋಜನಿಗೆ ವಹಿಸಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 124.

ಸಂ. 155

ಅದೇ ದೇವಸ್ಥಾನದ ಹಜಾರದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ (ವಿಕ್ರಮಾದಿತ್ಯ VI)

ಚಾಲುಕ್ಯ ವಿಕ್ರಮ ವರ್ಷ 41, ದುರ್ಮುಖಿ, ಪುಷ್ಯ (ಬ. 3 ?), ಆದಿವಾರ, ಉತ್ತರಾಯಣ ಸಂಕ್ರಮಣ = ಕ್ರಿ.ಶ. 1116, ಡಿಸೆಂಬರ್ 24, ಆದಿವಾರ

ಕನ್ನಡ

ಹಾಳಾಗಿದೆ. (ಸೋಮೇಶ್ವರ) ದೇವರ ಸೇವೆಗೆ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ಮತ್ತೊಮ್ಮೆ ಶಾರ್ವರಿ ವರ್ಷದಲ್ಲಿ ಮಹಾಜನರು ಸೋಮೇಶ್ವರ ದೇವರಿಗೆ ಭೂಮಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 125; ಸೌಇಇ, IX i, ಸಂ. 194.

ಸಂ. 156

ವೇಣುಗೋಪಾಲ ದೇವಸ್ಥಾನದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ಹೊಯ್ಸಳ, ವಿಷ್ಣುವರ್ಧನ ವೀರ ಬಲ್ಲಾಳದೇವ (II)

ಶಕ 1136, ಭವ, ಚೈತ್ರ ಶು. 11, ಬೃಹಸ್ಪತಿವಾರ, ಸಂಕ್ರಮಣ ವ್ಯತಿಪಾತ = ಕ್ರಿ.ಶ. 1215, ಮಾರ್ಚ್ 2, ಗುರುವಾರ

ಕನ್ನಡ ಮತ್ತು ಸಂಸ್ಕೃತ, ಕನ್ನಡ

ಊರೊಡೆಯರಾದ ಹರಿಹರ ಮತ್ತು ಗೋವಿಂದರು ಮಾಂಗೊಳದ ಮಹಾಜನರ ಸಹಾಯದಿಂದ ಶ್ರೀ ಗೋಪಾಲದೇವರ ವಿಗ್ರಹವನ್ನು ಪ್ರತಿಷ್ಠಾಪಿಸಿ, ದೇವರ ಪೂಜೆಗೆ ಭೂಮಿ ಮತ್ತು ಮನೆಗಳನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ. ಬ್ರಾಹ್ಮಣ ದಂಡನಾಯಕ ಮತ್ತು ಅರಸನ ಮಂತ್ರಿಯಾದ ಮಾಧವನನ್ನು ವೀರ ಯೋಧನೆಂದು ಹೊಗಳಲಾಗಿದೆ.

ಆ್ಯರಿಎ, 1913-14, ಸಂ. 1913 ರ 126; ಸೌಇಇ, IX i, ಸಂ. 333.

ಸಂ. 157

ಅದೇ ಕಲ್ಲಿನ ಮೇಲೆ

--

ವಿಜಯ, ಆಶ್ವಯುಜ ಶು. 10 = ಬಹುಶಃ ಕ್ರಿ.ಶ. 1233-34

ಕನ್ನಡ

ಮಹಾವಡ್ಡವ್ಯವಹಾರಿ ವಾಸುದೇವ ನಾಯಕನು ಗೋಪಾಲದೇವರ ಸೇವೆಗೆ ಹೂವಿನ ತೋಟಕ್ಕಾಗಿ 2 ಗದ್ಯಾಣಗಳನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 126-ಎ; ಸೌಇಇ, IX i, ಸಂ. 345.

ಮಗಿಮಾವಿನಹಳ್ಳಿ

ಸಂ. 158

ವೀರಣ್ಣ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ

--

(i) ಶಕ 1466, ಕ್ರೋಧಿ, ಮಾಘ ಶು. 15 = ಕ್ರಿ.ಶ. 1544, ಮಾರ್ಚ್ 9

(ii) ಶಕ 1461, ವಿಕಾರಿ, ಶ್ರಾವಣ = ಕ್ರಿ.ಶ. 1539

ಕನ್ನಡ

ಅಳಿಯ ರಾಮರಾಜನ ಮಗಳು ತಿರುಮಲಮ್ಮನಿಗೆ ಪುಣ್ಯವಾಗಲೆಂದು ಹೊಸ ಗ್ರಾಮ ಚಿಕ-ತಿಮ್ಮಾಪುರ ಅಗ್ರಹಾರವನ್ನು ಸ್ಥಾಪಿಸಿದ್ದನ್ನು ತಿಳಿಸುತ್ತದೆ. ಅವಳು ಮದುವೆಯಾಗಬೇಕಾದ (ಮದವಳಿಗೆ) ಕುಮಾರ್ತಿಯಾಗಿದ್ದಳೆಂದು ತಿಳಿಸುತ್ತದೆ. ಎರಡನೆಯ ದಿನಾಂಕ ಅಚ್ಯುತನ ಸಾಮಂತನೆಂದು ವರ್ಣಿಸಲಾದ ರಾಮಯಮಾತ್ಯನದು.

ಆ್ಯರಿಎ, 1914-15, ಸಂ. 1914 ರ 514.

ಸಂ. 159

ಅದೇ ದೇವಸ್ಥಾನದ ಮುಂದೆ ನಿಲ್ಲಿಸಿರುವ ಇನ್ನೊಂದು ಕಲ್ಲಿನ ಮೇಲೆ

--

ರೌದ್ರಿ, ಪುಷ್ಯ ಶು. 12

ಕನ್ನಡ

ತಿಮ್ಮಾಪುರ ಅಗ್ರಹಾರದ ಪ್ರಮುಖ ನಿವಾಸಿಗಳು ಉಪ್ಪಾರ ಗೋವಿಂದಯ್ಯನಿಗೆ ಉಪ್ಪಿನ ಮಾಳೆ ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 515.

ಸಂ. 160

ಗ್ರಾಮದ ಒಂದು ಹೊಲದಲ್ಲಿ ಕಾಳಮ್ಮ ಕಲ್ಲಿನ ಮೇಲೆ

--

--

--

ಕರಿಯಪ್ಪನು ಗಿಂಡ-ರತ್ನ-ಮೊಗವನ್ನು ಮಾಡಿಸಿದ್ದನ್ನು ತಿಳಿಸುತ್ತದೆ. ಇದರ ಅರ್ಥ ಸ್ಪಷ್ಟವಾಗಿಲ್ಲ.

ಆ್ಯರಿಎ, 1914-15, ಸಂ. 1914 ರ 516.

ಸಂ. 161

ಗ್ರಾಮದ ಹಿರೆಕೆರೆಯ ದಂಡೆಯ ಮೇಲೆ ನಿಲ್ಲಿಸಿರುವ ಕಲ್ಲಿನ ಮೇಲೆ

--

ಶಕ 1466, ಕ್ರೋಧಿ, ಮಾಘ ಶು. 15 = ಕ್ರಿ.ಶ. 1554, ಮಾರ್ಚ್ 9, ಆದಿತ್ಯವಾರ

ಕನ್ನಡ

ಬಯಕಾರ ರಾಮಪ್ಪಯ್ಯನು ತನ್ನ ಮಗಳು ಕಾಮಮ್ಮನಿಗೆ ಪುಣ್ಯವಾಗಲೆಂದು ಕಾಮಸಮುದ್ರ ಕೆರೆಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಶಾಸನದ ಉಳಿದ ಭಾಗವು ಶಾಸನ ಸಂಖ್ಯೆ 514ರಂತೆಯೇ ಇದೆ ಮತ್ತು ಅದೇ ದಿನಾಂಕವನ್ನು ಅಂದರೆ ಶಕ 1461, ವಿಕಾರಿ, ಶ್ರಾವಣ (= ಕ್ರಿ.ಶ. 1539) ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 517.

ಮೈಲಾರ

ಸಂ. 162

ಸೋಮಲಿಂಗೇಶ್ವರ ದೇವಸ್ಥಾನದ ಮುಖ್ಯ ದ್ವಾರದ ಹತ್ತಿರ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ (ಸೋಮೇಶ್ವರ I)

ಶಕ 968, ವ್ಯಯ, ಫಾಲ್ಗುಣ ಶು. 3, ಆದಿತ್ಯವಾರ, ಉತ್ತರ-ಭಾದ್ರಪದ, ಸಾಧ್ಯಯೋಗ = ಕ್ರಿ.ಶ. 1046, ಫೆಬ್ರವರಿ 1, ಆದಿತ್ಯವಾರ

ಕನ್ನಡ

ಮಹಾಮಂಡಲೇಶ್ವರ [ಗಂಡರಾ]ದಿತ್ಯರಸನು ಸಿಂದವಾಡಿ-1000, ಅಗ್ರಹಾರ ನರಗುಂದ ಮತ್ತು ಬೆಣ್ಣೆವೂರುಗಳನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಪೆರ್ಗಡೆ ಕಾಳಿಮಯ್ಯ ಅಥವಾ ಕಾಳಿಮರಸನು ಮೇಳಿಮಡುವಿನ ತೇಜೋರಾಶಿ ಪಂಡಿತನ ಶಿಷ್ಯ ಚಿಲ್ಲುಕಾಚಾರ್ಯನ ಪಾದ ತೊಳೆದು ಸ್ವಯಂಭುದೇವ ಮತ್ತು ಮೂಲಸ್ಥಾನದೇವರ ಸೇವೆಗೆ ಭೂಮಿ, ಎರಡು ಮನೆ ಮತ್ತು ಒಂದು ಅಂಗಡಿಯನ್ನು ದಾನ ನೀಡಿದನು. ಮಹಾಜನರು ಯಾವಾಗಲು ಬ್ರಹ್ಮಚರ್ಯವುಳ್ಳವನನ್ನು ದೇವಸ್ಥಾನಗಳ ಮುಖ್ಯಸ್ಥನನ್ನಾಗಿ ನೇಮಿಸಬೇಕು ಮತ್ತು ಬ್ರಹ್ಮಚರ್ಯವಿಲ್ಲದವನನ್ನು ಹೊರದೂಡಬೇಕೆಂದೂ ತಿಳಿಸುತ್ತದೆ. ಅರಸನು ಉಪ್ಪು, ಸಕ್ಕರೆ ಮತ್ತು ಇತರ ಮೂರು ರಸಗಳ ಮೇಲಿನ ಸುಂಕವನ್ನು ರದ್ದುಮಾಡಿದ್ದನ್ನು ತಿಳಿಸುತ್ತದೆ. ಬಯ್ದವರಿಗೆ, ಹೊಡೆದವರಿಗೆ, ಇರಿದವರಿಗೆ, ಸುಲಿಗೆ ಮಾಡುವವರ ಸಹವಾಸ ಮಾಡಿದವರಿಗೆ ದಂಡ ವಿಧಿಸುವುದನ್ನು ತಿಳಿಸುತ್ತದೆ. ಈ ಶಾಸನವನ್ನು ನಾಗವಾರನು ರಚಿಸಿದನು, ನಾಗಮ್ಮನು ಬರೆದನು ಮತ್ತು ಚಾವುಂಡೋಜನು ಕಂಡರಿಸಿದನು.

ಆ್ಯರಿಎ, 1914-15, ಸಂ. 1914 ರ 484; ಸೌಇಇ, IX i, ಸಂ. 102.

ಸಂ. 163

ಅದೇ ಕಲ್ಲಿನ ಮೇಲೆ

--

--

ಕನ್ನಡ

ತುಂಬ ಹಾಳಾಗಿದೆ. ಬರ್ಮದೇವಯ್ಯನ ಮಗ ಕಾಳಿದಾಸನು ಮೂಲಸ್ಥಾನದ [ದೇವ]ರ ಮುಂದೆ ದೀಪ ಉರಿಸಲು ಒಂದು ಮತ್ತರು ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ..

ಆ್ಯರಿಎ, 1914-15, ಸಂ. 1914 ರ 484-ಎ; ಸೌಇಇ, IX i, ಸಂ. 103.

ಸಂ. 164

ಅದೇ ದೇವಸ್ಥಾನದ ಮುಂದೆ ದೀಪಸ್ತಂಭದ ಮೇಲೆ

--

ಶ್ರೀಮುಖ, ಕಾರ್ತಿಕ ಬ. 10, ಶನಿವಾರ

ಕನ್ನಡ

ಹಾಳಾಗಿದೆ. ಬಹುಶಃ ಸ್ತಂಭದ ದಾನದ ಬಗ್ಗೆ ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 485.

ಸಂ. 165

ಕಲ್ಲೇಶ್ವರ ದೇವಸ್ಥಾನದ ಮುಖ ಮಂಟಪದ ಕಂಬದ ಕೆಳಭಾಗದಲ್ಲಿ

ಯಾದವ, ವೀರ ರಾಮಚಂದ್ರ

ಶಕ 1205, ಚಿತ್ರಭಾನು, ಜ್ಯೇಷ್ಠ ಶು. 1 = ಕ್ರಿ.ಶ. 1282, ಮೇ 9, ಶನಿವಾರ

ಕನ್ನಡ

ಜನ್ನುವ-ನಾಯಕನು ಗುಂಗುರಾಚಂದದ ಕಲಿನಾಥ ದೇವರ ಮುಂದೆ ನಂದಿಕೇಶ್ವರನನ್ನು (ನಂದಿಯನ್ನು) ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 486, ಸೌಇಇ, IX i, ಸಂ. 382.

ಸಂ. 166

ಗಂಗಿಮಾಳವ್ವ ದೇವಸ್ಥಾನದ ಹತ್ತಿರವಿರುವ ವೀರಗಲ್ಲಿನ ಮೇಲೆ

--

ಶ್ರೀಮುಖ, ಭಾದ್ರಪದ ಶು. 11

ಕನ್ನಡ

ಹೊನ್ನರಸನು ಮರಣಹೊಂದಿದ ನಂತರ ಮೈಲಾರಲಿಂಗದಲ್ಲಿ ಲೀನವಾದದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 487.

ಸಂ. 167

ಮೈಲಾರದೇವ ದೇವಸ್ಥಾನದ ಪ್ರಾಕಾರದ ಈಶಾನ್ಯ ದಿಕ್ಕಿನಲ್ಲಿ ಬಿದ್ದಿರುವ ಕಲ್ಲಿನ ಮೇಲೆ

--

ಶಕ 1334, ದುಂದುಭಿ, ಮಾರ್ಗಶಿರ ಶು. 6, ಆ(ದಿವಾರ) = ಕ್ರಿ.ಶ. 1412

ಕನ್ನಡ

ಗೌತಮ ಗೋತ್ರ ಋಕ್ ಶಾಕೆಯ ತ್ರಿಕಾಂಡೆಯ ನಾಗಣ್ಣನ ಮಗ ಮೈಲಾರದೇವರ ಭಂಡಾರದ ಗಂಗರಸನು ಮಾಳಲದೇವಿಗೆ ಲೀಲಾ-ಸುಖನಾಸಿ, ನಾಚಗ್ರುಹ (ನಾಟ್ಯಗೃಹ)-ರಂಗಮಂಡಪ ಕಟ್ಟಿಸಿದನೆಂದು ತಿಳಿಸುತ್ತದೆ.

ಕಸಾಪಪ, 74 (1-2), ಸಂ. 1, ಪು. 7.

ಸಂ. 168

ಅದೇ ದೇವಾಲಯದಲ್ಲಿಯ ರಂಗಮಂಟಪದಲ್ಲಿಯ ಕಂಬದ ಪೂರ್ವ ಮುಖದಲ್ಲಿ

--

ನಳ (15ನೇ ಶತಮಾನ)

ಸಂಸ್ಕೃತ, ಕನ್ನಡ

ಗಂಗಣ್ಣನು ಶಿಲಾಮಂಡಪವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ಕಸಾಪಪ, 74 (1-2), ಸಂ. 2, ಪು. 7-8.

ಸಂ. 169

ಅದೇ ಕಂಬದ ಉತ್ತರ ಮುಖದಲ್ಲಿ

--

15ನೇ ಶತಮಾನ

ಸಂಸ್ಕೃತ, ಕನ್ನಡ

ಗಂಗಣ್ಣನು ಚಿತ್ರತೋರಣ, ನಾಲ್ಕು ಕಂಬ ಮತ್ತು ವಾತಾಯನವುಳ್ಳ ರಂಗಮಂಡಪವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ಕಸಾಪಪ, 74 (1-2), ಸಂ. 3, ಪು. 8.

ಸಂ. 170

ಅದೇ ದೇವಸ್ಥಾನದ ರಂಗಮಂಟಪದ ಇನ್ನೊಂದು ಕಂಬದ ಮೇಲೆ

ವಿಜಯನಗರ, ಪ್ರೌಢದೇವರಾಯ

ಶಕ 1358, ನಳ, ವೈಶಾಖ 11 = ಕ್ರಿ.ಶ. 1436 (ಅನಲ)

ಕನ್ನಡ

ಮಹಾಪ್ರಧಾನ ಸಿಂಗಣ್ಣ ದಣ್ಣಾಯಕನ ಆದೇಶದ ಮೇರೆಗೆ ಅಧಿಕಾರಿ ಮತ್ತು ಮಯಿಲಾರ ದೇವರ ಭಕ್ತನಾದ ಗಂಗರಸನು ಮಯಿಲಾರ ದೇವರ ರಂಗಮಂಡಪವನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಗಂಗರಸನು ಹೆಗ್ಗಡೆ ದೇವರಸನ ತಮ್ಮ ಮತ್ತು ಗೌತಮ ಗೋತ್ರ, ಋಕ್ ಶಾಖೆಯ ತ್ರಿಕಾಂಡಿಯ ನಾಗಪಯ್ಯನ ಮಗನೆಂದು ತಿಳಿಸುತ್ತದೆ.

ಕಸಾಪಪ, 74 (1-2), ಸಂ. 4, ಪು. 8-9.

ಸಂ. 171

ಮೈಲಾರ ದೇವಸ್ಥಾನದ ಪ್ರಾಕಾರದ ಹೊರಗೆ ಹೆಗ್ಗಪ್ಪಗುಡಿಯ ತೊಲೆಯ ಮೇಲೆ

--

ಶಕ 1365, ರುಧಿರೋದ್ಗಾರಿ, ಮಾರ್ಗ(ಶಿರ) ಶು. 6, ಬು(ಧವಾರ) = ಕ್ರಿ.ಶ. 1443, ಡಿಸೆಂಬರ್ 12 (ಗುರುವಾರ)

ಕನ್ನಡ

ಗೌತಮ ಗೋತ್ರ ಮತ್ತು ಋಕ್ ಶಾಖೆಯ ತ್ರಿಕಾಂಡೆಯ ನಾಗಣ್ಣನ ಮಗನಾದ ಮತ್ತು ಮಯಿಲಾರ ದೇವರ ಭಂಡಾರದ ಅಧಿಕಾರಿಯಾದ ಗಂಗಯ್ಯನು ಹೆಗ್ಗಡೆದೇವರ ಶಿಲಾ ಮಂಟಪವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ಕಸಾಪಪ, 74 (1-2), ಸಂ. 5, ಪು. 9.

ಸಂ. 172

ಅದೇ ದೇವಸ್ಥಾನದ ಪ್ರಾಕಾರದೊಳಗಿನ ಕಲ್ಯಾಣಮಂಟಪದ ಮಯಿಲಾರ-ಮಾಳಮ್ಮನ ವಿಗ್ರಹದ ಮೇಲೆ

--

ಶಕ 1440, ಬಹುಧಾನ್ಯ, ಮಾರ್ಗಶಿರ ಶು... = ಕ್ರಿ.ಶ. 1518, ನವೆಂಬರ್

ಕನ್ನಡ

ನಾಕರಸಯ್ಯ ಮತ್ತು ಆತನ ಪತ್ನಿ ಬಸವಮ್ಮನು ವಿಗ್ರಹವನ್ನು ಮಾಡಿಸಿದರೆಂದು ತಿಳಿಸುತ್ತದೆ.

ಕಸಾಪಪ, 74 (1-2), ಸಂ. 6, ಪು. 9-10.

ಸಂ. 173

ಅದೇ ದೇವಸ್ಥಾನದ ಪ್ರಾಕಾರದ ಪೂರ್ವಕ್ಕೆ ವೀರಭದ್ರ ಗುಡಿಯ ಮುಂದಿನ ಕಲ್ಲಿನ ಮೇಲೆ

--

ಶ್ರೀಮುಖ

ಕನ್ನಡ

ಅಳಿಸಿಹೋಗಿದೆ.

ಕಸಾಪಪ, 74 (1-2), ಸಂ. 7, ಪು. 10.

ಮನ್ನೆರುಮಸಲವಾಡ

ಸಂ. 174

ಪಾಳುಬಿದ್ದ ಮಠದ ನಿವೇಶನದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ಯಾದವ, ರಾಮಚಂದ್ರದೇವ

ಶಕ 1219, ಹೇಮಳಂಬಿ, (ಹೇವಿಳಂಬಿ), ಮಾರ್ಗಶಿರ ಶು. 5, ಗುರುವಾರ = ಕ್ರಿ.ಶ. 1297, ನವಂಬರ್ 20, ಬುಧವಾರ

ಕನ್ನಡ

ಮಹಾಮಂಡಲೇಶ್ವರ ಭೈರವದೇವರಸ, ಗೌಡ, ಮತ್ತು ಇತರರು ಪೊಸ್ತಕಗಚ್ಛ, ದೇಸಿಗಣ ಮತ್ತು ಮೂಲಸಂಘದ ನೇಮಿಚಂದ್ರ ರಾವುಳನ ಶಿಷ್ಯ ವಿನಯಚಂದ್ರ ದೇವನಿಗೆ ಮಹಾಮಂಡಲೇಶ್ವರ ಸಾಳೆವೆಯ ತಿಕಮದೇವ ರಾಣೆಯನ ಮಹಾಪ್ರಧಾನ ಸಾವಂತ-ಪಂಡಿತನ ಮಗ ಕೇಶವ ಪಂಡಿತನಿಂದ ಜೀರ್ಣೋದ್ಧಾರಗೊಂಡ ಮೊಸಳೆವಾಡದ ಜಿನ ದೇವಸ್ಥಾನದ ಪೂಜೆ ಪುನಸ್ಕಾರಗಳಿಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಅಲ್ಲದೆ ಎಂಟು ಹಿಟ್ಟುಗಳು ಮತ್ತು ಗ್ರಾಮದ ಜನರು ಹಗರನೂರಿನ ಪರಿಶಗೌಡನನ್ನು ತಮ್ಮ ಮುಖ್ಯಸ್ಥನನ್ನಾಗಿ ಮಾಡಿಕೊಂಡು ಮೊಸಳವಾಡದಲ್ಲಿ ಕನ್ನಾಯಿಯು ಕಟ್ಟಿಸಿದ ಪಾರ್ಶ್ವನಾಥದೇವರ ದೇವಸ್ಥಾನಕ್ಕೆ ಬೇರೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 256; ಸೌಇಇ, IX i, ಸಂ. 387.

ಸಂ. 175

ಕಲ್ಲೇಶ್ವರ ದೇವಸ್ಥಾನದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲದೇವ

ಕಲಚೂರ್ಯ ಅರಸ ರಾಯನಾರಾಯಣ ಆಹವಮಲ್ಲದೇವನ 4ನೇ ವರ್ಷ, ಶೋಭಕೃತ, ಜ್ಯೇಷ್ಠ, ಪೌರ್ಣಮಿ, ಸೋಮಗ್ರಹಣ = ಕ್ರಿ.ಶ. 1183, ಜೂನ್ 7

ಕನ್ನಡ

ಜಗದೇಕಮಲ್ಲನ ಸಾಮಂತ ಮಹಾಮಂಡಲೇಶ್ವರ ವಿಜಯ ಪಾಂಡ್ಯದೇವನು ಕೋಗಳಿ-500 ಮತ್ತು ನೊಳಂಬವಾಡಿ-32000 ಗಳನ್ನಾಳುತ್ತಿದ್ದನೆಂದು ತಿಳಿಸುತ್ತದೆ. ಮಹಾಮಂಡಲೇಶ್ವರ ವಿಕ್ರಮಾದಿತ್ಯರಸನು ರಾಯರಸ, ಮತ್ತು ಕೆಲವು ಹೆಗ್ಗಡೆ ಮತ್ತು

ಗಾವುಂಡರೊಡಗೂಡಿ ಮೊದಲು ನೀಡಿದ ಒಂದು ದಾನವನ್ನು ಪುನಃ ದಾನ ಮಾಡಿ ಕಲಿದೇವರ ಸೇವೆಗೆ ನೀಡಿ, ಅದನ್ನು ಕಲ್ಯಾಣಶಕ್ತಿ ಪಂಡಿತನ ವಶಕ್ಕೆ ಕೊಟ್ಟನು.

ಆ್ಯರಿಎ, 1918-19, ಸಂ. 1918 ರ 257; ಸೌಇಇ, IX i, ಸಂ. 276.

ಸಂ. 176

ಅದೇ ದೇವಸ್ಥಾನದ ಹತ್ತಿರ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲದೇವ

ಶಕ 958, ಧಾತು, ಕಾರ್ತಿಕ ಶು. ಪಡಿವ, ಆದಿತ್ಯವಾರ, ಸೂರ್ಯಗ್ರಹಣ = ಕ್ರಿ.ಶ. 1036, ನವೆಂಬರ್ 1, ಆದಿತ್ಯವಾರ

ಕನ್ನಡ

ಅಯ್ಯಣ ಭೀವಜೋಗರಸ, ಮಾರ ಗಾವುಂಡ ಮತ್ತು ಇತರರು ಮೊಸಳೆಮಡುವಿನ ಕಲಿದೇವರ ದೇವಸ್ಥಾನಕ್ಕೆ ಭೂಮಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ನೊಳಂಬ-ಪಲ್ಲವ-ಪೆರ್ಮಾನಡಿಯು (ಕೋಗಳಿ)-500, ಕದಂಬಳಿಗೆ-1000 ಮತ್ತು ಬಲ್ಲಕುಂದೆ-300 ನ್ನು ಆಳುತ್ತಿದ್ದ ಸಮಯದಲ್ಲಿ ಗುರುದೇವನು ಕೋಗಳಿ-500ರರೊಳಗಿನ ಮೊಸಳೆಮಡುವನ್ನು ಆಳುತ್ತಿದ್ದನು.

ಆ್ಯರಿಎ, 1918-19, ಸಂ. 1918 ರ 258; ಸೌಇಇ, IX i, ಸಂ. 90.

ಮೊದಲಘಟ್ಟ

ಸಂ. 177

ತುಂಗಭದ್ರ ಅಣೆಕಟ್ಟಿನ ಅಸಿಸ್ಟಂಟ್ ಇಂಜನಿಯರ್ ಕಚೇರಿಯ ಪ್ರವೇಶದ್ವಾರದ ಹತ್ತಿರ ಬಿದ್ದಿರುವ ಎರಡು ತುಂಡು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲ

ಶಕ 9 . ., ಮಾರ್ಗಶಿರ ಶು. 5, ಉತ್ತರಾಯಣ ಸಂಕ್ರಾಂತಿ

ಕನ್ನಡ

. . . . ದೇವಿಯು ಒಂದು ದೇವರ ಪೂಜೆಗೆ ಮತ್ತು ಕೆಲವು ವ್ಯಕ್ತಿಗಳಿಗೆ ಭೂಮಿ, ಎಣ್ಣೆ ಗಾಣ ಮುಂತಾದವುಗಳನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ. ರಣಮೂರ್ಖ (?) ವಂಶದ ಮಹಾಸಾಮಂತ ಮನ್ನೆಯ ಅಜ್ಜರಸ ಮತ್ತು ಕಿಸುಕಾಡು-70, ...-70, ತೊರಗಲೆ, ... ಯವಾಡಿ-140 ಮತ್ತು ಇತರ ವಿಭಾಗಗಳನ್ನು ಆಳುತ್ತಿದ್ದ ಒಬ್ಬ ಸಾಮಂತನ ಉಲ್ಲೇಖವಿದೆ. ಪನ್ನಾಳೆಯಕೋಟೆ ಮತ್ತು ಕೊಂಕಣ ದೇಶವನ್ನು ಉಲ್ಲೇಖಿಸುತ್ತದೆ.

ಆ್ಯರಿಎ, 1962-63, ಸಂ. ಬಿ 758.

ಮುದೇನೂರು

ಸಂ. 178

ಗ್ರಾಮದಲ್ಲಿಯ ದೇವಸ್ಥಾನದ ಜಗಲಿಗೆ ಒರಗಿಸಿಟ್ಟ ಕಲ್ಲಿನ ಮೇಲೆ

--

--

ಕನ್ನಡ (ಪ್ರಾಚೀನ)

ಹಾಳಾಗಿದೆ. ಬಹುಶಃ ಮುದುನೀರಿನಲ್ಲಿ ಒಬ್ಬ ಗಾವುಂಡನಿಗೆ ನೀಡಿದ ಭೂಮಿ ದಾನದ ಬಗ್ಗೆ ತಿಳಿಸುತ್ತದೆ. ಶಾಸನದ ಪ್ರಾರಂಭದಲ್ಲಿ ಘಂಗರ ಮಾರಮ್ಮನ ಹೆಸರಿದೆ.

ಆ್ಯರಿಎ, 1914-15, ಸಂ. 1914 ರ 461.

ಸಂ. 179

ಗ್ರಾಮದ ಉತ್ತರಕ್ಕೆ ಒಂದು ತೋಟದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

--

ಶಕ 1634, ನಂದನ, ಆಶ್ವಿಜ ಶು. 10 = ಕ್ರಿ.ಶ. 1712, ಸೆಪ್ಟೆಂಬರ್ 28

ಕನ್ನಡ

ಬಹುಶಃ ಒಂದು ಭೂಮಿ ದಾನವನ್ನು ದಾಖಲಿಸುತ್ತದೆ. ಬಸಪ್ಪನಾಯಕ ಮತ್ತು ಆತನ ಮಗನ ಉಲ್ಲೇಖವಿದೆ.

ಆ್ಯರಿಎ, 1914-15, ಸಂ. 1914 ರ 462.

ಸಂ. 180

ಗ್ರಾಮದ ಪೂರ್ವಕ್ಕೆ ಕೆರೆಯ ಹತ್ತಿರ ನಿಲ್ಲಿಸಿರುವ ಕಲ್ಲಿನ ಮೇಲೆ

--

ಶಕ 1776, ಆನಂದ, ಚೈತ್ರ ಶು. 6, ಸೋಮವಾರ = ಕ್ರಿ.ಶ. 1854, ಏಪ್ರಿಲ್ 3, ಸೋಮವಾರ

ಕನ್ನಡ

ಮುದನೂರಿನ ಹನ್ನೆರಡು ಜನ ಅಧಿಕಾರಿಗಳು (ಬಾರಬಲೂತಿ) ಒಂದು ಮಠವನ್ನು ಕಟ್ಟಿಸಿ ಅಲ್ಲಿ ಪೂಜೆ ನಡೆಸುವುದಕ್ಕೆ ಒಪ್ಪಿಕೊಂಡದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 463.

ಮುಸುವನಕಲ್ಲಹಳ್ಳಿ

ಸಂ. 181

ಕಲ್ಲೇಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿರುವ ಕಲ್ಲಿನ ಮೇಲೆ

ವಿಜಯನಗರ, ಅಚ್ಯುತ

--

ಸಂಸ್ಕೃತ, ಕನ್ನಡ

ಅರಸನ ಪ್ರೀತಿಗೆ ಪಾತ್ರನಾದ ಅಣ್ಣಾಜಿಯು ಭಾರದ್ವಾಜ ಗೋತ್ರ, ಆಪಸ್ತಂಭ ಸೂತ್ರ ಮತ್ತು ಯಜುಶಾಖೆಗೆ ಸೇರಿದ ಲಿಂಗಭಟ್ಟನ ಮಗ ಸಿಂಗಭಟ್ಟನಿಗೆ ಕಲ್ಲಹಳ್ಳಿ ಗ್ರಾಮವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 262; ಸೌಇಇ, IX i, ಸಂ. 602.

ನಕ್ಕರಹಾಳ

ಸಂ. 182

ಆಂಜನೇಯ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ

ವಿಜಯನಗರ, ಸದಾಶಿವರಾಯ

ಶಕ 1483, ದುಂದುಭಿ, ನಿಜ-ಶ್ರಾವಣ ಶು. 10 = ಕ್ರಿ.ಶ. 1562, ಆಗಸ್ಟ್ 9, ಆದಿತ್ಯವಾರ

ಕನ್ನಡ

ಗಾಜುಲ್ಲ-ನಾಗಯ್ಯನ ಮಗನೂ ಮತ್ತು ನಗರೆಹಾಳದ ಅಧಿಕಾರಿಯೂ ಆದ ಪೆದಪ ನಗರೆಹಾಳದಲ್ಲಿ ಕಾಲುವೆಗೆ ದಸವಂಧ (ತೆರಿಗೆ) ಯನ್ನು ಗೊತ್ತುಪಡಿಸಿದ್ದನ್ನು ಮತ್ತು ಸೇನಬೋವ ತಿಮ್ಮರಸ, ಗೌಡ, ತಳಾರ ಮತ್ತು ಜೋಯಿಸರಿಗೆ ಮಾನ್ಯ ಭೂಮಿಗಳನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 507; ಸೌಇಇ, IX ii, ಸಂ. 676.

ಸಂ. 183

ಗ್ರಾಮದ ಪೂರ್ವಕ್ಕೆ ಬಿದ್ದಿರುವ ಕಲ್ಲಿನ ಮೇಲೆ

ವಿಜಯನಗರ, ವೀರಪ್ರತಾಪ ಸದಾಶಿ[ವ]

ಶಕ 1470, ಕೀಲಕ, ವೈಶಾಖ ಬ. ಆದಿವಾರ = ಕ್ರಿ.ಶ. 1548, ಏಪ್ರಿಲ್ 29 ಅಥವಾ ಮೇ 6, ಆದಿವಾರ

ಕನ್ನಡ

ಕೃಷ್ಣಪನಾಯಕನು ಬೊಮ್ಮಪುರದ ತಿಮಪನಿಗೆ ಕೋಗಳಿ-ವಳಿತದೊಳಗಿನ [ಕುಂಟೆ]ನೂರ-ಸೀಮೆಯಲ್ಲಿರುವ ನಗರೂರು ಎಂದು ಕರೆಯಲ್ಪಡುತ್ತಿದ್ದ ನಗರೆಹಳಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 508; ಸೌಇಇ, IX ii, ಸಂ. 630.

ನಂದಿಹಳ್ಳಿ

ಸಂ. 184

ಗ್ರಾಮದ ಒಂದು ಹೊಲದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ವಿಜಯನಗರ, ಸದಾಶಿವದೇವ

--

ಕನ್ನಡ

ಅರಸನು ಕೊಟೂರ-ಸೀಮೆಯಲ್ಲಿರುವ, ಗೋಪಿನಾಥಪುರವೆಂದು ಉಪನಾಮ ಹೊಂದಿರುವ ವೊಳಲಗುಂದಿ-ಭಯಿರಾಪುರ ಗ್ರಾಮವನ್ನು ಬಯಿಕಾರ ರಾಮಪಯನು ಸ್ಥಾಪಿಸಿದ ತಿಮಲಾಪುರ ಅಗ್ರಹಾರದ ಬಾಚೇಶ್ವರ ಮತ್ತು ಗೋಪಿನಾಥ ದೇವರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ. ಈ ಎರಡೂ ದೇವಸ್ಥಾನಗಳನ್ನು ರಾಮಪಯನು ಕಟ್ಟಿಸಿದ್ದನು.

ಆ್ಯರಿಎ, 1914-15, ಸಂ. 1914 ರ 464; ಸೌಇಇ, IX ii, ಸಂ. 682.

ರಂಗಪುರ

ಸಂ. 185

ನರಸಿಂಹದೇವರ ದೇವಸ್ಥಾನದ ಹತ್ತಿರದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ (II)

--

ಕನ್ನಡ

ಬಹಳ ಹಾಳಾಗಿದೆ.

ಆರ್ಯಿಇಎ, 1949-50, ಸಂ. ಬಿ 201.

ಸಂ. 186

ಬಿಷ್ಟಪ್ಪಯ್ಯನ ಮಠದಲ್ಲಿ ಕಂಬದ ಮೇಲೆ

ಯಾದವ, ರಾಮಚಂದ್ರ

ಜಯ, ಮಾಘ, ಶು. . . . . . . ಸೋಮವಾರ

ಕನ್ನಡ

ಹಾಳಾಗಿದೆ. ಜಕ್ಕರಸನು ರಾಮನಾಥ ದೇವರಿಗೆ ಚಿನ್ನವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆರ್ಯಿಇಎ, 1949-50, ಸಂ. ಬಿ 202.

ಸಂ. 187

ನರಸಿಂಹ ದೇವಸ್ಥಾನದ ಪ್ರವೇಶದ್ವಾರದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲ

ಶಕ 979, ಹೇಮಳಂಬಿ, ಚೈತ್ರ ಶು. 8, ಬೃಹಸ್ಪತಿವಾರ = ಕ್ರಿ.ಶ. 1058, ಮಾರ್ಚ್ 5, ಗುರುವಾರ

ಕನ್ನಡ

ಮಾಗೊಳದ ಮಹಾಜನರು ನರಸಿಂಹದೇವರ ಸೇವೆಗೆ 23 ಮತ್ತರು ಭೂಮಿಯನ್ನು ಮತ್ತು ಗಣಪತಿದೇವರ ಸೇವೆಗೆ ಸ್ವಲ್ಪ ಭೂಮಿಯನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.

ಆರ್ರಿಎ, 1913-14, ಸಂ. 1913 ರ 121; ಸೌಇಇ, IX i, ಸಂ. 120.

ಸಂ. 188

ಅದೇ ದೇವಸ್ಥಾನದ ಪ್ರವೇಶದ್ವಾರದಲ್ಲಿ ನಿಲ್ಲಿಸಿದ ಎರಡನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ ತ್ರಿಭುವನಮಲ್ಲ (ವಿಕ್ರಮಾದಿತ್ಯ VI)

(i) ಚಾಲುಕ್ಯ ವಿಕ್ರಮ ವರ್ಷ 41, ದುರ್ಮುಖಿ, ಪುಷ್ಯ ಶು. 3, ಆದಿತ್ಯವಾರ ಉತ್ತರಾಯಣ ಸಂಕ್ರಾಂತಿ = ಕ್ರಿ.ಶ. 1116, ಡಿಸೆಂಬರ್ 24, ಆದಿತ್ಯವಾರ (ಬ. ಬದಲಾಗಿ ಶು. ಎಂದು ಬರೆದಿದೆ)

(ii) ಯುವ, ಮಾಘ ಶು. 5, ಆದಿತ್ಯವಾರ = ಕ್ರಿ.ಶ. 1155, ಜನವರಿ 5, ಆದಿತ್ಯವಾರ

ಕನ್ನಡ

ರಾಣಿ ಪದ್ಮಲದೇವಿಯು ಮಾಂಗೊಳ ಅಗ್ರಹಾರವನ್ನಾಳುತ್ತಿದ್ದಳೆಂದು ತಿಳಿಸುತ್ತದೆ. ಮಾಂಗೊಳದ ಎರಡು ನೂರು ಮಹಾಜನರ ಕೋರಿಕೆಯ ಮೇರೆಗೆ ರಾಣಿಯು ತನ್ನ ಕಾರ್ಯಕರ್ತ ಪುಳಿಯಮ-ನಾಯಕನ ಮೂಲಕ ತಂಗಭದ್ರಾ ನದಿಯ ದಕ್ಷಿಣ ದಂಡೆಯ ಮೇಲಿರುವ ನರಸಿಂಘದೇವರ ದೇವಸ್ಥಾನಕ್ಕೆ ತೆರಿಗೆ ರಹಿತ ಭೂಮಿಯನ್ನು ದಾನ ನೀಡಿದಳು. ಇತರ ಭೂಮಿ ಮತ್ತು ಹಣದ ದಾನದ ಉಲ್ಲೇಖವೂ ಇದೆ.

ಆ್ಯರಿಎ, 1913-14, ಸಂ. 1913 ರ 122; ಸೌಇಇ, IX i, ಸಂ. 195.

ಶಿವಪಾದ

ಸಂ. 189

ಶಿಥಿಲಗೊಂಡ ಆಂಜನೇಯ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ (ಜಯಸಿಂಹ II)

ಶಕ 963 = ಕ್ರಿ.ಶ. 1041-42

ಕನ್ನಡ

ತ್ರುಟಿತ. ಹೊಸ-ವಡಂಗಿಲೆಯ ಮಹಾಜನರು ಒಂದು ದೇವಸ್ಥಾನಕ್ಕೆ (ಹೆಸರು ಹಾಳಾಗಿದೆ) ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಅಲ್ಲದೆ ಸರಸ್ವತಿ ದೇವಿಗೆ ನೀಡಿದ ದಾನದ ಬಗ್ಗೆಯೂ ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 501; ಸೌಇಇ, IX i, ಸಂ. 95.

ಸಂ. 190

ಮೈಲಾರಲಿಂಗಪಾದ ಗುಡಿಯ ಕಂಬದ ತಳಭಾಗದಲ್ಲಿ

--

--

ಕನ್ನಡ

ಸಿದ್ಧನಾಥದೇವರ ಪೂಜಾರಿ ಬೊಮರಾಸಿಯು ತನ್ನ ಸ್ಥಾನಕ್ಕೆ ಅಮಿತರಾಸಿಯನ್ನು ನೇಮಿಸಿ, ಆತನಿಗೆ ಐದು ಮಠಗಳ ಸಮಕ್ಷಮದಲ್ಲಿ ಸಿದ್ದೇಶ್ವರದೇವರ ಎರಡು ಗ್ರಾಮಗಳನ್ನು ಕೊಟ್ಟದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 502.

ಸೋಗಿ

ಸಂ. 191

ಕಲ್ಲೇಶ್ವರ ದೇವಸ್ಥಾನದಲ್ಲಿ ಮುಖ ಮಂಟಪದ ಕಂಬದ ಮೇಲೆ

ಹೊಯ್ಸಳ, ವೀರ-ನಹಸಿಂಹದೇವ (II)

6ನೇ ವರ್ಷ, ವ್ಯಯ, ಚೈತ್ರ ಶು. 10, ಸೋಮವಾರ = ಕ್ರಿ.ಶ. 1226, ಮಾರ್ಚ್ 9, ಸೋಮವಾರ

ಕನ್ನಡ

ಮಹಾಪ್ರಧಾನ ಬೊಮ್ಮಯ್ಯ ದಣ್ಣಾಯಕನ ಆಜ್ಞೆಯ ಮೇರೆಗೆ, ಸುಂಕಾಧಿಕಾರಿ ಸಿರಿಪಣ್ಣ ಮತ್ತು ಇತರರು, ಸೋಗೆಯ ಕಲ್ಲಿನಾಥ ದೇವರ ಸೇವೆಗೆ, ಪಾಂಡ್ಯನಾಡಿನ ಸುಂಕದ ಆದಾಯದಲ್ಲಿ ಪ್ರತಿ ವರ್ಷ ಎರಡು ಗದ್ಯಾಣಗಳನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಅದೇ ದೇವರಿಗೆ ಹೆಗ್ಗಡೆ ದೇವಯ್ಯ ಮತ್ತು ಇತರರು ಬಿಲುಕೊಡೆ ತೆರಿಗೆ ಅಧಿಕಾರಿ ಬೊಪ್ಪಯ್ಯ-ದಣ್ಣಾಯಕನ ಹೆಗ್ಗಡೆ ಹಿರಿಯಣ್ಣನ ಆಜ್ಞೆಯ ಮೇರೆಗೆ, ಇನ್ನೂ ಎರಡು ಗದ್ಯಾಣಗಳನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 447; ಸೌಇಇ, IX i, ಸಂ. 341.

ಸಂ. 192

ಅದೇ ದೇವಸ್ಥಾನದ ಮುಖ ಮಂಟಪದ ಇನ್ನೊಂದು ಕಂಬದ ಮೇಲೆ

--

ಶ್ರೀಮುಖ, ಆಶ್ವಿಜ ಬ. ಏಕಾದಶಿ, ಗುರುವಾರ

ಕನ್ನಡ

ನಾನಾದೇಶಿ ಮಲೆಯಾಳ-ಪೊರೆಯಚ್ಚ ಸೆಟ್ಟಿಯು ತನಗೆ ಮತ್ತು ತನ್ನ ತಮ್ಮ ಕುಮಾರಚ್ಚ ಸೆಟ್ಟಿಗೆ ಪುಣ್ಯವಾಗಲೆಂದು 700 ಕಮ್ಮ ಭೂಮಿಯನ್ನು ಕಲಿದೇವರ ದೇವಸ್ಥಾನಕ್ಕೆ ದಾನ ಮಾಡಿದ್ದನ್ನು ತಿಳಿಸುತ್ತದೆ. ಈ ಭೂಮಿಯನ್ನು ಆತನು ಬಸವಿ-ಮೂರಡೆಯಿಂದ ಪಡೆದಿದ್ದನು.

ಆ್ಯರಿಎ, 1914-15, ಸಂ. 1914 ರ 448.

ಸಂ. 193

ಅದೇ ದೇವಸ್ಥಾನದ ಮುಖ ಮಂಟಪದ ಮೂರನೆಯ ಕಂಬದ ಮೇಲೆ

ಹೊಯ್ಸಳ, ವೀರ-ನರಸಿಂಹದೇವ (II)

6ನೇ ವರ್ಷ, ವ್ಯಯ, ಚೈತ್ರ ಶು. 10, ಸೋಮವಾರ = ಕ್ರಿ.ಶ. 1226, ಮಾರ್ಚ್ 9, ಸೋಮವಾರ

ಕನ್ನಡ

ಪಾಂಡ್ಯನಾಡಿನಲ್ಲಿಯ ಕೋಗಳಿನಾಡಿನ ಧಾನ್ಯದ ಆದಾಯದ 1 ಗದ್ಯಾಣ ಮತ್ತು 10 ಪಣಗಳನ್ನು ಸೋಗೆಯ ಸೋಮನಾಥದೇವರ ಪ್ರತಿದಿನದ ಪೂಜೆಗೆ, ಶಾಸನ ಸಂ. 191ರಲ್ಲಿ ತಿಳಿಸಿದ ಅಧಿಕಾರಿಗಳು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 449; ಸೌಇಇ, IX i, ಸಂ. 342.

ಸಂ. 194

ಗ್ರಾಮದ ದಬ್ಬಗುಡಿಯ (ಕೇಶವ ಕೇವಸ್ಥಾನದ) ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ (ವಿಕ್ರಮಾದಿತ್ಯ VI)

ಚಾಲುಕ್ಯ ವಿಕ್ರಮ ವರ್ಷ 46, ಪ್ಲವ, ಪುಷ್ಯ ಶು. 5, (15ರ ಬದಲು ತಪ್ಪಾಗಿದೆ) ಆದಿತ್ಯವಾರ, ಉತ್ತರಾಯಣ-ಸಂಕ್ರಮಣ, ವ್ಯತಿಪಾತ = ಕ್ರಿ.ಶ. 1121, ಡಿಸೆಂಬರ್ 25, ಆದಿತ್ಯವಾರ

ಕನ್ನಡ

ಮಹಾಮಂಡಲೇಶ್ವರ ತ್ರಿಭುವನಮಲ್ಲ-ಪಾಂಡ್ಯದೇವನು ನೊಳಂಬವಾಡಿ-32000ವನ್ನು ಮತ್ತು ಮಹಾಮಂಡಲೇಶ್ವರ ಘಟ್ಟಿಯರಸನು ಕೋಗಳಿ-500ನ್ನು ಆಳುತ್ತಿದ್ದರು. ಬ್ರಾಹ್ಮಣ ನಾಗವರ್ಮಯ್ಯ-ನಾಯಕ, ಕಾಳಿಮಯ್ಯ-ನಾಯಕ ಮತ್ತು ಮಹಾದೇವಯ್ಯ-ನಾಯಕ ಎಂಬ ಮೂವರು ಸಹೋದರರು ನಾಗವರ್ಮಯ್ಯ-ನಾಯಕನು ಕಟ್ಟಿಸಿದ ಕೇಶವದೇವರ ದೇವಸ್ಥಾನಕ್ಕೆ ಪ್ರತಿದಿನದ ಪೂಜೆಗೆ ಭೂಮಿ ಮತ್ತು ಒಂದು ಮಾನ ಎಣ್ಣೆಯನ್ನು ದಾನ ಮಾಡಿದ ವಿಷಯ ತಿಳಿಸುತ್ತದೆ.

ಆ್ಯರಿಎ, 1914-15. ಸಂ. 1914 ರ 450; ಸೌಇಇ, IX i, ಸಂ. 200.

ಸಂ. 195

ಅದೇ ದೇವಸ್ಥಾನದ ಮುಂದೆ ನಿಲ್ಲಿಸಿರುವ ಒಡೆದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ (ವಿಕ್ರಮಾದಿತ್ಯ VI)

ಚಾಲುಕ್ಯ ವಿಕ್ರಮ ವರ್ಷ 35, . . . 13, ಆದಿವಾರ = ಕ್ರಿ.ಶ. 1110

ಕನ್ನಡ

ಹಾಳಾಗಿದೆ. ಸೋಗೆಯ ದಂಡನಾಯಕರಾದ ನಾಗವರ್ಮಯ್ಯ ನಾಯಕ ಮತ್ತು ಮಹಾದೇವ ನಾಯಕರು ಭೂಮಿ ದಾನ ನೀಡಿದಂತೆ ತೋರುತ್ತದೆ.

ಆ್ಯರಿಎ, 1914-15, ಸಂ. 1914 ರ 451; ಸೌಇಇ, IX i, ಸಂ. 180.

ಸಂ. 196

ಗ್ರಾಮದ ಶೃಂಗಾರ ತೋಟದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

--

ಶಕ 1655, ಪ್ರಮಾದೀಚ, ಭಾದ್ರಪದ ಬ. 2 = ಕ್ರಿ.ಶ. 1733, ಸೆಪ್ಟೆಂಬರ್ 14

ಕನ್ನಡ

ಬಾಗುಳಿಯ ಬಸಪನಾಯಕರಾಯನು ತನ್ನ ನಂಬಿಕಸ್ತ ಸೇವಕನಾದ ಸೋಗೆಯ ವೀರಪನಿಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 452.

ಸಂ. 197

ಗ್ರಾಮದಲ್ಲಿ ವೀರಪ್ಪನ ಮನೆಯ ಮುಂದೆ ಬಿದ್ದಿರುವ ತುಂಡು ಕಲ್ಲಿನ ಮೇಲೆ

ಹೊಯ್ಸಳ, [ವಿ]ಷ್ಣುವರ್ಧನ-ವೀರ-ಬಲ್ಲಾ[ಳ]

. . . . ಕಾರ್ತ್ತಿಕ ಬ. 5, ಬೃಹಸ್ಪತಿವಾರ

ಕನ್ನಡ

ನಾಗವರ್ಮನ ವಂಶದ ಕಾಳಿಮಯ್ಯನ ಮಗ ತಿಲಕಯ್ಯನು ಕೋಗಳಿಯ ಜೈನ ಗುರು ಉಭಯಾಚಾರ್ಯನಿಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 453; ಸೌಇಇ, IX i, ಸಂ. 360.

ಸಂ. 198

ಕಲ್ಲೇಶ್ವರ ದೇವಸ್ಥಾನದ ಹೊರಗೆ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲದೇವ (ಜಯಸಿಂಹ II)

ಶಕ 960, ಬಹುಧಾನ್ಯ . . . . ದಕ್ಷಿಣಾಯಣ-ಸಂಕ್ರಾಂತಿ = ಕ್ರಿ.ಶ. 1038, ಜೂನ್ 25, ಆದಿತ್ಯವಾರ

ಕನ್ನಡ

ಬಹಳ ಹಾಳಾಗಿದೆ. ಉದಯಾದಿತ್ಯನು ಒಂದು ನಾಡನ್ನು (ಹೆಸರು ಹಾಳಾಗಿದೆ) ಮತ್ತು ಜಗದೇಕಮಲ್ಲನಿರ್ಮಡಿ-ನೊಳಂಬನು ಮಾಸೆಯವಾಡಿ-170ನ್ನು ಆಳುತ್ತಿದ್ದರೆಂದು ತಿಳಿಸುತ್ತದೆ. ಸೋಗೆಯೂರಿನ ಮಹಾಜನರ ಉಪಸ್ಥಿತಿಯಲ್ಲಿ ಒಂದು ತೋಟದ ಜೊತೆಗೆ 50 ಮತ್ತರು ಭೂಮಿಯನ್ನು ದಾನ ಮಾಡಲಾಯಿತು.

ಆ್ಯರಿಎ, 1914-15, ಸಂ. 1914 ರ 454; ಸೌಇಇ, IX i, ಸಂ. 93.

ಸಂ. 199

ಅದೇ ಕಲ್ಲಿನ ಹಿಂಭಾಗದಲ್ಲಿ

--

ಶಕ 967, ವ್ಯಯ, ವೈಶಾಖ, ಹುಣ್ಣಿಮೆ, ಸೋಮವಾರ = ಕ್ರಿ.ಶ. 1046, ಏಪ್ರಿಲ್ 31, ಬುಧವಾರ (ಶಕ 968)

ಕನ್ನಡ

ಶೈವ ಗುರು ಚಿಕ್ಕ ಜೇಯರನ ಪ್ರಶಂಸೆಯಿದೆ. ಬಹುಶಃ ಆತನು ಗ್ರಾಮದ ನಿರ್ವಹಣೆಗೆ ಭೂಮಿ ದಾನ ನೀಡಿದಂತೆ ತೋರುತ್ತದೆ.

ಆ್ಯರಿಎ, 1914-15, ಸಂ. 1914 ರ 455.

ಸಂ. 200

ಅದೇ ಕಲ್ಲಿನ ಹಿಂಭಾಗದಲ್ಲಿ

--

ಶಕ 97[1], ವಿರೋಧಿ = ಕ್ರಿ.ಶ. 1049

ಕನ್ನಡ

ಸಾಮಂತ ಗರುಡನ ಸೇವಕನಾದ ಕದಂಬ ವಂಶದ ಮನ್ನೆಯ ಘಟ್ಟಿಯರಸನು ತನ್ನ ಮನ್ನೆಯದ ಆದಾಯವನ್ನು ಸೋಗೆಯ ಮಲ್ಲಿಕಾರ್ಜುನ-ಭಟ್ಟಾರಕ ಗುರುವಿಗೆ ವಹಿಸಿ ಕೊಟ್ಟಿದ್ದನ್ನು ತಿಳಿಸುತ್ತದೆ. ಶಾಸನದ ಕೊನೆಗೆ ಶಕ 97(1) ವಿರೋಧಿ ಎಂದು ಬರೆಯಲಾಗಿದೆ. ಗ್ರಾಮದ ಮುಖ್ಯಸ್ಥ ಮಾರಸಿಂಗಯ್ಯನ ಉಲ್ಲೇಖವಿದೆ.

ಆ್ಯರಿಎ, 1914-15, ಸಂ. 1914 ರ 456.

ಸಂ. 201

ಗ್ರಾಮದಲ್ಲಿಯ ಶಾಂತೀಶ್ವರ ದೇವಸ್ಥಾನದ ತೋಟದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ವಿಜಯನಗರ, ಕೃಷ್ಣರಾಯ

ಧಾತು, ಕಾರ್ತಿಕ ಶು. 5 = ಕ್ರಿ.ಶ. 1516, ಅಕ್ಟೋಬರ್ 30

ಕನ್ನಡ

ಕೊಟ್ಟೂರಿನ ಪ್ರಧಾನ ಅರುಹ-ತಿಮಣನಾಯಕನು, ಇಮ್ಮಡಿ ಬಸವಪ್ಪವೊಡೆಯನ ತಾಯಿ ಪಾರ್ವತಿಅಮ್ಮನ ಆಜ್ಞೆಯ ಮೇರೆಗೆ ತನ್ನ ಒಡೆಯ (ಬಸವಪ್ಪವೊಡೆಯ)ನಿಗೆ ಪುಣ್ಯವಾಗಲೆಂದು ಸೋಗೆಯಲ್ಲಿ ಗೋವಿನ ಅರವಟಿಗೆಯ ಧರ್ಮಾವಿತದ ನಿರ್ವಹಣೆಗೆ ದಣ್ಣಾಯಕಪುರ ಗ್ರಾಮವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 457; ಸೌಇಇ, IX ii, ಸಂ. 503.

ಸಂ. 202

ಕಲ್ಲೇಶ್ವರ ದೇವಸ್ಥಾನದ ದಕ್ಷಿಣಕ್ಕೆ ಒಂದು ಮನೆಯ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

11ನೇ ಶತಮಾನ

ಕನ್ನಡ

ಬಹಳ ಹಾಳಾಗಿದೆ. ತೊಂಡ ಮಂಡಲಿಕ ಘಟಸರ್ಪ ಮತ್ತು ಹೊಯ್ಸಳರ ಗಿರಿದುರ್ಗ್ಗಗಳಿಗೆ ಸಿಡಿಲಿನಂತಿದ್ದ ಮಹಾಮಂಡಲೇಶ್ವರ ಬರ್ಮದೇವರಸನ ಉಲ್ಲೇಖವಿದೆ.

ಆ್ಯರಿಎ, 1914-15, ಸಂ. 1914 ರ 458; ಸೌಇಇ, IX i, ಸಂ. 287.

ಸಂ. 203

ಅದೇ ಸ್ಥಳದಲ್ಲಿರುವ ಎರಡನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

ಚಾಲುಕ್ಯ ವಿಕ್ರಮ ವರ್ಷ 35, ವಿಕೃತ, ಪುಷ್ಯ ಶು. 13, ಆದಿವಾರ, ಉತ್ತರಾಯಣ-ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1110, ಡಿಸೆಂಬರ್ 25, ಆದಿವಾರ

ಕನ್ನಡ

ತುಂಬ ಹಾಳಾಗಿದೆ. ದಂಡಾಧಿಪತಿ ಮುದ್ದರಸ ಅಥವಾ ಮುದ್ದರಾಜನು ಸೋಗೆಯ ಹತ್ತಿರದ ನಾಗಸಮುದ್ರ ಕೆರೆಗೆ ದಾನ ಮಾಡಿದ ವಿಷಯ ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 459; ಸೌಇಇ, IX i, ಸಂ. 183.

ಸಂ. 204

ವೀರಭದ್ರ ದೇವಸ್ಥಾನದಲ್ಲಿ ಪ್ರವೇಶದ್ವಾರದ ಗೋಡೆಯಲ್ಲಿ ಕಟ್ಟಿರುವ ಕಲ್ಲಿನ ಮೇಲೆ

--

ಕಾಳಯುಕ್ತಿ, ಮಾರ್ಗಶಿರ ಬ. 3, ಸೋಮವಾರ

ಕನ್ನಡ

ಕೃಷ್ಣಪ ನಾಯಕನ ಕಾರ್ಯಕರ್ತ ಗೋವಿಂದಪ ನಾಯಕನು ಸೋಗೆಯ ಮುಖ್ಯಸ್ಥ, ಲೆಕ್ಕಾಧಿಕಾರಿ ಮುಂತಾದವರಿಗೆ ಕೆಲವು ಸೌಕರ್ಯಗಳನ್ನು ಒದಗಿಸಿ ಕೊಟ್ಟಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 460.

ತಳಕಲ್ಲು

ಸಂ. 205

ಕಲ್ಲೇಶ್ವರ ದೇವಸ್ಥಾನದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ (ಸೋಮೇಶ್ವರ I)

ಶಕ 974, ನಂದನ = ಕ್ರಿ.ಶ. 1052-53

ಕನ್ನಡ

ಸ್ವಲ್ಪ ಹಾಳಾಗಿದೆ. ಅರಸನ ಸಾಮಂತನಾದ ತ್ರೈಲೋಕ್ಯಮಲ್ಲ ನೊಳಂಬ ಪಲ್ಲವ ಪೆರ್ಮಾನಡಿದೇವನು ಕೋಗಳಿ-500, ಬಲ್ಲಕುಂದೆ-300 ಮತ್ತು ಕದಂಬಳಿಗೆ-1000ಗಳನ್ನು ಆಳುತ್ತಿದ್ದನು. ಆತನ ಅಧೀನ ಅಧಿಕಾರಿ ಬಮ್ಮದೇವನು ತೊಣಂಕಲಿ, ನಿಟ್ಟೂರು ಮತ್ತು ಬಸಿಕೋಡುಗಳನ್ನು ಆಳುತ್ತಿದ್ದನು ಮತ್ತು ತೊಣಂಕಲಿಯ ಚಾವುಂಡಯ್ಯನು ಅವರಿಂದ ದುರಸ್ತಿಗೊಂಡ ಗುಂಡಿಯಕೆರೆಯ ನಿರ್ವಹಣೆಗೆ 11 ಮತ್ತರು ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 523; ಸೌಇಇ, IX i, ಸಂ. 109.

ಸಂ. 206

ಅದೇ ದೇವಸ್ಥಾನದಲ್ಲಿ ಅದೇ ಕಲ್ಲಿನ ಮೇಲೆ

--

ಚಾಲುಕ್ಯ-ವಿಕ್ರಮ ವರ್ಷ 37, ದುರ್ಮುಖಿ, ಪುಷ್ಯ ಶು. ಪಡಿವೆ (ಪ್ರಥಮ), ಆದಿತ್ಯವಾರ, ಉತ್ತರಾಯಣ-ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1113, ಡಿಸೆಂಬರ್ 11, ಗುರುವಾರ

ಕನ್ನಡ

ಸೋಗೆಯ ಕಳೇಶ್ವರ-ಪಂಡಿತನ ಶಿಷ್ಯ ವಾಮದೇವ-ಪಂಡಿತನ ಮುಖಾಂತರ ತೊಣಲಿಯ ಸಣ್ಣ ಕೆರೆಯಲ್ಲಿರುವ ಮೂಲಸ್ಥಾನದೇವರ ದೇವಸ್ಥಾನಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 524.

ತಿಮ್ಮಲಾಪುರ

ಸಂ. 207

ಕಲ್ಲೇಶ್ವರ ದೇವಸ್ಥಾನದ ಜಗಲಿಯಲ್ಲಿ ಕಟ್ಟಿದ ಕಲ್ಲಿನ ಮೇಲೆ

ವಿಜಯನಗರ, ಸದಾಶಿವರಾಯ

ಶಕ 1477, ರಾಕ್ಷಸ, ಶ್ರಾವಣ ಶು. 5 = ಕ್ರಿ.ಶ. 1555, ಜುಲೈ 23, ಮಂಗಳವಾರ

ಕನ್ನಡ

ಅಳಿಯ-ರಾಮರಾಜ ಅರಸನು, ವಿಠಲಪ-ಒಡೆಯನ ಅಧೀನದಲ್ಲಿದ್ದ ಗುತ್ತವೊಳಲ-ಸೀಮೆಯಲ್ಲಿಯ ಹಕಹಂದಿಗನೂರು ಗ್ರಾಮವನ್ನು ವಿಠಲ ದೇವಸ್ಥಾನದ ಹತ್ತಿರವಿರುವ ಆಳ್ವಾರು ದೇವರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, 1914 ರ 468; ಸೌಇಇ, IX ii, ಸಂ. 657.

ಉತ್ತಂಗಿ

ಸಂ. 208

ಶಂಕರೇಶ್ವರ ದೇವಸ್ಥಾನದ ಮುಂದೆ ಬಿದ್ದಿರುವ ಕಲ್ಲಿನ ಮೇಲೆ

--

--

ಕನ್ನಡ

ಚಲದಂಕರಾಮ ಮತ್ತು ಗಿರಿದುರ್ಗಮಲ್ಲನೆಂಬ ಬಿರುದುಗಳನ್ನು ಹೊಂದಿದ ಹಿರಿಯ-ಸೊಮ್ಮನಾಯಕನು ಯುದ್ಧದಲ್ಲಿ ಮಡಿದ ವಿಷಯ ತಿಳಿಸುವಂತೆ ತೋರುತ್ತದೆ. ಆತನ ಮಗ ಹೆಮ್ಮಯ-ನಾಯಕನ ಉಲ್ಲೇಖವೂ ಇದೆ.

ಆ್ಯರಿಎ, 1914-15, ಸಂ. 1914 ರ 529.

ಸಂ. 209

ಅದೇ ದೇವಸ್ಥಾನದ ದಕ್ಷಿಣ ಗೋಡೆಯಲ್ಲಿ ಕಟ್ಟಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ (II)

ಶಕ 1072, ಪ್ರಮಾದಿ, ಅಕ್ಷಯ-ತೃತಿಯ-ಅಮವಾಸೆ, ಸೂರ್ಯಗ್ರಹಣ, ವ್ಯತಿಪಾತ = ಕ್ರಿ.ಶ. 1150, ಮಾರ್ಚ್ 30, ಗುರುವಾರ

ಕನ್ನಡ

ಹಾಳಾಗಿದೆ. ಅರಸನ ಸಾಮಂತನಾದ ಜಗದೇಕಮಲ್ಲ ವೀರಪಾಂಡ್ಯದೇವನು ತನ್ನ ರಾಜಧಾನಿ ಉಚ್ಚಂಗಿಪುರದಿಂದ ನೊಳಂಬವಾಡಿ-32000ವನ್ನಾಳುತ್ತಿದ್ದುದನ್ನು ಮತ್ತು ಕೋಗಳಿನಾಡಿನ ಕುತ್ತಂಗಿಯಲ್ಲಿ ಸೌಧರೆ-ಬಸವಯ್ಯನು ಕಟ್ಟಿಸಿದ ಬಸವರಸದೇವರ ದೇವಾಲಯದ ದೇವರ ಸೇವೆಗೆ ಭೂಮಿ ದಾನ ನೀಡಿದ್ದನ್ನೂ ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 530; ಸೌಇಇ, IX i, ಸಂ. 257.

ಸಂ. 210

ಗ್ರಾಮದ ಪಶ್ಚಿಮಕ್ಕೆ ಒಂದು ಹೊಲದಲ್ಲಿ ಬಿದ್ದಿರುವ ಒಡೆದ ಕಲ್ಲಿನ ಮೇಲೆ

ವಿರೋಧಿ, ಆಶ್ವಿಜ ಶು. 1, ಶುಕ್ರವಾರ

ಕನ್ನಡ

ಪುಟ್ಟಿಯ ಬೊಮ್ಮ-ಗೌಡನ ಮಗ ಮಯಪನ ಮರಣದ ಬಗ್ಗೆ ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 531.

ಸಂ. 211

ಅದೇ ಹೊಲದಲ್ಲಿ ನಿಲ್ಲಿಸಿರುವ ಇನ್ನೊಂದು ಕಲ್ಲಿನ ಮೇಲೆ

--

ಪ್ರಜಾಪತಿ, ಮಾರ್ಗ[ಶಿರ] ಶು. 5, (ಶುಕ್ರವಾರ)

ಕನ್ನಡ

ಮೇಲಿನ ದಿನಾಂಕದಂದು ಬೊಮ್ಮಗೌಡನ ಪತ್ನಿ ನಾಗಾಯಿಯು ಮರಣ ಹೊಂದಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 532.

ಸಂ. 212

ಅದೇ ಹೊಲದಲ್ಲಿ ನಿಲ್ಲಿಸಿರುವ ಮೂರನೆಯ ಕಲ್ಲಿನ ಮೇಲೆ

--

ಶಕ 1301, ಕಾಳಯುಕ್ತಿ, ಚೈತ್ರ ಶು. 5, ಗುರುವಾರ = ಕ್ರಿ.ಶ. 1378, ಮಾರ್ಚ್ 4, ಗುರುವಾರ (ಶಕ 1300)

ಕನ್ನಡ

ವಿರುಪಗೌಡನ ಪತ್ನಿ ವಾಗ್ದೇವಿಯ ಮರಣದ ಬಗ್ಗೆ ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 533.

ಸಂ. 213

ಅದೇ ಹೊಲದಲ್ಲಿ ನಿಲ್ಲಿಸಿರುವ ನಾಲ್ಕನೆಯ ಕಲ್ಲಿನ ಮೇಲೆ

--

ವಿಶು (ವೃಷ), ಜೇಷ್ಠ ಬ. 4, ಮಂಗಳವಾರ

ಕನ್ನಡ

ಉತ್ತಂಗಿಯ ವಿರುಪಗೌಡನ ಮಗ ಬೊಮ್ಮಗೌಡನ ಮರಣದ ಬಗ್ಗೆ ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 534.

ಹಗರಿಬೊಮ್ಮನಹಳ್ಳಿ ತಾಲೂಕು

ಅಲಬೂರು

ಸಂ. 214

ಹೊನ್ನತ್ತಿಯಮ್ಮನ ದೇವಸ್ಥಾನದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

(ವಿಜಯನಗರ), ಕೃಷ್ಣದೇವರಾಯ

ಬಹುಧಾನ್ಯ, ಆಶ್ವಿಜ ಬ. ದಶಮಿ, ಸೋಮವಾರ = ಕ್ರಿ.ಶ. 1518, ಸೆಪ್ಟೆಂಬರ್ 29, ಬುಧವಾರ

ಕನ್ನಡ

ಅರಸನ ಆಪ್ತ ವ್ಯಕ್ತಿಯಾದ ಬಸವಪ-ನಾಯಕನ ಮಗ ಕೃಷ್ಣಪ-ನಾಯಕನು ಅಲಬೂರಿನ ಹೊನ್ನತಿದೇವಿಯ ದೇವಸ್ಥಾನಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 263.

ಸಂ. 215

ರಾಮಲಿಂಗ ದೇವಸ್ಥಾನದ ಹತ್ತಿರ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲದೇವ (II)

10ನೇ ವರ್ಷ, ಪ್ರಭವ, ಪೌಷ್ಯ ಶು. 1, ಬೃಹಸ್ಪತಿವಾರ, ಉತ್ತರಾಯಣ-ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1147, ಡಿಸೆಂಬರ್ 25, ಗುರುವಾರ

ಕನ್ನಡ

ಜಗದೇಕಮಲ್ಲ-ಪಾಂಡ್ಯದೇವನು ನೊಳಂಬವಾಡಿ-32000 ಮತ್ತು ನಾಚಿದೇವರಸನು ಕೋಗಳಿ-500ನ್ನು ಆಳುತ್ತಿದ್ದರೆಂದು ತಿಳಿಸುತ್ತದೆ. ಅಲಂಬಉೂರಿನ ಮಹಾಜನರು ಸ್ವಯಂಭು ಮೂಲಸ್ಥಾನ ದೇವರ ಸೇವೆಗೆ ಮತ್ತು ಗುರುವಿನ ನಿರ್ವಹಣೆಗೆ ಸೋಗೆಯ ವಾಮದೇವ-ಪಂಡಿತನ ಪಾದ ತೊಳೆದು, ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 264; ಸೌಇಇ, IX i, ಸಂ. 248.

ಅಂಬಲಿ

ಸಂ. 216

ಕಲ್ಲೇಶ್ವರ ದೇವಸ್ಥಾನದ ಎದುರಿಗೆ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

ಚಾಲುಕ್ಯ ವಿಕ್ರಮ ವರ್ಷ 30, ಪಾರ್ಥಿವ, ಪುಷ್ಯ, ಅಮವಾಸ್ಯೆ, ಸೋಮವಾರ, ಉತ್ತರಾಯಣ-ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1106, ಜನವರಿ 7, ಆದಿತ್ಯವಾರ

ಕನ್ನಡ

ಸುಂಕದ ಹೆಗ್ಗಡೆಗಳಾದ ಕೇಶಿರಾಜ ಮತ್ತು ಕಾಳಿಮರಸರು ಅನುಕಪಲ್ಲವರಾಯ-ದಂಡನಾಯಕನ ಆಜ್ಞೆಯ ಮೇರೆಗೆ ಹಿರಿಯ ಕೆರೆಯ ದುರಸ್ತಿಗಾಗಿ ಅಮ್ಮೆಳೆಯ ಮಹಾಜನರಿಗೆ ಸುಂಕಾದಾಯದ ಸ್ವಲ್ಪ ಭಾಗವನ್ನು ಮತ್ತು ತೆರಿಗೆ ರಹಿತವಾದ ಭೂಮಿಯನ್ನು ದಾನ ಮಾಡಿದ್ದಲ್ಲದೆ, ಅದೇ ಉದ್ದೇಶಕ್ಕಾಗಿ ಮೊದಲು ನೀಡಿದ್ದ ದಾನವನ್ನು ಧೃಡೀಕರಿಸಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 28; ಸೌಇಇ, IX i, ಸಂ. 170.

ಸಂ. 217

ಅದೇ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ (ವಿಕ್ರಮಾದಿತ್ಯ VI)

ಶಕ 1004 ಮತ್ತು ಚಾಲುಕ್ಯ-ವಿಕ್ರಮ ವರ್ಷ 6, ದುಂದುಭಿ, ಪುಷ್ಯ, ಅಮವಾಸ್ಯೆ = ಕ್ರಿ.ಶ. 1083, ಜನವರಿ 20, ಶುಕ್ರವಾರ

ಕನ್ನಡ

ಗಂಗ ಅರಸ ದುರ್ವಿನೀತನ ಕಾಲದಲ್ಲಿ, ಆತನಿಂದ ಮನ್ನಣೆ ಪಡೆದು ಅಮ್ಮೆಳೆಯ ಅಧಿಪತಿಯಾಗಿದ್ದ ಪಶುಪತಿ-ಭಟ್ಟನ ವಂಶಸ್ಥನಾದ ಭೋಗದೇವನ ಮಗ ಸೇನಾಪತಿ ಶಿವರಾಜನು ತ್ರಿಭುವನಮಲ್ಲ-ಪಾಂಡ್ಯದೇವನು ನೊಳಂಬವಾಡಿ-32000 ವನ್ನಾಳುತ್ತಿದ್ದ ಸಮಯದಲ್ಲಿ, ಅಮ್ಮೆಳೆಯಲ್ಲಿ ಕಲಿದೇವರ ದೇವಸ್ಥಾನವನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ. ಅದೇ ಊರಿನ ಮಹಾಜನರು ದೇವರ ಸೇವೆಗೆ ಭೂಮಿ ದಾನ ನೀಡಿದರು. ದಂಡನಾಯಕ ಪನ್ನಾಯದ ಅಧಿಷ್ಠಾಯಕ ಅನಂತಪಾಲಯ್ಯನು ಸುಂಕದ ಸ್ವಲ್ಪ ಭಾಗವನ್ನು ಮತ್ತು ಭೂಮಿಯನ್ನು ಅದೇ ಊರಿನ ಕಲಿದೇವ, ಧವಳ-ಶಂಕರದೇವ ಮತ್ತು ಕೇಶವದೇವರ ಸೇವೆಗೆ ದಾನ ಮಾಡಿದ್ದನ್ನು ತಿಳಿಸುತ್ತದೆ. ಕಲಿದೇವರ ದೇವಸ್ಥಾನವು ಪಂಚಾಂಗ ಮತ್ತು ತ್ರಿಭೂಮಿಯನ್ನೊಳಗೊಂಡಿತ್ತೆಂದು ವಿವರಿಸಲಾಗಿದೆ.

ಆ್ಯರಿಎ, 1903-04, ಸಂ. 1904 ರ 29; ಸೌಇಇ, IX i, ಸಂ. 153.

ಸಂ. 218

ಅದೇ ದೇವಸ್ಥಾನದ ಮುಂದಿನ ಮಂಟಪದ ಮೇಲೆ

--

ಪರಿಧಾವಿ, ಆಶ್ವಯುಜ

ಕನ್ನಡ

ಕದಂಬ ವಂಶದ ಜಗದಳ-ಪಾಂಡ್ಯನು ಅಮ್ಮೆಳೆಯ ಕಲಿದೇವರ ಸೇವೆಗೆ ಕೋಗಳಿಯಲ್ಲಿ 400 ಕಂಬ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 30; ಸೌಇಇ, IX ii, ಸಂ. 711.

ಸಂ. 219

ಆಂಜನೇಯ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ (II)

ಶಕ 1065, ರುಧಿರೋದ್ಗಾರಿ, ಪುಷ್ಯ, ಪುಣ್ಣಮೆ, ಸೋಮವಾರ, ಉತ್ತರಾಯಣ, ವ್ಯತಿಪಾತ = ಕ್ರಿ.ಶ. 1143, ಡಿಸೆಂಬರ್ 23, ಗುರುವಾರ

ಕನ್ನಡ

ಮಹಾಮಂಡಲೇಶ್ವರ ಜಗದೇಕಮಲ್ಲ-ವೀರಪಾಂಡ್ಯದೇವನು ನೊಳಂಬವಾಡಿ-32000ವನ್ನಾಳುತ್ತಿದ್ದ ಸಮಯದಲ್ಲಿ ಕದಂಬ ವಂಶದ ಘಟ್ಟದೇವನ ಮಗ ಚಿಬಿದೇವರಸನು, ಅಮ್ಮೆಳೆಯಲ್ಲಿ ಜ್ಞಾನಪ್ರಕಾಶ-ಭಟ್ಟಾರಕದೇವನು ಪ್ರತಿಷ್ಠಾಪಿಸಿದ ನರಸಿಂಹದೇವರ ಸೇವೆಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆರಿಎ, 1903-04, ಸಂ. 1904 ರ 31; ಸೌಇಇ, IX i, ಸಂ. 242.

ಸಂ. 220

ಗ್ರಾಮದಲ್ಲಿಯ ಬಾವಿಯ ಹತ್ತಿರದ ವೀರಗಲ್ಲಿನ ಮೇಲೆ

--

--

ಕನ್ನಡ

ಬೂತುಗನ ಮರಣದ ಬಗ್ಗೆ ತಿಳಿಸುತ್ತದೆ.

ಆರಿಎ, 1903-04, ಸಂ. 1904 ರ 32.

ಆನಿವೇರಿ

ಸಂ. 221

ಹನುಮಂತರಾಯ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ

--

ವಿಜಯ, ಕಾರ್ತಿಕ [ಶು.] 15, ಆದಿತ್ಯವಾರ

ಕನ್ನಡ

ಆಧುನಿಕ ಅಕ್ಷರಗಳಲ್ಲಿದೆ ಮತ್ತು ಹಾಳಾಗಿದೆ. ಮಾನ್ಯ ಭೂಮಿಯನ್ನು ದಾನ ಕೊಟ್ಟ ಬಗ್ಗೆ ದಾಖಲಿಸುವಂತೆ ತೋರುತ್ತದೆ.

ಆರಿಸೌಇಎ, 1922-23, ಸಂ. 1922 ರ 750.

ಅರಳೆಹಳ್ಳಿ

ಸಂ. 222

ಹನುಮಂತರಾಯ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ

--

--

ಕನ್ನಡ

ಅರಳಿಹಳ್ಳಿಯು ಮಾಲ್ಯವಂತ ರಘುನಾಥದೇವರಿಗೆ ಸೇರಿದ್ದೆಂದು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 751.

ಬನ್ನಿಗೋಳ

ಸಂ. 223

ಆಂಜನೇಯ ದೇವಸ್ಥಾನದ ಮುಂದೆ ಬಿದ್ದಿರುವ ಒಡೆದ ಕಲ್ಲಿನ ಮೇಲೆ

--

ಶಕ 1483, ದುರ್ಮತಿ, (ವೈಶಾಖ) ಶು. 12, ಶನಿವಾರ = ಕ್ರಿ.ಶ. 1561, ಏಪ್ರಿಲ್ 26, ಶನಿವಾರ

ಕನ್ನಡ

ಬನ್ನಿಗೋಳ ಮತ್ತು 100 ವರಹಗಳ ದಾನವನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 503.

ಬನ್ನಿಗೋಳ-ಸೀಗಿನಹಳ್ಳಿ

ಸಂ. 224

ಬನ್ನಿಗೋಳ-ಸೀಗಿನಹಳ್ಳಿಗಳ ಮಧ್ಯದ ಮೇರೆಯಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

--

ವಿಕ್ರಮ

ಕನ್ನಡ

ಸೂರ್ಯರಾಯನು ಕಾಚಿನಾಯಕನ ತಿಮ್ಮಯ್ಯನನ್ನು ಕೊಡಲಿಯಿಂದ ಹೊಡೆದು ಕೊಂದು ತಾನೂ ಸತ್ತ ಸಮಯದಲ್ಲಿ ಆತನಿಗೆ ತೆರಿಗೆರಹಿತ (ಮಾನ್ಯ) ಭೂಮಿಯನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 504.

ಬನ್ನಿಕಲ್ಲು

ಸಂ. 225

ಗ್ರಾಮದ ಒಂದು ಹೊಲದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

--

ಶಕ 1632, ವಿಕೃತ, ಭಾದ್ರಪದ ಶು. 1 = ಕ್ರಿ.ಶ. 1710, ಆಗಸ್ಟ್ 14

ಕನ್ನಡ

ಬಾಗಳಿಯ ಹತಿಯಮ್ಮಾಜಿಯು ಬಸ್ವೈಯನಿಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 466.

ಸಂ. 226

ಗ್ರಾಮದ ಚಾವಡಿಯ ಹತ್ತಿರ ಬಿದ್ದಿರುವ ಕಲ್ಲಿನ ಮೇಲೆ

--

ಬಹುಧಾನ್ಯ, ಫಾಲ್ಗುಣ ಶು. ಪಂಚಮಿ

ಕನ್ನಡ

ಬನ್ನಿಕಲ್ಲಿನ ಮುಖ್ಯಸ್ಥ, ಲೆಕ್ಕಾಧಿಕಾರಿ, ಕಾವಲುಗಾರ ಮತ್ತು ಇತರರು ಗ್ರಾಮದ ದೇವಸ್ಥಾನದ ಬಡಗಿ ನಿಂಗೋಜನಿಗೆ ತೆರಿಗೆ ರಹಿತ ಭೂಮಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 467.

ಛತ್ರದಹಳ್ಳಿ

ಸಂ. 227

ಗ್ರಾಮದ ಒಂದು ಬಾವಿಯ ಪ್ರವೇಶದ್ವಾರದ ಕಂಬದ ಮೇಲೆ

--

ಶಕ 1465, ಶೋಭಕೃತ್, ಕಾರ್ತಿಕ ಬ. 10, ಬುಧವಾರ = ಕ್ರಿ.ಶ. 1543, ನವೆಂಬರ್ 21, ಬುಧವಾರ (ಶೋಭನ)

ಕನ್ನಡ

ಛತ್ರದಹಳ್ಳಿಯ ಯೆಲವಣ್ಣನು ಈ ಬಾವಿಯನ್ನು ಕಟ್ಟಿಸಿ ಸಾಲುಮರಗಳನ್ನು ನೆಡಸಿದನೆಂದು ತಿಳಿಸುತ್ತದೆ. ಆತನ ತಂದೆ ಮತ್ತು ಸಹೋದರರು ಗವುಡಿಕೆಯ ಅರ್ಧ ಹಕ್ಕನ್ನು ಕೊಂಡು, ಗ್ರಾಮದ ಉತ್ತರಕ್ಕೆ ಒಂದು ದೇವಾಲಯ ಮತ್ತು ಕೆರೆಯನ್ನು ಕಟ್ಟಿಸಿದರೆಂದೂ ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 509.

ಸಂ. 228

ಗ್ರಾಮದ ಉತ್ತರಕ್ಕೆ ಒಂದು ಹೊಲದಲ್ಲಿಯ ಕಲ್ಲಿನ ಮೇಲೆ

ವಿಜಯನಗರ, ವೀರಪ್ರತಾಪ ಸದಾಶಿವ

ಶಕ 1481, ಸಿದ್ಧಾರ್ಥಿ, ಜ್ಯೇಷ್ಠ ಬ. 7 = ಕ್ರಿ.ಶ. 1559, ಮೇ 28, ಆದಿತ್ಯವಾರ

ಕನ್ನಡ

ಮಾಲ್ಯವಂತ ರಘುನಾಥದೇವರ ಛತ್ರದಹಳ್ಳಿಯ ಧರ್ಮ್ಮಾಯತದ ಡೋಣಿಗೆ ನೀರು ಹೊಯಿವದಕ್ಕೆ ಬೇಕಾದ ಮರವನ್ನು ಗ್ರಾಮದ ನಿವಾಸಿಗಳು (ಹೆಸರುಗಳಿವೆ) ದಾನ ಮಾಡಿದ್ದನ್ನು ತಿಳಿಸುತ್ತದೆ. ಉಪ್ಪಾರರು (ಹೆಸರುಗಳಿವೆ) ಧರ್ಮದ ಡೋಣಿಗೆ ನೀರು ಎತ್ತುವವನಿಗೆ ಮೋಳೆವೊಂದಕ್ಕೆ ಎರಡು ಬಳ್ಳ ಉಪ್ಪನ್ನು ಕೊಟ್ಟರು. ಕಾಳಿಕಾದೇವಿ ಮತ್ತು ಕಮಠೇಶ್ವರ ದೇವರ ಆರಾಧಕರಾದ ಓಜುಗಳು

(ಹೆಸರುಗಳಿವೆ) ನೀರು ಎತ್ತುವ ಕಬ್ಬಿಣದ ಏತದ ಬಾನೆ, ಕಬ್ಬಿಣದ ಕಟ್ಟುಗಳನ್ನು ದುರಸ್ತಿಗೊಳಿಸಲು ಒಪ್ಪಿದರು. ಕೆಲವು ಪ್ರಜೆಗಳು (ಹೆಸರುಗಳಿವೆ) ನೀರು ಎತ್ತುವವನಿಗೆ ಈಚಲ ಮರಗಳನ್ನು ಕೊಟ್ಟರೆಂದು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 510; ಸೌಇಇ, IX ii, ಸಂ. 670.

ಚಿಮ್ಮಹಳ್ಳಿ

ಸಂ. 229

ಆಂಜನೇಯ ದೇವಸ್ಥಾನದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ (ಜಯಸಿಂಹ II)

ಶಕ 956, ಶುಕ್ಲ, ಪುಷ್ಯ ಶು. 5, ಆದಿವಾರ, ಉತ್ತರಾಯಣ ಸಂಕ್ರಾಂತಿ = ಕ್ರಿ.ಶ. 1034-35 (ಶಕ 956ರಲ್ಲಿ ಭವ ಸಂಪತ್ಸರವಿತ್ತು)

ಕನ್ನಡ

ಜಗದೇಕಮಲ್ಲ-ನೊಳಂಬ-ಪಲ್ಲವ-ಪೆರ್ಮಾನಡಿಯು ಕದಂಬಳಿಗೆ-1000, ಕೋಗಳಿ-500, ಬಲಕುಂದೆ-300, ಕುಡಿಹರವಿ-70, ಕರಿವಿಡಿ-30 ಮತ್ತು ಮಾಸವಾಡಿನಾಡಿನ ಐದು ಗ್ರಾಮಗಳನ್ನಾಳುತ್ತಿದ್ದಾಗ ನೆಲ್ಕುದುರೆಯನ್ನು ಆಳುತ್ತಿದ್ದ ಆತನ ಸಾಮಂತ ಕೇತೆಯನಾಯಕನು ಕಲಿದೇವ ದೇವರಿಗೆ ಭೂಮಿ ಮತ್ತು ಪ್ರತಿ ವರ್ಷ ಧಾನ್ಯವನ್ನು ದುಗ್ಗರಾಜ ಪಂಡಿತನ ಪಾದ ತೊಳೆದು ದಾನ ಮಾಡಿದನೆಂದು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 518; ಸೌಇಇ, IX i, ಸಂ. 88.

ಸಂ. 230

ಅದೇ ಕಲ್ಲಿನ ಮೇಲೆ

ಯಾದವ, ವೀರ ಮಹಾದೇವ

6ನೇ ವರ್ಷ, ಕ್ರೋಧನ, ಆಷಾಢ ಬ. ಅಮವಾಸೆ, ಸೋಮವಾರ = ಕ್ರಿ.ಶ. 1265, ಜುಲೈ 13, ಸೋಮವಾರ

ಕನ್ನಡ

ಅರಸನ ಅಧೀನ ಅಧಿಕಾರಿ ಸೋಯಿದೇವರಸನು ಮದುರದೇವರಯಾಚಾರ್ಯ ರಾಜಗುರುವಿಗೆ ನೆಲ್ಕುದುರೆ ಗ್ರಾಮವನ್ನು ದಾನವಾಗಿ ಕೊಟ್ಟನೆಂದು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 519; ಸೌಇಇ, IX i, ಸಂ. 374.

ಹಂಪಸಾಗರ

ಸಂ. 231

ಗ್ರಾಮದ ಚಾವಡಿಯ ನೆಲಕ್ಕೆ ಹಾಕಿದ ಕಲ್ಲಿನ ಮೇಲೆ

--

[ಸರ್ವ]ಜಿತ್, ಪುಷ್ಯ ಶು. 1

ಕನ್ನಡ

ಹಾಳಾಗಿದೆ. ನಾಯಂಕರಾಚಾರ್ಯ ಬಾಗುಳಿ ಬಸ[ಪ್ಪ]-ನಾಯಕನ ಉಲ್ಲೇಖವಿದೆ.

ಆರಿಎ, 1914-15, ಸಂ. 1914 ರ 526.

ಹನಸಿ

ಸಂ. 232

ರಾಮೇಶ್ವರ ದೇವಸ್ಥಾನದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

ಚಾಲುಕ್ಯ-ವಿಕ್ರಮ ವರ್ಷ 35, ಶ್ರಾವಣ ಶು. 5, ಸೋಮವಾರ = ಕ್ರಿ.ಶ. 1111, ಜುಲೈ 12

ಕನ್ನಡ

ಹಾಳಾಗಿದೆ. ತ್ರಿಭುವನಮಲ್ಲ-ಪಾಂಡ್ಯನು ನೊಣಂಬವಾಡಿ-32000ವನ್ನಾಳುತ್ತಿದ್ದ ಸಮಯದಲ್ಲಿ ಮಹಾಸಾಮಂತ ಹೊಳ್ಳೆಯನು ಕೋಗಳಿ-500ರ ಒಳಗಿನ ಹನಸೆಯ ಪರಶುರಾಮೇಶ್ವರ ದೇವರ ಅಂಗಭೋಗ, ಸ್ನಾನ, ನಿವೇದ್ಯಕ್ಕೆ, ತಪೋಧನರ ಮತ್ತು ವಿದ್ಯಾರ್ಥಿಗಳ ಊಟಕ್ಕೆ ಭೂಮಿ ಮತ್ತು ಸುಂಕದ ಒಂದು ಭಾಗವನ್ನು ದಾನ ಮಾಡಿದ್ದನ್ನು ದಾಖಲಿಸುತ್ತದೆ. ಈ ದಾನವನ್ನು ದಾನಿಯು ತನ್ನ ಗುರು ಕಾಳಾಮುಖ ಪಂಥದ ಸೋಮಕರ್ತಾರ-ಪಂಡಿತನ ಪಾದ ತೊಳೆದು ಮಾಡಿದನು. ಈ ಶಾಸನವನ್ನು ಸೇನಬೋವ ಸೋಮನಾಥಯ್ಯನು ಬರೆದನು ಮತ್ತು ಕಂಚಗಾರ ಕಾಸೋಜನು ಕಂಡರಿಸಿದನು.

ಆರಿಸೌಇಎ, 1924-25, ಸಂ. 1925 ರ 278; ಸೌಇಇ, IX i, ಸಂ. 184.

ಸಂ. 233

ಬಸವಣ್ಣ ದೇವಸ್ಥಾನದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

--

ಶಕ 1444, ಚಿತ್ರಭಾನು, ಶ್ರಾವಣ ಶು. 1[2] = ಕ್ರಿ.ಶ. 1522, ಆಗಸ್ಟ್ 4

ಕನ್ನಡ

ತ್ರುಟಿತ. ದಿನಾಂಕದ ನಂತರ ಶಾಸನವು ಕೊನೆಗೊಂಡಿದೆ.

ಆರಿಸೌಇಎ, 1924-25, ಸಂ. 1925 ರ 279.

ಕೆಂಚೆತಿನಹಳ್ಳಿ

ಸಂ. 234

ಗ್ರಾಮದಲ್ಲಿ ಬಾವಿಯ ಹತ್ತಿರ ಬಿದ್ದಿರುವ ಒಡೆದ ಕಲ್ಲಿನ ಮೇಲೆ

--

ಶಕ 14[66], ಕ್ರೋಧಿ, ಶ್ರಾವಣ = ಕ್ರಿ.ಶ. 1544

ಕನ್ನಡ

ಬಯಪ್ಪನಾಯಕನ ಮಗ ಕೃ[ಷ್ಣ]ಪ್ಪನಾಯಕನಿಗೆ ಪುಣ್ಯವಾಗಲೆಂದು ಕೆಂಚಿಸೆಟ್ಟಿಹಳ್ಳಿಯಲ್ಲಿಯ ಧರ್ಮಏತಕ್ಕೆ ಭೂಮಿ ದಾನ ನೀಡಿದ್ದನ್ನು ದಾಖಲಿಸುವಂತೆ ತೋರುತ್ತದೆ.

ಆರಿಎ, 1914-15, ಸಂ. 1914 ರ 512.

ಕೋಗಳಿ

ಸಂ. 235

ಬಸದಿಯ ಕಂಬದ ಮೇಲೆ

ಹೊಯ್ಸಳ, ರಾಮನಾಥದೇವ

ಯುವ, ಆಶ್ವಿಜ ಶು. ಪೌರ್ಣಮಿ, ಗುರುವಾರ = ಕ್ರಿ.ಶ. 1276, ಸೆಪ್ಟೆಂಬರ್ 24, ಗುರುವಾರ, ಆದರೆ ಸಂವತ್ಸರವು ಧಾತುವಾಗಿತ್ತು

ಕನ್ನಡ

ತೀರ್ಥವೆಂದು ಕರೆಯಲ್ಪಡುತ್ತಿದ್ದ ಕೋಗಳಿಯ ಚೆನ್ನ-ಪಾರ್ಶ್ವದೇವರ ಪ್ರತಿದಿನದ ಅಭಿಷೇಕಕ್ಕೆ ಅನೇಕ ಜೈನ ಭಕ್ತರು ಹಣವನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.

ಆರಿಎ, 1903-04, ಸಂ. 1904 ರ 33; ಸೌಇಇ, IX i, ಸಂ. 346.

ಸಂ. 236

ಅದೇ ಬಸದಿಯ ಇನ್ನೊಂದು ಕಂಬದ ಮೇಲೆ

ಹೊಯ್ಸಳ, ರಾಮನಾಥದೇವ

ಧಾತು, ಆಶ್ವಯುಜ ಶು. ಪೌರ್ಣಮಿ, ಗುರುವಾರ = ಕ್ರಿ.ಶ. 1276, ಸೆಪ್ಟೆಂಬರ್ 24, ಗುರುವಾರ

ಕನ್ನಡ

ಅನೇಕ ಭಕ್ತರು (ಹೆಸರುಗಳಿವೆ) ಕೋಗಳಿಯ ಚೆನ್ನ-ಪಾರ್ಶ್ವದೇವರ ದೇವಸ್ಥಾನಕ್ಕೆ ಹಣವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆರಿಎ, 1903-04, ಸಂ. 1904 ರ 34; ಸೌಇಇ, IX i, ಸಂ. 347.

ಸಂ. 237

ಅದೇ ಬಸದಿಯ ಮುಂದಿನ ಮಂಟಪದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲ (ಸೋಮೇಶ್ವರ)

--

ಕನ್ನಡ

ತ್ರೈಲೋಕ್ಯಮಲ್ಲ-ನನ್ನಿ-ನೊಳಂಬ-ಪಲ್ಲವ-ಪೆರ್ಮಾನಡಿಯ ಸೇವಕ ನೊಳಂಬಸೆಟ್ಟಿ ಮತ್ತು ಪದ್ಮಾವತಿ-ಅಬ್ಬೆಯರು ಕೋಗಳಿಯ ಕೆಲವು ಗಾವುಂಡ ಮತ್ತು ನಖರಗಳ ಉಪಸ್ಥಿತಿಯಲ್ಲಿ ಛತ್ರಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆರಿಎ, 1903-04, ಸಂ. 1904 ರ 35; ಸೌಇಇ, IX i, ಸಂ. 130.

ಸಂ. 238

ಅದೇ ಮಂಟಪದ ಪೂರ್ವಕ್ಕೆ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಆಹವಮಲ್ಲದೇವ

ಶಕ 914, ನಂದನ, ಪುಷ್ಯ ಬ. 12, ಶುಕ್ರವಾರ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 992, ಡಿಸೆಂಬರ್ 23, ಶುಕ್ರವಾರ

ಕನ್ನಡ

ಅರಸನು ರೊದ್ದದಿಂದ ಆಳುತ್ತಿದ್ದಾಗ ಕದಂಬ ವಂಶದ ಮಹಾಸಾಮಂತ ಆದಿತ್ಯವರ್ಮರಸನು ಕೋಗಳಿ-500 ಮತ್ತು ಸುಂದವತ್ತಿ-12 ನ್ನಾಳುತ್ತಿದ್ದನು. ಅರಸನು ಮಾನ್ಯ ಭೂಮಿಗಳನ್ನು ಬ್ರಾಹ್ಮಣರಿಗೆ, ಸೆಟ್ಟಿಗಳಿಗೆ, ಗಾವುಂಡಗಳಿಗೆ ಮತ್ತು ಸ್ಥಾನಾಧಿಪತಿ ಗಣಧರದೇವನು ಮುಖ್ಯಸ್ಥನಾದ ಐದು ಮಠಗಳಿಗೆ ದಾನ ಮಾಡಿ, ಬೇರೆ ಭೂಮಿಗಳಿಗೆ ಕೊಡಬೇಕಾದ ತೆರಿಗೆಗಳ ದರವನ್ನು ನಿಗದಿಗೊಳಿಸಿದನು. ಅಪರಾಧ ಮಾಡಿದವರಿಗೆ ದಂಡ ವಿಧಿಸುವುದನ್ನು ನಿರ್ಧರಿಸಲಾಯಿತು. ವ್ಯಭಿಚಾರಿ ಸ್ತ್ರೀಯರ ಮೂಗನ್ನು ಕತ್ತರಿಸಿ, ವ್ಯಭಿಚಾರ ಮಾಡಿದವನಿಗೆ ಮರಣ ಶಿಕ್ಷೆ ಕೊಡುತ್ತಿದ್ದರು. ಕಳ್ಳನಿಗೂ ಮರಣ ಶಿಕ್ಷೆ ಕೊಡುತ್ತಿದ್ದರಲ್ಲದೆ, ಹೊಡೆದಾಡಿ ಗಾಯಮಾಡಿದವರಿಗೆ 8 ಪಣಗಳ ದಂಡ ವಿಧಿಸಲಾಗುತ್ತಿತ್ತು.

ಆರಿಎ, 1903-04, ಸಂ. 1904 ರ 36; ಸೌಇಇ, IX i, ಸಂ. 77.

ಸಂ. 239

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಇನ್ನೊಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲ

ಶಕ 977, ಮನ್ಮಥ, ಕಾರ್ತಿಕ ಶು. 5, ಆದಿತ್ಯವಾರ = ಕ್ರಿ.ಶ. 1055, ಅಕ್ಟೋಬರ್ 27, ಶುಕ್ರವಾರ

ಕನ್ನಡ

ದುರ್ವಿನೀತ (ಗಂಗ ಅರಸ)ನಿಂದ ಮೊದಲೇ ಕಟ್ಟಲ್ಪಟ್ಟ ಬಸದಿಯಲ್ಲಿ ವಿದ್ಯಾದಾನಕ್ಕಾಗಿ ಜೈನ ಗುರು ಇಂದ್ರಕೀರ್ತಿ-ಮುನೀಂದ್ರನು ಕೋಗಳಿ ವಿಭಾಗದಲ್ಲಿರುವ ಇಟ್ಟಗೆಯಲ್ಲಿ 24 ಮತ್ತರು ಭೂಮಿಯನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 37; ಸೌಇಇ, IX i, ಸಂ. 117.

ಸಂ. 240

ಜೈನ ಬಸದಿಯ ರಂಗ ಮಧ್ಯ-ಮಂಟಪದ ಕಂಬದ ತಳಭಾಗದಲ್ಲಿ

--

--

ಕನ್ನಡ

ದೇವಸ್ಥಾನದಲ್ಲಿರುವ ವಿಗ್ರಹಗಳ ಪ್ರತಿದಿನದ ಅಭಿಷೇಕಕ್ಕೆ ಬೇರೆ ಬೇರೆ ವ್ಯಕ್ತಿಗಳು ಹಣವನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 520.

ಸಂ. 241

ಜೈನ ಬಸದಿಯಲ್ಲಿ ಸಣ್ಣ ಜಿನ ವಿಗ್ರಹದ ಪೀಠದ ಮೇಲೆ

--

ಪರಿಧಾವಿ, ಚೈತ್ರ ಶು. ಚತುರ್ದಶಿ, ಆದಿತ್ಯವಾರ

ಕನ್ನಡ

ಅನಂತವೀರ್ಯದೇವನ ಶಿಷ್ಯ ಒಡೆಯಮ ಸೆಟ್ಟಿಯು ವಿಗ್ರಹವನ್ನು ಪ್ರತಿಷ್ಠಾಪಿಸಿದ ಉಲ್ಲೇಖವಿದೆ.

ಆರಿಎ, 1914-15, ಸಂ. 1914 ರ 521.

ಸಂ. 242

ಕಲ್ಲೇಶ್ವರ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ

ಹೊಯ್ಸಳ, ನರಸಿಂಹದೇವ

ನಾಲ್ಕನೇ ವರ್ಷ, ಸ್ವಭಾನು, ಶ್ರಾವಣ ಶು. 1, ಸೂರ್ಯಗ್ರಹಣ = ಕ್ರಿ.ಶ. 1163, ಜುಲೈ 4 ಅಥವಾ ಕ್ರಿ.ಶ. 1223, ಜುಲೈ 1 (ಕ್ರಿ.ಶ. 1223 ಎರಡನೇ ನರಸಿಂಹನ 4ನೇ ವರ್ಷ)

ಕನ್ನಡ

ಹಾಳಾಗಿದೆ. ಸೋಮಣ ದಂಡನಾಯಕನು ಮಹಾಪ್ರಧಾನನಾಗಿದ್ದಾಗ ಭೂಮಿ ಮತ್ತು ಕೆಲವು ತೆರಿಗೆಗಳನ್ನು ಸೋಮನಾಥದೇವರ ಸೇವೆಗೆ ಮತ್ತು ದೇವಸ್ಥಾನದ ಮುಖ್ಯಸ್ಥ ಸೋಮಜೀಯಾಚಾರ್ಯನಿಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆರಿಎ, 1903-04, ಸಂ. 1904 ರ 38; ಸೌಇಇ, IX i, ಸಂ. 317.

ಸಂ. 243

ವೀರಭದ್ರ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ

--

ಶಕ 1454, ಖರ = ಕ್ರಿ.ಶ. 1531 (ಶಕ 1453)

ಕನ್ನಡ

ಒಬ್ಬ ವ್ಯಕ್ತಿಯಿಂದ ಪ್ರತಿಷ್ಠಾಪಿಸಲ್ಪಟ್ಟ ವೀರಭದ್ರ ವಿಗ್ರಹಕ್ಕೆ ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆರಿಎ, 1903-04, ಸಂ. 1904 ರ 39.

ಸಂ. 244

ವೀರಭದ್ರ ದೇವಸ್ಥಾನದಲ್ಲಿ ಮುಖ್ಯ ವಿಗ್ರಹದ ಪೀಠದ ಮೇಲೆ

--

--

ಕನ್ನಡ (ಪ್ರಾಚೀನ)

ಆರ್ಯಾವೃತ್ತದಲ್ಲಿ ಒಂದು ಪದ್ಯವಿದೆ. ಈ ಸೂರ್ಯ (?) ವಿಗ್ರಹವನ್ನು ಶಿವನನ್ನಿಯ ಮೊಮ್ಮಗನು ಮಾಡಿದನೆಂದು ದಾಖಲಿಸುತ್ತದೆ.

ಆರಿಎ, 1914-15, ಸಂ. 1914 ರ 522.

ಸಂ. 245

ಹನುಮಂತ ದೇವಸ್ಥಾನದ ಮುಂದೆ ನಿಲ್ಲಿಸಿರುವ ವೀರಗಲ್ಲಿನ ಮೇಲೆ

ರಾಷ್ಟ್ರಕೂಟ, --

ಶಕ 830, ವಿಭವ = ಕ್ರಿ.ಶ. 908-909

ಕನ್ನಡ

ಹಾಳಾಗಿದೆ. ಯುದ್ಧದಲ್ಲಿ ಹೆಗ್ಗಡೆ ತೊಮ್ಮನು ಮಡಿದದ್ದನ್ನು ಮತ್ತು ಆತನ ಪತ್ನಿ ವೀರಗಲ್ಲನ್ನು ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ.

ಆರಿಎ, 1903-04, ಸಂ. 1904 ರ 40; ಸೌಇಇ, IX i, ಸಂ. 56.

ಸಂ. 246

ಚಾವಡಿಯ ಹತ್ತಿರ ನಿಲ್ಲಿಸಿರುವ ವೀರಗಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲ

ಶಕ 969, ಸರ್ವಜಿತ್, . . . ಶು. 5, ಆದಿತ್ಯವಾರ = ಕ್ರಿ.ಶ. 1047, ಮೇ 3, ಆದಿತ್ಯವಾರ

ಕನ್ನಡ

ಹಾಳಾಗಿದೆ. ಉದಯಾದಿತ್ಯ ಏಚ-ನಾಯಕನು (ಘಟ್ಟದೇವ)ನ ಆಜ್ಞೆಯ ಮೇರೆಗೆ ಕುದುರೆಯ ಮೇಲೆ ಹೋಗಿ ಕೋಗಳಿಯ ಗೋವುಗಳನ್ನು ಕದ್ದ ಕಳ್ಳರನ್ನು ಕೊಂದು, ಗೋವುಗಳನ್ನು ರಕ್ಷಿಸಿ ತಾನೂ ಸತ್ತನೆಂದು ತಿಳಿಸುತ್ತದೆ.

ಆರಿಎ, 1903-04, ಸಂ. 1904 ರ 41; ಸೌಇಇ, IX i, ಸಂ. 106.

ಮೋರಿಗೇರಿ

ಸಂ. 247

ಉದ್ದಿ ಬಸವಣ್ಣ ದೇವಸ್ಥಾನದ ಮೊಗಸಾಲೆಯಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ (ಸೋಮೇಶ್ವರ I)

ಶಕ 967, ವ್ಯಯ, ಕಾರ್ತ್ತಿಕ ಪುಣ್ಣಮಿ, ಸೋಮಗ್ರಹಣ = ಕ್ರಿ.ಶ. 1046, ಅಕ್ಟೋಬರ್ 17

ಕನ್ನಡ

ಅರಸನ ಸಾಮಂತ ತ್ರೈಲೋಕ್ಯಮಲ್ಲ ನನ್ನಿ ನೊಳಂಬ-ಪಲ್ಲವ-ಪೆರ್ಮಾನಡಿಯು ಬಲ್ಲಕುಂದೆ-300, ಕೋಗಳಿ-500, ಕದಂಬಳಿಗೆ-1000, ಕುಡಿಯಹರವಿ-70, ಕರಿವಿಡಿ-30 ಮತ್ತು ನೊಳಂಬವಾಡಿ-32000ಗಳನ್ನಾಳುತ್ತಿದ್ದನೆಂದು ತಿಳಿಸುತ್ತದೆ. ದಂಡನಾಯಕ ತಿಕಣ್ಣನ ನೇತೃತ್ವದ ಲೆಂಕ-1000 ರು ಮೋರಿಂಗೆರೆಯನ್ನೊಳಗೊಂಡ ಆರು ಗ್ರಾಮಗಳನ್ನು ಆಳುತ್ತಿದ್ದರು. ಅವರು ವಿರೂಪಾಕ್ಷದೇವರ ಸನ್ನಿಧಿಯಲ್ಲಿ 100 ಮತ್ತರು ಭೂಮಿಯನ್ನು (ನೊಳಂಬೇಶ್ವರ) ದೇವರ ಸೇವೆಗೆ ಮತ್ತು ವಿದ್ಯಾದಾನಕ್ಕೆ ದಾನ ಮಾಡಿದರು. ದಂಡನಾಯಕ ಸೋವಿಮಯ್ಯನು ಸೋಮತೀರ್ಥವೆಂಬ ಬಾವಿಯನ್ನು ಕಟ್ಟಿಸಿದನು ಮತ್ತು ಅದೇ ದೇವರ ಸೇವೆಗೆ ತೋಟದ ಭೂಮಿಯನ್ನು ದಾನ ನೀಡಿದನು. ವಿಷ್ಣಯ್ಯನು ಶಾಸನವನ್ನು ಬರೆದನು ಮತ್ತು ಕಲಿಯೋಜನು ಕಂಡರಿಸಿದನು.

ಆರಿಎ, 1914-15, ಸಂ. 1914 ರ 441; ಸೌಇಇ, IX i, ಸಂ. 104.

ಸಂ. 248

ಅದೇ ದೇವಸ್ಥಾನದ ಮೊಗಸಾಲೆಯಲ್ಲಿ ನಿಲ್ಲಿಸಿರುವ ಅದೇ ಕಲ್ಲಿನ ಮೇಲೆ

--, ವಿಷ್ಣುವರ್ಧನ-ವಿಜಯಾದಿತ್ಯದೇವ

ಶಕ 986, ಕ್ರೋಧಿ, ಪುಷ್ಯ ಪುಣ್ಣಮಿ, ಆದಿತ್ಯವಾರ, ಉತ್ತರಾಯಣ ಸಂಕ್ರಾಂತಿ = ಕ್ರಿ.ಶ. 1064, ಡಿಸೆಂಬರ್ 26, ಆದಿತ್ಯವಾರ

ಕನ್ನಡ

ಅರಸನು ಮೋರಿಂಗೆರೆಯ ನೊಳಂಬೇಶ್ವರ ದೇವಸ್ಥಾನಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ತಂತ್ರಪಾಲ ಮೈಲಯ್ಯನೂ ದಾನ ನೀಡಿದ್ದಾನೆ.

ಆ್ಯರಿಎ, 1914-15, ಸಂ. 1914 ರ 442; ಸೌಇಇ, IX i, ಸಂ. 127.

ಸಂ. 249

ಅದೇ ದೇವಸ್ಥಾನದಲ್ಲಿ ನಿಲ್ಲಿಸಿರುವ ಇನ್ನೊಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲ-ಆಹವಮಲ್ಲದೇವ (ಸೋಮೇಶ್ವರ I)

ಶಕ 967, ಪಾರ್ಥಿವ, ಕಾರ್ತ್ತಿಕ, ಪುಣ್ಣಮಿ, ಬೃಹಸ್ಪತಿವಾರ, ಸೋಮಗ್ರಹಣ, ಸಂಕ್ರಾಂತಿ-ವ್ಯತಿಪಾತ = ಕ್ರಿ.ಶ. 1045, ಅಕ್ಟೋಬರ್ 28, ಸೋಮವಾರ

ಕನ್ನಡ

ಪಲ್ಲವ ಸಂತತಿಯ ನೊಳಂಬ ಸಾಮಂತ ಅರಸರ ವಂಶಾವಳಿ ಇದೆ. ತ್ರೈಲೋಕ್ಯಮಲ್ಲ ನನ್ನಿ-ನೊಳಂಬ ಪಲ್ಲವ ಪೆರ್ಮಾನಡಿಯು ಬಲ್ಲಕುಂದೆ-300, ಕೋಗಳಿ-500, ಕದಂಬಳಿಗೆ-1000, ಕುಡಿಯಹರವಿ-70, ಕರಿವಿಡಿ-30 ಮತ್ತು ನೊಳಂಬವಾಡಿ-32000 ಗಳನ್ನಾಳುತ್ತಿದ್ದನು. ಉದಯಾದಿತ್ಯನಿಗೆ ಪುಣ್ಯವಾಗಲೆಂದು ದಂಡನಾಯಕ ತಿಕಣ್ಣನ ನೇತೃತ್ವದಲ್ಲಿ ಲೆಂಕ-1000ರು ಸತ್ರದಲ್ಲಿ 24 ಜನರ ಊಟಕ್ಕೆ ವ್ಯವಸ್ಥೆಮಾಡಿದರು ಮತ್ತು ನೊಳಂಬೇಶ್ವರ ಮತ್ತು ಲೆಂಕೇಶ್ವರ ದೇವರನ್ನು ಪ್ರತಿಷ್ಠಾಪಿಸಿ, ದೇವರ ಪೂಜೆಗೆ ಮತ್ತು ವಿದ್ಯಾ ದಾನಕ್ಕೆ ಸಾವಂತಿಯಪಾಳನ್ನು ಶಿವಪುರವೆಂದು ಪುನಃ ನಾಮಕರಣ ಮಾಡಿ ದಾನ ಮಾಡಿದರು. ಅರಸನು ಶಿವಪನನ್ನು ಸೆರೆಹಿಡಿದು ಪೂವಿನ-ಪಡಂಗಿಲೆಯಲ್ಲಿ ತಂಗಿದ್ದಾಗ ಘಟ್ಟಿಯರಸನು ಕೋಗಳಿಯ ಮಠದ ಮುಖ್ಯಸ್ಥನಾದ ಸೋಮೇಶ್ವರ ಪಂಡಿತನ ಪಾದ ತೊಳೆದು ದಾನವನ್ನು ಮಾಡಿದನು. ಚಟ್ಟರಸ, ಘಟ್ಟಿಯರಸ, ಸೇನಬೋವ ಗೋವಿಂದಯ್ಯ ಮತ್ತು ಇತರರು ದೇವದಾಸಿಯರಿಗೆ ಮತ್ತು ಅವರ ಸಂಗೀತ ತಂಡದವರಿಗೆ, ಮತ್ತು ದೇವಸ್ಥಾನದ ಇತರ ಸೇವಕರಿಗೆ, ರೂವಾರಿ ಮುಚ್ಚೋಜನಿಗೆ ಭೂಮಿ ದಾನ ನೀಡಿದರು. ಅಲ್ಲಿಯ ತಪೋಧನರು ತಮ್ಮ ನಡತೆಯನ್ನು ಕಾಪಾಡಿಕೊಳ್ಳಬೇಕೆಂದು ಆಗ್ರಹಪಡಿಸಿದೆ. ಈ ಶಾಸನವನ್ನು ನಾಗಮಯ್ಯನು ಬರೆದನು ಮತ್ತು ಅಗ್ಗಳೋಜನ ಮಗ ಮುಚ್ಚೋಜನು ಕಂಡರಿಸಿದನು.

ಆ್ಯರಿಎ, 1914-15, ಸಂ. 1914 ರ 443, ಸೌಇಇ, IX i, ಸಂ. 101.

ಸಂ. 250

ಅದೇ ಕಲ್ಲಿನ ಮೇಲೆ

--

ದುಂದುಭಿ, ಮಾರ್ಗಶಿರ ಶು. ಪುಣ್ಣಮೆ, ಸೋಮವಾರ = ಕ್ರಿ.ಶ. 1082, ನವೆಂಬರ್ 7, ಸೋಮವಾರ (ಕಾರ್ತಿಕದ ಬದಲಾಗಿ ಮಾರ್ಗಶಿರವೆಂದು ಬರೆದಿದೆ)

ಕನ್ನಡ

ಮೋರಿಗೆರೆಯಲ್ಲಿರುವ ಬೋವರಸನ-ಬಾವಿಯ ನಿರ್ವಹಣೆಗಾಗಿ ರಾಜಗುರು ವಾಮರಾಸಿದೇವನು 12 ಮತ್ತರು ಭೂಮಿಯನ್ನು ದಾನ ಮಾಡಿದನೆಂದು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 443-ಎ; ಸೌಇಇ, IX i, ಸಂ. 151.

ಸಂ. 251

ಗ್ರಾಮದಲ್ಲಿ ನಾಗರಕಟ್ಟೆಯ ಹತ್ತಿರ ನಿಲ್ಲಿಸಿರುವ ಕಲ್ಲಿನ ಮೇಲೆ

--

ನಳ, ಆಶ್ವಿಜ, ಶು. 5

ಕನ್ನಡ

ಮೋರಿಗೆರಿಯ ಶ್ಯಾ(ನಬೋಗ)ನಾದ ನಾಗಪ ನಿಂಗಪನು ತನ್ನ ಮಗಳು ಬೊಮೊವಳಿಗೆ ಪುಣ್ಯವಾಗಲೆಂದು ಒಂದು ಕೆರೆಯನ್ನು ದುರಸ್ತಿ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 444.

ನಾರಾಯಣದೇವರಕೆರೆ

ಸಂ. 252

ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಹನುಮಂತರಾಯ ಗುಡಿಯ ಮುಂದಿನ ಧ್ವಜ ಸ್ತಂಭದ ಕೆಳಭಾಗದಲ್ಲಿ

--

ಶಕ 1545, ರುದಿರೋದ್ಗಾರಿ, ಭಾದ್ರಪದ ಶು. 15, ಶುಕ್ರವಾರ = ಕ್ರಿ.ಶ. 1623, ಆಗಸ್ಟ್ 29, ಶುಕ್ರವಾರ

ಕನ್ನಡ

ಗುಡಿಯಕೋಟೆ ಸ್ಥಳದ ಸೇನಬೋವ ತಿಮ್ಮರಸಯನ ಮಗ ನರಸಯ್ಯನು ದೀಪಸ್ತಂಭವನ್ನು ದಾನ ಮಾಡಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 746.

ಸಂ. 253

ಅದೇ ದೇವಸ್ಥಾನದ ಹತ್ತಿರದ ಮಹಾದ್ವಾರದ ಕಂಬದ ಮೇಲೆ

--

ಶಕ 1655, ಪ್ರಮಾದೀಚ, ಆಶ್ವಿಜ ಶು. 10 = ಕ್ರಿ.ಶ. 1733, ಅಕ್ಟೋಬರ್ 7

ಕನ್ನಡ

ಕೊಮಾರ ಬುಸಪ್ಪನ ಮಗ ಕೊಮಾರಪ್ಪನು ಕಲ್ಲಿನ ಬಾಗಿಲನ್ನು ಕಟ್ಟಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922ರ 747.

ಸಂ. 254

ಗ್ರಾಮದ ಈಶಾನ್ಯಕ್ಕೆ ಹೊಲದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

--

ಫಸ್ಲಿ ವರ್ಷ 1231 = ಕ್ರಿ.ಶ. 1823

ಪರ್ಶಿಯನ್

ಹಾಳಾಗಿದೆ.

ಆ್ಯರಿಸೌಇಎ, 1922-23, ಸಂ. 1922ರ 748.

ಸಂ. 255

ಗ್ರಾಮದಲ್ಲಿ ಅಯ್ಯನಕುಂಟೆ ಹೊಂಡದ ಹತ್ತಿರ ನಿಲ್ಲಿಸಿರುವ ಕಲ್ಲಿನ ಮೇಲೆ

--

ಫಸ್ಲಿ ವರ್ಷ 1231 = ಕ್ರಿ.ಶ. 1823

ಪರ್ಶಿಯನ್

ಹಾಳಾಗಿದೆ.

ಆ್ಯರಿಸೌಇಎ, 1922-23, ಸಂ. 1922ರ 749.

ರಾಮೇಶ್ವರಬಂಡ

ಸಂ. 256

ಗ್ರಾಮದ ಹತ್ತಿರ ತುಂಗಭದ್ರ ನದಿಯಲ್ಲಿ ಒಂದು ಬಂಡೆಯ ಮೇಲೆ

--

--

--

ಶಂಕರನಾರಾಯಣ, ಸುರೆರಾಯ ಮತ್ತು ಕೃಷ್ಣರ ಹಸ್ತಾಕ್ಷರಗಳಿವೆ.

ಆ್ಯರಿಎ, 1914-15, ಸಂ. 1914ರ 506.

ಸೀಗಿನಹಳ್ಳಿ

ಸಂ. 257

ಗ್ರಾಮದ ಚಾವಡಿಯ ಹತ್ತಿರ ಬಿದ್ದಿರುವ ಗಜಲಕ್ಷ್ಮಿ ವಿಗ್ರಹದ ಪೀಠದ ಮೇಲೆ

--

ಶಕ 1297, ಆನಂದ, ಫಾಲ್ಗುಣ ಶು. 8, ಸೋಮವಾರ = ಕ್ರಿ.ಶ. 1375, ಫೆಬ್ರವರಿ 9, ಶುಕ್ರವಾರ (ಶಕ 1296)

ಕನ್ನಡ

ಅಪೂರ್ಣವಾಗಿದೆ. ಚಿಗನಹಳ್ಳಿಯ ನಿವಾಸಿ ಒಬ್ಬ ಗೌಡನ ಉಲ್ಲೇಖವಿದೆ.

ಆ್ಯರಿಎ, 1914-15, ಸಂ. 1914 ರ 505.

ತಂಬ್ರಹಳ್ಳಿ

ಸಂ. 258

ಗ್ರಾಮದ ಹತ್ತಿರ ರಂಗಪ್ಪನ-ಗುಡ್ಡದ ಮೇಲೆ ಒಂದು ಬಂಡೆಯ ಮೇಲೆ

--

ಶಕ 1575, ವಿಜಯ, ಜ್ಯೇಷ್ಠ, ಶು. 5 = ಕ್ರಿ.ಶ. 1653, ಮೇ 21

ಕನ್ನಡ

ಕೊಟ್ಟೂರ-ಸೀಮೆಯಲ್ಲಿರುವ ಕೆನ್ನೆಹಳ್ಳಿ-ಯಿಟ್ಟಿಗೆಯ ಸೂರಿಯರಾಯನ ಮೂವರು ಮಕ್ಕಳು ಬಂಡೆಯ ರಂಗನಾಥ ದೇವರಿಗೆ ಉತ್ಸವ ಮಂಟಪ ಕಟ್ಟಿಸಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 129.

ಸಂ. 259

ಅದೇ ಬಂಡೆಯ ಮೇಲೆ

--

ಪ್ಲವ, ಭಾದ್ರಪದ ಶು. 3

ಕನ್ನಡ

ತಳಭಾಗದಲ್ಲಿ ಹಾಳಾಗಿದೆ. ಬಹುಶಃ ಬಂಡೆಯ ರಂಗಯ್ಯನ ಪೂಜಾರಿ ಮತ್ತು ಇನ್ನೊಬ್ಬನ ನಡುವೆ ಆದ ಖಾಸಗಿ ಒಪ್ಪಂದವನ್ನು ದಾಖಲಿಸುವಂತೆ ತೋರುತ್ತದೆ.

ಆ್ಯರಿಎ, 1913-14, ಸಂ. 1913 ರ 130.

ಸಂ. 260

ಅದೇ ಬಂಡೆಯ ಮೇಲೆ

--

ಶಾರ್ವರಿ, ಪುಷ್ಯ ಶು. 14

ಕನ್ನಡ

ಉಜನಿವೊಡೇರ ಮಗ ಸಿದ್ದೈಯನು (ಬಹುಶಃ ಅದೇ ದೇವಸ್ಥಾನಕ್ಕೆ) ಚಿನ್ನ, ಸ್ತ್ರೀ ಮತ್ತು ಭೂಮಿಗಳನ್ನು ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 131.

ಸಂ. 261

ಅದೇ ಬಂಡೆಯ ಮೇಲೆ

--

ಪಾರ್ಥಿವ, ಮಾಘ

ಕನ್ನಡ

ಯಿಟ್ಟಿಗೆಯ ಸೇನಭೋಗ, ವಬರಸ್ಯೆಯನ ಮಗ ಮತ್ತು ಬಂಡೆ ರಂಗನಾಥನ ಆರಾಧಕನಾದ ಸೂರಿಯರಾಯನು ಈ ಆಳವಾದ ಹೊಂಡ (ಗಜಾಗೊಂಡ)ವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 132.

ಉಲುವತ್ತಿ

ಸಂ. 262

ಮಠದ ಮುಂದಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ

ವರ್ಷ 7, ರಕ್ತಾಕ್ಷಿ, ಶ್ರಾವಣ ಪೂರ್ಣಿಮ, ಸೋಮವಾರ, ಸೋಮಗ್ರಹಣ, ಸಂಕ್ರಾಂತಿ ವ್ಯತಿಪಾತ = ಕ್ರಿ.ಶ. 1144, ಜುಲೈ 16 (ಆದಿತ್ಯವಾರ)

ಕನ್ನಡ

ವೀರ ಪಾಂಡ್ಯದೇವನು ನೊಳಂಬವಾಡಿ-32000 ಮತ್ತು ಆತನ ಸಾಮಂತ ಕದಂಬ . ಚಿದೇವನು ಕೋಗಳಿ-500ನ್ನು ಆಳುತ್ತಿದ್ದರೆಂದು ತಿಳಿಸುತ್ತದೆ. ಅಜ್ಜಗಾವುಂಡನು ತನ್ನ ತಂದೆ ಉಯಲ್ಪಟ್ಟಿಯ ನಾಳ್ಗಭು ಸಿಂಗಗಾವುಂಡ ಮತ್ತು ತಾಯಿ ಶಾಂತಿಕವ್ವೆಯರಿಗೆ ಪುಣ್ಯವಾಗಲೆಂದು ಬ್ರಹ್ಮರಾಸಿಪಂಡಿತ ಲಾಳದೇವನ ಪಾದವನ್ನು ತೊಳೆದು ರಾಮೇಶ್ವರದೇವರಿಗೆ ಭೂಮಿಯನ್ನು ದಾನ ಮಾಡಿದನೆಂದು ತಿಳಿಸುತ್ತದೆ.

ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ನಡೆದ ಕರ್ನಾಟಕ ಇತಿಹಾಸ ಕಾಂಗ್ರೆಸ್ ಸಮ್ಮೇಳನದಲ್ಲಿ ಕು. ಎಂ.ಪಿ.ವೀಣಾ ಮಂಡಿಸಿದ ಪ್ರಬಂಧ.

ಉಪ್ಪಿನಾಯಕನಹಳ್ಳಿ

ಸಂ. 263

ಆಂಜನೇಯ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಂಬದ ಮೇಲೆ

--

--

ಕನ್ನಡ

ಹನುಮಂತರಾಯ ದೇವಸ್ಥಾನದಲ್ಲಿಯ ಪೂಜೆಗೆ ಸುಂಕವನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 513.

ವರದಾಪುರ

ಸಂ. 264

ಗ್ರಾಮದ ಹೊಲದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

--

--

ಕನ್ನಡ

ವರದಾಪುರದ ಮೇರೆಯನ್ನು ಉಪೇಕ್ಷೆ ಮಾಡಿದವನು ನಾಯಿಯ ಮಾಂಸ ತಿಂದಂತೆ ಎಂಬ ಶಾಪವಾಕ್ಯವನ್ನು ದಾಖಲಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 511.

ಏಣಗಿ

ಸಂ. 265

ಆಂಜನೇಯ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ

ಯಾದವ, ಸೇವಣರಾಯ ಕಂಧಾರದೇವ

ಶಕ 1181, ಕಾಳಯುಕ್ತ, ಅರಸನ 13ನೇ ವರ್ಷ, ಪುಷ್ಯ, ಅಮವಾಸೆ, ಸೋಮವಾರ, ಉತ್ತರಾಯಣ-ಸಂಕ್ರಾಂತಿ, ಸೂರ್ಯಗ್ರಹಣ, ವ್ಯತಿಪಾತ = ಕ್ರಿ.ಶ. 1259

ಕನ್ನಡ

ಪೂವಿನ ಪಡಂಗಿಲೆಯ 120 ಮಹಾಜನರು ಗ್ರಾಮದ ಕುಸುಮನಾಥ ದೇವರಿಗೆ ಭೂಮಿಯನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ. ಪೂವಿನ ಪಡಂಗಿಲೆಯು ಕುಂತಳ ದೇಶದ ನೊಳಂಬವಾಡಿ ನಾಡಿನ ಕೋಗಳಿನಾಡಿನಲ್ಲಿತ್ತೆಂದು ತಿಳಿಸುತ್ತದೆ.

ಆ್ಯರಿಎ, 1914-15, ಸಂ. 1914 ರ 525; ಸೌಇಇ, IX i, ಸಂ. 371.

ಹರಪನಹಳ್ಳಿ ತಾಲೂಕು

ಅಲಗಿಲವಾಡ

ಸಂ. 266

ಕಲ್ಲೇಶ್ವರ ದೇವಸ್ಥಾನದ ಹತ್ತಿರ ಕಲ್ಲಿನ ಮೇಲೆ

--, ವಿಜಯ ಪಾಂಡ್ಯದೇವ

ಶಕ 1092, ವಿರೋಧಿ = ಕ್ರಿ.ಶ. 1169 (ಶಕ 1091)

ಕನ್ನಡ

ಹಾಳಾಗಿದೆ. ಅರಸನ ಸಾಮಂತ ಪೆರ್ಮಾನಡಿ-ದಂಡನಾಥ, ಆತನ ಅಧೀನ ಪೆರ್ಗ್ಗಡೆ ದಾಸಿಯಣ್ಣ ಮತ್ತು ಬರ್ಮದೇವರ ಬಗ್ಗೆ ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 237.

ಸಂ. 267

ಅದೇ ದೇವಸ್ಥಾನದ ಹತ್ತಿರ ನಿಲ್ಲಿಸಿರುವ ಒಡೆದ ಕಲ್ಲಿನ ಮೇಲೆ

--

ಭವ, (ಜ್ಯೇಷ್ಠ), ಉತ್ತರಾಯಣ ಸಂಕ್ರಮಣ

ಕನ್ನಡ

ಹಾಳಾಗಿದೆ. ನೊಣಂಬವಾಡಿ-32000 ವನ್ನಾಳುತ್ತಿದ್ದ ಮಹಾಮಂಡಲೇಶ್ವರ ವೀರ-ಪಾಂಡ್ಯದೇವ ಮತ್ತು ಆತನ ರಾಣಿ ವಿಜಯಾದೇವಿಯರು ಅರಗಿಲ್ವಾಡ ಗ್ರಾಮದ ಜನರಿಗೆ ಒಂದು ತೋಟ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 238.

ಸಂ. 268

ಅದೇ ದೇವಸ್ಥಾನದ ಹತ್ತಿರ ನಿಲ್ಲಿಸಿರುವ ವೀರಗಲ್ಲಿನ ಮೇಲೆ

--

ಶಕ 1209, ಸರ್ವಜಿತ್, ವೈಶಾಖ, ಬ. 7, [ರವಿವಾರ] = ಕ್ರಿ.ಶ. 1287, ಮೇ 5, ಸೋಮವಾರ

ಕನ್ನಡ

ಅರಗಿಲುವಾಡವನ್ನು ವಶಪಡಿಸಿಕೊಳ್ಳಲು ನಡೆದ ಯುದ್ಧದಲ್ಲಿ ಹೊಳಲಕೆರೆಯ ಬಣಜಿಗ ಸಿಂಗಯ್ಯನ ಸಹೋದರ ಹರಿಪಿ-ಸೆಟ್ಟಿಯು ಮರಣ ಹೊಂದಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 239.

ಅಣಜಿಗೆರೆ

ಸಂ. 269

ಗ್ರಾಮದ ದಕ್ಷಿಣಕ್ಕೆ ಹೊಲದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

ಹೊಯ್ಸಳ, ವೀರ-ನರಸಿಂಹದೇವ

ಶಕ 1145, ಚಿತ್ರಭಾನು, ಪುಷ್ಯ ಬ. 8, ಸೋಮವಾರ, ಉತ್ತರಾಯಣ-ಸಂಕ್ರಮಣ, ವ್ಯತಿಪಾತ = ಕ್ರಿ.ಶ. 1222, ಡಿಸೆಂಬರ್ 28, ಸೋಮವಾರ

ಕನ್ನಡ

ಮಹಾಪ್ರಧಾನ ಅಮ್ಮಣ್ಣ-ದಣ್ಣಾಯಕನ ಅಧೀನನಾದ, ಸೊಲದ ಕುಲದ ಆಸಗೋಡ ಪಲ್ಲವ-ಸಾವಂತನು ಉಚ್ಚಂಗಿ-30 ರಲ್ಲಿರುವ ಕೂಚಿಗೋಳದ ಕಲಿದೇವರಿಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 281; ಸೌಇಇ, IX i, ಸಂ. 339.

ಅರಬಳ್ಳಿ

ಸಂ. 270

ಗ್ರಾಮದ ಪಶ್ಚಿಮಕ್ಕೆ 2 ಕಿ.ಮೀ. ದೂರದಲ್ಲಿರುವ ಬೆಟ್ಟದ ಮೇಲಿನ ಗುಂಡಿನ ಮೇಲೆ

ಬಾದಾಮಿ ಚಾಲುಕ್ಯ, ಸತ್ಯಾಶ್ರಯ ಪೃಥ್ವೀವಲ್ಲಭ (ಪುಲಕೇಶಿ II)

ಕ್ರಿ.ಶ. 7 ನೆಯ ಶತಮಾನ

ಕನ್ನಡ

(ಜೈನ ಆಚಾರ್ಯರಾದ) ಥಾನಿ-ಆಚಾರ್ಯ, ಇಂದ್ರನಂದಿ ಮತ್ತು ಶಿವನಂದಿ ಸಲ್ಲೇಖನವನ್ನು ಆಚರಿಸಿದ್ದನ್ನು ತಿಳಿಸುತ್ತದೆ. ಅಜಿತಸೇನಾಚಾರ್ಯನ ಶಿಷ್ಯ ಧರ್ಮಸೇನನ ಮರಣದ ಬಗ್ಗೆ ತಿಳಿಸುತ್ತದೆ. ಸಿರಿಸೇನನ ಉಲ್ಲೇಖವೂ ಇದೆ.

ಜಎಸೊಇ, VII: 1980, ಪು. 1-2.

ಅರಸಿಕೆರೆ

ಸಂ. 271

ಕೆರೆಯ ದಂಡೆಯ ಹತ್ತಿರದ ಹೊಲದಲ್ಲಿಯ ಕಲ್ಲಿನ ಮೇಲೆ

ವಿಜಯನಗರ, ರಾಮದೇವರಾಯ

ಶಕ 1583, ಪ್ಲವ, ಮಾರ್ಗಶಿರ ಶು. 5, ಸ್ಥಿರವಾರ = ಕ್ರಿ.ಶ. 1661, ನವೆಂಬರ್ 16, ಶನಿವಾರ

ಕನ್ನಡ

ಮಹಾರಾಜಾಧಿರಾಜ ರಾಮದೇವರಾಯನ ಮಗ (?) ಬಾಗುಳಿ ಬಸವಪ್ಪ-ನಾಯಕನು ಅರಸಿಕೆರೆಯ ಗಿರೆ-ಮಲ್ಲಣ್ಣನ ಮಗ ಮತ್ತು ಮುರಿಗೆಯ-ಸಾಂತ-ರಾವುತನ ಮೊಮ್ಮಗನಾದ ಬಸವಯ್ಯನಿಗೆ ಭೂಮಿಯನ್ನು ರಾವುತ್ತ-ವೃತ್ತಿಯಾಗಿ ದಾನ ಮಾಡಿದ್ದನ್ನು ತಿಳುಸುತ್ತದೆ.

ಆ್ಯರಿಎ, 1918-19, ಸಂ. 1918 ರ 274; ಸೌಇಇ, IX ii, ಸಂ. 697.

ಬಾಡ

(ಬೆಣ್ಣೆಹಳ್ಳಿಯ ಉಪಗ್ರಾಮ)

ಸಂ. 272

ಕಲ್ಲೇಶ್ವರ ದೇವಸ್ಥಾನದ ಹತ್ತಿರ ಬಿದ್ದಿರುವ ಕಂಬದ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲದೇವ (II)

7ನೇ ವರ್ಷ ರಕ್ತಾಕ್ಷಿ, ಪ್ರಥಮ ಶ್ರಾವಣ, ಪುಣ್ಣಮೆ, ಸೋಮಗ್ರಹಣ = ಕ್ರಿ.ಶ. 1144, ಜುಲೈ 16

ಕನ್ನಡ

ಹಾಳಾಗಿದೆ. ಸುಬ್ಬರಸನು ನೊಣಂಬೇಶ್ವರ ದೇವರ ಸೇವೆಗೆ ಭೂಮಿ ಮತ್ತು ಒಂದು ಮಠವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 211; ಸೌಇಇ, IX i, ಸಂ. 244.

ಸಂ. 273

ಅದೇ ದೇವಸ್ಥಾನದ ಹತ್ತಿರ ಇನ್ನೊಂದು ಕಂಬದ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲದೇವ

ಶಕ 1095, ಜಯ, ಪ್ರಥಮ-ಆಷಾಢ, ಶ್ರಾವಣ, ಪುಣ್ಣಮೆ, ಸೋಮಗ್ರಹಣ = ಕ್ರಿ.ಶ. 1173, ಜೂನ್ 27, ಬುಧವಾರ

ಕನ್ನಡ

ನೊಣಂಬ ಚಕ್ರವರ್ತಿಯು ನೊಣಂಬೇಶ್ವರ ದೇವರ ಸೇವೆಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 212; ಸೌಇಇ, IX i, ಸಂ. 272.

ಬಾಗಳಿ

ಸಂ. 274

ಕಲ್ಲೇಶ್ವರ ದೇವಸ್ಥಾನದಲ್ಲಿ ಮಧ್ಯದ ಗುಡಿಯ ದಕ್ಷಿಣ ದ್ವಾರದ ಬಲಗಡೆ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ (ವಿಕ್ರಮಾದಿತ್ಯ VI)

ಸಿದ್ಧಾರ್ಥಿ, ಭಾದ್ರಪದ ಶು. 13, ಸೋಮವಾರ = ಕ್ರಿ.ಶ. 1079, ಆಗಸ್ಟ್ 12, ಸೋಮವಾರ

ಕನ್ನಡ

ನಾಗೆಕಲಯ್ಯನು ಮಹಾಜನರಿಗೆ ಭೂಮಿ ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 70-ಎ; ಸೌಇಇ, IX i, ಸಂ. 144.

ಸಂ. 275

ಅದೇ ಕಲ್ಲಿನ ಮೇಲೆ

ಹೇಮಳಂಬಿ, ಜ್ಯೇಷ್ಠ ಬ. 8, ಬುಧವಾರ

ಕನ್ನಡ

ಬಾಗುಳಿಯ ಮಹಾಜನರು ಚಿಕ-ಗೌಡನಿಗೆ ತೆರಿಗೆ ರಹಿತ ಭೂಮಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 70-ಬಿ; ಸೌಇಇ, IX ii, ಸಂ. 710.

ಸಂ. 276

ಅದೇ ದೇವಸ್ಥಾನದಲ್ಲಿ ದಕ್ಷಿಣ ದ್ವಾರದ ಎಡಕ್ಕೆ ನಿಲ್ಲಿಸಿರುವ ಕಲ್ಲಿನ ಮೇಲೆ

ವಿಜಯನಗರ, ಸದಾಶಿವ

ಶಕ 1472, ಸಾಧಾರಣ, ಪುಷ್ಯ ಶು. ಪೂರ್ಣಿಮ, ಸೋಮವಾರ = ಕ್ರಿ.ಶ. 1550, ಡಿಸೆಂಬರ್ 23, ಮಂಗಳವಾರ

ಕನ್ನಡ

ಹಡಪದ ಬಯ್ಯಪ-ನಾಯಕನ ಮಗ ಕೃಷ್ಣಪ್ಪ-ನಾಯಕನು ಕೋಗಳಿ ವಿಭಾಗದ ಕೊಟ್ಟೂರು ಮತ್ತು ಮೂವತ್ತೆರಡು ಸಾವಿರ ಪ್ರಾಂತಗಳನ್ನು ಮತ್ತು ಹಳವಿ-ನಾಯಕನು ಕೊಟೂರ-ವಳಿತದ ಬಾಗುಳಿಯನ್ನು ಆಳುತ್ತಿದ್ದರೆಂದು ತಿಳಿಸುತ್ತದೆ. ಬಾಗುಳಿಯ ಪಟ್ಟಣ ಸ್ವಾಮಿಯಾದ ಲಕ್ಕಿಸೆಟ್ಟಿಯ ಪತ್ನಿ ಲಿಂಗಮ್ಮಳು, ತನ್ನ ಮಗ ಲಿಂಗಯ್ಯನಿಗೆ ಒಳ್ಳೆಯದಾಗಲೆಂದು ದೇವರಾಸಿಜೀಯನಿಗೆ ಕಲಿದೇವರ ಸೇವೆಗಾಗಿ ಚಿನ್ನವನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 71; ಸೌಇಇ, IX ii, ಸಂ. 640.

ಸಂ. 277

ಅದೇ ದೇವಸ್ಥಾನದಲ್ಲಿ ಮಧ್ಯದ ಗುಡಿಯ ಮುಂದಿನ ಮಂಟಪದಲ್ಲಿಯ ಒಂದು ಕಂಬದ ಮೇಲೆ

ಹೊಯ್ಸಳ, ನರಸಿಂಗದೇವ (ನರಸಿಂಹ II)

(i) ಸರ್ವಧಾರಿ, ಪುಷ್ಯ 30, ಬೃಹಸ್ಪತಿವಾರ, ಸೂರ್ಯ-ಗ್ರಹಣ = ಕ್ರಿ.ಶ. 1228, ಡಿಸೆಂಬರ್ 28, ಗುರುವಾರ. (ii) ಸರ್ವಜಿತ, ವೈಶಾಖ ಬ. 10, ಗುರುವಾರ = ಕ್ರಿ.ಶ. 1287, ಮೇ 8, ಮಂಗಳವಾರ. (iii) ಖರ, ಚೈತ್ರ ಶು. 7, ಗುರುವಾರ = ಕ್ರಿ.ಶ. 1291, ಮಾರ್ಚ್ 8, ಗುರುವಾರ. (iv) ಆಂಗಿರಸ, ಭಾದ್ರಪದ ಬ. 30, ಆ(ದಿತ್ಯವಾರ), ಸೂರ್ಯ-ಗ್ರಹಣ = ಕ್ರಿ.ಶ. 1332, ಸೆಪ್ಟೆಂಬರ್ 20, ರವಿವಾರ. (v) ನಂದನ, ವೈಶಾಖ ಶು. 15, ಗು(ರುವಾರ) = ಕ್ರಿ.ಶ. 1292, ಮೇ 1, ಗುರುವಾರ. (vi) ಸರ್ವಜಿತ, ಆಷಾಢ ಶು. 5, ಸೋ(ಮವಾರ) = ಕ್ರಿ.ಶ. 1287, ಜೂನ್ 17. (vii) ಖರ, ಮಾರ್ಗಶಿರ ಬ. 12

ಕನ್ನಡ

ಪ್ರಥಮ ದಿನಾಂಕದಂದು ಬೊಮ್ಮಯ್ಯ-ದಣ್ಣಾಯಕನು ಬಾಗುಳಿಯ ಕಲಿದೇವರಿಗೆ ಭೂಮಿ ದಾನ ಮಾಡಿದ್ದನು ತಿಳಿಸುತ್ತದೆ. ಎರಡನೆಯ ದಿನಾಂಕದಂದು ಬಾಗುಳಿಯ ಮಹಾಜನರು ಬಿದಿರಹಳ್ಳಿ-ಸ್ವಾಮಿದೇವರ ಸೇವೆಗೆ ಭೂಮಿ ದಾನ ನೀಡಿದರು. ಮೂರನೆಯ ದಿನಾಂಕದಂದು ವಿಷ್ಣುಘೈಸಾಸನಿಗೆ ಭೂಮಿ ದಾನ ನೀಡಿದ ದಾಖಲೆಯಿದೆ. ನಾಲ್ಕನೆಯ ದಿನಾಂಕದಂದು ಹೆಗ್ಗಡೆಯು (ಹೆಸರು ಹಾಳಾಗಿದೆ) ಕಲಿನಾಥ ದೇವರ ಸೇವೆಗೆ ಸುಂಕದೊಳಗಿನ ಒಂದು ಭಾಗವನ್ನು ದಾನ ನೀಡಿದನು. ಐದನೆಯ ದಿನಾಂಕದಂದು ಅನೇಕ ದೇಶಗಳ ವ್ಯಾಪಾರಿಗಳು ಪ್ರತಿಯೊಂದು ನಡೆಗೆ ಒಂದು ತಾರ ವೀಳ್ಯದೆಲೆಗಳನ್ನು ಅದೇ ದೇವರ ಸೇವೆಗೆ ಕೊಟ್ಟರು. ಆರನೆಯ ದಿನಾಂಕದಂದು ಬ್ರಾಹ್ಮಣರಿಗೆ ಸಾಮ್ಯ . . . . . ಮತ್ತು ವೃತ್ತಿ-ವ್ಯಾಹಾರ ವಿನಾಯಿತಿ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 72; ಸೌಇಇ, IX i, ಸಂ. 344.

ಸಂ. 278

ಅದೇ ದೇವಸ್ಥಾನದಲ್ಲಿ ಮಧ್ಯಗುಡಿಯ ಹತ್ತಿರದಲ್ಲಿರುವ ಶಿಥಿಲವಾದ ಗುಡಿಯ ಪಶ್ಚಿಮಕ್ಕಿರುವ ಕಲ್ಲಿನ ಮೇಲೆ

ರಾಷ್ಟ್ರಕೂಟ, ಇಂದ್ರವಲ್ಲಭ

--

ಕನ್ನಡ

ಬಿರುದರ-ರೊಟ್ಟ (?) ಎಂಬ ಬಿರುದು ಪಡೆದ ಸಾಮಂತನು ಕೋಗಳಿ-500 ಮತ್ತು ಮಾಸಿಯವಾಡಿ-140ನ್ನು ಆಳುತ್ತಿದ್ದಾಗ, ಆತನು ಬೂದಗೂಳನ್ನು ಬಳಿಯರ ಬಾದಮ್ಮಳಿಗೆ ಬಾಳುಗುಳಿಯ ಮಹಾಜನರ ಒಪ್ಪಿಗೆ ಪಡೆದು ದಾನ ನೀಡಿದ್ದನ್ನು ತಿಳಿಸುತ್ತದೆ. ಬಾದಮ್ಮಳು ಆ ದಾನವನ್ನು ಕೆರೆಗೆ ದಾನ ಮಾಡಿದಳು.

ಆ್ಯರಿಎ, 1903-04, ಸಂ. 1904 ರ 73; ಸೌಇಇ, IX i, ಸಂ. 59.

ಸಂ. 279

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

ಚಾಲುಕ್ಯ-ವಿಕ್ರಮ ವರ್ಷ 37, ನಂದನ, ಚೈತ್ರ, ಅಮವಾಸ್ಯೆ, ಆದಿತ್ಯವಾರ, ಸೂರ್ಯಗ್ರಹಣ = ಕ್ರಿ.ಶ. 1113, ಮಾರ್ಚ್ 19, ಬುಧವಾರ

ಕನ್ನಡ

ಅರಸನ ಸಾಮಂತನು ನೊಳಂಬವಾಡಿ-32000 ವನ್ನಾಳುತ್ತಿದ್ದಾಗ ಮಹಾಮಲೆಯಾಳ-ವಡ್ಡವ್ಯವಹಾರಿ ಪೊನ್ಮೂರ್ಖಸೆಟ್ಟಿಯು ಶೈವ ಗುರು ಶಿವಶಕ್ತಿ-ಪಂಡಿತನ ಪಾದ ತೊಳೆದು ಬಾಗುಳಿಯ ಮಹಾಜನರ ಸಮ್ಮುಖದಲ್ಲಿ, ಕಲಿದೇವರ ಮುಂದೆ ನಿರಂತರವಾಗಿ ದೀಪ ಉರಿಸಲು 14 ಗದ್ಯಾಣಗಳನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 74; ಸೌಇಇ, IX i, ಸಂ. 189.

ಸಂ. 280

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಮೂರನೆಯ ಕಲ್ಲಿನ ಮೇಲೆ

ರಾಷ್ಟ್ರಕೂಟ, ಕನ್ನರದೇವ (ಕೃಷ್ಣ III)

ಶಕ 868, ಕ್ರೋಧಿ = ಕ್ರಿ.ಶ. 944-45

ಕನ್ನಡ

ಅರಸನ ಮಹಾಸಾಮಂತ, ಚಾಲುಕ್ಯ ವಂಶದ ಕತ್ಯೆರನು ಕೋಗಳಿ-500 ಮತ್ತು ಮಾಸಿಯವಾಡಿ-140 ಆಳುತ್ತಿದ್ದಾಗ ಮತ್ತು ದೋವಯ್ಯನು ಪೆರ್ಗಡೆಯಾಗಿದ್ದಾಗ, ಅಜವರ್ಮನು ಒಡ್ಡವಡಂಗಿಲ ಗ್ರಾಮದ ಸಲುವಾಗಿ ದಾನ ಸ್ವೀಕರಿಸಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 75; ಸೌಇಇ, IX i, ಸಂ. 64.

ಸಂ. 281

ಅದೇ ಸ್ಥಳದಲ್ಲಿ ನಿಲ್ಲಿಸಿರುವ ನಾಲ್ಕನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

ಚಾಲುಕ್ಯ-ವಿಕ್ರಮ ವರ್ಷ 47, ಶುಭಕೃತ, ಆಶ್ವಯುಜ, ಪುಣ್ಣಮೆ, ಸೋಮವಾರ, ಸೋಮ-ಗ್ರಹಣ = ಕ್ರಿ.ಶ. 1122, ಸೆಪ್ಟೆಂಬರ್ 17, ರವಿವಾರ

ಕನ್ನಡ

ಮಹಾಮಂಡಲೇಶ್ವರ ತ್ರಿಭುವನಮಲ್ಲ-ಪಾಂಡ್ಯದೇವನು ನೊಳಂಬವಾಡಿ-32000 ವನ್ನಾಳುತ್ತಿದ್ದಾಗ, ಮಾರ್ತಂಡಯ್ಯನ ಮಗ ದಾಸಯ್ಯ-ನಾಯಕನು ಬಾಳ್ಗುಳಿ ಗ್ರಾಮದ ಮಹಾಜನರ ಒಪ್ಪಿಗೆ ಪಡೆದು, ಖಂಡಿಕಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 76; ಸೌಇಇ, IX i, ಸಂ. 203.

ಸಂ. 282

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಐದನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

ಚಾಲುಕ್ಯ ವಿಕ್ರಮ ವರ್ಷ 39, ಜಯ, ಫಾಲ್ಗುಣ, ಪುಣ್ಣಮೆ, ಸೋಮವಾರ, ಸೋಮ-ಗ್ರಹಣ = ಕ್ರಿ.ಶ. 1115, ಫೆಬ್ರವರಿ 10, ಬುಧವಾರ

ಕನ್ನಡ

ಮಹಾಮಂಡಲೇಶ್ವರ ತ್ರಿಭುವನಮಲ್ಲ-ಪಾಂಡ್ಯದೇವನು ನೊಳಂಬವಾಡಿ-32000 ವನ್ನಾಳುತ್ತಿದ್ದಾಗ ಯೆಲೆಕಲ ಗ್ರಾಮದ ಈಶ್ವರಯ್ಯನ ಮಾಚಕ್ಕ ಬಾಗುಳಿಯ ಮಹಾಜನರ ಸಮ್ಮುಖದಲ್ಲಿ ಗುರು ಶಿವಶಕ್ತಿ-ಪಂಡಿತನ ಪಾದತೊಳೆದು, ಕಲಿದೇವಸ್ವಾಮಿ ದೇವರ ಸೇವೆಗೆ 20 ಗದ್ಯಾಣಗಳನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 77; ಸೌಇಇ, IX i, ಸಂ. 191.

ಸಂ. 283

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಆರನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

12ನೆಯ ಶತಮಾನ

ಕನ್ನಡ

ಮಹಾಮಂಡಲೇಶ್ವರ ತ್ರಿಭುವನಮಲ್ಲ-ಪಾಂಡ್ಯದೇವನು ನೊಳಂಬವಾಡಿ-32000 ವನ್ನಾಳುತ್ತಿದ್ದಾಗ ಕಾಳಿಮಯ್ಯನು ಬ್ರಾಹ್ಮಣರ ಭೋಜನದ ಸಲುವಾಗಿ ಛತ್ರಕ್ಕೆ ಭೂಮಿ ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 78; ಸೌಇಇ, IX i, ಸಂ. 219.

ಸಂ. 284

ಅದೇ ಕಲ್ಲಿನ ಮೇಲೆ

--

ಶಕ 1131, ಶುಕ್ಲ, ಚೈತ್ರ, ಪೌರ್ಣಮಾಸೆ, ಬೃಹಸ್ಪತಿವಾರ = ಕ್ರಿ.ಶ. 1209, ಮಾರ್ಚ್ 11, ಗುರುವಾರ

ಕನ್ನಡ

ಸುಪರ್ಣವೇಗಾಮೃತ-ಪಟ್ಟವರ್ಧನ-ದೀಕ್ಷಿತ-ಸೋಮಯಾಜ್ಯನು ಸುಪರ್ಣವೇಗಾಮೃತೇಶ್ವರ ದೇವರನ್ನು ಪ್ರತಿಷ್ಠಾಪಿಸಿ, ದೇವರ ಸೇವೆಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ ಮತ್ತು ಹಯಣ್ಣನ ಮಗ ಚಾಮಣ್ಣನು ಮಲ್ಲಿಕಾರ್ಜುನ ದೇವರನ್ನು ಪ್ರತಿಷ್ಠಾಪಿಸಿ ದೇವರ ಸೇವೆಗೆ ಭೂಮಿ ದಾನ ನೀಡಿದ್ದನ್ನೂ ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 78-ಎ; ಸೌಇಇ, IX ii, ಸಂ. 712.

ಸಂ. 285

ಅದೇ ದೇವಸ್ಥಾನದ ಉತ್ತರಕ್ಕೆ ನಿಲ್ಲಿಸಿರುವ ಕಲ್ಲಿನ ಮೇಲೆ

ರಾಷ್ಟ್ರಕೂಟ, ಖೊಟ್ಟಿಗ

ಶಕ 894, ಅಂಗಿರಸ, ಭಾದ್ರಪದ = ಕ್ರಿ.ಶ. 972, ಆಗಸ್ಟ್

ಕನ್ನಡ

ತ್ರುಟಿತ. ಅರಸನ ಸಾಮಂತ ಗಂಗ ವಂಶದ ಪೆರ್ಮಾನಡಿಯ ಉಲ್ಲೇಖವಿದೆ. ಒಂದು ಮಠಕ್ಕೆ ಭೂಮಿ ದಾನ ನೀಡಿದ್ದನ್ನು ದಾಖಲಿಸುತ್ತದೆ. ಜೈನಗುರು [ಮ]ಹೇಂದ್ರದೇವ-ಪಂಡಿತನನ್ನು ಉಲ್ಲೇಖಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 79; ಸೌಇಇ, IX i, ಸಂ. 71.

ಸಂ. 286

ಅದೇ ದೇವಸ್ಥಾನದ ಉತ್ತರಕ್ಕೆ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲ

ಶಕ 971, ... ಸೋಮಗ್ರಹಣ = ಕ್ರಿ.ಶ. 1048, ಆಗಸ್ಟ್ 26, ಶುಕ್ರವಾರ ಅಥವಾ ಕ್ರಿ.ಶ. 1049, ಫೆಬ್ರವರಿ 20, ಸೋಮವಾರ

ಕನ್ನಡ

ಪಳಿಯಂಡ-4000 ವನ್ನಾಳುತ್ತಿದ್ದ ಮಹಾಸಾಮಂತಾಧಿಪತಿಯು (ಹೆಸರು ಹಾಳಾಗಿದೆ) 12 ಮತ್ತರು ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 80; ಸೌಇಇ, IX i, ಸಂ. 108.

ಸಂ. 287

ಅದೇ ದೇವಸ್ಥಾನದ ಉತ್ತರಕ್ಕೆ ನಿಲ್ಲಿಸಿರುವ ಮೂರನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಆಹವಮಲ್ಲ

ಶಕ 909, ಸರ್ವಜಿತ್, ವೈಶಾಖ ಶು. 3, ಆದಿತ್ಯವಾರ = ಕ್ರಿ.ಶ. 987, ಏಪ್ರಿಲ್ 3, ಆದಿತ್ಯವಾರ

ಕನ್ನಡ

ಮಹಾಸಾಮಂತ ಆಯ್ತವರ್ಮನು ಕಿಸುಕಾಡು-70 ಮತ್ತು ಕೋಗಳಿ-500 ವನ್ನಾಳುತ್ತಿದ್ದ ಸಮಯದಲ್ಲಿ ಬಾಗುಳಿಯ ಮಹಾಜನರು ದುಗ್ಗಿಮಯ್ಯನಿಂದ ಪ್ರತಿಷ್ಠೆಗೊಂಡ ಆದಿತ್ಯದೇವರ ಸೇವೆಗೆ ಒಂದು ತೋಟ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 81; ಸೌಇಇ, IX i, ಸಂ. 75.

ಸಂ. 288

ಅದೇ ದೇವಸ್ಥಾನದಲ್ಲಿ ನರಸಿಂಹ ಗುಡಿಯ ಮುಂದಿನ ಮಂಟಪದ ಒಂದು ಕಂಬದ ಎರಡೂ ಬದಿಗಳಲ್ಲಿ

--

ನಂದನ, ಪ್ಲವ

ಕನ್ನಡ

ವಿಠಲಾಪುರದ ನರಸಿಂಹದೇವರ ದೇವಸ್ಥಾನಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 82.

ಸಂ. 289

ಅದೇ ದೇವಸ್ಥಾನದ ಅದೇ ಗುಡಿಯ ಮುಂದಿನ ಮಂಟಪದ ಇನ್ನೊಂದು ಕಂಬದ ಮೇಲೆ

--

ವಿಶ್ವಾವಸು

ಕನ್ನಡ

ಕೆಲವು ವ್ಯಕ್ತಿಗಳು ಸದಾಶಿವದೇವರ ದೇವಸ್ಥಾನಕ್ಕೆ ಭೂಮಿ ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 83.

ಸಂ. 290

ಅದೇ ದೇವಸ್ಥಾನದ ಅದೇ ಗುಡಿಯ ಮುಂದಿನ ಮಂಟಪದ ಮೂರನೆಯ ಕಂಬದ ಮೇಲೆ

ಯಾದವ, ಕಂಧರದೇವ

5ನೆಯ ವರ್ಷ, ಸಾಧಾರಣ, ಪುಷ್ಯ ಬ. 30, ವ್ಯತಿಪಾತ ಮತ್ತು ಶ್ರಾವಣ = ಕ್ರಿ.ಶ. 1250, ಜನವರಿ 4

ಕನ್ನಡ

ಚವುಡಿಸೆಟ್ಟಿಯ ಆಜ್ಞೆಯ ಮೇರೆಗೆ ಜನ್ನಮರಸನು ಬಾಗುಳಿಯ ಮಹಾಜನರಿಗೆ ಸಿಂಗನಹಾಳುವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 84; ಸೌಇಇ, IX i, ಸಂ. 368.

ಸಂ. 291

ಅದೇ ದೇವಸ್ಥಾನದ ದಕ್ಷಿಣಕ್ಕೆ ನಿಲ್ಲಿಸಿರುವ ಒಂದು ಕಲ್ಲಿನ ಮೇಲೆ

ವಿಜಯನಗರ, ಸದಾಶಿವ

ಶಕ 1472, ಸಾಧಾರಣ, ಫಾಲ್ಗುಣ ಶು. 5 = ಕ್ರಿ.ಶ. 1551, ಫೆಬ್ರವರಿ 11, ಬುಧವಾರ

ಕನ್ನಡ

ಅರಸನು ಹಡಪದ-ಕೃಷ್ಣಪ್ಪ-ನಾಯಕನಿಗೆ ಕೊಟ್ಟ ಕೊಟೂರ-ಸೀಮೆ ಉಪವಿಭಾಗದಲ್ಲಿಯ ಬಾಗುಳಿಯ ಚಾಮಿ-ನಾಯಕನ ಮಗ ಹೆಳವಿ-ನಾಯಕನು ಬಾಗುಳಿ ಮತ್ತು ಅದರ ಉಪಗ್ರಾಮಗಳ ಕುರುಬರಿಗೆ ಅವರ ಕುರಿಗಳ ಮೇಲಿನ ತೆರಿಗೆಯನ್ನು ವಿನಾಯಿತಿ ಮಾಡಿದ್ದನ್ನು ತಿಳಿಸುತ್ತದೆ. ಕೊಟೂರ-ಸೀಮೆಯು, ಪಾಂಡ್ಯ-ನಾಡಿನ ಉಪ-ವಿಭಾಗವಾದ ಕೋಗಳಿ-ವೆಂಠೆಯಲ್ಲಿತ್ತೆಂದು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 85; ಸೌಇಇ, IX ii, ಸಂ. 641.

ಸಂ. 292

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

ಚಾಲುಕ್ಯ ವಿಕ್ರಮ ವರ್ಷ 4, ಸಿದ್ಧಾರ್ಥಿ, ಜೇಷ್ಠ, ಅಮವಾಸ್ಯೆ, ವಡ್ಡವಾರ, ಸೂರ್ಯ ಗ್ರಹಣ = ಕ್ರಿ.ಶ. 1079, ಡಿಸೆಂಬರ್ 26, ಗುರುವಾರ

ಕನ್ನಡ

ಮಹಾಮಂಡಲೇಶ್ವರ ಪಾಂಡ್ಯದೇವನು ನೊಣಂಬವಾಡಿ-32000 ವನ್ನಾಳುತ್ತಿದ್ದಾಗ ಅರಸಿಕೆರೆಯ ಕಲಿಯಮ-ಗೌಡನ ಮಗಳು ಮತ್ತು ಪಿರಿಯಾಡ-ಪೆರ್ಗಡೆಯ ಪತ್ನಿಯಾದ ಬಾಚಲದೇವಿಯು ಬಾಗುಳಿಯ ಮಹಾಜನರ ಸಮ್ಮುಖದಲ್ಲಿ ಆ ಗ್ರಾಮದ ಕಲಿದೇವರ ಸೇವೆಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಪಿರಿಯಾಡ-ಪೆರ್ಗಡೆಯ ಹಣ ಮತ್ತು ತೆರಿಗೆಯ ಸ್ವಲ್ಪ ಭಾಗವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 86; ಸೌಇಇ, IX i, ಸಂ. 145.

ಸಂ. 293

ಅದೇ ಕಲ್ಲಿನ ಮೇಲೆ

--

ಶಕ 1103, ಶಾರ್ವರಿ, ಪುಷ್ಯ ಶು. . . . . . ಆದಿವಾರ, ವ್ಯತಿಪಾತ = ಕ್ರಿ.ಶ. 1180, ಡಿಸೆಂಬರ್ 21, ಆದಿವಾರ

ಕನ್ನಡ

ಅಪೂರ್ಣವಾಗಿದೆ. 400 ಕಮ್ಮ ಭೂಮಿ ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 86-ಎ; ಸೌಇಇ, IX i, ಸಂ. 274.

ಸಂ. 294

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಮೂರನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ-ಜಯಸಿಂಘ (II)

ಶಕ 940, ಕಾಳಯುಕ್ತ, ಪುಷ್ಯ ಶು. 13, ಆದಿತ್ಯವಾರ, ಉತ್ತರಾಯಣ-ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1018, ಡಿಸೆಂಬರ್ 23, ಮಂಗಳವಾರ

ಕನ್ನಡ

ಜಗದೇಕಮಲ್ಲ-ನೊಳಂಬ-ಪಲ್ಲವ-ಪೆರ್ಮಾನಡಿ ಎಂಬ ಉಪನಾಮ ಹೊಂದಿದ ಉದಯಾದಿತ್ಯದೇವನು ಗಂಗವಾಡಿ-96000, ಕದಂಬಳಿಗೆ-1000, ಕೋಗಳಿ-500, ಮಾಸವಾಡಿ-140 ರ ಒಂದು ಭಾಗ, ಬಲ್ಲಕುಂದೆ-300, ಮತ್ತು ಎಡೆದೊರೆ-2000 ದೊಳಗಿನ ಕುಡಿಹಾರ-70 ಗಳನ್ನಾಳುತ್ತಿದ್ದನೆಂದು ತಿಳಿಸುತ್ತದೆ. ಉದಯಾದಿತ್ಯನ ಆಜ್ಞೆಯ ಮೇರೆಗೆ ಪೆರ್ಗಡೆ ನರಸಿಂಘಯ್ಯನು ಬಾಗುಳಿಗೆ ಹೋಗಿ, ಬಾಗುಳಿಯ ಮಹಾಜನರು, ಬಿಕ್ಕಿಗ-70 ರ ಮನ್ನೆಯ ಬಿಕ್ಕಿಗ ಮತ್ತು ಬೀರಭಟ್ಟನ ಸಮ್ಮುಖದಲ್ಲಿ, ಸೋಮಸಿಂಘಭಳಾರನ ಪಾದ ತೊಳೆದು, ಕಲಿದೇವಸ್ವಾಮಿಯ ನೈವೇದ್ಯಕ್ಕೆ, ದೇವದಾಸಿ ಮತ್ತು ಅವರ ಸಂಗೀತ ವೃಂದದವರ ನಿರ್ವಹಣೆಗೆ, ಸೇವಕರಿಗೆ ಮತ್ತು ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಊಟಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಈ ದಾನವನ್ನು ಉದಯಾದಿತ್ಯನು ಪಂಪಾಪುರ ತೀರ್ಥಕ್ಕೆ ಭೇಟಿ ನೀಡಿದಾಗ ಮಾಡಲಾಯಿತು. ಅರಸನು ಕಂಪುಲಿಯಿಂದ ಆಳುತ್ತಿದ್ದನು.

ಆ್ಯರಿಎ, 1903-04, ಸಂ. 1904 ರ 87; ಸೌಇಇ, IX i, ಸಂ. 80.

ಸಂ. 295

ಅದೇ ಸ್ಥಳದಲ್ಲಿ ನಿಲ್ಲಿಸಿರುವ ನಾಲ್ಕನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ

ಚಾಲುಕ್ಯ ವಿಕ್ರಮ ವರ್ಷ 16, ಆಂಗಿರಸ, ಫಾಲ್ಗುಣ, ಪೌರ್ಣಮಾಸೆ, ಸೋಮವಾರ, ವ್ಯತಿಪಾತ = ಕ್ರಿ.ಶ. 1153, ಫೆಬ್ರವರಿ 9, ಸೋಮವಾರ (ಜಗದೇಕಮಲ್ಲ-ವರ್ಷ 16)

ಕನ್ನಡ

ಜಗದೇಕಮಲ್ಲ-ವೀರ-ಪಾಂಡ್ಯದೇವನ ಮಾವನಾದ ವಿಕ್ರಮಾದಿತ್ಯರಸನು ಬಾಗುಳಿಯ ಬ್ರಾಹ್ಮಣ ಮಹಾಜನರಿಗೆ 173 ಗದ್ಯಾಣಗಳನ್ನು ಕೊಟ್ಟು ಅದರ ಬಡ್ಡಿಯ ದುಡ್ಡಿನಲ್ಲಿ ಕಲಿದೇವರ ದೇವಸ್ಥಾನದ 13 ಬ್ರಾಹ್ಮಣರ ಊಟಕ್ಕೆ ಬೇಕಾಗುವ ದವಸ ಮುಂದಾದವುಗಳ ಮತ್ತು ಕಲಿದೇವರ ಮತ್ತು ನರಸಿಂಹದೇವರ ಮುಂದೆ 2 ದೀಪಗಳನ್ನು ಬೆಳಗಿಸುವ ವ್ಯವಸ್ಥೆ ಮಾಡಿದ್ದನ್ನು ತಿಳಿಸುತ್ತದೆ. ಈ ದಾನವನ್ನು ಸೋವಲದೇವಿ, ವಿಕ್ರಮಾದಿತ್ಯರಸ ಮತ್ತು ಆತನ ಪತ್ನಿ ನಾಗಿಯಾಂಡೆಯರಸಿಯರಿಗೆ ಪುಣ್ಯವಾಗಲೆಂದು ಮಾಡಲಾಯಿತು.

ಆ್ಯರಿಎ, 1903-04, ಸಂ. 1904 ರ 88; ಸೌಇಇ, IX i, ಸಂ. 258.

ಸಂ. 296

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಐದನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ-ಜಯಸಿಂಘದೇವ (II)

ಶಕ 940, ಕಾಳಯುಕ್ತಿ, ಪುಷ್ಯ ಶು. 13, ಆದಿತ್ಯವಾರ, ಉತ್ತರಾಯಣ-ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1018, ಡಿಸೆಂಬರ್ 23, ಮಂಗಳವಾರ

ಕನ್ನಡ

ಶಾಸನ ಸಂ. 295 ರ ನಕಲು.

ಆ್ಯರಿಎ, 1903-04, ಸಂ. 1904 ರ 89; ಸೌಇಇ, IX i, ಸಂ. 81.

ಸಂ. 297

ಆದೇ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲದೇವ

10ನೇ ವರ್ಷ, ಪ್ರಭವ, ವೈಶಾಖ, ಪುಣ್ಣಮೆ, ಸೋಮವಾರ, ಸೋಮಗ್ರಹಣ, ವ್ಯತಿಪಾತ = ಕ್ರಿ.ಶ. 1147 (ಕ್ರಮವಾಗಿಲ್ಲ)

ಕನ್ನಡ

ವಿಶ್ವಾಮಿತ್ರ ಗೋತ್ರದ ಕಾಳಿಮಯ್ಯನ ಮಗ ಸೋಮಣ್ಣನು ಕಲಿದೇವರ ಸೇವೆಗೆ ಭೂಮಿ ದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ. ಈ ಶಾಸನದ ಲಿಪಿಯು ಶಾಸನದಲ್ಲಿ ತಿಳಿಸಿದ ಕಾಲಕ್ಕಿಂತ ಬಹಳ ನಂತರದ ಕಾಲದ್ದಾಗಿದೆ.

ಆ್ಯರಿಎ, 1903-04, ಸಂ. 1904 ರ 89-ಎ; ಸೌಇಇ, IX i, ಸಂ. 246.

ಸಂ. 298

ಆದೇ ಸ್ಥಳದಲ್ಲಿ ನಿಲ್ಲಿಸಿರುವ ಆರನೆಯ ಕಲ್ಲಿನ ಮೇಲೆ

ಹೊಯ್ಸಳ, ವೀರ-ಬಲ್ಲಾಳ (II)

ಶಕ 1116, ಪ್ರಮಾಥಿ, ಕಾರ್ತಿಕ ಶು. ಪೌರ್ಣಮೆ, ಸೋಮವಾರ, ಸೋಮ-ಗ್ರಹಣ = ಕ್ರಿ.ಶ. 1193, ನವೆಂಬರ್ 10, ಬುಧವಾರ

ಸಂಸ್ಕೃತ, ಕನ್ನಡ

ಅರಸನು ಬಾಗುಳಿಯ ನೆಲೆವೀಡಿನಲ್ಲಿದ್ದಾಗ ಸ್ವಯಂಭು-ಕಲಿದೇವರ ಸೇವೆಗೆ ಮಹಾಜನರ ಪಾದ ತೊಳೆದು ವಿಶಾಲವಾದ ಭೂಮಿಯನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 90; ಸೌಇಇ, IX i, ಸಂ. 319.

ಸಂ. 299

ಆದೇ ಕಲ್ಲಿನ ಮೇಲೆ

--

ಆಂಗಿರಸ, ಮಾರ್ಗಶಿರ ಬ. 8, ಸೋಮವಾರ = ಕ್ರಿ.ಶ. 1212, ಡಿಸೆಂಬರ್ 17, ಸೋಮವಾರ

ಕನ್ನಡ

ಕೊಟ್ಟೂರಿನ ನಾಚಿದೇವನ ಮೊಮ್ಮಗನಾದ ಮತ್ತು ಹರಿಹರದೇವನ ಮಗನಾದ ಮಹಾಮಂಡಳೇಶ್ವರ ವೀರಜಗದಾಳ ಬಮ್ಮಿದೇವರಸನು ತನ್ನ ಗುರು ಅರಸಿಯಬೀಡಿನ ಸೋಮಯಾಜ್ಯ-ಹಿರಿಯಣ್ಣನ ಸಮ್ಮುಖದಲ್ಲಿ, ಕಲಿದೇವಸ್ವಾಮಿ ದೇವರ ಸೇವೆಗೆ ವಿಶಾಲವಾದ ಭೂಮಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 90-ಎ, ಸೌಇಇ, IX i, ಸಂ. 331.

ಸಂ. 300

ಆದೇ ಸ್ಥಳದಲ್ಲಿ ನಿಲ್ಲಿಸಿರುವ ಏಳನೆಯ ಕಲ್ಲಿನ ಮೇಲೆ

--

--

ಸಂಸ್ಕೃತ, ಕನ್ನಡ

ಹಾಳಾಗಿದೆ. ಇದು ಪಾಂಡ್ಯ ಅರಸ ವಿಜಯ-ಪಾಂಡ್ಯದೇವನ ಆಡಳಿತ ಕಾಲಕ್ಕೆ ಸೇರಿದೆ. ಒಬ್ಬ ಸಾಮಂತನ (ಹೆಸರು ಹಾಳಾಗಿದೆ) ಉಲ್ಲೇಖವೂ ಇದೆ.

ಆ್ಯರಿಎ, 1903-04, ಸಂ. 1904 ರ 91; ಸೌಇಇ, IX i, ಸಂ. 292.

ಸಂ. 301

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಎಂಟನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ (II)

11ನೆಯ ವರ್ಷ, ವಿಭವ, ಪುಷ್ಯ, ಪುಣ್ಣಮಿ, ಸೋಮವಾರ, ಸೋಮ-ಗ್ರಹಣ, ಉತ್ತರಾಯಣ-ಸಂಕ್ರಮಣ = ಕ್ರಿ.ಶ. 1148, ಡಿಸೆಂಬರ್ 26, ರವಿವಾರ (ಸೋಮವಾರವಲ್ಲ, ಚಂದ್ರಗ್ರಹಣವಿಲ್ಲ)

ಕನ್ನಡ

ಮಹಾಮಂಡಲೇಶ್ವರ ಜಗದೇಕಮಲ್ಲ-ವೀರ-ಪಾಂಡ್ಯನು ನೊಳಂಬವಾಡಿ-32000 ವನ್ನಾಳುತ್ತಿದ್ದಾಗ, ಭಟ್ಟರ ಮಾದಿಯಣ್ಣನು ಕಲಿದೇವರ ಪೂಜೆ ಮಾಡಿತ್ತಿದ್ದ 7 ಬ್ರಾಹ್ಮಣರಿಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 92; ಸೌಇಇ, IX i, ಸಂ. 255.

ಸಂ. 302

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಒಂಬತ್ತನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ-ಜಯಸಿಂಹ (II)

ಶಕ 957, ಯುವ, ಪುಷ್ಯ ಬ. 9, ಬೃಹಸ್ಪತಿವಾರ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1035, ಡಿಸೆಂಬರ್ 25, ಮಂಗಳವಾರ

ಕನ್ನಡ

ಬಾಗುಳಿಯ ಮಹಾಜನರು ಮತ್ತು ಇತರರು ದೇವಸ್ಥಾನದಲ್ಲಿ ಸಭೆ ಸೇರಿ ಒಂದು ಹೊನ್ನಿಗೆ ಎರಡು ಬಳ್ಳ ಪ್ರಮಾಣದ ಧಾನ್ಯ ಮತ್ತು ಉಪ್ಪು ಮುಂತಾದವುಗಳನ್ನು ಸಂಗ್ರಹಿಸಿ ಮಾರಿ ಬಂದ ಆದಾಯದಲ್ಲಿ 103 ಗದ್ಯಾಣಗಳನ್ನು ಸತ್ರದಲ್ಲಿ ಪ್ರತಿ ದಿನ 4 ಜನರ ಆಹಾರಕ್ಕಾಗಿ ವಿನಿಯೋಗಿಸುವುದಾಗಿ ನಿರ್ಧರಿಸಿದರು. ಕಾಮವೆ-ನಾಗವೆಯ ಮಗಳು ಮತ್ತು ಕಲಿದೇವರ ಭಕ್ತೆ ಪಾತ್ರದ ಸಿರಿ[ಯ*]ವೆಯು ಕಲಿದೇವರಿಗೆ ತನ್ನ ಮನೆಯನ್ನು ದಾನ ಮಾಡಿ, ಆ ಮನೆಯಲ್ಲಿ ವಾಸಿಸುವವರು ಪ್ರತಿ ವರ್ಷ ದೇವರ ಮುಂದೆ ಒಂದು ನಂದಾದೀಪವನ್ನು ಉರಿಸಲು 2 ಪಣಗಳನ್ನು ಕೊಡಬೇಕೆಂಬ ನಿಯಮವನ್ನು ಹಾಕಿದಳು.

ಆ್ಯರಿಎ, 1903-04, ಸಂ. 1904 ರ 93; ಸೌಇಇ, IX i, ಸಂ. 89.

ಸಂ. 303

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಹತ್ತನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

ಚಾಲುಕ್ಯ ವಿಕ್ರಮ ವರ್ಷ 33, ಸರ್ವಧಾರಿ, ಪುಷ್ಯ ಬ. 5, ಬೃಹವಾರ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1108, ಡಿಸೆಂಬರ್ 24, ಗುರುವಾರ

ಕನ್ನಡ

ಮಹಾಮಂಡಲೇಶ್ವರ ತ್ರಿಭುವನಮಲ್ಲ-ಪಾಂಡ್ಯನು ನೊಳಂಬವಾಡಿ-32000 ವನ್ನಾಳುತ್ತಿದ್ದನೆಂದು ತಿಳಿಸುತ್ತದೆ. ಮಲೆಯಾಳ-ವಡ್ಡಬೆವಹಾರಿ ಕೊಮಾರ-ಮೂರ್ಕನು ಸ್ವಯಂಭು-ಕಲಿದೇವರ ನಂದಾದೀಪಕ್ಕೆ ಐದು ಗದ್ಯಾಣ ನೀಡಿದ್ದನ್ನು ತಿಳಿಸುತ್ತದೆ. ಆ ಹಣದ ಬಡ್ಡಿಯನ್ನು ದೀಪಕ್ಕಾಗಿ ವಿನಿಯೋಗಿಸಬೇಕೆಂಬ ನಿಯಮವನ್ನು ವಿಧಿಸಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 94; ಸೌಇಇ, IX i, ಸಂ. 177.

ಸಂ. 304

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಹನ್ನೊಂದನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

ಚಾಲುಕ್ಯ-ವಿಕ್ರಮ ವರ್ಷ 32, ಸರ್ವಜಿತ, ಮಾರ್ಗಶಿರ, ಅಮವಾಸ್ಯೆ, ಸೋಮವಾರ, ಸೂರ್ಯಗ್ರಹಣ, ವ್ಯತಿಪಾತ = ಕ್ರಿ.ಶ. 1107, ಡಿಸೆಂಬರ್ 16, ಸೋಮವಾರ

ಕನ್ನಡ

ದಂಡನಾಯಕ ಬರ್ಮರಸನು ಹಿರಿಯಕೆರೆಯ ಕೆಲಸಕ್ಕೆ ಮಹಾಜನರಿಗೆ ಪ್ರತಿ ತಿಂಗಳೂ ಗ್ರಾಮದ ಪನ್ನಾಯದಲ್ಲಿ ಒಂದು ಗದ್ಯಾಣವನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 95; ಸೌಇಇ, IX i, ಸಂ. 173.

ಸಂ. 305

ಅದೇ ಕಲ್ಲಿನ ಮೇಲೆ

--

12ನೆಯ ಶತಮಾನ

ಕನ್ನಡ

ನಾದೇವ-ಫೈಸಾಸನ ಪತ್ನಿ ಮಹಾದೇವಿಯು ವೀರ-ಕೇಶವದೇವರಿಗೆ ಭೂಮಿಗಳನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 95-ಎ; ಸೌಇಇ, IX i, ಸಂ. 174.

ಸಂ. 306

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಹನ್ನೆರಡನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

ಚಾಲುಕ್ಯ-ವಿಕ್ರಮ ವರ್ಷ 28, ಸ್ವಭಾನು, ಪುಷ್ಯ ಬ. 10, ಶುಕ್ರವಾರ, ಉತ್ತರಾಯಣ ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1103, ಡಿಸೆಂಬರ್ 25, ಶುಕ್ರವಾರ

ಕನ್ನಡ

ದಂಡನಾಯಕ ಮುದ್ದರಸನು ಶಿವಶಕ್ತಿ-ಪಂಡಿತನ ಪಾದ ತೊಳೆದು ಕಲಿದೇವರ ಸೇವೆಗೆ ಪ್ರತಿ ವರ್ಷ ಎರಡು ಎಲೆಯ ಹೇರಿಗೆ ವಿಧಿಸಿದ ಸುಂಕವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಹೀಗೆ ದಾನ ನೀಡಿದ 12 ಪಣದಲ್ಲಿ 2 ಪಣಗಳನ್ನು ಪುರಾಣ ಓದುವವರಿಗೆ ಕೊಡಲಾಯಿತು.

ಆ್ಯರಿಎ, 1903-04, ಸಂ. 1904 ರ 96; ಸೌಇಇ, IX i, ಸಂ. 168.

ಸಂ. 307

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಹದಿಮೂರನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

ಚಾಲುಕ್ಯ-ವಿಕ್ರಮ ವರ್ಷ 51, ಪರಾಭವ, ಜೇಷ್ಠ, ಅಮವಾಸ್ಯೆ, ಆದಿವಾರ, ಸೂರ್ಯ-ಗ್ರಹಣ = ಕ್ರಿ.ಶ. 1126, ಜೂನ್ 22, ಮಂಗಳವಾರ

ಕನ್ನಡ

ಮಹಾಮಂಡಲೇಶ್ವರ ತ್ರಿಭುವನಮಲ್ಲ-ಪಾಂಡ್ಯನು ನೊಳಂಬವಾಡಿ-32000 ವನ್ನಾಳುತ್ತಿದ್ದಾಗ ಗುಜ್ಜರ ಸಾಂತಿಕಬ್ಬೆಯು ಶಿವಶಕ್ತಿ-ಪಂಡಿತನ ಪಾದ ತೊಳೆದು, ಕಲಿದೇವರ ಸೇವೆಗೆ ಒಂದು ತೋಟ ಮತ್ತು ಪುರಾಣ ಓದುವವರಿಗೆ ಒಂದು ಮನೆಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 97; ಸೌಇಇ, IX i, ಸಂ. 211.

ಸಂ. 308

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಹದಿನಾಲ್ಕನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

(i) ಚಾಲುಕ್ಯ-ವಿಕ್ರಮ ವರ್ಷ 39, ಜಯ, ಫಾಲ್ಗುಣ, ಪುಣ್ಣಮೆ, ಸೋಮವಾರ, ಸೋಮಗ್ರಹಣ = ಕ್ರಿ.ಶ. 1115, ಫೆಬ್ರವರಿ 10, ಬುಧವಾರ; (ii) ಶಕ 1020, ಈಶ್ವರ, ಆಷಾಢ, ಅಮವಾಸ್ಯೆ, ಬೃಹಸ್ಪತಿವಾರ, ಸೂರ್ಯಗ್ರಹಣ = ಕ್ರಿ.ಶ. 1097 (ಶಕ 1019)

ಕನ್ನಡ

ಮಹಾಮಂಡಲೇಶ್ವರ ತ್ರಿಭುವನಮಲ್ಲ-ಪಾಂಡ್ಯದೇವನು ನೊಳಂಬವಾಡಿ-32000 ವನ್ನಾಳುತ್ತಿದ್ದಾಗ ದಂಡನಾಯಕ ತಿಕ್ಕಭಟ್ಟನು ಸತ್ರದಲ್ಲಿರುವ 5 ಜನ ಬ್ರಾಹ್ಮಣರ ಪ್ರತಿದಿನದ ಊಟಕ್ಕೆ ಮತ್ತು ಉಳಿದುದನ್ನು ಕೆರೆಯ ಕೆಲಸಕ್ಕೆಂದು ಸುಂಕಾದಾಯವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಬ್ರಹ್ಮ-ಜಿನಾಲಯದಲ್ಲಿ ದೇವರ ನೈವೇದ್ಯಕ್ಕೆ 2 ಪಣಗಳ ಇನ್ನೊಂದು ದಾನವನ್ನು ಶಿವಶಕ್ತಿ-ಪಂಡಿತನ ಸಮ್ಮುಖದಲ್ಲಿ ನೀಡಿದ್ದನ್ನು ತಿಳಿಸುತ್ತದೆ. ಎರಡನೆಯ ದಿನಾಂಕದಂದು ದಂಡನಾಯಕ ತಿಕಣಯ್ಯನು ವೀರಕೇಶವದೇವರಿಗೆ ಗದ್ದೆ ದಾನ ನೀಡಿದ್ದನ್ನು ಮತ್ತು ಗ್ರಾಮದ ಮಹಾಜನರು ಪುರಾಣ ಓದುವ ಈಶ್ವರ-ಭಟ್ಟೋಪಾಧ್ಯಾಯನಿಗೆ ಒಂದು ತೋಟ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 98; ಸೌಇಇ, IX i, ಸಂ. 192.

ಸಂ. 309

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಹದಿನೈದನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

ಚಾಲುಕ್ಯ-ವಿಕ್ರಮ ವರ್ಷ 46, ಪ್ಲವ, ತಳಿರಮವಾಸ್ಯೆ, ಆದಿತ್ಯವಾರ, ಸೂರ್ಯಗ್ರಹಣ = ಕ್ರಿ.ಶ. 1122, ಮಾರ್ಚ್ 10, ಶುಕ್ರವಾರ

ಕನ್ನಡ

ಮಹಾಮಂಡಲೇಶ್ವರ ತ್ರಿಭುವನಮಲ್ಲ-ಪಾಂಡ್ಯದೇವನು ನೊಳಂಬವಾಡಿ-32000 ವನ್ನಾಳುತ್ತಿದ್ದಾಗ ಬನ್ನಿಗೋಳದ ಪ್ರಭು ದಂಡನಾಯಕ ಸೋವರಸನು ಕಲಿದೇವರ ಸೇವೆಗೆ ಸುಂಕದ ಆದಾಯದ ಒಂದು ಭಾಗವನ್ನು ನೀಡಿದ ಉಲ್ಲೇಖವಿದೆ.

ಆ್ಯರಿಎ, 1903-04, ಸಂ. 1904 ರ 99; ಸೌಇಇ, IX i, ಸಂ. 201.

ಸಂ. 310

ಅದೇ ಕಲ್ಲಿನ ಮೇ..

--

ಶಕ 1111, ಕೀಲಕ, ಭಾದ್ರಪದ ಬ. 6, ಮಂಗಳವಾರ, ವ್ಯತಿಪಾತ = ಕ್ರಿ.ಶ. 1188, ಸೆಪ್ಟೆಂಬರ್ 13, ಮಂಗಳವಾರ

ಕನ್ನಡ

ಬಾಳ್ಗುಳಿಯ ಮಹಾಜನರು ದಾಸೆಯ-ನಾಯಕನ ಕೆರೆಯ ಧರ್ಮಕ್ಕೆ ಒಂದು ಮತ್ತರು ಭೂಮಿ ದಾನ ಮಾಡಿದ ಉಲ್ಲೇಖವಿದೆ.

ಆ್ಯರಿಎ, 1903-04, ಸಂ. 1904 ರ 99-ಎ; ಸೌಇಇ, IX i, ಸಂ. 281.

ಸಂ. 311

ಅದೇ ಸ್ಥಳದಲ್ಲಿ ನಿಲಿಸಿರುವ ಹದಿನಾರನೆಯ ಕಲ್ಲಿನ ಮೇಲೆ

ರಾಷ್ಟ್ರಕೂಟ, ಅಕಾಲವರ್ಷ-ಕನ್ನರದೇವ

ಶಕ 878, ನಳ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 956, ಡಿಸೆಂಬರ್ 23, ಮಂಗಳವಾರ

ಕನ್ನಡ

ಮಾಸವಾಡಿ-140, ಕೋಗಳಿ-500 ಮತ್ತು ಕುಕ್ಕನೂರು-30 ಗಳನ್ನಾಳುತ್ತಿದ್ದ ಮಹಾಸಾಮಂತ ರೊಟ್ಟಯ್ಯನು ಬಾಳ್ಗುಳಿಯ ಊರೊಡೆಯ ಪಶುಪತಿಭಟ್ಟನಿಗೆ ಬಾಬಂದಿಯ ಸಂಪೂರ್ಣ ಆದಾಯವನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ. ಮಹಾಸಾಮಂತ ಧೋರಪಯ್ಯನೂ ಕಾಣಿಕೆ ನೀಡಿದನೆಂದು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 100; ಸೌಇಇ, IX i, ಸಂ. 66.

ಸಂ. 312

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಹದಿನೇಳನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಆಹವಮಲ್ಲ

ಶಕ 913, ಖರ, ಮಾಘ ಶು. 5, ಮಂಗಳವಾರ = ಕ್ರಿ.ಶ. 991, ಜನವರಿ 12, ಮಂಗಳವಾರ

ಕನ್ನಡ

ಕನ್ನರದೇವನು ಮಾಡಿದ ದಾನವನ್ನು ಆದಿತ್ಯವರ್ಮರಸನು ಕೋಗಳಿ-500ನ್ನಾಳುತ್ತಿದ್ದಾಗ (ರಾಷ್ಟ್ರಕೂಟ) ಕನ್ನರದೇವನು ಮಾಡಿದ ದಾನವನ್ನು ನವೀಕರಿಸಿದ್ದನ್ನು ತಿಳಿಸುತ್ತದೆ. ಐವತ್ತು (ಮಹಾಜನರು) ಮತ್ತು ಸಾವಿರ (ತಂಬುಲಿಗರು) ಬಾರಿಕೇಚನಿಗೆ ಕೆಲವು ಸುಂಕಗಳನ್ನು ದಾನ ನೀಡಿದರು. ಚಂದೋಜನು ಶಾಸನವನ್ನು ಕಂಡರಿಸಿದನು.

ಆ್ಯರಿಎ, 1903-04, ಸಂ. 1904 ರ 101; ಸೌಇಇ, IX i, ಸಂ. 76.

ಸಂ. 313

ಅದೇ ದೇವಸ್ಥಾನದ ನೈಋತ್ಯ ದಿಕ್ಕಿಗೆ ನಿಲ್ಲಿಸಿರುವ ಕಲ್ಲಿನ ಮೇಲೆ

--

ಶಕ [907], ಪಾರ್ಥಿವ = ಕ್ರಿ.ಶ. 985

ಕನ್ನಡ

ಕಲ್ಲಿನ ಮೇಲ್ಭಾಗದಲ್ಲಿರುವ ಶಿಲ್ಪಗಳು ಯುದ್ಧದ ದೃಶ್ಯವನ್ನು ಪ್ರತಿಬಿಂಬಿಸುವಂತೆ ಕಾಣುತ್ತದೆ.

ಆ್ಯರಿಎ, 1903-04, ಸಂ. 1904 ರ 102.

ಸಂ. 314

ಅದೇ ಸ್ಥಳದಲ್ಲಿ ನಿಲ್ಲಿಸಿರುವ ಇನ್ನೊಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಭುವನೈಕಮಲ್ಲ (ಸೋಮೇಶ್ವರ II)

ಶಕ 990, ಕೀಲಕ, ಜ್ಯೇಷ್ಠ, ಪುಣ್ಣಮೆ, ಸೋಮವಾರ = ಕ್ರಿ.ಶ. 1068, ಮೇ 19, ಸೋಮವಾರ

ಕನ್ನಡ

ತ್ರೈಲೋಕ್ಯಮಲ್ಲ-ನೊಳಂಬ-ಪಲ್ಲವ-ಪೆರ್ಮಾಡಿ-ಜಯಸಿಂಘದೇವನು ಕೋಗಳಿ-500, ಕದಂಬಳಿಗೆ-1000 ಮತ್ತು ಬಲ್ಲಕುಂದೆ-300 ಆಳುತ್ತಿದ್ದಾಗ, ಶೂದ್ರರು ಬ್ರಾಹ್ಮಣರ ಭೂಮಿಯನ್ನು ಉಳುಮೆ ಮಾಡುವುದಕ್ಕೆ ಕೊಡಬೇಕಾದ ಗೇಣಿ ಉತ್ಪನ್ನವನ್ನು ಮಹಾದೇವಯ್ಯನು 52 ಗದ್ಯಾಣಗಳಿಗೆ ಕೊಂಡು, ಅದರ ಬಡ್ಡಿಯನ್ನು ವರ್ಷಕ್ಕೆ ಒಂದು ವೀಸಕ್ಕೆ ಮೂರು ಪಣದ ದರವನ್ನು ನಿಗದಿಗೊಳಿಸಿ ಕೆರೆಗೆ ದಾನ ಮಾಡಿದನು. ಮಹಾಜನರು ನಾವಿದರ ಮೇಲಿನ ತೆರಿಗೆಯನ್ನು ಅವನಿಗೆ ದಾನ ಮಾಡಿದರು.

ಆ್ಯರಿಎ, 1903-04, ಸಂ. 1904 ರ 103; ಸೌಇಇ, IX i, ಸಂ. 132.

ಸಂ. 315

ಮಲೆ-ಮಲ್ಲಪ್ಪ ದೇವಸ್ಥಾನದ ಒಳಗೆ ನಿಲ್ಲಿಸಿರುವ ಕಲ್ಲಿನ ಮೇಲೆ

--

ಚಾಲುಕ್ಯ ವಿಕ್ರಮ ವರ್ಷ 33, ಸರ್ವಧಾರಿ, ಪುಷ್ಯ ಬ. 9, ಆದಿತ್ಯವಾರ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1108, ಡಿಸೆಂಬರ್ 28, ಆದಿತ್ಯವಾರ

ಕನ್ನಡ

ಮಹಾಮಂಡಲೇಶ್ವರ ತ್ರಿಭುವನಮಲ್ಲ-ವೀರ-ಪಾಂಡ್ಯನು ನೊಳಂಬವಾಡಿ-32000ವನ್ನು ಆಳುತ್ತಿದ್ದುದರ, ವಿಜಯ-ಪಾಂಡ್ಯದೇವ ಮತ್ತು ಮಹಾಪಸಾಯಿತ ವಿಜಯ-ಹೆಮ್ಮಾಡಿ-ದಂಡನಾಯಕರ ಉಲ್ಲೇಖವಿದೆ. ಕಪ್ಪಿಸೆಟ್ಟಿ, ಹೊನ್ನಬಾಚಯ್ಯ, ಸೇನಬೋವ ಪದ್ಮಣ, ಸರ್ವದೇವ-ನಾಯಕ, ಮಾಹಣ್ಣ, ಸೇನಬೋವ ಸಂಕಣ್ಣ ಮತ್ತು ಇತರರು ದಿವ್ಯಲಿಂಗ-ನೀಲೇಶ್ವರ ದೇವರ ಸೇವೆಗೆ ಅನೇಕ ಭೂಮಿಗಳ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 104; ಸೌಇಇ, IX i, ಸಂ. 178.

ಸಂ. 316

ಅದೇ ಕಲ್ಲಿನ ಮೇಲೆ

--

ಮಹಾಮಂಡಲೇಶ್ವರ ವಿಜಯ-ಪಾಂಡ್ಯದೇವನ 8ನೇ ವರ್ಷ, ವಿಕೃತ, ಮಾರ್ಗಶಿರ ಬ. 5, ಆದಿವಾರ, ಉತ್ತರಾಯಣ ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1110, ಡಿಸೆಂಬರ್ 3, ಶನಿವಾರ

ಕನ್ನಡ

ಸೇನಬೋವ ಸಂಕಣನು ನೀಲೇಶ್ವರ ದೇವರಿಗೆ 40 ಕಮ್ಮ ತೋಟದ ಭೂಮಿಯನ್ನು [ನಾ]ಗರಾಶಿ-ಪಂಡಿತನ ಪಾದ ತೊಳೆದು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 104-ಎ; ಸೌಇಇ, IX i, ಸಂ. 182.

ಸಂ. 317

ಅದೇ ದೇವಸ್ಥಾನದ ಉತ್ತರಕ್ಕೆ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ

ಚಾಲುಕ್ಯ ವಿಕ್ರಮ ವರ್ಷ 44, ವಿಕಾರಿ, ಬಾದುಬೆಯ-ಅಮವಾಸ್ಯೆ (ವೈಶಾಖ ಅಮವಾಸೆ), ಆದಿವಾರ, ಸೂರ್ಯಗ್ರಹಣ = ಕ್ರಿ.ಶ. 1119, ಮೇ 11, ಆದಿವಾರ

ಕನ್ನಡ

ಮಹಾಮಂಡಲೇಶ್ವರ ತ್ರಿಭುವನಮಲ್ಲ-ಪಾಂಡ್ಯನು ನೊಳಂಬವಾಡಿ-32000 ವನ್ನಾಳುತ್ತಿದ್ದನೆಂದು ತಿಳಿಸುತ್ತದೆ. ಮಹಾಮಾತ್ಯ ದಂಡನಾಯಕ ರಿಷಿಯಣ್ಣ-ಭಟ್ಟನು, ಮಹಾಪ್ರಧಾನ ಮಹಾದೇವರಸನ ಆಜ್ಞೆಯ ಮೇರೆಗೆ ನೀಲೇಶ್ವರ ದೇವರಿಗೆ, ದೇವಸಿಂಗಜೀಯನ ಮಗ ನೀಲೇಶ್ವರ-ಪಂಡಿತನ ಪಾದ ತೊಳೆದು, ಸುಂಕದ ಆದಾಯವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಗ್ರಾಮದ ಮಹಾಜನರು ಭೂಮಿ ಮತ್ತು ಒಂದು ದೀಪಕ್ಕೆ ಪ್ರತಿ ತಿಂಗಳು ಒಂದು ಪಣ ದಾನ ನೀಡಿದರು. ಪೆರ್ಗಡೆ ಕಾವರಾಜನು ಮಹಾಜನರು ಪ್ರತಿ ದೀಪಾವಳಿಯ ದಿನ ತನಗೆ ಉಡುಗೊರೆಯಾಗಿ ಕೊಡುತ್ತಿದ್ದ 2 ಗದ್ಯಾಣದಲ್ಲಿ ಒಂದು ಗದ್ಯಾಣವನ್ನು ಅದೇ ದೇವರ ಸೇವೆಗೆ ದಾನ ನೀಡಿದನು.

ಆ್ಯರಿಎ, 1903-04, ಸಂ. 1904 ರ 105; ಸೌಇಇ, IX i, ಸಂ. 198.

ಸಂ. 318

ಅದೇ ಕಲ್ಲಿನ ಮೇಲೆ

ಹೊಯ್ಸಳ ವೀರ-ನರಸಿಂಹ (III)

ನಂದನ, ಕಾರ್ತಿಕ ಶು. 5, ಸೋಮವಾರ = ಕ್ರಿ.ಶ. 1292, ಅಕ್ಟೋಬರ್ 27, ಸೋಮವಾರ (ಪೌರ್ಣಮೆಯ ಬದಲಾಗಿ ಪಂಚಮಿಯೆಂದಾಗಿದೆ)

ಕನ್ನಡ

ಮೊಗುವಾಡ-ಮಾಚರಸನ ಹರೆಕಾರನಾದ ಬೆಟ್ಟಿಯ-ನಾಯಕನ ಮಗ ಹೆಗ್ಗಡೆ ಚಂದಯ್ಯನು ನೀಲೇಶ್ವರ ದೇವರ ಸೇವೆಗೆ ತೋಟವನ್ನು ದಾನ ಮಾಡಿದ ಉಲ್ಲೇಖವಿದೆ.

ಆ್ಯರಿಎ, 1903-04, ಸಂ. 1904 ರ 105-ಎ; ಸೌಇಇ, IX i, ಸಂ. 351.

ಸಂ. 319

ವೀರಭದ್ರ ದೇವಸ್ಥಾನದ ಪ್ರವೇಶದ್ವಾರದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ಸದಾಶಿವ

ಶಕ 1468, ಪ್ಲವಂಗ, ಜ್ಯೇಷ್ಠ ಶು. 11, ಬುಧವಾರ = ಕ್ರಿ.ಶ. 1547, ಮೇ 30, ಸೋಮವಾರ

ಕನ್ನಡ

ಅರಸನ ಸೇವೆಯಲ್ಲಿದ್ದ ತಿಮ್ಮೋಜ, ಕೊಂಡೋಜ, ಭದ್ರೋಜ ಮತ್ತು ಇತರ ಕ್ಷೌರಿಕರಿಗೆ ತೆರಿಗೆ ವಿನಾಯಿತಿ ಮಾಡಿದ್ದನ್ನು ತಿಳಿಸುತ್ತದೆ. ಇದೇ ರೀತಿ ಕೊಟ್ಟೂರ-ಸೀಮೆಯಲ್ಲಿ ಬಾಗುಳಿಯ ಕ್ಷೌರಿಕರಿಗೂ ವಿನಾಯಿತಿಯನ್ನು ಕೊಡಲಾಯಿತು.

ಆ್ಯರಿಎ, 1903-04, ಸಂ. 1904 ರ 106; ಸೌಇಇ, IX ii, ಸಂ. 622.

ಸಂ. 320

ಸೂರ್ಯನಾರಾಯಣ ದೇವಸ್ಥಾನದ ಮಧ್ಯದ ಗುಡಿಯ ಮುಂದಿನ ಮಂಟಪದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ

ಶಕ 1082, ವಿಕ್ರಮ, ಭಾದ್ರಪದ, ಪುಣ್ಣಮೆ, ಬೃಹಸ್ಪತಿವಾರ, ಸೋಮಗ್ರಹಣ = ಕ್ರಿ.ಶ. 1160, ಆಗಸ್ಟ್ 18, ಗುರುವಾರ

ಕನ್ನಡ

ಮಹಾಮಂಡಲೇಶ್ವರ ವೀರ-ಪಾಂಡ್ಯನು ಕದಂಬಳಿಗೆ-1000, ಬಲ್ಲಕುಂದೆ-300 ಮತ್ತು ಕೋಗಳಿ-300 ಗಳನ್ನಾಳುತ್ತಿದ್ದುದನ್ನು ತಿಳಿಸುತ್ತದೆ. ಶೂರ ಸೇನಾಪತಿ ಮಾಲಪಯ್ಯನ ಮಗ ಬ್ರಾಹ್ಮಣ ಸೇನಾಪತಿ ಚಿದ್ದಣನ ಪತ್ನಿಯಾದ ಮತ್ತು ಧರ್ಮಯ-ಷಡಂಗಿಯ ಮಗ ಪದ್ಮನಾಭನ ಮಗಳಾದ ಧರ್ಮವ್ವೆಯು ಬಾಗುಳಿಯಲ್ಲಿ ತಾನೇ ಪ್ರತಿಷ್ಠಾಪಿಸಿದ ಲಕ್ಷ್ಮೀನಾರಾಯಣ ದೇವರ ಪೂಜೆಗೆ, ಶಾಸ್ತ್ರ ವ್ಯಾಖ್ಯಾನ ಮಾಡುವ ಮತ್ತು ಪುರಾಣ ಹೇಳುವ ಒಬ್ಬ ಉಪಾಧ್ಯಾಯರಿಗೆ ಮತ್ತು ದೇವರ ಅಗ್ರಾಸನ, ಬ್ರಾಹ್ಮಣರ ಭೋಜನಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 107; ಸೌಇಇ, IX i, ಸಂ. 267.

ಸಂ. 321

ಚೆನ್ನಕೇಶವ ದೇವಸ್ಥಾನದಲ್ಲಿ ಮಧ್ಯದ ಗುಡಿಯ ಮುಂದಿನ ಮಂಟಪದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ

--

ಕನ್ನಡ

ಹಾಳಾಗಿದೆ. ಮಹಾಮಂಡಲೇಶ್ವರ ಪಾಂಡ್ಯದೇವನು ನೊಳಂಬವಾಡಿ-32000 ವನ್ನಾಳುತ್ತಿದ್ದುದರ ಮತ್ತು ವತ್ಸ-ಚಮೂಪನ ಉಲ್ಲೇಖವಿದೆ. 50 ಗದ್ಯಾಣದಿಂದ ಬರುವ ಬಡ್ಡಿಯಲ್ಲಿ 6 ಹೊನ್ನುಗಳನ್ನು ಪುರಾಣ ಓದುವವರಿಗೆ ಮತ್ತು 4 ಹೊನ್ನುಗಳನ್ನು ಐಂದ್ರ ಸ್ತೋತ್ರ ಪಠಿಸುವವರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 108; ಸೌಇಇ, IX i, ಸಂ. 260.

ಬೆಣ್ಣೆಹಳ್ಳಿ

ಸಂ. 322

ಪಂಪಾಪತಿ ದೇವಸ್ಥಾನದ ಮಧ್ಯ ಮಂಟಪದಲ್ಲಿಯ ಒಂದು ಕಂಬದ ಮೇಲೆ

--

--

ಕನ್ನಡ

ರಾಜಗುರು ಮಹಾಮಂಡಲಾಚಾರ್ಯ ಖಳೇಶ್ವರದೇವನು ಹೊಳಗುಂಧೆ, ಮೋರಿಂಗೆರೆ ಮತ್ತು ರಾಜನ ಬೆಣ್ಣೆವೂರು ಗ್ರಾಮಗಳಲ್ಲಿಯ ಭೂಮಿಯನ್ನು ತಮ್ಮಡಿಗಳಿಗೆ (ಶಿವನ ಆರಾಧಕರು) ದಾನ ನೀಡಿದ್ದನ್ನು ತಿಳಿಸುತ್ತದೆ. ದಾನಿಯು ಹೊಸ ಪಾಶುಪತ-ಸಮಯವನ್ನು ಪ್ರಚಾರ ಮಾಡಿದನು ಮತ್ತು ಆತನು 77 (?) (ಸಪ್ತಾಹತ್ತರಿ) ಸ್ಥಾನಗಳ ಅಧ್ಯಕ್ಷ ಮತ್ತು ಕೋಗಳಿ-500 ರ 7 ಕೋಟಿ ಸಮಯಗಳ ಚಕ್ರವರ್ತಿಯಾಗಿದ್ದನು.

ಆ್ಯರಿಎ, 1918-19, ಸಂ. 1918 ರ 204.

ಸಂ. 323

ಅದೇ ದೇವಸ್ಥಾನದಲ್ಲಿ ಇನ್ನೊಂದು ಕಂಬದ ಮೇಲೆ

ಯಾದವ, ರಾಮಚಂದ್ರದೇವ

10ನೆಯ ವರ್ಷ, ಪ್ರಮಾಥಿ, ಫಾಲ್ಗುಣ ಶು. 11, ಸೋಮವಾರ = ಕ್ರಿ.ಶ. 1280, ಫೆಬ್ರವರಿ 12, ಸೋಮವಾರ

ಕನ್ನಡ

ರಾಜಗುರು ವುಭಣಯಿತವಾಹಿ-ದೇವರಾಣೆಯನು ರಮಾಬಾಯಿಯ ಧರ್ಮಕ್ಕಾಗಿ ಸಂತೆಯಲ್ಲಿ ಒಂದು ಅರವಟ್ಟಿಗೆಗಾಗಿ ಬೆಣ್ಣೆಯಹಳ್ಳಿಯ 12 ಮಹಾಜನರಿಗೆ 8 ಗದ್ಯಾಣ ಮತ್ತು ಕಲಜೀಯನಿಗೆ 2 ಮತ್ತರು ಭೂಮಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 205; ಸೌಇಇ, IX i, ಸಂ. 379.

ಸಂ. 324

ಅದೇ ದೇವಸ್ಥಾನದ ಮುಂದಿನ ಮಂಟಪದಲ್ಲಿಯ ಕಂಬದ ಮೇಲೆ

--, ಉಚ್ಚಂಗಿಯನ್ನಾಳುತ್ತಿದ್ದ ವೀರ-ಪಾಂಡ್ಯದೇವ

ಈಶ್ವರ

ಕನ್ನಡ

ಹಾಳಾಗಿದೆ. ವಿರೂಪಾಕ್ಷ ದೇವಸ್ಥಾನಕ್ಕೆ ಬೆಣ್ಣೆವೂರು ಗ್ರಾಮವನ್ನು ನೀಡಿದ್ದನ್ನು ಉಲ್ಲೇಖಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 206.

ಸಂ. 325

ಅದೇ ಮಂಟಪದಲ್ಲಿ ಇನ್ನೊಂದು ಕಂಬದ ಮೇಲೆ

ಹೊಯ್ಸಳ, ವೀರ-ಬಲ್ಲಾಳದೇವ

ಪಿಂಗಳ, ಅಮವಾಸ್ಯೆ, ಸೋಮವಾರ, ವ್ಯತಿಪಾತ = ಕ್ರಿ.ಶ. 1197-98

ಕನ್ನಡ

ಉತ್ತಾರಕ-ಹೆಗ್ಗಡೆ ಮತ್ತು ಜನಯ್ಯ-ಹೆಗ್ಗಡೆಯರು ಮೂಲಿಗದೆರೆ, ಮಗ್ಗ, ಎಣ್ಣೆ ಗಾಣ, ಕಸಬುದಾರರ ಮೇಲೆ ವಿಧಿಸುವ ತೆರಿಗೆಯನ್ನು ಕಿರು-ಕುಳ ತೆರಿಗೆಯೊಂದಿಗೆ ವಿರೂಪಾಕ್ಷದೇವರ ದೇವಸ್ಥಾನದ ಬ್ರಾಹ್ಮಣರ ಊಟಕ್ಕಾಗಿ ಮತ್ತು ದೇವರ ನೈವೇದ್ಯಕ್ಕೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 207; ಸೌಇಇ, IX i, ಸಂ. 324.

ಸಂ. 326

ಅದೇ ದೇವಸ್ಥಾನದ ಮುಂದಿನ ಮಂಟಪದಲ್ಲಿಯ ಅದೇ ಕಲ್ಲಿನ (ಕಂಬದ) ಮೇಲೆ

ಹೊಯ್ಸಳ, ವೀರ-ನರಸಿಂಹದೇವ (III)

ಚಿತ್ರಭಾನು, ಭಾದ್ರಪದ ಬ. 8, ಬೃಹವಾರ = ಕ್ರಿ.ಶ. 1282, ಆಗಸ್ಟ್ 27, ಗುರುವಾರ

ಕನ್ನಡ

ನಲ್ಲೆಮ್ಮೆಯ ಉಗ್ರಾಣಿ ಗಿರಿಪಯ್ಯ ಪಿರಿಯಣ್ಣನು ಬೆಣ್ಣೆವೂರಿನ ವಿರೂಪಾಕ್ಷದೇವರ ನೈವೇದ್ಯಕ್ಕೆ, ದೀಪಕ್ಕೆ ಮತ್ತು ದೇವಸ್ಥಾನದ 12 ಮಹಾಜನರ ಭೋಜನಕ್ಕೆ ಒಂದು ಹಸು ಮತ್ತು ಒಂದು ಎಮ್ಮೆಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 208; ಸೌಇಇ, IX i, ಸಂ. 349.

ಸಂ. 327

ಅದೇ ಕಲ್ಲಿನ (ಕಂಬದ) ಮೇಲೆ

ಹೊಯ್ಸಳ, ವೀರ-ನರಸಿಂಹದೇವ (III)

ಚಿತ್ರಭಾನು, ಭಾದ್ರಪದ, ಅಮವಾಸೆ, ಸೋಮವಾರ = ಕ್ರಿ.ಶ. 1282, ಸೆಪ್ಟೆಂಬರ್ 6, ಗುರುವಾರ

ಕನ್ನಡ

ಮಸಣೆಯ-ಸಾವಂತ ಮತ್ತು ಇತರರು (ಹೆಸರುಗಳಿವೆ) ವಿರೂಪಾಕ್ಷ ದೇವರಿಗೆ ಮತ್ತು 12 ಬ್ರಾಹ್ಮಣರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 209; ಸೌಇಇ, IX i, ಸಂ. 350.

ಸಂ. 328

ಅದೇ ದೇವಸ್ಥಾನದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲದೇವ (II)

11ನೆಯ ವರ್ಷ, ಶುಕ್ಲ, ಚೈತ್ರ ಶು. (?), ಅಮವಾಸೆ, ಸೋಮವಾರ, ವ್ಯತಿಪಾತ, ಉತ್ತರಾಯಣ-ಸಂಕ್ರಾಂತಿ, ಸೂರ್ಯಗ್ರಹಣ = ಕ್ರಿ.ಶ. 1149

ಕನ್ನಡ (ಗದ್ಯ ಮತ್ತು ಪದ್ಯ)

ತನ್ನ ರಾಜಧಾನಿ ಉಚ್ಚಂಗಿಯಿಂದ ನೊಣಂಬವಾಡಿ-32000ವನ್ನಾಳುತ್ತಿದ್ದ ಮಹಾಮಂಡಲೇಶ್ವರ ಜಗದೇಕಮಲ್ಲ ವೀರ-ಪಾಂಡ್ಯದೇವನು ಕೋಗಳಿ-500 ರ ಉಪವಿಭಾಗವಾದ ಮುತ್ತಗೆ-30 ರೊಳಗಿನ ಬೆಣ್ಣೆಗನೂರು ಗ್ರಾಮವನ್ನು ಗ್ರಾಮದ ಸ್ವಯಂಭುದೇವರಿಗೆ ದೇವಸ್ಥಾನಕ್ಕೆ ದಾನವಾಗಿ ಕೊಡಲು ಮಹಾಪ್ರಧಾನ ವತ್ಸರಾಜನಿಗೆ ಕೊಟ್ಟದ್ದನ್ನು ತಿಳಿಸುತ್ತದೆ. ವತ್ಸರಾಜ, ಮಹಾಮಂಡಲೇಶ್ವರ ನಾಚಿದೇವ, ಅಲ್ಲಮರಸ, ಕಲಿಂಗರಸ, ಮತ್ತು ಊರೊಡೆಯ ಮಲ್ಲರಸರು ಆಚಾರ್ಯ ಚಂದ್ರರಾಶಿ ಪಂಡಿತ ಮತ್ತು ದೇವಸ್ಥಾನದ ಬ್ರಹ್ಮಪುರಿಯ 12 ಬ್ರಾಹ್ಮಣರಿಗೆ ಒಂದು ವೃತ್ತಿಯನ್ನು ದಾನ ನೀಡಿದರು. ಬನವಾಸಿಪುರವರೇಶ್ವರ ಮಹಾಮಂಡಲೇಶ್ವರ ನಾಚಿದೇವರಸನು ಕೊಟ್ಟೂರಿನಿಂದ

ಕೊಟ್ಟೂರು-12 ಮತ್ತು ಕೋಗಳಿ-500 ಗಳನ್ನಾಳುತ್ತಿದ್ದನು. ದಾನಿಯ ಸಮಕಾಲೀನರಾದ ಅಭಿನವ-ಪಾಶುಪತ ಗುರುಗಳಾದ ಲಕುಳೀಶ, ವಿದ್ಯಾರಾಶಿ-ಪಂಡಿತ, ಧರ್ಮರಾಶಿ ಮತ್ತು ಚಂದ್ರರಾಶಿಯರನ್ನು ಅನುಕ್ರಮವಾಗಿ ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 210; ಸೌಇಇ, IX i, ಸಂ. 251.

ಚಟ್ನಹಳ್ಳಿ

ಸಂ. 329

ಆಂಜನೇಯ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ಕೃಷ್ಣರಾಯ-ಮಹಾರಾಯ

ಶಕ 1446, ಸ್ವಭಾನು, ಕಾರ್ತಿಕ ಶು. 12, ಸೋಮವಾರ = ಕ್ರಿ.ಶ. 1524, ನವೆಂಬರ್ 7, ಸೋಮವಾರ

ಕನ್ನಡ

ಮುರಾರಿ-ರಾವುತ್ತನ ಮಗ ವಿಸಣ-ರಾವುತ್ತನು ಅರಸನಿಗೆ ಪುಣ್ಯವಾಗಲೆಂದು ತನ್ನ ನಾಯಕತನದಲ್ಲಿ ಉಚ್ಚಂಗಿ-ವೇಂಠೆಯ ಉಪವಿಭಾಗವಾದ ಕವಿಳಿಚೆರ್ವಿನ-ಸೀಮೆಯಲ್ಲಿಯ ಚಟ್ನಹಳ್ಳಿಯನ್ನು ತೆರಿಗೆರಹಿತವಾಗಿ ದೇವರುಭಟ್ಟನ ಮಗ ನಾರಾಯಣಭಟ್ಟನಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 288; ಸೌಇಇ, IX ii, ಸಂ. 515.

ಸಂ. 330

ಕಲ್ಲೇಶ್ವರ ದೇವಸ್ಥಾನದ ಹತ್ತಿರ ಒಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲದೇವ

9ನೆಯ ವರ್ಷ, ಕ್ಷಯ, ಜ್ಯೇಷ್ಠ ಶು. 13 (15), ಸೋಮವಾರ, ಸೋಮಗ್ರಹಣ = ಕ್ರಿ.ಶ. 1146, ಮೇ 27, ಸೋಮವಾರ

ಕನ್ನಡ

ಜಗದೇಕಮಲ್ಲ-ವೀರಪಾಂಡ್ಯದೇವನು ನೊಳಂಬವಾಡಿ-32000ವನ್ನು ಮತ್ತು ದಂಡನಾಯಕ ಅಜೇಯ-ರಾಯ-ಪಾಂಡ್ಯದೇವನು ಉಚ್ಚಂಗಿಯನ್ನು ಆಳುತ್ತಿದ್ದರೆಂದು ತಿಳಿಸುತ್ತದೆ. ಜಗದೇಕಮಲ್ಲ-ವೀರಪಾಂಡ್ಯದೇವನು ಅಜೇಯ-ರಾಯ-ಪಾಂಡ್ಯದೇವನು ಮಾಕೆರೆಯಲ್ಲಿ ಪ್ರತಿಷ್ಠಾಪಿಸಿದ ನೊಯ್ಯೇಶ್ವರ ದೇವರ ಸೇವೆಗೆ ಆತನ ವಿನಂತಿಯ ಮೇರೆಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಅದೇ ಪಾಂಡ್ಯ ಅರಸನು ರಾಯ-ಪಾಂಡ್ಯದೇವ ಮತ್ತು ಆತನ ರಾಣಿ ಸೋವಲದೇವಿಯರಿಗೆ ಪುಣ್ಯವಾಗಲೆಂದು ದೇವಸ್ಥಾನದ ಸತ್ರದಲ್ಲಿಯ 16 ಬ್ರಾಹ್ಮಣರ ಊಟಕ್ಕೆ ಭೂಮಿ ದಾನ ನೀಡಿದನು. ಕಲ್ಲಕೆರೆಯ ಕಲಿದೇವರ ದೇವಸ್ಥಾನದ ಆಚಾರ್ಯ ಗೋಣಿಯಜೀಯನೂ ಸಹ ಭೂಮಿ ದಾನ ನೀಡಿದನು.

ಆ್ಯರಿಎ, 1918-19, ಸಂ. 1918 ರ 289; ಸೌಇಇ, IX i, ಸಂ. 245.

ಸಂ. 331

ಅದೇ ಕಲ್ಲಿನ ಮೇಲೆ

--

ವಿಜಯ = ಕ್ರಿ.ಶ. 1173-74

ಕನ್ನಡ

ರಾಜಗುರು ದಂಡಪಾಣಿದೇವನು ಮಲ್ಲವ್ವೆ ಮತ್ತು ಚಂದವ್ವೆ ಎಂಬ ಇಬ್ಬರು ಮಹಿಳೆಯರಿಗೆ ಭೂಮಿ ದಾನ ನೀಡಿದ ಉಲ್ಲೇಖವಿದೆ.

ಆ್ಯರಿಎ, 1918-19, ಸಂ. 1918 ರ 289-ಎ; ಸೌಇಇ, IX i, ಸಂ. 271.

ಚಿಗಟೇರಿ

ಸಂ. 332

ರಾಮಲಿಂಗ ದೇವಸ್ಥಾನದ ಆವರಣದಲ್ಲಿ ನಿಲ್ಲಿಸಿದ ವೀರಗಲ್ಲಿನ ಮೇಲೆ

ಹೊಯ್ಸಳ, ವೀರ-ಬಲ್ಲಾಳದೇವ (II)

ಶಕ 1132, ಶುಕ್ಲ, ಜ್ಯೇಷ್ಠ ಶು. 5, [ಆದಿವಾರ] = ಕ್ರಿ.ಶ. 1209, ಮೇ 10, ಆದಿವಾರ

ಕನ್ನಡ

ಚಂಡೂರಿನ ಒಡೆಯ ಪೊಮ್ಮಯ್ಯನು ಒಂದು ಯುದ್ಧದಲ್ಲಿ (?) ಮರಣ ಹೊಂದಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 261; ಸೌಇಇ, IX i, ಸಂ. 328.

ದುಗ್ಗವತ್ತಿ

ಸಂ. 333

ಈಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

ಶಕ 1049, ಪರಾಭವ, ಪುಷ್ಯ ಶು. ಪಾಡಿವ, ಆದಿವಾರ, ಉತ್ತರಾಯಣ-ಸಂಕ್ರಮಣ = ಕ್ರಿ.ಶ. 1126, ಡಿಸೆಂಬರ್ 16, ಗುರುವಾರ

ಕನ್ನಡ

ಮಹಾಮಂಡಲೇಶ್ವರ ತ್ರಿಭುವನಮಲ್ಲ-ಪಾಂಡ್ಯದೇವನು ನೊಳಂಬವಾಡಿ-32000ವನ್ನು ಬೇಲುರವುದಿಂದ ಆಳುತ್ತಿದ್ದ ಸಮಯದಲ್ಲಿ ಕೋಗಳಿ-500ರ ಉಪ-ವಿಭಾಗವಾದ ಬಿಕ್ಕಿಗ-70ರಲ್ಲಿಯ ದುಗ್ಗತಿಯನ್ನಾಳುತ್ತಿದ್ದ ಮಲೆಯಾಳ ವಡ್ಡವ್ಯವಹಾರಿ ನಂಬಿಗ-ಅಣ್ಣಿಸೆಟ್ಟಿ, ದುಗ್ಗತಿಯ ಊರೊಡೆಯ ಬ್ರಹ್ಮದೇವಯ್ಯ-ನಾಯಕ, ಮಹಾಪ್ರಧಾನ ದಂಡನಾಯಕ ಇಂದಿರಾಣ ಚಟ್ಟಯ್ಯ ಮತ್ತು ಕೋಗಳಿಯ ಸುಂಕದ ಉಸ್ತುವಾರಿಯಲ್ಲಿದ್ದ ದಂಡನಾಯಕ ಚೋಧಾದರು ದುಗ್ಗತಿಯಲ್ಲಿಯ ಮಹಾದೇವರಿಗೆ ಭೂಮಿ ಮತ್ತು ಸುಂಕದ ಒಂದು ಭಾಗವನ್ನು ದಾನ ನೀಡಿದ್ದನ್ನು ತಿಳುಸುತ್ತದೆ. ಶಾಸನವನ್ನು ಮಲ್ಲಿಯಣ್ಣನು ಬರೆದನು ಮತ್ತು ಅನ್ಮೋಜನು ಕಂಡರಿಸಿದನು. ದುಗ್ಗತಿಯ ಬಿಲ್ಲೇಶ್ವರ ದೇವರ ಸೇವೆಗೆ ಬೀರದೇವನು ಭೂಮಿ ದಾನ ನೀಡಿದನು.

ಆ್ಯರಿಎ, 1918-19, ಸಂ. 1918 ರ 229; ಸೌಇಇ, IX i, ಸಂ. 215.

ಗುಡಿಹಳ್ಳಿ
(ಹೊಸಕೋಟೆಯ ಉಪಗ್ರಾಮ)

ಸಂ. 334

ಈಶ್ವರ ದೇವಸ್ಥಾನದ ಆವರಣದಲ್ಲಿ ನಿಲ್ಲಿಸಿದ ಒಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

ಚಾಲುಕ್ಯ ವಿಕ್ರಮ ವರ್ಷ 36, ಖರ, ಪುಷ್ಯ ಶು. 11, ಆದಿವಾರ, ಉತ್ತರಾಯಣ ಸಂಕ್ರಾಂತಿ = ಕ್ರಿ.ಶ. 1111, ಡಿಸೆಂಬರ್ 12, ಮಂಗಳವಾರ

ಕನ್ನಡ

ತ್ರಿಭುವನಮಲ್ಲ-ಪಾಂಡ್ಯನು ನೊಳಂಬವಾಡಿ-32000 ವನ್ನಾಳುತ್ತಿದ್ದಾಗ ವಿನಾಯಕ ವಂಶದ ಕಾಮನೃಪ ಮತ್ತು ಚಟ್ಟಬ್ಬೆಯರ ಮಗ ಮಹಾಸಾಮಂತ ಸಿಂಗರಸನು ನೊಳಂಬೇಶ್ವರ ದೇವರ ಸೇವೆಗೆ ತಪೋಧನರಿಗೆ ಮತ್ತು ವಿದ್ಯಾದಾನಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ದಾನಿಯ ತಾತನು ಮಾರಸಿಂಹನು. ದಿವ್ಯಶಕ್ತಿ-ಪಂಡಿತನ ಶಿಷ್ಯನಾದ ವಾಮಶಕ್ತಿ-ಪಂಡಿತನ ಶಿಷ್ಯನಾದ ವರೇಶ್ವರ-ಪಂಡಿತನ ಸಮ್ಮುಖದಲ್ಲಿ ದಾನವನ್ನು ನೀಡಲಾಗಿದೆ.

ಆರಿಎ, 1918-19, ಸಂ. 1918 ರ 277; ಸೌಇಇ, IX i, ಸಂ. 186.

ಸಂ. 335

ಅದೇ ಆವರಣದಲ್ಲಿ ನಿಲ್ಲಿಸಿದ ಇನ್ನೊಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ

ಶಕ 987, ವಿಶ್ವಾವಸು, ಪುಷ್ಯ ಶು. 7, ಆದಿತ್ಯವಾರ, ಉತ್ತರಾಯಣ-ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1065

ಕನ್ನಡ

ವಿಷ್ಣುವರ್ಧನ-ಮಹಾರಾಜ-ವಿಜಯಾದಿತ್ಯದೇವನು ಕದಂಬಳಿಕೆ-1000, ಕೋಗಳಿ-500 ಮತ್ತು ಬಲ್ಲಕುಂದೆ-300 ಗಳನ್ನಾಳುತ್ತಿದ್ದಾಗ, ಅರಸನ ಆಜ್ಞೆಗನುಸಾರವಾಗಿ ದಕ್ಷಿಣದ ಕಡೆಗೆ ದಂಡೆತ್ತಿ ಬಂದಾಗ, ಆತ ಈ ಸ್ಥಳದಲ್ಲಿ ಬೀಡು ಬಿಟ್ಟಿದ್ದಾಗ ಆತನ ಅಧೀನನಾದ ಬಿಜ್ಜಳದೇವನು ಕೋಗಳಿ-500ರಲ್ಲಿ ಒಂದು ಉಪ-ವಿಭಾಗವಾದ ಮುತ್ತಗೆ-30 ರೊಳಗಿನ ಕಡಕೋಳ ಗ್ರಾಮವನ್ನು ಅರಸಿಯಕೆರೆಯ ನೊಳಂಬೇಶ್ವರ ದೇವರ ಪೂಜೆ, ನೈವೇದ್ಯ ಮುಂತಾದವುಗಳಿಗೆ, ತಪೋಧನರ ಆಹಾರ ದಾನಕ್ಕೆ ಮತ್ತು ವಿದ್ಯಾದಾನಕ್ಕೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆರಿಎ, 1918-19, ಸಂ. 1918 ರ 278; ಸೌಇಇ, IX i, ಸಂ. 128.

ಸಂ. 336

ಅದೇ ಆವರಣದಲ್ಲಿ ನಿಲ್ಲಿಸಿದ ಮೂರನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

ಚಾಲುಕ್ಯ ವಿಕ್ರಮ ವರ್ಷ 37, ನಂದನ, ಪುಷ್ಯ ಶು. 11, ಸೋಮವಾರ, ಉತ್ತರಾಯಣ-ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1112, ಡಿಸೆಂಬರ್ 30, ಸೋಮವಾರ

ಕನ್ನಡ

ಅನಂತಪಾಲಯ್ಯನ ಆಜ್ಞೆಯ ಮೇರೆಗೆ, ವರೇಶ್ವರ ಪಂಡಿತನ ಸಮ್ಮುಖದಲ್ಲಿ, ಕೋಗಳಿ-500ರ ಉಪ-ವಿಭಾಗವಾದ ಮುತ್ತಗೆ-30ರಲ್ಲಿರುವ ಅರಸಿಯಕೆರೆಯ ನೊಳಂಬೇಶ್ವರ ದೇವರ ಸೇವೆಗೆ, ವಡ್ಡರಾವುಳ ತೆರಿಗೆ ಮತ್ತು ಎರಡು ತೋಟಗಳನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ. ಮಹಾಸಾಮಂತಾಧಿಪತಿ ಅನಂತಪಾಲಯ್ಯ ಸಪ್ತಾರ್ಧಲಕ್ಷದೇಶದ ತೆರಿಗೆಯ ಅಧಿಕಾರಿಯಾಗಿದ್ದಾಗ ಆತನ ಅಧೀನ ಅಧಿಕಾರಿ ಮಹಾಪ್ರಧಾನ ಮಾದಿರಾಜರಸನು ಬನವಾಸೆ-12000, ಹಲಸಿಗೆ-12000 ಮತ್ತು ನೊಳಂಬವಾಡಿ-32000ಗಳ ಉಸ್ತುವಾರಿಯಲ್ಲಿದ್ದನು ಮತ್ತು ಮಾದಿರಾಜರಸನ ಅಧೀನ ಅಧಿಕಾರಿ ದಂಡನಾಯಕ ಪಾಲಿಮರಸನು ನೊಳಂಬವಾಡಿ-32000ವನ್ನು ನೋಡಿಕೊಳ್ಳುತ್ತಿದ್ದನು ಮತ್ತು ಈತನ ಆಜ್ಞೆಯ ಮೇರೆಗೆ ಚಾಮುಂಡಮಯ್ಯ-ನಾಯಕನು ಕದಂಬಳಿಕೆ-1000 ಮತ್ತು ಕೋಗಳಿ-500ಗಳ ಉಸ್ತುವಾರಿಯಲ್ಲಿದ್ದನು.

ಆರಿಎ, 1918-19, ಸಂ. 1918 ರ 279; ಸೌಇಇ, IX i, ಸಂ. 188.

ಸಂ. 337

ಅದೇ ದೇವಸ್ಥಾನದ ಮುಂಭಾಗದ ಮಂಟಪದಲ್ಲಿಯ ಕಂಬದ ಮೇಲೆ

ವಿಜಯನಗರ, ಕೃಷ್ಣರಾಯ-ಮಹಾರಾಯ

ಶಕ 1449, ಸರ್ವಜಿತ್, ಶ್ರಾವಣ ಸು. 10 = ಕ್ರಿ.ಶ. 1527, ಆಗಸ್ಟ್ 7, ಬುಧವಾರ

ಕನ್ನಡ

ಚಿನ್ನ ಭಂಡಾರದ ತಿಮ್ಮರಸನ ಮಗ ರಾಯಸದ ನಾರಾಯಣಪ್ಪನು ಕೊಟೂರ-ಸೀಮೆಯ ವಳಿತದಲ್ಲಿಯ ನೊಣಬನರಸಿಕೆರೆಯನ್ನು ಆಳುತ್ತಿದ್ದಾಗ ಮತ್ತು ಆತನ ಕಾರ್ಯಕರ್ತ ನಾಗರಸಯನು ಕೊಟೂರ-ಸೀಮೆಯ ಪಾರುಪತ್ಯ ಹೊಂದಿದಾಗ, ನಾಗರಸಯನ ಆಜ್ಞೆಯ ಮೇರೆಗೆ ಅರಸಿಕೆರೆಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾಗ ರಂಗದಾಸನ ಮಗ ತಿಮ್ಮರಸನು ಗ್ರಾಮದಲ್ಲಿ ಕೆರೆಯ ಒಡೆದ ತೂಬನ್ನು ಪುನಃ ನಿರ್ಮಾಣ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 280; ಸೌಇಇ, IX i, ಸಂ. 522.

ಗುಂಡಗತ್ತಿ ಮತ್ತು ಎಡೆಹಳ್ಳಿ

ಸಂ. 338

ಗುಂಡಗತ್ತಿಯಿಂದ ಎಡೆಹಳ್ಳಿಗೆ ಹೋಗುವ ಮಾರ್ಗದ ಪಕ್ಕದಲ್ಲಿ ನಿಲ್ಲಿಸಿರುವ ನಂದಿ-ಕಂಬದ ಮೇಲೆ

--

ಶಕ 984, ವೈಶಾಖ ಶು. [ಪಂಚಮಿ], [ರವಿವಾರ] = ಕ್ರಿ.ಶ. 1062, ಏಪ್ರಿಲ್ 16, ಮಂಗಳವಾರ

ಕನ್ನಡ

ಹಾಳಾಗಿದೆ. ಬಿಕ್ಕಿಗ-70ರಲ್ಲಿಯ ಗುಂಡಿಗವತ್ತಿಯ ನಾಯಕ ಸಾವಿಮಯ್ಯ-ನಾಯಕನಿಗೆ, ಆದಿತ್ಯ ದೇವಸ್ಥಾನದ ಅವಶ್ಯಕತೆಗಳಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 250.

ಗುಂಡಗತ್ತಿ

ಸಂ. 339

ಮುಕ್ತೇಶ್ವರ ದೇವಸ್ಥಾನದ ಹತ್ತಿರ ಬಿದ್ದಿರುವ ನಂದಿ-ಕಂಬದ ಮೇಲೆ

--

ಶಕ 985, ಶೋಭಕೃತ, ಪುಷ್ಯ ಶು. 2, ರವಿವಾರ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1062, ಡಿಸೆಂಬರ್ 5, ಗುರುವಾರ (ಶಕ 984)

ಕನ್ನಡ

ತುಂಬ ಹಾಳಾಗಿದೆ. ಚೆಟ್ಟಯ-ನಾಯಕನು ಭೂಮಿ ದಾನ ನೀಡಿದ್ದನ್ನು ಉಲ್ಲೇಖಿಸುವಂತೆ ತೋರುತ್ತದೆ.

ಆ್ಯರಿಎ, 1918-19, ಸಂ. 1918 ರ 251.

ಸಂ. 340

ಈಶ್ವರ ದೇವಸ್ಥಾನದ ಹತ್ತಿರ ಬಿದ್ದಿರುವ ಒಡೆದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲದೇವ (II)

--

ಕನ್ನಡ

ಹಾಳಾಗಿದೆ. ಮಹಾಮಂಡಲೇಶ್ವರ ವೀರ-ಪಾಂಡ್ಯದೇವನು ನೊಣಂಬವಾಡಿ-32000 ವನ್ನಾಳುತ್ತಿದ್ದುದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 252; ಸೌಇಇ, IX i, ಸಂ. 261.

ಹಲುವಾಗಲು

ಸಂ. 341

ಆಂಜನೇಯ ದೇವಸ್ಥಾನದ ಆವರಣದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ . . . ., ಶೋಭಕೃತ್ ಶು. 15, ಬುಧವಾರ

ಕನ್ನಡ

ಹಾಳಾಗಿದೆ. ಹಲುವಾಗಿಲುನಲ್ಲಿ ಕಟ್ಟಿಸಿದ ಒಂದು ಅಂಗಡಿಯ ಕೌಲು ಕರಾರನ್ನು ದಾಖಲಿಸುತ್ತದೆಂದು ಕಾಣುತ್ತದೆ. ಮಹಾನಾಯಕಾಚಾರ್ಯ ಬಾಗುಳಿ ಬಸವಪ್ಪನಾಯಕ ಮತ್ತು ಆತನ ತಾಯಿ ನಿಚ್ಚವ (ನಿಚ್ಚವ್ವ)ಳ ಉಲ್ಲೇಖವಿದೆ.

ಆ್ಯರಿಎ, 1918-19, ಸಂ. 1918 ರ 222.

ಸಂ. 342

ಅದೇ ದೇವಸ್ಥಾನದ ಆವರಣದಲ್ಲಿ ನಿಲ್ಲಿಸಿದ ಇನ್ನೊಂದು ಕಲ್ಲಿನ ಮೇಲೆ

--

ಶಕ 13[11], ವಿಭವ, ಜ್ಯೇಷ್ಠ ಶು. 1, ಶುಕ್ರವಾರ = ಕ್ರಿ.ಶ. 1388, ಮೇ 7, ಗುರುವಾರ (ಶಕ 1310)

ಕನ್ನಡ

ಪಾಂಡುನಾಡಿನ ಹಸ್ತಿನಾವತಿ, ಹೊಳೆಕೆರೆ, ಹರಿಹರ, ಬಾಡ, ಹೇಮಾವತಿ, ಕರ್ಣಪುರ, ಬೇಹೂರು, ಹೂವಿನ-ಹಡಗಲಿಯ ಐವೊಳೆ (ಸೆಟ್ಟಿಗಳು) ಮತ್ತು ಮುಮ್ಮುರಿದಂಡಗಳು ಹಲುವಾಗಿಲಿನ ಸಂತೆಪೇಟೆಯಲ್ಲಿ ನಂದಿ ಕಂಬವನ್ನು ಪ್ರತಿಷ್ಠಾಪಿಸಿದ ಬಗ್ಗೆ ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 223.

ಸಂ. 343

ಕಲ್ಲೇಶ್ವರ ದೇವಸ್ಥಾನದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ಯಾದವ, ರಾಮಚಂದ್ರರಾಯ

ಶಕ 1204, ಚಿತ್ರಭಾನು, ವೈಶಾಖ ಶು. 14, ಸೋಮವಾರ, ಸ್ವಾತಿ-ನಕ್ಷತ್ರ, ವ್ಯತಿಪಾತ = ಕ್ರಿ.ಶ. 1282, ಏಪ್ರಿಲ್ 23, ಗುರುವಾರ

ಕನ್ನಡ

ಹಲುವಾಗಿಲಿನ ಅಧಿಕಾರಿ ವಾಸುದೇವ, ನಾಚರಸ, ಎಂಟು ಹಿಟ್ಟುಗಳು ಮತ್ತು ಇತರ ಜನರು, ಪಾಂಡ್ಯ-ನಾಡಿನ ಅಧಿಕಾರಿ ಮತ್ತು ಹುಲಿಗೆರೆಯನ್ನೊಳಗೊಂಡು ಎಲ್ಲ ದೇಶಗಳನ್ನಾಳುತ್ತಿದ್ದ ಸೈನ್ಯಾಧಿಪತಿ ಮಹಾಪ್ರಧಾನ ಕನ್ನರದೇವನ ಅಧೀನನಾದ ಪವಸರಿಯ ಹರದೇವನ ಆಜ್ಞೆಯ ಮೇರೆಗೆ, ಗ್ರಾಮದ ಕಲಿನಾಥನ ದೇವರ ಸೇವೆಗೆ ಹಲುವಾಗಿಲುನಲ್ಲಿ ಸ್ಥಾನಿಕ ಜೋಗರಾಶಿಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 224; ಸೌಇಇ, IX i, ಸಂ. 380.

ಸಂ. 344

ಅದೇ ದೇವಸ್ಥಾನದಲ್ಲಿ ನಿಲ್ಲಿಸಿದ ವೀರಗಲ್ಲಿನ ಮೇಲೆ

ಯಾದವ, ರಾಮಚಂದ್ರದೇವ

18ನೆಯ ವರ್ಷ, ಸರ್ವಜಿತು, (ಆಶ್ವಿಜ), ... ಸೋಮವಾರ = ಕ್ರಿ.ಶ. 1287-88

ಕನ್ನಡ

ತುಂಬ ಹಾಳಾಗಿದೆ. ಯುದ್ಧ ಕಣದಲ್ಲಿಯ ವಿಜಯಮಾಲೆಯೊಂದಿಗೆ ಸೆಂಜಿಯ-ಮಲ್ಲಯನ ಮರಣದ ಬಗ್ಗೆ ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 225; ಸೌಇಇ, IX i, ಸಂ. 385.

ಸಂ. 345

ಗ್ರಾಮದ ಉತ್ತರಕ್ಕೆ ಹೊಲದಲ್ಲಿ ನಿಲ್ಲಿಸಿದ ಒಡೆದ ಕಲ್ಲಿನ ಮೇಲೆ

--

ಕ್ರಿ.ಶ. 8ನೆಯ ಶತಮಾನ

ಕನ್ನಡ

ತುಂಬ ಹಾಳಾದ ತ್ರುಟಿತ ಶಾಸನ.

ಆ್ಯರಿಎ, 1918-19, ಸಂ. 1918 ರ 226.

ಹರಕನಾಳ

ಸಂ. 346

ಕಲ್ಲೇಶ್ವರ ದೇವಸ್ಥಾನದ ಮುಂದೆ ಬಿದ್ದಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, --

ಚಾಲುಕ್ಯ ವಿಕ್ರಮ ವರ್ಷ 12, ... ಸೂರ್ಯಗ್ರಹಣ = ಕ್ರಿ.ಶ. 1087

ಕನ್ನಡ

ತುಂಬ ಹಾಳಾಗಿದೆ. ಸೋಮೇಶ್ವರ ದೇವರು, ಮಲ್ಲಿ ಸೆಟ್ಟಿ ಮತ್ತು ಮಾಚಿ ಸೆಟ್ಟಿಯರನ್ನು ಉಲ್ಲೇಖಿಸುತ್ತದೆ ಮತ್ತು ಭೂಮಿ ದಾನವನ್ನು ದಾಖಲಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 321; ಸೌಇಇ, IX i, ಸಂ. 156.

ಸಂ. 347

ಅದೇ ದೇವಸ್ಥಾನದ ಮುಂದೆ ಬಿದ್ದಿರುವ ಇನ್ನೊಂದು (ಒಡೆದ) ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ

ಶಕ 988, ಪರಾಭವ, ಭಾದ್ರಪದ, ಪುಣ್ಣಮೆ, ಸೋಮವಾರ, ಸೋಮಗ್ರಹಣ = ಕ್ರಿ.ಶ. 1066, ಸೆಪ್ಟೆಂಬರ್ 6, ಬುಧವಾರ

ಕನ್ನಡ

ಹಾಳಾಗಿದೆ. ನೊಳಂಬವಾಡಿ-32000 ದೇಶವನ್ನಾಳುತ್ತಿದ್ದ ವೆಂಗಿಮಂಡಲೇಶ್ವರ ಮಹಾಮಂಡಲೇಶ್ವರ ವಿಷ್ಣುವರ್ಧನ ವಿಜಯಾದಿತ್ಯನ ಸೇವಕ ಮಹಾಸಂಧಿವಿಗ್ರಹಿ ದೇವಪಯ್ಯನು ಅರ(ಹ)ಟದ ಸ್ವಯಂಭು-ಕಲಿದೇವಸ್ವಾಮಿ ದೇವಸ್ಥಾನದ ನಿರ್ವಹಣೆ, ಜೀರ್ಣೋದ್ಧಾರ ಮತ್ತು ಪೂಜೆಗೆ ಕೋಗಳಿ-500ರೊಳಗಿನ ಮುಳ್ತಗೆ-30 ರಲ್ಲಿಯ ನಿಲ್ಲಜಿಗೆ ಗ್ರಾಮವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 322; ಸೌಇಇ, IX i, ಸಂ. 129.

ಹಿರೇಮೇಗಲಗೇರಿ

ಸಂ. 348

ಗ್ರಾಮದ ಕೆರೆಯ ದಂಡೆಯ ಮೇಲೆ ನಿಲ್ಲಿಸಿದ ಒಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ

ಶಕ 981, ವಿಕಾರಿ, ಶ್ರಾವಣ, ಪುಣ್ಣಮೆ, ಮಂಗಳವಾರ, ಸಿಂಘ-ಸಂಕ್ರಾಂತಿ, ಸೋಮ-ಗ್ರಹಣ = ಕ್ರಿ.ಶ. 1059, ಜುಲೈ 27, ಮಂಗಳವಾರ

ಕನ್ನಡ

ಹಾಳಾಗಿದೆ. ಮಹಾಮಂಡಲೇಶ್ವರ ಸಿಂಗಣದೇವನು ಉಚ್ಚಂಗಿ-30ನ್ನು ಆಳುತ್ತಿದ್ದಾಗ ಸ್ವಯಂಭು-ತ್ರಿಕೂಟೇಶ್ವರ ದೇವಸ್ಥಾನದ ಆಚಾರ್ಯ ಆರ್ಯದೇವನ ಶಿಷ್ಯ ಮೂರುಜಾವಿ-ಪಂಡಿತನ ಪಾದ ತೊಳೆದು ಮೇಗಣಗೆರೆಯ ಸ್ವಯಂಭು-ಕಲಿದೇವರ ಸೇವೆಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 292; ಸೌಇಇ, IX i, ಸಂ. 124.

ಸಂ. 349

ಅದೇ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ

ಶಕ 9[8]3, ಪ್ಲವ, ಜ್ಯೇಷ್ಠ, ಅಮವಾಸ್ಯ, ಆದಿತ್ಯವಾರ, ಸೂರ್ಯ-ಗ್ರಹಣ = ಕ್ರಿ.ಶ. 1061, ಜೂನ್ 20, ಬುಧವಾರ

ಕನ್ನಡ

ದಂಡನಾಯಕ ಕೇಸಿಮಯ್ಯನು ಕದಂಬಳಿಕೆ-1000 ರೊಳಗಿನ ಮೇಗಣಗೆರೆಯನ್ನಾಳುತ್ತಿದ್ದಾಗ ಸ್ವಯಂಭು ಕಲಿದೇವರ ಸೇವೆಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಕವಿ ಬರ್ಮದೇವ ಈ ಶಾಸನವನ್ನು ಬರೆದನು.

ಆ್ಯರಿಎ, 1918-19, ಸಂ. 1918 ರ 293; ಸೌಇಇ, IX i, ಸಂ. 125.

ಸಂ. 350

ಅದೇ ಸ್ಥಳದಲ್ಲಿ ಇನ್ನೊಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲದೇವ (ಜಯಸಿಂಹ II)

(i) ಶಕ 943, ದುರ್ಮತಿ = ಕ್ರಿ.ಶ. 1021; (ii) ಶಕ 955, ಶ್ರೀಮುಖ = ಕ್ರಿ.ಶ. 1033; (iii) ಶಕ 956, ಭವ = ಕ್ರಿ.ಶ. 1034

ಕನ್ನಡ

ಹಾಳಾಗಿದೆ. ದಂಡನಾಯಕ ಪೊಳಲಮಯ್ಯನು ಬ್ರಹ್ಮರಾಶಿ-ಜೀಯನಿಗೆ ಭೂಮಿ (?) ದಾನ ನೀಡಿದ್ದನ್ನು ತಿಳಿಸುತ್ತದೆ. ಜಗದೇಕಮಲ್ಲ-ನೊಳಂಬಪಲ್ಲವ . . . . . ನು ಬಲ್ಲಕುಂದೆ-300 ಮತ್ತು ಕುಡಿಹರವಿ-70 ಗಳನ್ನಾಳುತ್ತಿದ್ದಾಗ ಎರಡನೆಯ ದಿನಾಂಕದಂದು ಚಂದ್ರಾಭರಣ-ಜೀಯನಿಗೆ ಒಂದು ದಾನ ನೀಡಿದ್ದನ್ನು ದಾಖಲಿಸುತ್ತದೆ. ಮೂರನೆಯ ದಿನಾಂಕದಂದು ಬ್ರಹ್ಮಾದಿರಾಜನು ಸ್ವಯಂಭುದೇವರಿಗೆ ದಾನ ಮಾಡಿದನು.

ಆ್ಯರಿಎ, 1918-19, ಸಂ. 1918 ರ 294; ಸೌಇಇ, IX i, ಸಂ. 82.

ಸಂ. 351

ಅದೇ ಸ್ಥಳದಲ್ಲಿ ಅದೇ ಕಲ್ಲಿನ ಮೇಲೆ

--

ಶಕ 975, ವಿಜಯ, ಆಷಾಢ ಶು. 3, ಆದಿತ್ಯವಾರ = ಕ್ರಿ.ಶ. 1054, ಜೂನ್, 26, ಆದಿತ್ಯವಾರ

ಕನ್ನಡ

ಜಗದೇಕಮಲ್ಲ-ನೊಳಂಬ-ಬ್ರಹ್ಮಾಧಿರಾಜ ಮೇಗಣಗೆರೆಯ ಸ್ವಯಂಭುದೇವರಿಗೆ, ಚಂದ್ರಭೂಷಣ-ಪಂಡಿತನ ಪಾದ ತೊಳೆದು ಭೂಮಿ ದಾನ ಮತ್ತು 4 ದೇವದಾಸಿಯರಿಗೆ ಮನೆ ಮತ್ತು ಕನ್ನಡಿಗಳ ಮೇಲಿನ ತೆರಿಗೆ ವಿನಾಯಿತಿ ಮಾಡಿದನು.

ಆ್ಯರಿಎ, 1918-19, ಸಂ. 1918 ರ 295; ಸೌಇಇ, IX i, ಸಂ. 113.

ಸಂ. 352

ಬಸವೇಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

--

ಖರ, ಚೈತ್ರ ಶು. ಬಿದಿಗೆ, ಗುರುವಾರ

ಕನ್ನಡ

ಹಾಳಾಗಿದೆ. ವೀರಪಾಂಡ್ಯನ ತಮ್ಮ, ಮತ್ತು ರಾಯ-ಪಾಂಡ್ಯದೇವ ಮತ್ತು ಸೋಮದೇವಿಯರ ಮಗ ಮಹಾಮಂಡಲೇಶ್ವರ ವಿಜಯ-ಪಾಂಡ್ಯದೇವನು ಉಚ್ಚಂಗಿಯಿಂದ ನೊಳಂಬವಾಡಿ-32000 ವನ್ನಾಳುತ್ತಿದ್ದಾಗ, ಆತನ ಅಧೀನ ಅಧಿಕಾರಿ ಗೋವಿಂದದೇವ-ದಂಡನಾಯಕನು ಮೇಗಣ(ಗೆರೆ)ಯ ದೇವಸ್ಥಾನಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ವೇಳೈಯಂಬಾಕ್ಕಮ್‌ನ ವಾನವನಮೂವೇಂದನು ವಿಜಯ ಪಾಂಡ್ಯನ ಮುಖ್ಯ ಮಂತ್ರಿಯಾಗಿದ್ದನು.

ಆ್ಯರಿಎ, 1918-19, ಸಂ. 1918 ರ 296.

ಹೊಸಕೋಟೆ

ಸಂ. 353

ಆಂಜನೇಯ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1434, ಪ್ರಜೋತ್ಪತ್ತಿ, ಪುಷ್ಯ ಬ. 30, ಅಮವಾಸ್ಯ = ಕ್ರಿ.ಶ. 1512, ಜನವರಿ 18, ರವಿವಾರ (ಶಕ 1433)

ಕನ್ನಡ

ತೊರಗ(ಲು) ಕೋಟೆಯ ಮುಖ್ಯಸ್ಥ ರಾಮಪ್ಪ-ರಾಹುತ್ತನ ಮಗ ಹರಿದಾಸ-ರಾಹುತ್ತನು ಹರಿಹರದೇವರ ದೇವಸ್ಥಾನದ ಸ್ಥಾನಿಕ ವಿಠರಸೈಯನ ಮಗ ಚೆನ್ನರಸೈಯನಿಗೆ ಬುಕ್ಕಸಾಗರ ಅಗ್ರಹಾರವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 276.

ಕಡಬಗೆರೆ

ಸಂ. 354

ಗ್ರಾಮದ ಪಶ್ಚಿಮಕ್ಕೆ ಹೊಲದಲ್ಲಿ ನಿಲ್ಲಿಸಿರುವ ವೀರಗಲ್ಲಿನ ಮೇಲೆ

ರಾಷ್ಟ್ರಕೂಟ, ನಿತ್ಯವರ್ಷ ಇಂದ್ರ-ಬಲ್ಲಾಹ (III)

ಶಕ 844, ಚಿತ್ರಭಾನು, ಭಾದ್ರಪದ, ಪುಣ್ಣಮೆ, ಮಂಗಳವಾರ = ಕ್ರಿ.ಶ. 922, ಸೆಪ್ಟೆಂಬರ್ 9, ಸೋಮವಾರ

ಕನ್ನಡ

ಮಹಾಸಾಮಂತ ಬಿಜ್ಜನು ಕೋಗಳಿ-500 ಮತ್ತು ಮಾಸಿಯವಾಡಿ-140 ಗಳನ್ನಾಳುತ್ತಿದ್ದನು. ಕದಂಬ ವಂಶದ ಕಣ್ಣಾವರ'ಮುದುದರ ದೇವಯ್ಯನ ಮಗ ಮಾಳಯ್ಯನು ನೊಳಂಬವಾಡಿಯ ಅಯ್ಯಪನ ಮಗ ಅಣ್ಣಿಗನೊಡನೆ ಪಡುಗಲ್ಲಿನಲ್ಲಿ ಹೋರಾಡಿ ಗೆದ್ದು ಮರಣ ಹೊಂದಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 271; ಸೌಇಇ, IX i, ಸಂ. 57.

ಸಂ. 355

ಗ್ರಾಮದ ಪಶ್ಚಿಮಕ್ಕೆ ಹೊಲದಲ್ಲಿ ನಿಲ್ಲಿಸಿರುವ ಇನ್ನೊಂದು ವೀರಗಲ್ಲಿನ ಮೇಲೆ

ರಾಷ್ಟ್ರಕೂಟ, ನಿತ್ಯವರ್ಷ ಇಂದ್ರ-ಬಲ್ಲಾಹ (III)

ಶಕ 844, ಚಿತ್ರಭಾನು, ಭಾದ್ರಪದ, ಪುಣ್ಣಮೆ ಮಂಗಳವಾರ = ಕ್ರಿ.ಶ. 922, ಸೆಪ್ಟೆಂಬರ್ 9, ಸೋಮವಾರ

ಕನ್ನಡ

ಮಹಾಸಾಮಂತ ಬಿಜ್ಜನು ಮಾಸಿಯವಾಡಿ-140 ಮತ್ತು ಕೋಗಳಿ-500 ಗಳನ್ನಾಳುತ್ತಿದ್ದನು. ಕದಂಬ ವಂಶದ ನಾಕಲೊಕ್ಕನ ಮಗನು ನೊಳಂಬವಾಡಿಯ ಅಯ್ಯಪನ ಮಗ ಅಣ್ಣಿಗನೊಡನೆ ಪಡುಗಲ್ಲಿನಲ್ಲಿ ಹೋರಾಡಿ ಗೆದ್ದು ಮರಣ ಹೊಂದಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 272; ಸೌಇಇ, IX i, ಸಂ. 58.

ಸಂ. 356

ಈಶ್ವರ ದೇವಸ್ಥಾನದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ಯಾದವ, ವೀರ-ರಾಮಚಂದ್ರದೇವ

13ನೆಯ ವರ್ಷ, ಚಿತ್ರಭಾನು, ವೈಶಾಖ ಬ. 2, ಆದಿವಾರ = ಕ್ರಿ.ಶ. 1282, ಏಪ್ರಿಲ್ 26, ಆದಿವಾರ

ಕನ್ನಡ

ಹಾಳಾಗಿದೆ. ಬಯಿರರ್ಸದೇವನ (ಮಗ?) ಬಸವದೇವನು ಮಾಡಿದ ಯುದ್ಧದಲ್ಲಿ ಒಬ್ಬ ವೀರನು ಮಡಿದ ಉಲ್ಲೇಖವಿದೆ.

ಆ್ಯರಿಎ, 1918-19, ಸಂ. 1918 ರ 247; ಸೌಇಇ, IX i, ಸಂ. 381.

ಸಂ. 357

ಅದೇ ದೇವಸ್ಥಾನದಲ್ಲಿ ಇನ್ನೊಂದು ವೀರಗಲ್ಲಿನ ಮೇಲೆ

ಯಾದವ, ವೀರ-ರಾಮಚಂದ್ರರಾಯ

ಶಕ 1214, ನಂದನ, ಫಾಲ್ಗುಣ = ಕ್ರಿ.ಶ. 1292-93

ಕನ್ನಡ

ಹಾಳಾಗಿದೆ. ಮನ್ನೆಯ-ಗೊಡತಿ ಬಟ್ಟರಸನು ಕಂಧರದೇವನ ಆಜ್ಞೆಯ ಮೇರೆಗೆ ಹೋರಾಡಿ ಅನೇಕ ವೈರಿಗಳನ್ನು ಗೆದ್ದು ಮಡಿದದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 248; ಸೌಇಇ, IX i, ಸಂ. 386.

ಸಂ. 358

ಅದೇ ದೇವಸ್ಥಾನದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

--

ಶಕ . . 22, ಈಶ್ವರ

ಕನ್ನಡ

ಹಾಳಾಗಿದೆ ಮತ್ತು ತ್ರುಟಿತವಾಗಿದೆ. ಚಿಕ್ಕರಸನು ಮಠ, ದೇವಸ್ಥಾನ ಮತ್ತು ತಪೋಧನರಿಗೆ ಕ್ರಿಯಾಶಕ್ತಿ-ಪಂಡಿತನ ಸಮ್ಮುಖದಲ್ಲಿ ಭೂಮಿ ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 249.

ಕಲ್ಲಹಳ್ಳಿ

ಸಂ. 359

ಗ್ರಾಮದಲ್ಲಿ ಒಂದು ಮನೆಯ ಹಿಂಭಾಗದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

--

ಖರ, ಆಶ್ವಿಜ ಶು. 10

ಕನ್ನಡ

ಹಾಳಾಗಿದೆ. ಬಸವಪ-ನಾಯಕನ ಉಲ್ಲೇಖವಿದೆ.

ಆ್ಯರಿಎ, 1918-19, ಸಂ. 1918 ರ 255.

ಕಂಚಿಕೆರೆ

ಸಂ. 360

ಶಿಥಿಲವಾದ ಮಂಡಿ-ಮಠದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 961, ಪ್ರಮಾದಿ, ವೈಶಾಖ, ಸಂಕ್ರಾಂತಿ = ಕ್ರಿ.ಶ. 1039, ಎಪ್ರಿಲ್ 23

ಕನ್ನಡ

ನೊಳಂಬ ಅರಸ ಜಗದೇಕಮಲ್ಲ-ನೊಳಂಬ-ಪಲ್ಲವ-ವೆರ್ಮಾನಡಿದೇವನು ಕೋಗಳಿ-500, ಕದಂಬಳಿ-1000 ವನ್ನು ಮತ್ತು ಪೆರ್ಗಡೆ ಬಾಚಿಮಯ್ಯನು ಕಂಚಿಕೆರೆಯ ಆಡಳಿತ ನಡೆಸುತ್ತಿದ್ದಾಗ ಸಂಧಿವಿಗ್ರಹಿ ಅರಿದಾಸಯ್ಯನು ಒಂದು ಲಿಂಗವನ್ನು ಪ್ರತಿಷ್ಠಾಪಿಸಿ ಅದರ ಪೂಜೆಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 236; ಸೌಇಇ, IX i, ಸಂ. 94.

ಕಸವನಹಳ್ಳಿ
(ಕಡಬಗೆರೆಯ ಉಪಗ್ರಾಮ)

ಸಂ. 361

ಗ್ರಾಮದ ಉತ್ತರಕ್ಕೆ ಹೊಲದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ವೆಂಕಟಪತಿ-ಮಹಾದೇವರಾಯ

ಶಕ 1581, ವಿಕಾರಿ, ಫಾಲ್ಗುಣ ಶು. 3, ಶುಕ್ರವಾರ = ಕ್ರಿ.ಶ. 1660, ಫೆಬ್ರವರಿ 3, ಶುಕ್ರವಾರ

ಕನ್ನಡ

ಬಾಗುಳಿಯ ಬಸವಪ್ಪ-ನಾಯಕನು ಗಿರೆಮಲ್ಲಪ್ಪನ ಮೊಮ್ಮಗ ಮತ್ತು ಬಸವಯ್ಯನ ಮಗ ತಿರುಕಪ್ಪನಿಗೆ ಕಸವನಹಳ್ಳಿಯನ್ನು ಪುನರ್ವಸತಿಗೊಳಿಸಿದ್ದಕ್ಕಾಗಿ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 273; ಸೌಇಇ, IX ii, ಸಂ. 696.

ಕುಂಚೂರು

ಸಂ. 362

ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ನಿಲ್ಲಿಸಿದ ಒಡೆದ ಕಲ್ಲಿನ ಮೇಲೆ

--

. . . . ಶು. ಅಷ್ಟಮಿ, ರವಿವಾರ, ಉತ್ತರಾಯಣ-ಸಂಕ್ರಾಂತಿ

ಕನ್ನಡ

ಅಪೂರ್ಣವಾಗಿದ್ದು ತ್ರುಟಿತವಾಗಿದೆ. ವೀರ ಪಾಂಡ್ಯದೇವ ಮತ್ತು ವಿಜಯಾದೇವಿಯರು ಮತ್ತಮಾರುವಿನ (ದೇವಸ್ಥಾನಕ್ಕೆ) ತೋಟದ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 240.

ಸಂ. 363

ಅದೇ ದೇವಸ್ಥಾನದ ಹತ್ತಿರ ನಿಲ್ಲಿಸಿದ ಇನ್ನೊಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

--

ಕನ್ನಡ

ಹಾಳಾಗಿದೆ. ಮಹಾಮಂಡಲೇಶ್ವರ ತ್ರಿಭುವನಮಲ್ಲ-ವೀರಪಾಂಡ್ಯದೇವನ ಉಲ್ಲೇಖವಿದೆ. ಆತನ ಪತ್ನಿಯು ಚಂದ್ರಗುಪ್ತ ವಂಶದವಳೆಂದು ಹೇಳಲಾಗಿದೆ.

ಆ್ಯರಿಎ, 1918-19, ಸಂ. 1918 ರ 241; ಸೌಇಇ, IX i, ಸಂ. 217.

ಸಂ. 364

ಅದೇ ದೇವಸ್ಥಾನದಲ್ಲಿಯ ಕಂಬದ ಮೇಲೆ

ಯಾದವ, ವೀರ-ರಾಮಚಂದ್ರರಾಯ

15ನೆಯ ವರ್ಷ, ಸರ್ವಜಿತ, ಶ್ರಾವಣ ಶು. 15, ಸೋಮವಾರ = ಕ್ರಿ.ಶ. 1286, ಆಗಸ್ಟ್ 5, ಸೋಮವಾರ (ವ್ಯಯ)

ಕನ್ನಡ

ಮಂಡಲಿಕ ಜಾಜ್ಜಗಿದೇವನ ಮಗ ಲಿಂಗದೇವ-ರಾಣೆಯನ ಆಜ್ಞೆಯ ಮೇರೆಗೆ ಸರ್ವಾಧಿಕಾರಿ ಜಕ್ಕರಸನು ಮತ್ತವೂರಿನ ಮಲ್ಲಿಕಾರ್ಜುನ ದೇವರ ಶೋತ್ರ (ಭೂಮಿ) ಯನ್ನು ಜಗದಾಳ ನಾಚರಸ, ಮಲ್ಲಣ್ಣ, ಎಂಟು ಹಿಟ್ಟುಗಳು ಮತ್ತು ಇತರ ಜನರ ಉಪಸ್ಥಿತಿಯಲ್ಲಿ ಆಚಾರ್ಯ ಕಲ್ಲೆಯ-ಜೀಯ-ಹರಿಪಜೀಯನಿಗೆ ಕೊಟ್ಟಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 242; ಸೌಇಇ, IX i, ಸಂ. 383.

ಸಂ. 365

ಆಂಜನೇಯ ದೇವಸ್ಥಾನದಲ್ಲಿಯ ಕಂಬದ ಮೇಲೆ

ಯಾದವ, ರಾಮಚಂದ್ರರಾಯ

10ನೆಯ ವರ್ಷ, ಪ್ರಮಾಥಿ, ಆಷಾಢ ಬ. 10, ಸೋಮವಾರ = ಕ್ರಿ.ಶ. 1279, ಜುಲೈ 5, ಬುಧವಾರ

ಕನ್ನಡ

ಕಂಧಾರದೇವನೆಂದು ಕರೆಯಲ್ಪಡುತ್ತಿದ್ದ ಮಹಾಮಂಡಲೇಶ್ವರ ನವ-ಖಂಡೆಯ-ಚಕ್ರವರ್ತಿ ಖೆಯಿದೇವ-ರಾಣೆಯನು ಹಲುವಾಗಿಲಿನ ಮನ್ನೆಯ ಜಗದ್ದಾಳ ನಾಚಿದೇವರಸನೊಡಗೂಡಿ ಕೊಂಚೂರಿನ ಊರೊಡೆಯ ಮಲ್ಲಿಯ ಮತ್ತು ಇತರ ಮಾನ್ಯಕಾರರು ಮತ್ತು ಜನರು ಸ್ವಯಂಭು-ಕಲಿನಾಥ ದೇವರ ಸೇವೆಗೆ ಸ್ರೋತ್ರ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 243; ಸೌಇಇ, IX i, ಸಂ. 378.

ಸಂ. 366

ಕಲ್ಲೇಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿದ ಒಡೆದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

11ನೆಯ ಶತಮಾನ

ಕನ್ನಡ

ತ್ರುಟಿತ. ಮಹಾಮಂಡಲೇಶ್ವರ ತ್ರಿಭುವನಮಲ್ಲ-ಪಾಂಡ್ಯದೇವ ಮತ್ತು ಆತನ ಅಧೀನ ಅಧಿಕಾರಿ ಕೊಂಚಾಪುರದ ಮಹಾನಾಳ್‌ಪ್ರಭು ಇರುಂಗರಸನ ಉಲ್ಲೇಖವಿದೆ.

ಆ್ಯರಿಎ, 1918-19, ಸಂ. 1918 ರ 244; ಸೌಇಇ, IX i, ಸಂ. 216.

ಮೈದೂರು

ಸಂ. 367

ಗ್ರಾಮದ ಉತ್ತರಕ್ಕೆ ಹೊಲದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

ವಿಜಯನಗರ, ವೀರ ವೆಂಕಟಪತಿದೇವ

ಶಕ 1566, ಸ್ವಭಾನು, ಮಾಘ ಶು. 5 = ಕ್ರಿ.ಶ. 1644, ಜನವರಿ 4, ಗುರುವಾರ

ಕನ್ನಡ

ತುಂಬ ಹಾಳಾಗಿದೆ. ಬಾಗುಳಿಯ ಮಹಾನಾಯಕಾಚಾರ್ಯ ಬಸವ್ವೆ[ಯ*]-ನಾಯಕನ ಆಡಳಿತದಲ್ಲಿ ಒಂದು ಧರ್ಮಏತದ ಬಾವಿ ಮತ್ತು ಕಲ್ಲು ಡೋಣಿಯನ್ನು ಕಟ್ಟಿಸಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 265; ಸೌಇಇ, IX ii, ಸಂ. 695.

ಸಂ. 368

ಈಶ್ವರ ದೇವಸ್ಥಾನದ ಆವರಣದಲ್ಲಿ ನಿಲ್ಲಿಸಿದ ವೀರಗಲ್ಲಿನ ಮೇಲೆ

--

--

ಕನ್ನಡ

ತುಂಬ ಹಾಳಾಗಿದೆ.

ಆ್ಯರಿಎ, 1918-19, ಸಂ. 1918 ರ 266.

ಸಂ. 369

ಗ್ರಾಮದಲ್ಲಿಯ ಖಾಲಿ ನಿವೇಶನದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ಸದಾಶಿವ-ಮ[ಹಾರಾಯ]

ಶಕ 1469, ಪ್ಲವಂಗ, ಫಾಲ್ಗುಣ ಶು. . . = ಕ್ರಿ.ಶ. 1548, ಫೆಬ್ರವರಿ

ಕನ್ನಡ

ತಿಮ್ಮೋಜ, ಕೊಂಡೋಜ ಮತ್ತು ಭದ್ರೋಜರು ಅರಸನಿಂದ ಮೈದೂರಿನ ಕ್ಷೌರಿಕರು ಕೊಡಬೇಕಾದ ಕಾಣಿಕೆ, ಕಡ್ಡಾಯ ಮತ್ತು ಇತರ ತೆರಿಗೆಗಳ ವಿನಾಯಿತಿ ಪಡೆದದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 267; ಸೌಇಇ, IX ii, ಸಂ. 629.

ಮುತ್ತಿಗಿ

ಸಂ. 370

ಕುಮಾರಸ್ವಾಮಿ ದೇವಸ್ಥಾನದಲ್ಲಿ ದೇವರ ಪೀಠದ ಮೇಲೆ

--

--

ಕನ್ನಡ

ಮುತ್ತಗೆಯ ಗೌಡ ಯರಪ-ಗೌಡನು ತನ್ನ ವಂಶಕ್ಕೆ ಪುಣ್ಯವಾಗಲೆಂದು ಕುಮಾರಸ್ವಾಮಿ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 268.

ಸಂ. 371

ಅದೇ ದೇವಸ್ಥಾನದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ಹೊಯ್ಸಳ, ವೀರ-ಬಲ್ಲಾಳದೇವ (II)

ಶಕ 1136, ಭವ, ವೈಶಾಖ ಶು. 1, ಸೋಮವಾರ = ಕ್ರಿ.ಶ. 1214, ಏಪ್ರಿಲ್ 12, ಶನಿವಾರ

ಕನ್ನಡ

ಅಮ್ಮೆಳೆಯ ಊರೊಡೆಯ ವಿಷ್ಣುನಾಯಕನ ಮಗ ಬ್ರಾಹ್ಮಣ ಹರಿಯಣ್ಣ ಅಥವಾ ಹರಿಹರ ಮತ್ತು ರಂಗಯ್ಯನ ಹೆಗ್ಗಡೆಯರು ಕೋಗಳಿ-500 ರ ಉಪವಿಭಾಗವಾದ ಮುತ್ತಗೆ-30ರ ಮುಖ್ಯ ಸ್ಥಳವಾದ ಮುತ್ತಗೆಯಲ್ಲಿ ಅರವಂಟಿಗೆಯ ನಿರ್ವಹಣೆಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಈ ದಾನವನ್ನು ಗ್ರಾಮದ ಪ್ರಭು ಬೊಪ್ಪಯ-ಬಮ್ಮಯನಿಂದ ಪಡೆದು ನೀಡಿದರು.

ಆ್ಯರಿಎ, 1918-19, ಸಂ. 1918 ರ 269; ಸೌಇಇ, IX i, ಸಂ. 332.

ಸಂ. 372

ಆಂಜನೇಯ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ಸದಾಶಿವದೇವ-ಮಹಾರಾಯ

ಶಕ 1479, ಪಿಂಗಳ, ಕಾರ್ತಿಕ ಶು. 11, ಮಂಗಳವಾರ = ಕ್ರಿ.ಶ. 1557, ನವೆಂಬರ್ 2, ಮಂಗಳವಾರ

ಕನ್ನಡ

[ಮಹಾ]ನಾಯಕಾಚಾರ್ಯ ಕೃಷ್ಣಪ-ನಾಯಕನು ಮುತ್ತಿಗಿ ಗ್ರಾಮದ ಕೃಷಿಕರು ಕೊಡಬೇಕಾದ ಕುರಿಗಳ ತೆರಿಗೆಯನ್ನು ನಿಗದಿ ಪಡಿಸಿದ್ದನ್ನು ತಿಳಿಸುತ್ತದೆ. ಈ ಶಾಸನವನ್ನು ಗೋಬಳಿಯಬಾವಿಯ ಸೇನಬೋವನು ಬರೆದನು ಮತ್ತು ದೇಮೋಜನು ಕಂಡರಸಿದನು.

ಆ್ಯರಿಎ, 1918-19, ಸಂ. 1918 ರ 270; ಸೌಇಇ, IX ii, ಸಂ. 666.

ನಂದಿಬೇವೂರು

ಸಂ. 373

ಆಂಜನೇಯ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ

ಶಕ 976, ಜಯ, ಉತ್ತರಾಯಣ-ಸಂಕ್ರಾಂತಿ, ಆದಿವಾರ = ಕ್ರಿ.ಶ. 1054, ಡಿಸೆಂಬರ್ 24, ಶನಿವಾರ

ಕನ್ನಡ

ತ್ರೈಲೋಕ್ಯಮಲ್ಲ-ನೊಳಂಬ-ಪಲ್ಲವ-ಪೆರ್ಮಾನಡಿಯು ನೊ[ಳಂಬವಾಡಿ]-32000, ಬಲ್ಲಕುಂದೆ-[300], ಕಣಿಯಕಲ್ಲು-300 ಮತ್ತು ಕದಂಬಳಿಗೆ-1000 ಗಳನ್ನಾಳುತ್ತಿದ್ದನು. ಜಗದೇಕಮಲ್ಲ-ನೊಳಂಬ-ಬ್ರಹ್ಮಾದಿರಾಜ ಗಟ್ಟಿಯರಸ, ಊರೊಡೆಯ ಶಿವಮಯ್ಯ ಮತ್ತು 120 ಮಹಾಜನರು, ನೊಳಂಬ ಅರಸ ನರಸಿಂಗದೇವನ ಐವರು ಮಂತ್ರಿಗಳ ಒಪ್ಪಿಗೆ ಪಡೆದು ಅವರೇ ಕಟ್ಟಿಸಿದ ಬಸದಿಗಾಗಿ ಜೈನ ಗುರು ಅಷ್ಟೋಪವಾಸಿ-ಭಟಾರನಿಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಕಲ್ಲಿನ ಇನ್ನೊಂದು ಬದಿಯಲ್ಲಿರುವ ಶಾಸನದಲ್ಲಿ

ನರಸಿಂಘದೇವನು ಬೇಹೂರಿನಲ್ಲಿ ದೇಹಾರ ಮಾಡಿಸಿ ಅದೇ ಗುರುವಿಗೆ ಕೊಟ್ಟನೆಂದು ತಿಳಿಸುತ್ತದೆ. ಈ ಶಾಸನವನ್ನು ವಾವಣಯ್ಯನು ಬರೆದನು ಮತ್ತು ರಾಚೋಜನು ಕಂಡರಿಸಿದನು.

ಆ್ಯರಿಎ, 1918-19, ಸಂ. 1918 ರ 201; ಸೌಇಇ, IX i, ಸಂ. 115.

ಸಂ. 374

ಕಲ್ಲೇಶ್ವರ ದೇವಸ್ಥಾನದ ತೊಲೆಯ ಮೇಲೆ

--

ಶಕ 1480, ಕಾಳಯುಕ್ತಿ, ವೈಶಾಖ ಬ. 12 = ಕ್ರಿ.ಶ. 1558, ಮೇ 15

ಕನ್ನಡ

ಅದೇ ಗ್ರಾಮದ ಲಕ್ಷ್ಮೀನಾರಾಯಣ ದೇವಸ್ಥಾನದ ದೀಪಕ್ಕೆ ನಂದಿಯ ಬೇವೂರು ಗ್ರಾಮವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಈ ದಾನವನ್ನು ಭಿಕ್ಷಾವೃತ್ತಿ-ಅಯ್ಯನಿಗೆ ಪುಣ್ಯವಾಗಲೆಂದು ಆತನ ಕಾರ್ಯಕರ್ತ ವೀರಪ-ಒಡೆಯ ಇಮ್ಮಡಿ ಒಡೆಯನು ಮಾಡಿದನು.

ಆ್ಯರಿಎ, 1918-19, ಸಂ. 1918 ರ 202.

ಸಂ. 375

ಗ್ರಾಮದ ಉತ್ತರಕ್ಕೆ ಹೊಲದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

--

ನಂದನ, ಮಾರ್ಗಶಿರ, ಬ. 12, ಶುಕ್ರವಾರ

ಕನ್ನಡ

ಮಹಾಜನರು ಮತ್ತು ಇತರರು ಬಸವಣ್ಣ ದೇವಸ್ಥಾನಕ್ಕೆ ಒಂದು ರಥ ಕಟ್ಟಿಸಲು ಒಬ್ಬ ವ್ಯಕ್ತಿಗೆ ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 203.

ನಂದಿಕಂಬ
(ಪುನಬಗಟ್ಟಿಯ ಉಪಗ್ರಾಮ)

ಸಂ. 376

ಕಲ್ಲೇಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ

ಶಕ 974, ನಂದನ, ಮಾಘ, ಅಮವಾಸ್ಯ, ಆದಿತ್ಯವಾರ, ಉತ್ತರಾಯಣ ಸಂಕ್ರಾಂತಿ = ಕ್ರಿ.ಶ. 1053, ಜನವರಿ 22, ಶುಕ್ರವಾರ

ಕನ್ನಡ

ಪೆರ್ಗಡೆ ಮಾಕಿಮಯ್ಯ ಮತ್ತು ಇತರರೊಂದಿಗೆ ಕದಂಬಳಿಗೆ-1000 ವನ್ನಾಳುತ್ತಿದ್ದ ಅರಸನ ಸಾಮಂತ ಕದಂಬ ವಂಶದ ನಾಗತ್ಯರಸನು ಹುಳಿಬೆಯಘಟ್ಟದ ಕದಂಬೇಶ್ವರ ದೇವರ ಸೇವೆಗೆ ಸೋಮೇಶ್ವರ-ಪಂಡಿತನ ಪಾದ ತೊಳೆದು ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಕಲ್ಲುಕುಟಿಗ ಮಾಣಿಕಾಚಾರಿ, ಹಿರಿಯ-ಚಾವುಂಡೋಜ ಮತ್ತು ಕಿರಿಯ-ಚಾವುಂಡೋಜರಿಗೂ ಭೂಮಿ ದಾನ ನೀಡಲಾಯಿತು.

ಆ್ಯರಿಎ, 1918-19, ಸಂ. 1918 ರ 291; ಸೌಇಇ, IX i, ಸಂ. 112.

ನಿಚ್ಚವ್ವನಹಳ್ಳಿ

ಸಂ. 377

ಆಂಜನೇಯ ದೇವಸ್ಥಾನದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1650, ಸೌಮ್ಯ, ಜ್ಯೇಷ್ಠ ಶು. 5 = ಕ್ರಿ.ಶ. 1729, ಮೇ 22 (ಶಕ 1651)

ಕನ್ನಡ

ಹಿಂದು ಅರಸನಿಗೆ ಕೊಡಬೇಕಾದ ಕಾಣಿಕೆಯನ್ನು 10000 ವರಹಗಳಿಂದ 8000ಕ್ಕೆ ಇಳಿಸಿ ಅಬ್ದುಲ್ ನಬಿಖಾನನ ಅನುಮತಿ ಪಡೆದು ಹೊಸಪೇಟೆಯನ್ನು ಕಟ್ಟಿಸಿ, ಬಾಡಿಗೆಯನ್ನು 6000ಕ್ಕೆ ಇಳಿಸಿ ರಾಜ್ಯಕ್ಕೆ ಮಾಡಿದ ಅಮೂಲ್ಯ ಸೇವೆಗಾಗಿ ಸುಬೇದಾರ ಲಿಂಗಪ್ಪನಿಗೆ ಮಹಾನಾಯಕಾಚಾರ್ಯ ಬಾಗಳಿ ಬಸವಪ-ನಾಯಕನು ನಿಚ್ಚಪುರ ಗ್ರಾಮವನ್ನು ದಾನ ನೀಡಿದನೆಂದು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 275.

ನೀಲಗುಂದ

ಸಂ. 378

ಹರಪನಹಳ್ಳಿಯ ತಹಶೀಲ್ದಾರರಿಂದ ಪಡೆದ ತಾಮ್ರ ಶಾಸನ

ಕಲ್ಯಾಣ ಚಾಲುಕ್ಯ, ವಿಕ್ರಮಾದಿತ್ಯ VI

(i) ಚಾಲುಕ್ಯ ವಿಕ್ರಮ ವರ್ಷ 12, ಪ್ರಭವ, ಪುಷ್ಯ ಬ. 13, ವಡ್ಡವಾರ, ಉತ್ತರಾಯಣ ಸಂಕ್ರಾಂತಿ = ಕ್ರಿ.ಶ. 1087, ಡಿಸೆಂಬರ್ 25, ಶನಿವಾರ;
(ii) ಚಾಲುಕ್ಯ ವಿಕ್ರಮ ವರ್ಷ 48, ಶೋಭಕೃತ್, ಭಾದ್ರಪದ ಶು. 12, ಸೋಮವಾರ = ಕ್ರಿ.ಶ. 1123, ಸೆಪ್ಟೆಂಬರ್ 3, ಸೋಮವಾರ

ಸಂಸ್ಕೃತ, ನಾಗರಿ

ಅರಸನು ಕೋಗಳಿ-500 ರ ಉಪ-ವಿಭಾಗವಾದ ವಿಕ್ಕಿಗ-70ರಲ್ಲಿರುವ ನೀರುಗುಂದ ಗ್ರಾಮವನ್ನು ಪಲತ-ಪಾಂಡ್ಯನ ಬಿನ್ನಹದ ಮೇರೆಗೆ ದ್ರಾವಿಡ ಭೂಮಿಯಿಂದ ಬಂದ ವಿವಿಧ ವೈದಿಕ ಪಾಂಡಿತ್ಯವನ್ನು ಹೊಂದಿದ 300 ಜನ ಬ್ರಾಹ್ಮಣರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ. ಎರಡನೆಯ ದಿನಾಂಕದಂದು ಅದೇ ಗ್ರಾಮ ಮತ್ತು ಕೃಷ್ಣಪಲ್ಲಿಕ ಗ್ರಾಮವನ್ನು ಅದೇ 500 ಜನ ಬ್ರಾಹ್ಮಣರಿಗೆ ಪಲತ-ಪಾಂಡ್ಯನ ಮೊಮ್ಮಗ ರಾಯಪಾಂಡ್ಯನ ಬಿನ್ನಹದ ಮೇರೆಗೆ ಅದೇ ಅರಸನು ದಾನ ನೀಡಿದನು. ಅಲ್ಲದೆ ಆತನು ಆದಿತ್ಯಪಲ್ಲಿಕ ಗ್ರಾಮವನ್ನು ಭೀಮೇಶ್ವರ ದೇವರ ಸೇವೆಗೆ ದಾನ ಮಾಡಿದನು.

ಆ್ಯರಿಎ, 1913-14, ಸಂ. 1913 ರ 8; ಎಇ, XII, ಪು. 142-155.

ಸಂ. 379

ಭೀಮೇಶ್ವರ ದೇವಸ್ಥಾನದ ಆವರಣದಲ್ಲಿ ನಿಲ್ಲಿಸಿದ ಒಂದು ಕಲ್ಲಿನ ಮೇಲೆ

ಕಲಚೂರ್ಯ, ತ್ರಿಭುವನಮಲ್ಲ ಬಿಜ್ಜಳದೇವ

ಚಿತ್ರಭಾನು, ಪುಷ್ಯ ಶು. 10, ಆದಿತ್ಯವಾರ, ಉತ್ತರಾಯಣ-ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1162

ಕನ್ನಡ

ಮಹಾಮಂಡಲೇಶ್ವರ ತ್ರಿಭುವನಮಲ್ಲ-ವೀರ-ಪಾಂಡ್ಯದೇವನು ಕೋಗಳಿ-500 ಮತ್ತು ಕದಂಬಳಿಕೆ-1000ನ್ನು ಆಳುತ್ತಿದ್ದಾಗ, ಆತನ ಆಜ್ಞೆಯ ಮೇರೆಗೆ ಕೋಗಳಿ ಮತ್ತು ಕದಂಬಳಿಕೆಯಲ್ಲಿ ಸುಂಕದ ಅಧಿಷ್ಠಾಯಕನಾದ ಕಲ್ಲಿಮಯ್ಯನು, ಕೋಗಳಿ-500ರ ಮುಖ್ಯ ಪಟ್ಟಣವಾದ ನೀರುಗುಂದದಲ್ಲಿಯ ಸುಂಕದ ಒಂದು ನಿರ್ದಿಷ್ಟ ಭಾಗವನ್ನು ಗ್ರಾಮದಲ್ಲಿಯ ಭೀಮೇಶ್ವರ ದೇವರ ಸೇವೆಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 113; ಸೌಇಇ, IX i, ಸಂ. 293.

ಸಂ. 380

ಅದೇ ದೇವಸ್ಥಾನದ ಆವರಣದಲ್ಲಿ ನಿಲ್ಲಿಸಿದ ಎರಡನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ (ವಿಕ್ರಮಾದಿತ್ಯ VI)

ಚಾಲುಕ್ಯ ವಿಕ್ರಮ ವರ್ಷ 35, ವಿಕೃತ, ಭಾದ್ರಪದ ಬ. 11, ಆದಿವಾರ, ಉತ್ತರಾಯಣ-ಸಂಕ್ರಾಂತಿ ವ್ಯತಿಪಾತ = ಕ್ರಿ.ಶ. 1110, ಸೆಪ್ಟೆಂಬರ್ 11, ಆದಿವಾರ

ಕನ್ನಡ

ಹಾಳಾಗಿದೆ. ಸುಂಕದ ಆಡಳಿತವನ್ನು ನಿರ್ವಹಿಸುತ್ತಿದ್ದ ಮತ್ತು ಅರಸನ ದಂಡನಾಯಕರಾದ ಅನಂತಪಾಲಯ್ಯ ಮತ್ತು ಮುದ್ದರಸರು ನೀರ್ಗುಂದದ ಭೀಮೇಶ್ವರ ದೇವರ ಸೇವೆಗೆ ಸುಂಕಾದಾಯದ ಒಂದು ಭಾಗವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 114; ಸೌಇಇ, IX i, ಸಂ. 181.

ಸಂ. 381

ಅದೇ ದೇವಸ್ಥಾನದ ಆವರಣದಲ್ಲಿ ನಿಲ್ಲಿಸಿದ ಮೂರನೆಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ (ವಿಕ್ರಮಾದಿತ್ಯ VI)

ಚಾಲುಕ್ಯ-ವಿಕ್ರಮ ವರ್ಷ 33, ಸರ್ವಧಾರಿ, ... ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1107, ಡಿಸೆಂಬರ್ 24, ಗುರುವಾರ

ಕನ್ನಡ

ಹಾಳಾಗಿದೆ. ಸುಂಕದ ಆಡಳಿತವನ್ನು ನಿರ್ವಹಿಸುತ್ತಿದ್ದ ಒಬ್ಬ ದಂಡನಾಯಕನು (ಹೆಸರು ಹಾಳಾಗಿದೆ) ವೀರೇಶ್ವರ ದೇವರ ಸೇವೆಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 115; ಸೌಇಇ, IX i, ಸಂ. 176.

ಸಂ. 382

ಅದೇ ದೇವಸ್ಥಾನದ ಆವರಣದಲ್ಲಿ ನಿಲ್ಲಿಸಿದ ನಾಲ್ಕನೆಯ ಕಲ್ಲಿನ ಮೇಲೆ

ಹೊಯ್ಸಳ ನರಸಿಂಗದೇವ (II)

ಶಕ 1145, ಸುಭಾನು, ಮಾಘ ಶು. 11, ಬೃಹಸ್ಪತಿವಾರ = ಕ್ರಿ.ಶ. 1224, ಫೆಬ್ರವರಿ 1, ಗುರುವಾರ

ಕನ್ನಡ

ಅರಸನ ತಂದೆ ಬಲ್ಲಾಳನು ತನ್ನ ಆನೆಯ ಮೇಲೆ ಕುಳಿತು ಏಕಾಂಗಿಯಾಗಿ ಸೇವಣರ ಸೈನ್ಯವನ್ನು ಸೊರಟೂರಿನಿಂದ ಕೃಷ್ಣವೇಣಿ ನದಿಯ ದಂಡೆಯವರೆಗೆ ಅಟ್ಟಿದ್ದನ್ನು ತಿಳಿಸುತ್ತದೆ. ಅಲ್ಲದೆ ಭೀಮೇಶ್ವರ ದೇವರ ಸೇವೆಗೆ ಕೆಲವು ಗ್ರಾಮಗಳನ್ನು (ಹೆಸರು ಇಲ್ಲ) ದಾನ ನೀಡಿದ್ದನ್ನೂ ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 116; ಸೌಇಇ, IX i, ಸಂ. 340.

ಸಂ. 383

ಅದೇ ಕಲ್ಲಿನ ಮೇಲೆ

--

ಕೀಲಕ, ಫಾಲ್ಗುಣ ಶು. 13, ಆದಿತ್ಯವಾರ = ಕ್ರಿ.ಶ. 1309, ಫೆಬ್ರವರಿ 25, ಆದಿತ್ಯವಾರ

ಕನ್ನಡ

ಮಹಾಮಂಡಲೇಶ್ವರ ಬಿಜ್ಜರಸ ಅಚ್ಚುತದೇವನು ತಲವಾಗಿಲಹಳ್ಳಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 116-ಎ; ಸೌಇಇ, IX i, ಸಂ. 352.

ಸಂ. 384

ಅದೇ ದೇವಸ್ಥಾನದಲ್ಲಿಯ ಕಂಬದ ಮೇಲೆ

--

--

ಕನ್ನಡ

ಮಹಾಬಲಿ-ವಂಶದ ಮಹಾಸಾಮಂತಾಧಿಪತಿ ಆದಿಪೆಮ್ಮನ ಮತ್ತು ನೀರ್ಗುಂದ ಗ್ರಾಮದ ಉಲ್ಲೇಖವಿದೆ.

ಆ್ಯರಿಎ, 1913-14, ಸಂ. 1913 ರ 117.

ಸಂ. 385

ಮುಕ್ತೇಶ್ವರ ದೇವಸ್ಥಾನದ ಒಳಗೆ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ (ವಿಕ್ರಮಾದಿತ್ಯ VI)

(i) ಚಾಲುಕ್ಯ-ವಿಕ್ರಮ ವರ್ಷ 4, ಕಾಳಯುಕ್ತಿ, ಮಾಘ ಶು. 5, ಆದಿವಾರ, ಉತ್ತರಾಯಣ-ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1079, ಜನವರಿ 20, ಆದಿವಾರ (ಶು. 5 ಅಲ್ಲ, ಶು. 15); (ii) ಚಾಲುಕ್ಯ ವಿಕ್ರಮ ವರ್ಷ 61, ನಳ, ಮಾಘ, ಶು. 10, ಸೋಮವಾರ, ಉತ್ತರಾಯಣ-ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1136, ಜನವರಿ, ರವಿವಾರ; (iii) ಜಯ, ಪುಷ್ಯ ಶು. 14, ಸೋಮವಾರ, ಉತ್ತರಾಯಣ ಸಂಕ್ರಾಂತಿ = ಕ್ರಿ.ಶ. 1174, ಡಿಸೆಂಬರ್ 9, ಸೋಮವಾರ (ಉತ್ತರಾಯಣ ಸಂಕ್ರಾಂತಿಯು ಅದೇ ತಿಂಗಳು 25ರಂದು ಇತ್ತು)

ಕನ್ನಡ

ತ್ರಿಭುವನಮಲ್ಲ ರಾಯ-ಪಾಂಡ್ಯನು ನೊಳಂಬವಾಡಿ-32000 ಮತ್ತು ಕಣೆಯಕಲ್ಲು-300 ಗಳನ್ನಾಳುತ್ತಿದ್ದಾಗ ಕೋಗಳಿ ನಾಡಿನಲ್ಲಿಯ ನೀರ್ಗುಂದದ 300 ಮಹಾಜನರು, 500 ಬಣಂಜಿಗರು ಮತ್ತು ನಾನಾದೇಶಿಗಳು, ನೀರ್ಗುಂದ ಗ್ರಾಮದ ಉತ್ತರಕ್ಕೆ ಹಳೆಯ ಹಾಳಿನಲ್ಲಿರುವ ಸ್ವಯಂಭು ಭೀಮೇಶ್ವರ ದೇವರ ಪೂಜೆಗೆ ಭೂಮಿ ಮತ್ತು ಸುಂಕ ದಾನ ನೀಡಿದ್ದನ್ನು ತಿಳಿಸುತ್ತದೆ. ಎರಡನೆಯ ದಿನಾಂಕದಂದು

ತೋಟಗಾರರು, ತೆಲ್ಲಿಗರು ಮತ್ತು ಇತರರು ಅದೇ ರೀತಿಯ ದಾನ ನೀಡಿದರು. ಮೂರನೆಯ ದಿನಾಂಕದಂದು ತೋಟದ ಭೂಮಿಯನ್ನು ದಾನ ನೀಡಲಾಯಿತು.

ಆ್ಯರಿಎ, 1913-14, ಸಂ. 1913 ರ 118; ಸೌಇಇ, IX i, ಸಂ. 141.

ಸಂ. 386

ಅದೇ ದೇವಸ್ಥಾನದ ಮುಂದೆ ವೀರಗಲ್ಲಿನ ಮೇಲೆ

--

--

ಕನ್ನಡ

ಚಯಂದಿಯರಸನ ಮಗ ಮರೆಯಾಳ್ವನು ನೀರ್ಗುಂದದ ಗೋವುಗಳನ್ನು ರಕ್ಷಿಸಲು ಬನವಾಸಿ-ನಾಡಿನಲ್ಲಿ ಹೋರಾಡಿದಾಗ ನೀರ್ಗುಂದದ ಮೂಲಿಗ ಕಲ್ಲಗಂಗನು ಮರಣ ಹೊಂದಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 119.

ಸಂ. 387

ಅದೇ ದೇವಸ್ಥಾನದ ಮುಂದೆ ನಿಲ್ಲಿಸಿದ ಎರಡನೆಯ ವೀರಗಲ್ಲಿನ ಮೇಲೆ

--

--

ಕನ್ನಡ

ಬಹಳ ಹಾಳಾಗಿದೆ. ಪಲ್ಲವರಾಜಾಧಿರಾಜನನ್ನು ಉಲ್ಲೇಖಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 120.

ನಿಟ್ಟೂರು

ಸಂ. 388

ಕಲ್ಲೇಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿದ ವೀರಗಲ್ಲಿನ ಮೇಲೆ

--

--

ಕನ್ನಡ

ಈ ವೀರಗಲ್ಲನ್ನು ಕಲ್ಲೋಜನು ಕದಿರೈಮಿಡಿಯ ಯುದ್ಧದಲ್ಲಿ ಮಡಿದ ತನ್ನ ತಂದೆ, ಮತ್ತು ಹಲುವಾಗಿಲಿನ ನಾಚರಸನ ಬಡಗಿಯಾಗಿದ್ದ ಮಸಣೋಜನ ನೆನಪಿಗಾಗಿ ನಿಲ್ಲಿಸಿದನೆಂದು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 246.

ಪುನಬಗಟ್ಟಿ

ಸಂ. 389

ಕಲ್ಲೇಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ (ಸೋಮೇಶ್ವರ I)

ಶಕ 974, ನಂದನ, ಪುಷ್ಯ ಶು. 1, ಬೃಹಸ್ಪತಿವಾರ ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1052, ಡಿಸೆಂಬರ್ 24, ಗುರುವಾರ

ಕನ್ನಡ

ತ್ರೈಲೋಕ್ಯಮಲ್ಲ-ಇರಿವ-ಪಲ್ಲವ-ಪೆರ್ಮಾನಡಿ-ನರಸಿಂಘದೇವನ ಪತ್ನಿ ನೊಳಂಬ-ಮಹಾದೇವಿಯು ಹೊಸಗೆರೆಯಲ್ಲಿಯ ಮಹಾದೇವ ದೇವರ ಸೇವೆಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 290; ಸೌಇಇ, IX i, ಸಂ. 110.

ರಾಗಿಮಸಲವಾಡ

ಸಂ. 390

ಆಂಜನೇಯ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1649, ಪ್ಲವಂಗ, ಫಾಲ್ಗುಣ ಶು. 5 = ಕ್ರಿ.ಶ. 1728, ಫೆಬ್ರವರಿ 4

ಕನ್ನಡ

ಹಾಳಾಗಿದೆ. ಮಹಾನಾಯಕಾಚಾರ್ಯ ಬಾಗಳಿ ಬಸವಪ್ಪ-ನಾಯಕನ ಉಲ್ಲೇಖವಿದೆ.

ಆ್ಯರಿಎ, 1918-19, ಸಂ. 1918 ರ 232.

ಸಂ. 391

ಬಸವೇಶ್ವರ ದೇವಸ್ಥಾನದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

ಚಾಲುಕ್ಯ ವಿಕ್ರಮ ವರ್ಷ 10, ಕ್ರೋಧನ = ಕ್ರಿ.ಶ. 1085-86

ಕನ್ನಡ

ಹಾಳಾಗಿದೆ ಮತ್ತು ತ್ರುಟಿತವಾಗಿದೆ. ಮಹಾಮಂಡಲೇಶ್ವರ ತ್ರಿಭುವನಮಲ್ಲ-ಪಾಂಡ್ಯದೇವನು ನೊಳಂಬವಾಡಿ-32000 ಮತ್ತು ಗಂಗವಾಡಿ-96000 ಗಳನ್ನಾಳುತ್ತಿದ್ದನೆಂದು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 233; ಸೌಇಇ, IX i, ಸಂ. 154.

ಸಂ. 392

ಈಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಭೂಲೋಕಮಲ್ಲದೇವ

ಚಾಲುಕ್ಯ ವಿಕ್ರಮ ವರ್ಷ 52, ಪ್ಲವಂಗ, ಆಷಾಢ, ಅಮವಾಸ್ಯ, ಆದಿತ್ಯವಾರ, ದಕ್ಷಿಣಾಯಣ, ಸಂಕ್ರಮಣ, ವ್ಯತಿಪಾತ = ಕ್ರಿ.ಶ. 1127, ಜುಲೈ 10, ಆದಿತ್ಯವಾರ

ಕನ್ನಡ

ಮಹಾಸಾಮಂತಾಧಿಪತಿ ಭೋಗಭಟ್ಟನು ಸಪ್ತಾರ್ಧಲಕ್ಷ, ಎರಡು ಆರುನೂರು ಮತ್ತು ಬನವಾಸಿ-32000 ದೇಶಗಳ ಸುಂಕದ ಆಡಳಿತವನ್ನು ನಿರ್ವಹಿಸುತ್ತಿದ್ದನೆಂದು ತಿಳಿಸುತ್ತದೆ. ದಂಡನಾಯಕ ಇಂದ್ರರಾಣಯ್ಯನ ಆಜ್ಞೆಯ ಮೇರೆಗೆ ಆತನ ಪೆರ್ಗಡೆ ವುಜ್ಜಭಟ್ಟನು ರತ್ನಭೂಷಣ ವಿನಾಯಕನ ವಿಗ್ರಹವನ್ನು ಪ್ರತಿಷ್ಠಾಪಿಸಿ, ಸಭಾಮಂಟಪ ಮತ್ತು ಬಾವಿಯನ್ನು ಕಟ್ಟಿಸಿದನು ಮತ್ತು ದೇವರ ಸೇವೆಗೆ 4 ಪಣಗಳನ್ನು ದಾನ ನೀಡಿದನು. ನೊಳಂಬವಾಡಿ-32000 ದ ದಂಡನಾಯಕ ಚೋಳಾಂಡರನು ಅದೇ ದೇವರಿಗೆ ಪಾಂಡ್ಯನಾಡಿನ ಸುಂಕದಲ್ಲಿ ತಿಂಗಳಿಗೆ 2 ಪಣಗಳನ್ನು ದಾನ ನೀಡಿದನು. ಹೆಗ್ಗಡೆ ಜೋಗದೇವಯ್ಯ, ಸೆಟ್ಟಿಗಳು ಮತ್ತು ಸೆಟ್ಟಿಗುತ್ತರು ಅದೇ ಉದ್ದೇಶಕ್ಕಾಗಿ ತಮ್ಮ ವ್ಯಾಪಾರದ ಸರಕುಗಳ ಮೇಲಿನ ಸುಂಕದ ಸ್ವಲ್ಪ ಭಾಗವನ್ನು ಸ್ವಇಚ್ಛೆಯಿಂದ ಕೊಟ್ಟರು. ಮಸಣಯ-ನಾಯಕ, ಮಾದಯ-ನಾಯಕ, ಕಾಳಯ-ನಾಯಕ ಮತ್ತು ಇತರರು ಇಂತಹದೆ ದಾನಗಳನ್ನು ನೀಡಿದರು.

ಆ್ಯರಿಎ, 1918-19, ಸಂ. 1918 ರ 234; ಸೌಇಇ, IX i, ಸಂ. 223.

ರಾಜಬವನಹಳ್ಳಿ

ಸಂ. 393

ಆಂಜನೇಯ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ದೇವರಾಯ-ಮಹಾರಾಯ

ಶಕ 1341, ವಿಕಾರಿ, ಕಾರ್ತಿಕ ಶು. 11, ಆದಿವಾರ = ಕ್ರಿ.ಶ. 1419, ಅಕ್ಟೋಬರ್ 29, ಆದಿವಾರ

ಕನ್ನಡ

ಲಖಪ್ಪನ ಮಗ ಹರಿಯಣ್ಣನು ಅರಸನ ಆಜ್ಞೆಯ ಮೇರೆಗೆ ಪಾಂಡ್ಯ-ನಾಡಿನೊಳಗಿನ ನೊಣಬನ-ಅರಸಿಯಕೆರೆಯ ವಿಭಾಗವನ್ನು ಆಳುತ್ತಿದ್ದಾಗ ಹರಿಯಣ್ಣನ ನಾಯಕತ್ವದಲ್ಲಿ ಮಹಾಜನರಿಗೆ, ಅರಣ್ಯವನ್ನು ನಾಶಪಡಿಸಿ ಹರಿಯ ಸಮುದ್ರ ಗ್ರಾಮವನ್ನು ಸ್ಥಾಪಿಸಿ ಅಲ್ಲಿ ಒಂದು ಕೆರೆಯನ್ನು ಕಟ್ಟಿಸಿದ್ದಕ್ಕಾಗಿ, ಆ ಊರನ್ನು ಶ್ರೋತ್ರಿಯ-ಅಗ್ರಹಾರವಾಗಿ ದಾನ ನೀಡಲಾಯಿತು. ಹೊಸ ಕೆರೆಯ ಕೆಳಗಿನ ಭೂಮಿಗೆ ತೆರಿಗೆ ವಿನಾಯಿತಿ ನೀಡಲಾಯಿತು. ಮಹಾಜನರು ಇತರ ಬ್ರಾಹ್ಮಣರಿಗೆ ತೆರಿಗೆ ರಹಿತ ಭೂಮಿಗಳನ್ನು ದಾನ ನೀಡಿದರು.

ಆ್ಯರಿಎ, 1918-19, ಸಂ. 1918 ರ 283; ಸೌಇಇ, IX ii, ಸಂ. 440.

ರಾಮಘಟ್ಟ

ಸಂ. 394

ಕಲ್ಲೇಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

ಚಾಲುಕ್ಯ ವಿಕ್ರಮ ವರ್ಷ 48, ಶುಭಕೃತ್, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1128, ಡಿಸೆಂಬರ್

ಕನ್ನಡ

ಮಹಾಮಂಡಲೇಶ್ವರ ತ್ರಿಭುವನಮಲ್ಲ-ರಾಯ-ಪಾಂಡ್ಯದೇವನು ನೊಳಂಬವಾಡಿ-32000 ವನ್ನಾಳುತ್ತಿದ್ದಾಗ ಆನೆಯ-ಸಾಹಣಿ ಪಸಾಯಿತ ಕೆಂಗಣನು ರಾಯ ಪಾಂಡ್ಯದೇವನ ಒಪ್ಪಿಗೆ ಪಡೆದು, ತನ್ನ ಹಣದಿಂದ ರಾವಘಟ್ಟದಲ್ಲಿ ಕಟ್ಟಿಸಿದ ದೇವಸ್ಥಾನದಲ್ಲಿ ಬ್ರಾಹ್ಮಣ ಪಾಲಮ (ಅಥವಾ ಹಾಲಮರಸ) ನು ಪ್ರತಿಷ್ಠಾಪಿಸಿದ ರಾಮೇಶ್ವರ ದೇವರ ಸೇವೆಗೆ ವಿಶಾಲವಾದ ಭೂಮಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ರಾವಘಟ್ಟದ ಊರೊಡೆಯ ತಿಕ್ಕಿಮಯ್ಯನು ಹಾಲಮರಸನ ಪಾದ ತೊಳೆದು ದಾನ ನೀಡಿದನು. ಮಹಾಮಂಡಲೇಶ್ವರ ಭಟ್ಟರಸನು ರಾವಘಟ್ಟದಲ್ಲಿ ತನಗೆ ಸಂದಾಯವಾಗಬೇಕಾದ ಹಣದಲ್ಲಿ ಒಂದು ಗದ್ಯಾಣವನ್ನು ದಾನ ನೀಡಿದನು. ರಾವಘಟ್ಟದ ಊರೊಡೆಯರು ಮತ್ತು 60 ಒಕ್ಕಲುಗಳು ಇಂತಹದೆ ದಾನ ನೀಡಿದರು.

ಆ್ಯರಿಎ, 1918-19, ಸಂ. 1918 ರ 287; ಸೌಇಇ, IX i, ಸಂ. 206.

ಸತ್ತೂರು

ಸಂ. 395

ಕಲ್ಲೇಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ (ಸೋಮೇಶ್ವರ I)

ಶಕ 966, ತಾರಣ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1044, ಡಿಸೆಂಬರ್ 24, ಸೋಮವಾರ

ಕನ್ನಡ

ಜಗದೇಕಮಲ್ಲ-ನನ್ನಿ-ನೊಳಂಬ-ಪಲ್ಲವ-ಪೆರ್ಮ್ಮಾಡಿದೇವನು ಕೋಗಳಿ-500, ಕದಂಬಳಿಗೆ-1000, ಬಲ್ಲಕುಂದೆ-300 ಮತ್ತು ಕಣಿಯಕಲ್ಲು-300 ಗಳನ್ನಾಳುತ್ತಿದ್ದಾಗ ಸತ್ತಿಯೂರ ಒಡೆಯ ಸೋವಿಮಯ್ಯ ಮತ್ತು ಮಾಸವಾಡಿ-140 ರ ಮನ್ನೆಯ ಕುಪ್ಪರಸ ಸತ್ತಿಯೂರಿನ ಮಹಾದೇವ ದೇವಸ್ಥಾನಕ್ಕೆ ದೀಪಕ್ಕಾಗಿ ಭೂಮಿ ದಾನ ನೀಡಿ ಅದನ್ನು ದವದಸಿಗನ ಮಗ ಧರ್ಮಶಿವನ ವಶಕ್ಕೆ ಕೊಟ್ಟಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 235; ಸೌಇಇ, IX i, ಸಂ. 99.

ಸಿರಸ್ತಹಳ್ಳಿ

ಸಂ. 396

ಶಂಕರಲಿಂಗ ದೇವಸ್ಥಾನದ ಹತ್ತಿರ ನಿಲ್ಲಿಸಿದ ವೀರಗಲ್ಲಿನ ಮೇಲೆ

ರಾಷ್ಟ್ರಕೂಟ, ಗೋಯಿ[ಂದ]ರ-ವಲ್ಲಭ (ಗೋವಿಂದ IV)

ಶಕ 853 = ಕ್ರಿ.ಶ. 931

ಕನ್ನಡ

ಒಂದು ಗ್ರಾಮದ ಮುತ್ತಿಗೆಯಲ್ಲಿ ಪಡಿಗ-ನೊಂಬ ಎಂಬ ಸೈನಿಕನು ಮರಣ ಹೊಂದಿದ್ದನ್ನು ಮತ್ತು ಆತನ ವಂಶದವರಿಗೆ ನೀರಾವರಿ ಭೂಮಿ ಮತ್ತು ಒಣ ಭೂಮಿಯನ್ನು ಮಾಸೆವಾಡಿ-140 ಮತ್ತು ಕೋಗಳಿ-ನಾಡುಗಳನ್ನಾಳುತ್ತಿದ್ದ ಅಯ್ಯಪ್ಪಯ್ಯನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 297; ಸೌಇಇ, IX i, ಸಂ. 61.

ಸಂ. 397

ಅದೇ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ

ಶಕ 970, ಸರ್ವಧಾರಿ, ಮಾಘ ಶು. 5, ಆದಿತ್ಯವಾರ, ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1050, ಜನವರಿ 11, ಬುಧವಾರ

ಕನ್ನಡ

ಪಲ್ಲವ ವಂಶದ ನರಸಿಂಗದೇವನು ಕೋಗಳಿ-500, ಕದಂಬಳಿಗೆ-1000, ಬಲಕುಂದೆ-300 ಮತ್ತು ಸಿಂದವಾಡಿ-1000 ಗಳನ್ನಾಳುತ್ತಿದ್ದಾಗ ಬೂತಬ್ಬರಸಿಯರ ಕೋಕರಸ ಮತ್ತು ಗ್ರಾಮದ 120 ಮಹಾಜನರು ಪುಟ್ಟಿಯಣ್ಣನ ನಾಯಕತ್ವದಲ್ಲಿ ಸಿರವೆ[ಡೆ]ಯ ಮೂಲಸ್ಥಾನದ ಶಂಕರದೇವರ ಸೇವೆಗೆ ತೇಜೋನಿಧಿ-ಪಂಡಿತನ ಶಿಷ್ಯ ವಿದ್ಯಾನಿಧಿ-ಪಂಡಿತನಿಗೆ ಅಡಕೆಯ ಮರಗಳ ಸಾಲುಗಳುಳ್ಳ ಭೂಮಿಗಳನ್ನು, ಹೂವಿನ ತೋಟ ಮತ್ತು ಒಂದು ಎಣ್ಣೆ ಗಾಣವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 298; ಸೌಇಇ, IX i, ಸಂ. 107.

ಸಂ. 398

ಅದೇ ದೇವಸ್ಥಾನದ ಹತ್ತಿರ ನಿಲ್ಲಿಸಿದ ಇನ್ನೊಂದು ಕಲ್ಲಿನ ಮೇಲೆ

--

ಸುಭಾನು . . . .

ಕನ್ನಡ

ಅಪೂರ್ಣವಾಗಿದೆ. ಇಮ್ಮಡಿ-ನೊಳಂಬನು ಕೋಗಳಿ ಮತ್ತು ಕದಂಬಳಿ ದೇಶಗಳನ್ನು ಆಳುತ್ತಿದ್ದುದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 299.

ಸಂ. 399

ಗ್ರಾಮದಲ್ಲಿ ಲಿಂಗಾಲಯ್ಯ ಬಾವಿಯ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1461, ವಿಕಾರಿ, ಭಾದ್ರಪದ ಶು. 15 = ಕ್ರಿ.ಶ. 1539, ಆಗಸ್ಟ್ 29

ಕನ್ನಡ

ಬಯಕಾರ ರಾಮಪ್ಪಯ್ಯನು ತನ್ನ ಮಗ ಲಿಂಗಾಲಯ್ಯನಿಗೆ ಪುಣ್ಯವಾಗಲೆಂದು ಲಿಂಗಾಲಯ್ಯ ಬಾವಿಯನ್ನು ಕಟ್ಟಿಸಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 300.

ಸಂ. 400

ಅದೇ ಕಲ್ಲಿನ ಮೇಲೆ

--

ಶಕ 1461, ವಿಕಾರಿ ನಭಸ್ = ಕ್ರಿ.ಶ. 1539

ಸಂಸ್ಕೃತ ಮತ್ತು ಕನ್ನಡ

ಅಚ್ಯುತದೇವರಾಯನಿಂದ ಕೊಂಡವೀಡು ದೇಶವನ್ನು ಪಡೆದುಕೊಂಡ ರಾಮಯ ಮಂತ್ರಿಯ ವಂಶಾವಳಿಯನ್ನು ಕೊಡುತ್ತದೆ. ದೇವಸ್ಥಾನಗಳನ್ನು, ಬಾವಿಗಳನ್ನು ಕಟ್ಟಿಸುವುದು ಮುಂತಾದ ಆತನ ಅನೇಕ ಧರ್ಮಕಾರ್ಯಗಳನ್ನು ನಮೂದಿಸಲಾಗಿದೆ.

ಆ್ಯರಿಎ, 1918-19, ಸಂ. 1918 ರ 301.

ಶ್ರೀನಿವಾಸಪುರ
(ಅಣಜಿಗೇರಿಯ ಉಪಗ್ರಾಮ)

ಸಂ. 401

ಈಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲದೇವ

ಪ್ರಭವ, ಕಾರ್ತಿಕ, ಅಮವಾಸೆ, ಸೋಮವಾರ, ಸೂರ್ಯ-ಗ್ರಹಣ = ಕ್ರಿ.ಶ. 1147, ಅಕ್ಟೋಬರ್ 28, ರವಿವಾರ (ಕಾರ್ತಿಕವಲ್ಲ ಆಶ್ವಿನ)

ಕನ್ನಡ

ತುಂಬ ಹಾಳಾಗಿದೆ. ಜಗದೇಕಮಲ್ಲ-ವೀರ-ಪಾಂಡ್ಯದೇವನು ಕೂಚಿಗೋಳದ ಆಯ್ತೇಶ್ವರ ದೇವರ ನೈವೇದ್ಯ ಮತ್ತು ಪೂಜೆಗೆ, ಮತ್ತು ಬ್ರಾಹ್ಮಣರ ಮತ್ತು ತಪೋಧನರ ಆಹಾರದಾನಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಆದಿತ್ಯ-ಸಾಹಣಿ, ವಿಭು-ಪಲ್ಲವ, ಆತನ ಸಹೋದರ ಬಮ್ಮ-ಗಾವುಂಡ ಮತ್ತು ಕುಡುಗಲಜೀಯರ ಉಲ್ಲೇಖವಿದೆ. ಕೂಚಿಗೋಳವನ್ನು ಉಚ್ಚಂಗಿಯ ತಿಲಕವೆಂದು ವರ್ಣಿಸಲಾಗಿದೆ.

ಆ್ಯರಿಎ, 1918-19, ಸಂ. 1918 ರ 282; ಸೌಇಇ, IX i, ಸಂ. 247.

ತಲವಾಗಲು
(ಗುಂಡಗತ್ತಿಯ ಉಪಗ್ರಾಮ)

ಸಂ. 402

ಭಾಗ್ಯೇಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲದೇವ

ಶಕ 956, ಭವ, ಪುಷ್ಯ ಶು. 1[2*], ಬುಧವಾರ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1034, ಡಿಸೆಂಬರ್ 2, ಬುಧವಾರ

ಕನ್ನಡ

ನೊಳಂಬವಾಡಿ-32000, ಕದಂಬಳಿಗೆ-1000, ಕೋಗಳಿ-500, ಬಲ್ಲಕುಂದೆ-300, ಕುಡಿಹರಗೆ-70 ಮತ್ತು ಕರಿವಿಡಿ-30 ಗಳನ್ನಾಳುತ್ತಿದ್ದ ಜಗದೇಕಮಲ್ಲ ಉದಯಾದಿತ್ಯದೇವ-ನೊಳಂಬ-ಪಲ್ಲವ-ಪೆರ್ಮಾನಡಿಯು ತಲವಗೆಯ ಭೋಗೇಶ್ವರ ದೇವರ ನೈವೇದ್ಯ ಮತ್ತು ಇತರ ಅವಶ್ಯಕತೆಗಳಿಗೆ ಮತ್ತು ಪೂಜಾರಿಗಳ, ವಾದ್ಯದವರ ಮತ್ತು ಕಲುಕುಟಿಗರ ನಿರ್ವಹಣೆಗೆ ಭೂಮಿಗಳನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 253; ಸೌಇಇ, IX i, ಸಂ. 87.

ಸಂ. 403

ಅದೇ ದೇವಸ್ಥಾನದ ಹತ್ತಿರ ನಿಲ್ಲಿಸಿದ ಅದೇ ಕಲ್ಲಿನ ಮೇಲೆ

--

ಶ್ರೀಮುಖ, ಚೈತ್ರ ಶು. 8, ಸೋಮವಾರ = ಕ್ರಿ.ಶ. 1093, ಮಾರ್ಚ್ 7, ಸೋಮವಾರ

ಕನ್ನಡ

ಭೋಗೇಶ್ವರ ದೇವಸ್ಥಾನದ ಸ್ಥಾನಿಕನು ಮರಣ ಹೊಂದಿದ ನಂತರ ಚಿಕ್ಕಗೌಡ, ನೇಮಗೌಡ, ಅರವತ್ತು ಕುಟುಂಬಗಳು ಮತ್ತು ಹನ್ನೆರಡು ಹಿಟ್ಟುಗಳು ಪೂಜಾರಿ ನಾಗಯ್ಯನನ್ನು ಆತನ ಸ್ಥಳದಲ್ಲಿ ನೇಮಿಸಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 254; ಸೌಇಇ, IX i, ಸಂ. 86.

ತೆಲಿಗಿ

ಸಂ. 404

ಗ್ರಾಮದಲ್ಲಿ ಒಂದು ಖಾಸಗಿ ಮನೆಯಲ್ಲಿಯ ಕಲ್ಲಿನ ಮೇಲೆ

--

ಶಕ 1253, ಪರಿಧಾವಿ, ಮಾಘ ಶು. 5 = ಕ್ರಿ.ಶ. 1331, ಜನವರಿ 3 (ಪ್ರಜಾಪತಿ)

ಕನ್ನಡ

ತೆಲಿಗಿ-ದುಗ್ಗತಿನಾಡಿನ ಇಬ್ಬರು ವ್ಯಕ್ತಿಗಳು ಒಬ್ಬ ಚರಂತಿ (ಜಂಗಮ ಶಿಷ್ಯ)ಗೆ ಭೂಮಿ ದಾನ ನೀಡಿದ್ದನ್ನು ದಾಖಲಿಸುತ್ತದೆ. ಕಲ್ಬುರಿಗಿ, ನಗರ ಮತ್ತು ಆನೆಗೊಂದಿ ಪಟ್ಟಣಗಳ ಉಲ್ಲೇಖವಿದೆ. ಶಾಸನದ ಲಿಪಿಯು ತಿಳಿಸಿದ ಕಾಲಕ್ಕಿಂತ ತುಂಬ ಇತ್ತೀಚಿನದ್ದಾಗಿದೆ.

ಆ್ಯರಿಎ, 1918-19, ಸಂ. 1918 ರ 227.

ಸಂ. 405

ಹರಿಹರೇಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ-ಜಯಸಿಂಘದೇವ (II)

ಶಕ 952, ಪ್ರಮೋದೂತ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1032

ಕನ್ನಡ

ಹಾಳಾಗಿದೆ. ಜಗದೇಕಮಲ್ಲ-ನೊಳಂಬ-ಪಲ್ಲವ-ಪೆರ್ಮಾನಡಿಯು ನೊಳಂಬವಾಡಿ-32000, ಕೋಗಳಿ-500, ಬಲ್ಲಕುಂದೆ-300, ಕಂದಿಪರವಿ-70 ಮತ್ತು ಕರಿವಿಡಿ-30 ಗಳನ್ನಾಳುತ್ತಿದ್ದಾಗ ತೆಲಗಿಯ ಊರೊಡೆಯ ಕಣ್ಣಮಯ್ಯನು ಕೂಡಲೂರಿನ ಶಂಕರನಾರಾಯಣ ದೇವರ ಸಾನಿಧ್ಯದಲ್ಲಿ ಕುರಿಗೋಡ(ಗೌಡ)ನಿಗೆ ಗದ್ದೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 228; ಸೌಇಇ, IX i, ಸಂ. 85.

ತುಂಬಿಗೆರೆ

ಸಂ. 406

ಈಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, --

--

ಕನ್ನಡ

ಜಗದೇಕಮಲ್ಲ-ನಿರ್ಮ್ಮಡಿ-ನೊಳಂಬ-ಪಲ್ಲವ-ಪೆರ್ಮಾನಡಿಯು ತನ್ನ ಊರು ಗಂಗತಿಯಿಂದ ಕೋಗಳಿ-500, ಕರಿವಿಡಿ-30 ಮುಂತಾದವುಗಳನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಪೆರ್ಗಡೆ ಚಂದಿಮಯ್ಯ-ನಾಯಕನು ಬಿಕ್ಕಿಗ-70 ರೊಳಗಿನ ತುಂಬಿಗೆರೆಯ ಮೂಲಸ್ಥಾನದೇವರ ದೇವಸ್ಥಾನದ ನೈವೇದ್ಯಕ್ಕೆ ಮತ್ತು ಅದೇ ಸ್ಥಳದ ಮಠದ ತಪೋಧನರಿಗೆ ಭೂಮಿ ದಾನ ನೀಡಿದನು.

ಆ್ಯರಿಎ, 1918-19, ಸಂ. 1918 ರ 230; ಸೌಇಇ, IX i, ಸಂ. 96.

ಸಂ. 407

ಅದೇ ಕಲ್ಲಿನ ಮೇಲೆ

--

ಚಾಲುಕ್ಯ ವಿಕ್ರಮ ವರ್ಷ 6, ದುರ್ಮತಿ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1081, ಡಿಸೆಂಬರ್ 24, ಶುಕ್ರವಾರ

ಕನ್ನಡ

ಮಾಚಿ-ಸೆಟ್ಟಿಯ ಮಗ ಚಟ್ಟಯ್ಯ-ನಾಯಕ, ದಂಡನಾಯಕ ಮೇಳಮಯ್ಯ ಮತ್ತು ಇತರರು ದೇವರ ಮುಂದೆ ದೀಪ ಉರಿಸಲು ಸುಂಕದ ಒಂದು ಭಾಗವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 230-ಎ; ಸೌಇಇ, IX i, ಸಂ. 149.

ಸಂ. 408

ಅದೇ ದೇವಸ್ಥಾನದ ಹತ್ತಿರ ನಿಲ್ಲಿಸಿದ ವೀರಗಲ್ಲಿನ ಮೇಲೆ

--

ಕಾಳಯುಕ್ತಿ, ಶ್ರಾವಣ ಬ. 1, ಬುಧವಾರ

ಕನ್ನಡ

ಈ ವೀರ-ಭೂಮಿ (ವೀರಗೈ)ಯನ್ನು ಕುರುಳನ ನೆನಪಿಗಾಗಿ ಮಹಾಪ್ರಧಾನ ಮತ್ತು ಸರ್ವಾಧಿಕಾರಿ ಕಲಿದೇವರಸನ ಅಧಿಕಾರಿ ಸಂಕರಸ ಮತ್ತು ಎಲ್ಲ ನಿವಾಸಿಗಳು ದಾನ ನೀಡಿದರೆಂದು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 231.

ಉಚ್ಚಂಗಿದುರ್ಗ

ಸಂ. 409

ಗ್ರಾಮದ ಉತ್ತರಕ್ಕೆ ಒಂದು ಹೊಲದಲ್ಲಿ ಬಿದ್ದಿರುವ ವೀರಗಲ್ಲಿನ ಮೇಲೆ

--

--

ಕನ್ನಡ

ತ್ರುಟಿತ. ಉಚ್ಚಂಗಿದುರ್ಗದ ಕೋಟೆಯ ಮೇಲೆ ನಡೆದ ದಾಳಿ ಮತ್ತು ಯಾದವ ವಂಶದ ಮಾದವನ ಮರಣ ಮತ್ತು ಬಲ್ಲಹನ ಮಹಾಸಾಮಂತನ ಉಲ್ಲೇಖವಿದೆ. ಕಾಂಚೀಪುರಿಯ ಉಲ್ಲೇಖವೂ ಇದೆ.

ಆ್ಯರಿಎ, 1918-19, ಸಂ. 1918 ರ 231.

ಸಂ. 410

ಗ್ರಾಮದ ಉತ್ತರಕ್ಕೆ ಧ್ವಜಸ್ತಂಭದ ಪೀಠದ ಮೇಲೆ

--

ಶಕ 1630, ಸರ್ವಧಾರಿ, ಶ್ರಾವಣ ಶು.. = ಕ್ರಿ.ಶ. 1704, ಜುಲೈ-ಆಗಸ್ಟ್

ಕನ್ನಡ

ತಂಬರಹಳ್ಳಿಯ ಸುರೆರಾಯ ಹಿರಿಯಣ್ಣನು ಉಚ್ಚಂಗಮ್ಮನಿಗೆ ಈ ದೀಪಸ್ತಂಭವನ್ನು ನಿಲ್ಲಿಸಿದನೆಂದು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 285.

ಸಂ. 411

ತವಕೇಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ (ಆಹವಮಲ್ಲದೇವ)

ಶಕ 986, ಕ್ರೋಧಿ, ಚೈತ್ರ, ಪೌರ್ಣಮಾಸಿ, ಆದಿತ್ಯವಾರ = ಕ್ರಿ.ಶ. 1064, ಏಪ್ರಿಲ್ 4, ಆದಿತ್ಯವಾರ

ಕನ್ನಡ

ಅರಸನ ಪುತ್ರ ವೆಂಗಿಮಂಡಲೇಶ್ವರ ವಿಷ್ಣುವರ್ಧನ-ಮಹಾರಾಜ ವಿಜಯಾದಿತ್ಯನು ನೊಳಂಬವಾಡಿ-32000 ವನ್ನಾಳುತ್ತಿದ್ದನೆಂದು ತಿಳಿಸುತ್ತದೆ. ದಂಡನಾಯಕ ಮೂಕರಾಜನ ವಿನಂತಿಯ ಮೇರೆಗೆ ಬಿಜ್ಜಳದೇವನು ಗಳಗೇಶ್ವರ ದೇವರ ಸೇವೆಗೆ ಉಚ್ಚಂಗಿ ಕೋಟೆಯಲ್ಲಿ ಭೂಮಿಯನ್ನು ಕಳೇಶ್ವರ-ಪಂಡಿತನ ಪಾದ ತೊಳೆದು ದಾನ ನೀಡಿದ್ದನ್ನು ತಿಳಿಸುತ್ತದೆ. ಉಚ್ಚಂಗಿ ಬೆಟ್ಟದ ದಂತಕಥೆ ಮತ್ತು ಬೆಟ್ಟದ ಪೂರ್ವಕ್ಕೆ ಕಲಿದೇವರು ಉದ್ಭವಿಸಿದ್ದನ್ನೂ ತಿಳಿಸುತ್ತದೆ. ದೇವಪಯ್ಯನು ಉಚ್ಚಂಗಿ-30ನ್ನಾಳುತ್ತಿದ್ದಾಗ ಆತನು ದೇವಸ್ಥಾನದ ಅಧಿಷ್ಠಾನ ಮತ್ತು ಒಂದು ಬಾವಿ ಕಟ್ಟಿಸಿದ್ದನ್ನು ಮತ್ತು ದಂಡನಾಯಕರುಗಳಾದ ನಾಗದೇವಯ್ಯ, ಎರಕಪಯ್ಯ, ಮಾರಮಯ್ಯ ಮತ್ತು ಸಂಧಿವಿಗ್ರಹಿ ಕಾಳಿದಾಸ-ಭಟ್ಟರು ಅರಸನ ಒಪ್ಪಿಗೆ ಪಡೆದು ಕಲಿದೇವರ ಸೇವೆಗೆ ರಾವಿಘಟ್ಟವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 286; ಸೌಇಇ, IX i, ಸಂ. 126.

ಸಂ. 412

ಗ್ರಾಮದ ಒಂದು ಹೊಲದಲ್ಲಿಯ ಕಲ್ಲಿನ ಮೇಲೆ

--, ತ್ರೈಲೋಕ್ಯಮಲ್ಲ-ನೊಳಂಬ-ಪಲ್ಲವ-ಪೆರ್ಮಾಡಿ ಜಯಸಿಂಘದೇವ

ಶಕ 99[2], ಸಾಧಾರಣ, ಶ್ರಾವಣ ಶು. ಪಾಡಿವ = ಕ್ರಿ.ಶ. 1070, ಜುಲೈ 11

ಕನ್ನಡ

ಹಾಳಾಗಿದೆ. ಅರಸನು ಉಚ್ಚಂಗಿ ಕೋಟೆಯ ಮೇಲಿನ ತ್ರೈಲೇಶ್ವರ ದೇವರಿಗೆ ಗಂಟಿನಕೆರೆ ಗ್ರಾಮವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1898-99, ಸಂ. 1899 ರ 135; ಸೌಇಇ, VI, ಸಂ. 571.

ಸಂ. 413

ಗ್ರಾಮದಲ್ಲಿ ಬಡಗೇರಮಟ್ಟ ದಿನ್ನೆಯ ಮೇಲಿನ ಒಂದು ಕಲ್ಲಿನ ಮೇಲೆ

ಪಾಂಡ್ಯ, ವಿಜಯಪಾಂಡ್ಯದೇವ

ಶಕ 1087, ಪಾರ್ಥಿವ, ಆಷಾಢ, ಪುಣ್ಣಮಿ, ಸೋಮಗ್ರಹಣ, ವ್ಯತಿಪಾತ = ಕ್ರಿ.ಶ. 1165

ಕನ್ನಡ

ದೇವರಿಗೆ (ಹೆಸರು ಹಾಳಾಗಿದೆ) ಭೂಮಿ ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1898-99, ಸಂ. 1899 ರ 136; ಸೌಇಇ, VI, ಸಂ. 572.

ಸಂ. 414

ಗ್ರಾಮದಲ್ಲಿ ಚಿಕ್ಕಹೊಂಡದ ಹತ್ತಿರದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಭುವನೈಕಮಲ್ಲ

--

ಕನ್ನಡ

ಹಾಳಾಗಿದೆ. ಭೂಮಿ ದಾನದ ಬಗ್ಗೆ ತಿಳಿಸುತ್ತದೆ ಮತ್ತು ಅರಸನ ಕಿರಿಯ ಸಹೋದರನನ್ನು (ಹೆಸರು ಹಾಳಾಗಿದೆ) ಉಲ್ಲೇಖಿಸುತ್ತದೆ.

ಆ್ಯರಿಎ, 1898-99, ಸಂ. 1899 ರ 137; ಸೌಇಇ, VI, ಸಂ. 573.

ಸಂ. 415

ಅದೇ ಹೊಂಡದ ಹತ್ತಿರ ಶಿಥಿಲವಾದ ಶಿವ ದೇವಸ್ಥಾನದ ಹತ್ತಿರ ಒಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯ(ಮಲ್ಲ)

ಶಕ 98[6], ಕ್ರೋಧಿನ್ = ಕ್ರಿ.ಶ. 1064

ಕನ್ನಡ

ತ್ರೈಲೋಕ್ಯ-ನಕರೇಶ್ವರ ದೇವರಿಗೆ ಭೂಮಿ ದಾನ ನೀಡಿದ್ದನ್ನು ದಾಖಲಿಸುತ್ತದೆ. ವಿಷ್ಣುವರ್ಧನ ವಿಜಯಾದಿತ್ಯನು ನೊಳಂಬವಾಡಿ-32000 ವನ್ನಾಳುತ್ತಿದ್ದನೆಂದು ತಿಳಿಸುತ್ತದೆ.

ಆ್ಯರಿಎ, 1898-99, ಸಂ. 1899 ರ 138; ಸೌಇಇ, VI, ಸಂ. 574.

ಸಂ. 416

ಅದೇ ಹೊಂಡದ ಹತ್ತಿರ ಶಿಥಿಲವಾದ ಶಿವ ದೇವಸ್ಥಾನದ ಆವರಣದಲ್ಲಿಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲ

ಶಕ 986, ಕ್ರೋಧಿನ್, ಚೈತ್ರ ಪುಣ್ಣಮೆ, ಆದಿತ್ಯವಾರ, ವನಪರ್ವ = ಕ್ರಿ.ಶ. 1064, ಏಪ್ರಿಲ್ 4, ಆದಿತ್ಯವಾರ

ಕನ್ನಡ

ಮಹಾಮಂಡಲೇಶ್ವರ ಬಿಜ್ಜಳನ ಒಪ್ಪಿಗೆಯೊಂದಿಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ ಮತ್ತು ರಾಜಕುಮಾರ ವಿಷ್ಣುವರ್ಧನ-ವಿಜಯಾದಿತ್ಯನನ್ನು ಉಲ್ಲೇಖಿಸುತ್ತದೆ.

ಆ್ಯರಿಎ, 1898-99, ಸಂ. 1899 ರ 139; ಸೌಇಇ, VI, ಸಂ. 576.

ಯರಬಾಳು

ಸಂ. 417

ಕಲ್ಲೇಶ್ವರ ದೇವಸ್ಥಾನದ ಹತ್ತಿರ ನಿಲ್ಲಿಸಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

ಚಾಲುಕ್ಯ ವಿಕ್ರಮ ವರ್ಷ 47, ಶುಭಕೃತ್, [ಪು]ಷ್ಯ ಶು. 7, ವಡ್ಡವಾರ, ಉತ್ತರಾಯಣ-ಸಂಕ್ರಾಂತಿ, ವ್ಯತಿಪಾತ = ಕ್ರಿ.ಶ. 1122, ಡಿಸೆಂಬರ್ 7, ಗುರುವಾರ (ಉತ್ತರಾಯಣ ಸಂಕ್ರಾಂತಿ ದಿವಸ ಡಿಸೆಂಬರ್ 25, ಸೋಮವಾರ)

ಕನ್ನಡ

ರತ್ನಾಪುರದ ಅರಸನನ್ನು ಅರಸನ ಆಜ್ಞೆಯ ಮೇರೆಗೆ ಸೋಲಿಸಿದ ಸಾಮಂತ ಪಾಂಡ್ಯದೇವನು ನೊಳಂಬವಾಡಿ-32000 ವನ್ನಾಳುತ್ತಿದ್ದುದನ್ನು ತಿಳಿಸುತ್ತದೆ. ಮಾಚಬೋವ ಮತ್ತು ಸಿಂಗಬೋವರು ಮಹಾದೇವ ದೇವರಿಗೆ ಭೂಮಿದಾನ ನೀಡಿದರು. ಆಸ್ಕಂದದೇವನು ಶಾಸನವನ್ನು ಬರೆದನು ಮತ್ತು ಕೇತೋಜನು ಕಂಡರಿಸಿದನು.

ಆ್ಯರಿಎ, 1918-19, ಸಂ. 1918 ರ 245; ಸೌಇಇ, IX i, ಸಂ. 205.

ಹೊಸಪೇಟೆ ತಾಲೂಕು

ಚಿಕ್ಕಜಾಯಿಗನೂರು

ಸಂ. 418

ಗ್ರಾಮದ ನೈಋತ್ಯಕ್ಕೆ ಕಲ್ಲುಗುಡಿಯ ಮುಂದಿನ ಕಲ್ಲಿನ ಮೇಲೆ

--

ಶಕ 1444, ಸ್ವಭಾನು, ಕಾರ್ತಿಕ ಶು. 15 = ಕ್ರಿ.ಶ. 1523, ಅಕ್ಟೋಬರ್ 24 (ಶಕ 1445)

ಕನ್ನಡ

ವಿರೂಪಾಕ್ಷ-ಭಟ್ಟನ ಮಗ ಲಕ್ಷ್ಮೀನಾಥ-ದೀಕ್ಷಿತನು ಒಂದು ಕಾಲುವೆಯನ್ನು ತೋಡಿಸಿ ಅದರ ಹತ್ತಿರ ವಿರೂಪಾಕ್ಷ ದೇವರ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದನ್ನು ಮತ್ತು ಕಾಲುವೆಯ ಕೆಳಗಿನ ಭೂಮಿಯನ್ನು ದೇವರ ಸೇವೆಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 725.

ಚಿಲಕನಹಟ್ಟಿ

ಸಂ. 419

ಮಾರುತಿ ಕೆರೆಯ ಹತ್ತಿರದ ಮಾರುತಿ ದೇವಸ್ಥಾನದಲ್ಲಿಯ ಕಲ್ಲಿನ ಮೇಲೆ

--

ಶಕ 1461 = ಕ್ರಿ.ಶ. 1539

ಕನ್ನಡ

ಬಯಕಾರ ರಾಮಪ್ಪನು ಒಂದು ಮಂಟಪ, ಒಂದು ಬಾವಿ-ಅರವಟ್ಟಿಗೆ ಕಟ್ಟಿಸಿ, ತನ್ನ ಮಗ ಲಕ್ಕರಸಯ್ಯನಿಗೆ ಪುಣ್ಯವಾಗಲೆಂದು ಲಕ್ಷ್ಮೀ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ.

ಡಬ್ಲ್ಯೂ.ವಿ.ಎಸ್. ನರಸಿಂಹಮ್, ''ಬಯಕಾರ ರಾಮಪ್ಪನ ವಂಶಾವಳಿ ಮತ್ತು ಧರ್ಮಕಾರ್ಯಗಳು'' 1996ರಲ್ಲಿ ಹಂಪಿಯಲ್ಲಿ ನಡೆದ ವಿಜಯನಗರ ಇತಿಹಾಸ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.

ಸಂ. 420

ಶ್ರೀ ಕನಕಪ್ಪನ ಹೊಲದಲ್ಲಿಯ ಕಲ್ಲಿನ ಮೇಲೆ

--

16ನೆಯ ಶತಮಾನ

ಕನ್ನಡ

ಬಯಕಾರ ರಾಮಪ್ಪನು ಒಬ್ಬರ ಹೆಸರಿನಲ್ಲಿ (ಹೆಸರು ತಿಳಿಸಿಲ್ಲ) ಕೌಸು ಹಾಕಿಸಿದನೆಂದು ತಿಳಿಸುತ್ತದೆ.

ಡಬ್ಲ್ಯೂ.ವಿ.ಎಸ್. ನರಸಿಂಹಮ್, ''ಬಯಕಾರ ರಾಮಪ್ಪನ ವಂಶಾವಳಿ ಮತ್ತು ಧರ್ಮಕಾರ್ಯಗಳು'', 1996ರಲ್ಲಿ ಹಂಪಿಯಲ್ಲಿ ನಡೆದ ವಿಜಯನಗರ ಇತಿಹಾಸ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.

ದಣಾಯಕನಕೆರೆ

ಸಂ. 421

ಗ್ರಾಮದಲ್ಲಿ ಪಾಳುಬಿದ್ದ ಕೋಟೆಯ ಎದುರಿಗೆ ಒಂದು ಬಂಡೆಯ ಮೇಲೆ

--

ಶಕ 1471, ಸೌಮ್ಯ, ಪುಷ್ಯ . . ಏಕಾದಶಿ, ಸೋಮವಾರ = ಕ್ರಿ.ಶ. 1549, ಡಿಸೆಂಬರ್ 30, ಸೋಮವಾರ ಅಥವಾ ಕ್ರಿ.ಶ. 1550, ಜನವರಿ 30, ಸೋಮವಾರ

ಕನ್ನಡ

ತಿಪಿನಾಯಕನ ಮಗ ಹನುಮಂತನಾಯಕನು ತನ್ನ ತಳವಾರನ ಕೈಯಲ್ಲಿ ಮರಣಹೊಂದಿದ್ದನ್ನು ದಾಖಲಿಸುವಂತೆ ತೋರುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 752.

ಗರಗ

ಸಂ. 422

ಗರಗದ ಹತ್ತಿರ ಪಾಳುಬಿದ್ದ ಗ್ರಾಮದ ಹೊಲದಲ್ಲಿ ಬಿದ್ದಿರುವ ಒಂದು ಕಲ್ಲಿನ ಮೇಲೆ

--

ಕೀಲಕ, ವೈಶಾಖ ಬ. 12

ಕನ್ನಡ

ನಂದಿಹಳ್ಳಿಯ ಬಸೆಟ್ಟಿಯ ಮಗ ನಾಗಪಣ್ಣನು ಗ್ರಾಮದ ಅನುಕೂಲಕ್ಕೆ ಬಾವಿ ಕಟ್ಟಿಸಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 753.

ಗೋನಹಾಳು

ಸಂ. 423

ಶಿವ ದೇವಸ್ಥಾನದ ಮುಂದೆ ಬಿದ್ದಿರುವ ಒಡೆದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ವಿಕ್ರಮಾದಿತ್ಯ (V)

ಶಕ 936, ಶ್ರಾವಣ = ಕ್ರಿ.ಶ. 1014

ಕನ್ನಡ

ತ್ರುಟಿತವಾಗಿದೆ ಮತ್ತು ಹಾಳಾಗಿದೆ. ಪಲ್ಲವ ವಂಶಕ್ಕೆ ಸೇರಿದ ಮತ್ತು ಅರಸನ ಸಾಮಂತನಾದ ಇರಿವ-ನೊಳಂಬಾಧಿರಾಜನ ರಾಣಿಯು ಕೆಲವು ತೆರಿಗೆ (ಪನ್ನಸು)ಗಳನ್ನು ಪಂಪಾದಲ್ಲಿರುವ ಮಹಾಕಾಳದೇವರಿಗೆ ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 722; ಸೌಇಇ, IX i, ಸಂ. 79.

ಸಂ. 424

ಅದೇ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

--

ಆಧುನಿಕ ಲಿಪಿ

ಕನ್ನಡ

ವಿರೂಪಾಕ್ಷ ದೇವರಿಗೆ ಸೇರಿದ ಗೋಣಹಾಳು ಗ್ರಾಮದ ದುರುಪಯೋಗದ ಬಗ್ಗೆ ಎಚ್ಚರಿಕೆ ಇದೆ.

ಆ್ಯರಿಸೌಇಎ, 1922-23, ಸಂ. 1922 ರ 723.

ಗುಡಿಓಬಳಾಪುರ

ಸಂ. 425

ಕಾಲುವೆಯ ಹತ್ತಿರ ಹೊಲದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

--

--

ತೆಲುಗು (ನಾಗರಿ)

ತ್ರುಟಿತವಾಗಿದೆ ಮತ್ತು ಹಾಳಾಗಿದೆ. ನರಸಿಂಹ-ಮಹಾರಾಯಲು ಮತ್ತು ವಿರೂಪಾಕ್ಷ ದೇವರ ಸನ್ನಿಧಿಯ ಉಲ್ಲೇಖವಿದೆ. ಸೂರ್ಯಗ್ರಹಣದ ಉಲ್ಲೇಖವೂ ಇದೆ.

ಆ್ಯರಿಸೌಇಎ, 1922-23, ಸಂ. 1922 ರ 693.

ಹಂಪದೇವನಹಳ್ಳಿ

ಸಂ. 426

ಹನುಮಂತರಾಯ ದೇವಸ್ಥಾನದ ಮುಂದೆ ನಿಲ್ಲಿಸಿದ ಒಡೆದ ಕಲ್ಲಿನ ಎರಡು ತುಂಡುಗಳ ಮೇಲೆ

ವಿಜಯನಗರ, ಕೃಷ್ಣರಾಯ-ಮಹಾರಾಯ

ಶಕ 1433, ಪ್ರಜಾಪತಿ, ಚೈತ್ರ ಶು. 13, ಬುಧವಾರ = ಕ್ರಿ.ಶ. 1511, ಮಾರ್ಚ್ 12, ಬುಧವಾರ

ಕನ್ನಡ

ಅರಸನು ನಾರಿ-ಸೀಮೆಯಲ್ಲಿರುವ ಕೃಷ್ಣರಾಯಪುರ ಎಂಬ ಉಪನಾಮವುಳ್ಳ ಹಂಪದೇವನಹಳ್ಳಿಯನ್ನು 105 ವೃತ್ತಿಗಳ ಅಗ್ರಹಾರವನ್ನಾಗಿ ಮಾಡಿ ವಿದ್ವಾಂಸ ಬ್ರಾಹ್ಮಣರಿಗೆ ತುಂಗಭದ್ರ ನದಿಯ ದಂಡೆಯಲ್ಲಿರುವ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ದಾನ ನೀಡಿದ್ದನ್ನು ತಿಳಿಸುತ್ತದೆ. ಈ ದಾನಕ್ಕೆ ಸಂಬಂಧಿಸಿದ ತಾಮ್ರ ಶಾಸನವನ್ನೂ ಬರೆಸಲಾಯಿತು.

ಆ್ಯರಿಸೌಇಎ, 1922-23, ಸಂ. 1922 ರ 724; ಸೌಇಇ, IX ii, ಸಂ. 484.

ಹಾರವನಹಳ್ಳಿ

ಸಂ. 427

ಮಾರುತಿಕೆರೆಯ ದಂಡೆಯ ಮೇಲೆ ಬಿದ್ದಿರುವ ಕಲ್ಲಿನ ಮೇಲೆ

--

16ನೆಯ ಶತಮಾನ

ಸಂಸ್ಕೃತ, ಕನ್ನಡ

ಬಯಕಾರ ರಾಮಪ್ಪನ ವಂಶಾವಳಿ ಮತ್ತು ದಾನ ಧರ್ಮಗಳನ್ನು (ಬೇರೆ ಶಾಸನಗಳಲ್ಲಿರುವಂತೆ) ದಾಖಲಿಸುತ್ತದೆ.

ಇದ, 11, ಪು. 124-125.

ಸಂ. 428

ಕದರಿಮಲೆಕುಂಟೆ ಎಂಬ ಸ್ಥಳದಲ್ಲಿರುವ ದೇವಸ್ಥಾನದ ಹತ್ತಿರದ ಕಲ್ಲಿನ ಮೇಲೆ

--

ಶಕ 1481 = ಕ್ರಿ.ಶ. 1559

ಕನ್ನಡ

ಬಯಕಾರ ರಾಮಪ್ಪನನ್ನು ಉಲ್ಲೇಖಿಸುತ್ತದೆ ಮತ್ತು ಬಾವಿ ಮತ್ತು ಅರವಂಟಿಗೆಗಳನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ.

ಡಬ್ಲ್ಯೂ.ವಿ.ಎಸ್. ನರಸಿಂಹಮ್, ''ಬಯಕಾರ ರಾಮಪ್ಪನ ವಂಶಾವಳಿ ಮತ್ತು ಧರ್ಮಕಾರ್ಯಗಳು'', 1996ರಲ್ಲಿ ಹಂಪಿಯಲ್ಲಿ ನಡೆದ ವಿಜಯನಗರ ಇತಿಹಾಸ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.

ಸಂ. 429

ವೀರಭದ್ರ ದೇವಸ್ಥಾನದಲ್ಲಿಯ ಕಲ್ಲಿನ ಮೇಲೆ

--

ಶಕ 1461 = ಕ್ರಿ.ಶ. 1539

ಕನ್ನಡ

ಬಯಕಾರ ರಾಮಪ್ಪನ ಉಲ್ಲೇಖವಿದೆ ಮತ್ತು ಮಂಟಪ, ಬಾವಿ ಮತ್ತು ಅರವಂಟಿಗೆಗಳನ್ನು ಕಟ್ಟಿಸಿದ ದಾಖಲೆಯಿದೆ.

ಡಬ್ಲ್ಯೂ.ವಿ.ಎಸ್. ನರಸಿಂಹಮ್, ''ಬಯಕಾರ ರಾಮಪ್ಪನ ವಂಶಾವಳಿ ಮತ್ತು ಧರ್ಮಕಾರ್ಯಗಳು'', 1996ರಲ್ಲಿ ಹಂಪಿಯಲ್ಲಿ ನಡೆದ ವಿಜಯನಗರ ಇತಿಹಾಸ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.

ಸಂ. 430

ಒಂದು ಹೊಲದಲ್ಲಿಯ ದುರ್ಗಮ್ಮ ದೇವಸ್ಥಾನದ ಹಿಂಭಾಗದಲ್ಲಿಯ ಕಲ್ಲಿನ ಮೇಲೆ

--

ಶಕ 1481 = ಕ್ರಿ.ಶ. 1559

ಕನ್ನಡ

ಬಯಕಾರ ರಾಮಪ್ಪನ ಮಗ ಕುಮಾರ ಲಿಂಗಾಲಯ್ಯನು ಒಂದು ಮಂಟಪ ಮತ್ತು ಬಾವಿ-ಅರವಂಟಿಗೆ ಕಟ್ಟಿಸಿ ಬಸವೇಶ್ವರನ ವಿಗ್ರಹ ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ.

ಡಬ್ಲ್ಯೂ.ವಿ.ಎಸ್. ನರಸಿಂಹಮ್, ''ಬಯಕಾರ ರಾಮಪ್ಪನ ವಂಶಾವಳಿ ಮತ್ತು ಧರ್ಮಕಾರ್ಯಗಳು'', 1996ರಲ್ಲಿ ಹಂಪಿಯಲ್ಲಿ ನಡೆದ ವಿಜಯನಗರ ಇತಿಹಾಸ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.

ಹೊಸೂರು

ಸಂ. 431

ಹೊಸೂರಮ್ಮ ದೇವಸ್ಥಾನದ ಬಲಗಡೆಯ ದ್ವಾರಪಾಲ ವಿಗ್ರಹದ ಪಕ್ಕದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

--

ಶಕ 1 . . 5, ವಿಜಯ, ಶ್ರಾವಣ ಬ. 10

ಸಂಸ್ಕೃತ ಮತ್ತು ಕನ್ನಡ

ಮಾದಿನಾಯಕನು ಹೊಸೂರಿನ ಮಹಾಮಾಯಿ ದೇವತೆಗೆ ನೈವೇದ್ಯ ಮುಂತಾದವುಗಳಿಗೆ ಬ್ರಾಹ್ಮಣ-ಚಿತವಾಡಿ-ಸೀಮೆಯ ಕೆಲವು ಗ್ರಾಮಗಳಲ್ಲಿ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 688.

ಸಂ. 432

ಅದೇ ದೇವಸ್ಥಾನದ ಮುಖ ಮಂಟಪದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1435, ಶ್ರೀಮುಖ, ಪ್ರಥಮ-ಭಾದ್ರಪದ ಶು. 15, ಮಂಗಳವಾರ = ಕ್ರಿ.ಶ. 1513, ಆಗಸ್ಟ್ 16, ಮಂಗಳವಾರ

ಸಂಸ್ಕೃತ ಮತ್ತು ಕನ್ನಡ

ಗೌರ-ದಣಾಯಕನ ಮಗ ಬಸವಪ್ಪ ಮತ್ತು ಉಪ-ಪ್ರಧಾನ ಸೋಮರಸರು (ಅರಸ) ಕೃಷ್ಣರಾಯನಿಗೆ ಪುಣ್ಯವಾಗಲೆಂದು ಹೊಸೂರಿನ ಎಕ್ಕನಾಥದೇವಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 689.

ಸಂ. 433

ಅದೇ ದೇವಸ್ಥಾನದ ಮುಖ ಮಂಟಪದ ಕಂಬದ ಮೇಲೆ

--

ಶಕ 1565, ಸ್ವಭಾನು, ಶ್ರಾವಣ ಶು. 7 = ಕ್ರಿ.ಶ. 1643, ಜುಲೈ 13

ಸಂಸ್ಕೃತ ಮತ್ತು ಕನ್ನಡ

ತುಂಬ ಹಾಳಾಗಿದೆ. ಕೃಷ್ಣರಾಯನ ಕಾಲದಲ್ಲಿ ಹೊಸೂರಮ್ಮನ ದೇವಸ್ಥಾನದ ಸ್ಥಾನಿಕರು ಒಬ್ಬ ವ್ಯಕ್ತಿಗೆ ಮಾನ್ಯವಾಗಿ ನೀಡಿದ ಭೂಮಿ ಮತ್ತು ಹಣದ ದಾನವನ್ನು ನವೀಕರಿಸಿದ್ದನ್ನು ತಿಳಿಸುತ್ತದೆ.

ಆರಿಸೌಇಎ, 1922-23, ಸಂ. 1922 ರ 690.

ಸಂ. 434

ಅದೇ ದೇವಸ್ಥಾನದ ಮುಖ ಮಂಟಪದ ಅದೇ ಕಂಬದ ಮೇಲೆ

--

ವಿಶ್ವಾವಸು, ಫಾಲ್ಗುಣ ಬ. 1(2)

ಸಂಸ್ಕೃತ ಮತ್ತು ಕನ್ನಡ

ಹೊಸೂರಿನ ಮಹಾಮಾಯಿ ದೇವಿಯ ದೇವಸ್ಥಾನದ ಸ್ಥಾನಿಕರು ವಿಜಯನಗರದ ಕಟಿಕಮ್ ಮಲ್ಲಯ್ಯನಿಗೆ ದೇವಿಯ ಸಿಂಹದ ರಥದ ಅಲಂಕಾರಿಕ (ಚಲಿವಾಣ್ಯ) ಕೆಲಸ ಮಾಡಿದ್ದಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆರಿಸೌಇಎ, 1922-23, ಸಂ. 1922 ರ 691.

ಸಂ. 435

ಗ್ರಾಮದಲ್ಲಿ ತುಂಗಭದ್ರ ನದಿಯ ದಂಡೆಯ ಮೇಲಿನ ಬಂಡೆಯ ಮೇಲೆ

--

ಶಕ 1328, ವ್ಯಯ, ಚೈತ್ರ ಶು. 13, ರವಿವಾರ = ಕ್ರಿ.ಶ. 1406, ಏಪ್ರಿಲ್ 1, ಗುರುವಾರ

ಸಂಸ್ಕೃತ ಮತ್ತು ಕನ್ನಡ (ನಾಗರಿ)

ಹಾಳಾಗಿದೆ. ಕೆಲವು ಬ್ರಾಹ್ಮಣರು ಪ್ರಸನ್ನ-ರಾಮದೇವರಿಗೆ ನಂದಾದೀಪ ಉರಿಸಲು ವ್ಯವಸ್ಥೆ ಮಾಡಿದ್ದನ್ನು ತಿಳಿಸುತ್ತದೆ.

ಆರಿಸೌಇಎ, 1922-23, ಸಂ. 1922 ರ 692.

ಇಟ್ಟಿಗಿ ಮುದ್ದಾಪುರ

ಸಂ. 436

ವೆಂಕಟರಮಣಸ್ವಾಮಿ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1464, ಪ್ಲವ, ಜ್ಯೇಷ್ಠ ಬ. 5, ಸೋಮವಾರ = ಕ್ರಿ.ಶ. 1541, ಜೂನ್ 13, ಸೋಮವಾರ (ಶಕ 1463)

ಸಂಸ್ಕೃತ ಮತ್ತು ಕನ್ನಡ

ಹಸ್ತಿನಾವತಿ-ವಳಿತದ ದೊರವಡಿ-ವೆಂಠೆಯೊಳಗಿನ ನಾರಾಯಣಿಯ (ಹಳ್ಳದ) ದಂಡೆಯ ಮೇಲಿರುವ ಇಮ್ಮಡಿ-ದೇವರಾಯಪುರವೆಂಬ ಉಪನಾಮವುಳ್ಳ ಸಂತೆಮುದ್ದಲಾಪುರದಲ್ಲಿ ಪರಮಹಂಸ ಪರಿವ್ರಾಜಕಾಚಾರ್ಯ ಮಥಿತಾಮಿತ್ರತೀರ್ಥನ ಮಗ ರಘುನಂದನ-ವೊಡೆಯನ ಶಿಷ್ಯ ಸುರೇಂದ್ರತೀರ್ಥ ಶ್ರೀಪಾದವೊಡೆಯನು ಪ್ರತಿಷ್ಠಾಪಿಸಿದ ತಿರುವೆಂಗಳನಾಥ ದೇವರಿಗೆ ಪ್ರತಿ ದಿನದ ಪೂಜೆ ಮತ್ತು ಅನೇಕ ಉತ್ಸವಗಳಿಗೆ ಭೂಮಿ ಮತ್ತು ಹಣ ದಾನ ನೀಡಿದ್ದನ್ನು ತಿಳಿಸುತ್ತದೆ.

ಆರಿಸೌಇಎ, 1922-23, ಸಂ. 1922 ರ 720.

ಕಲ್ಲಹಳ್ಳಿ

ಸಂ. 437

ಹಳ್ಳದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ಅಚ್ಯುತರಾಯದೇವ

ಶಕ 146[2], ಶಾರ್ವರಿ, ಕಾರ್ತಿಕ [ಶು. 12] = ಕ್ರಿ.ಶ. 1540, ನವೆಂಬರ್ 11

ಕನ್ನಡ

ಅರಸನು ತನ್ನ ತಂದೆ ನರಸಣ-ನಾಯಕ ಮತ್ತು ತಾಯಿ ಓಬಾಜಿ-ಅಮ್ಮನವರಿಗೆ ಪುಣ್ಯವಾಗಲೆಂದು ಜಂಬುನಾಥ ದೇವರ ಪೂಜೆಗೆ ತಿರುಮಲದೇವಿ-ಅಮ್ಮನವರ ಪಟ್ಟಣದ ಉಪಗ್ರಾಮವಾದ ಕಲ್ಲಹರಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1944-45, ಸಂ. ಬಿ. 80.

ಕಂಪ್ಲಿ

ಸಂ. 438

ಪಂಪಾಪತಿ ದೇವಸ್ಥಾನದ ಪೂರ್ವಕ್ಕೆ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ಸದಾಶಿವದೇವ

ಶಕ 1474, ಪರಿಧಾವಿ, ವೈಶಾಖ ಶು. 1, ಸೋ[ಮವಾರ] = ಕ್ರಿ.ಶ. 1552, ಏಪ್ರಿಲ್ 24, ರವಿವಾರ

ಕನ್ನಡ

ಸುಂಕದ-ಬಂದರಸನ ಮಗ ಕರಿಬೇಡುವಿನ ಯಜಮಾನ ಸಂಕರಸನು ಕಂಪ್ಲಿಯಲ್ಲಿ ವಿರೂಪಾಕ್ಷ ದೇವಸ್ಥಾನದಲ್ಲಿ ಒಂದು ಗುಡಿಯನ್ನು ಕಟ್ಟಿಸಿ ಅಲ್ಲಿ ಹಂಪಾದೇವಿಯನ್ನು ಪ್ರತಿಷ್ಠಾಪಿಸಿ ದೇವಿಯ ಸೇವೆಗೆ ಕರಿಬೇಡು ಗ್ರಾಮದಲ್ಲಿ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1903-04, ಸಂ. 1904 ರ 27; ಸೌಇಇ, IX ii, ಸಂ. 648; XVII, ಸಂ. 29.

ಸಂ. 439

ಹನುಮಂತರಾಯ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ ಅಚ್ಯುತರಾಯ-ಮಹಾರಾಯ

ಶಕ . . . ., ವಿರೋಧಿ, . . ಶು. 1, ಬುಧವಾರ = ಕ್ರಿ.ಶ. 1429-30

ಸಂಸ್ಕೃತ ಮತ್ತು ಕನ್ನಡ

ಹಾಳಾಗಿದೆ. ಅರಸನು ಮಲ್ಲಿಕಾರ್ಜುನ ದೇವರ ಸೇವೆಗೆ ವಿಜಯ-ವಿರುಪಾಪುರದ ಪೇಟೆ ಬೀದಿಯಲ್ಲಿ ಸಂಗ್ರಹವಾದ ತೆರಿಗೆಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 716; ಸೌಇಇ, IX ii, ಸಂ. 530.

ಸಂ. 440

ಅದೇ ದೇವಸ್ಥಾನದ ಮುಂದೆ ನಿಲ್ಲಿಸಿದ ಇನ್ನೊಂದು ಕಲ್ಲಿನ ಮೇಲೆ

ವಿಜಯನಗರ, ವೆಂಕಟಪತಿರಾಯದೇವ-ಮಹಾರಾಯ

ಶಕ 1612, ಪ್ರಮೋದೂತ, ಮಾಘ ಬ. 3, ಗುರುವಾರ = ಕ್ರಿ.ಶ. 1691, ಫೆಬ್ರವರಿ 5, ಗುರುವಾರ

ಕನ್ನಡ

ತ್ರುಟಿತ. ಕಂಪಲೆಯ ಪೇಟೆಯಲ್ಲಿಯ ನರಸಿಂಹ ಮತ್ತು ಇತರ ದೇವರುಗಳ ದೇವಸ್ಥಾನಗಳಿಗೆ ಹೊಂದಿಕೊಂಡಿರುವ ಮಾರ್ಗಗಳ ಹಕ್ಕನ್ನು ನಿರ್ಧರಿಸಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 717; ಸೌಇಇ, IX ii, ಸಂ. 698.

ಮೆಟ್ರಿ

ಸಂ. 441

ಗ್ರಾಮದ ಪಶ್ಚಿಮಕ್ಕೆ ಗೊಲ್ಲರಗುಂಡು ಎಂದು ಕರೆಯಲ್ಪಡುವ ಗುಂಡಿನ ಮೇಲೆ

--

--

ಕನ್ನಡ

ಅಧಿಕಾರಿ-ಸಿರಿಯಣ್ಣನು ಮಹಾಪ್ರಧಾನ ಬಯಿಚೆ-ದಣ್ಣಾಯಕನ ಆಜ್ಞೆಯ ಮೇರೆಗೆ ಮಲ್ಲಿಕಾರ್ಜುನ ದೇವಸ್ಥಾನದ ಛತ್ರಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 721.

ಮುದ್ದಾಪುರ

ಸಂ. 442

ಗ್ರಾಮದಲ್ಲಿಯ ಕಬ್ಬಿನ ಗದ್ದೆಯಲ್ಲಿ ಹೂತಿರುವ ಕಲ್ಲಿನ ಮೇಲೆ

--

ಶಕ 1520, ವಿಳಂಬಿ, ಮಾಘ ಶು. 10 = ಕ್ರಿ.ಶ. 1599, ಜನವರಿ 25

ಕನ್ನಡ

ಮಹಾರಾಜ ಶ್ರೀ ಹಂಡೆ ಹನುಮಿ-ನಾಯಕನ ಮಗಳು ರಾಮಮ್ಮಳು ಶಾಂತ-ಮಲ್ಲಿಕಾರ್ಜುನ ದೇವನ ಶಿಷ್ಯ ಚೆನ್ನ ವೀರಪ್ಪನಿಗೆ ಮುದ್ದಾಪುರ ಗ್ರಾಮದಲ್ಲಿ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 718.

ಸಂ. 443

ಈಶ್ವರ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ವೆಂಕಟಪತಿರಾಯದೇವ-ಮಹಾರಾಯ

ಶಕ 1674, ಆಂಗಿರಸ, ಕಾರ್ತಿಕ ಬ. 12, ಶನಿವಾರ, ಸ್ವಾತಿ-ನಕ್ಷತ್ರ = ಕ್ರಿ.ಶ. 1752, ಡಿಸೆಂಬರ್ 2, ಶನಿವಾರ

ಕನ್ನಡ

ಅಪ್ಪಣನ ಮಗ ಅಯ್ಯಪನು ಅರಸನಿಗೆ ಪುಣ್ಯವಾಗಲೆಂದು (ಈಶ್ವರ ದೇವರನ್ನು) ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 719.

ಮುದ್ಲಾಪುರ

ಸಂ. 444

ಕರ್ಣಮ್ ನಾರಾಯಣ ರಾವ್ ಅವರ ತೋಟದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

ವಿಜಯನಗರ, ಕೃಷ್ಣದೇವರಾಯ-ಮಹಾರಾಯ

ಶಕ 1435, ಶ್ರೀಮುಖ, ಚೈತ್ರ ಶು. 5 = ಕ್ರಿ.ಶ. 1513, ಮಾರ್ಚ್ 12, ಶನಿವಾರ

ಕನ್ನಡ

ಅರಸನು ತನ್ನ ತಂದೆ ನರಸಣ-ನಾಯಕ ಮತ್ತು ತಾಯಿ ನಾಗಾಜಿದೇವಿಯರಿಗೆ ಪುಣ್ಯವಾಗಲೆಂದು ವಿಠಲದೇವರ ಸೇವೆಗೆ ಹೊಸವೂರ-ಮಾಗಣೆಯೊಳಗಿನ ವಿರುಪಾಪುರ ಗ್ರಾಮವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಈ ದಾನವನ್ನು ಅರಸನು ಕ್ರಿ.ಶ. 1512, ಮಾರ್ಚ್ 7, ಸೋಮವಾರಕ್ಕೆ ಸರಿ ಹೊಂದುವ ಆಂಗಿರಸ ವರ್ಷ ಫಾಲ್ಗುಣ ಬ. 30, ಸೋಮವಾರ, ಸೂರ್ಯಗ್ರಹಣ ದಿನದಂದು ನೀಡಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 687; ಸೌಇಇ, IX ii, ಸಂ. 490.

ನಂದಿಬಂಡೆ

ಸಂ. 445

ಕೆರೆಯ ದಂಡೆಯ ಉತ್ತರ ತುದಿಯಲ್ಲಿಯ ಕಲ್ಲಿನ ಮೇಲೆ

--

(ಕ್ರಿ.ಶ. 1539)

ಕನ್ನಡ, ಸಂಸ್ಕೃತ, ಕನ್ನಡ

ಬಯಕಾರ ರಾಮಪ್ಪನು ತನ್ನ ತಂದೆ ತಿಮ್ಮರಸಯ್ಯನಿಗೆ ಪುಣ್ಯವಾಗಲೆಂದು ಕೆರೆಯನ್ನು ಕಟ್ಟಿಸಿ ಅದಕ್ಕೆ ತಿಮ್ಮಸಮುದ್ರ ಎಂದು ಹೆಸರಿಟ್ಟಿದ್ದನ್ನು ದಾಖಲಿಸುತ್ತದೆ.

ಇದ, 11, ಪು. 124-125.

ಪಾಪಿನಾಯಕನಹಳ್ಳಿ

ಸಂ. 446

ಅಂಕಾಳಮ್ಮ ದೇವಸ್ಥಾನದ ಮಂಟಪದಲ್ಲಿಯ ಕಂಬದ ಮೇಲೆ

ವಿಜಯನಗರ, ಅಚ್ಯುತರಾಯ-ಮಹಾರಾಯ

ಶಕ 145[4], ನಂದನ, ಶ್ರಾವಣ ಬ. 30, ಗುರುವಾರ = ಕ್ರಿ.ಶ. 1532, ಆಗಸ್ಟ್ 1

ತೆಲುಗು

ತಲಾರಿ ತಿಮ್ಮಿ-ನಾಯಕನ ಮಕ್ಕಳು ಆರುಗೊಂಡಲ ಅಂಕಾಳಮ್ಮ ದೇವಿಯ ಅಮೃತಪಡಿ ಸೇವೆಗೆ ಕೊಟ್ಟ ಅಪಿನಾಯಕಪುರವೆಂಬ ಉಪನಾಮಹೊಂದಿದ ನಿಡುಗುಲ ಸರ್ವಮಾನ್ಯ ಅಗ್ರಹಾರದ ಭೂಮಿಯ ಕ್ರಯಪತ್ರವನ್ನು ಉಲ್ಲೇಖಿಸುವಂತೆ ತೋರುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 744; ಸೌಇಇ, XVI, ಸಂ. 99.

ಸಂ. 447

ಗ್ರಾಮದ ಚಾವಡಿಯ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ವೆಂಕಟಪತಿರಾಯ-ಮಹಾರಾಯ

ಶಕ 1664, ದುಂದುಭಿ, ಚೈತ್ರ ಬ. 10 = ಕ್ರಿ.ಶ. 1742, ಏಪ್ರಿಲ್ 19, ಸೋಮವಾರ

ಕನ್ನಡ

ಹಾಳಾಗಿದೆ. ಕವಿರಾಜನ ಮೊಮ್ಮಗನಿಗೆ (ಹೆಸರು ಇಲ್ಲ) ಮಾದಿನಾಯಕನಹಳ್ಳಿಯನ್ನು ಉಂಬಳಿಯಾಗಿ ಕೊಟ್ಟದ್ದನ್ನು ಉಲ್ಲೇಖಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 745; ಸೌಇಇ, IX ii, ಸಂ. 699.

ಪೋತಲಕಟ್ಟೆ

ಸಂ. 448

ತಿಮ್ಮಲಾಪುರದ ಉಪಗ್ರಾಮವಾದ ಪೋತಲಕಟ್ಟೆಯ ಕೆರೆಯ ಕೋಡಿಯ ಹತ್ತಿರದ ಕಲ್ಲಿನ ಮೇಲೆ

--

(ಕ್ರಿ.ಶ. 1539)

ಕನ್ನಡ, ಸಂಸ್ಕೃತ; ಕನ್ನಡ

ಬಯಕಾರ ರಾಮಪ್ಪನು ತನ್ನ ಮಗ ಆಕಪ್ಪನಿಗೆ ಪುಣ್ಯವಾಗಲೆಂದು ಕೆರೆಯನ್ನು ಕಟ್ಟಿಸಿ ಆಕಸಮುದ್ರ ಎಂದು ಹೆಸರಿಟ್ಟದ್ದನ್ನು ಉಲ್ಲೇಖಿಸುತ್ತದೆ.

ಇದ, 11, ಪು. 124-125.

ರಾಜಾಪುರ

ಸಂ. 449

ರಾಮುಗಡದಿಂದ ಹೊಸಪೇಟೆಗೆ ಹೋಗುವ ಮಾರ್ಗದ 11ನೆಯ ಮೈಲಿನ 7ನೆಯ ಫರ್ಲಾಂಗ್ ಕಲ್ಲಿನ ಹತ್ತಿರ ಕಾಲುವೆಯ ಸೇತುವೆಯ ಕೆಳಗಿರುವ ಕಲ್ಲಿನ ಮೇಲೆ

ವಿಜಯನಗರ, ಕೃಷ್ಣದೇವ ಮಹಾರಾಯ

ಶಕ 1445, ಸೂಚಿ (ಆಷಾಢ) ಶು. 12 = ಕ್ರಿ.ಶ. 1523, ಜೂನ್ 24

ಸಂಸ್ಕೃತ, ಕನ್ನಡ

ಅಪೂರ್ಣವಾಗಿದೆ. ಕಲ್ಲಿನ ಕೊನೆಯ ಭಾಗ ಒಡೆದಿದೆ. ರಾಮದೇವರ ದೇವಸ್ಥಾನಕ್ಕೆ ನೀಡಿದ ದಾನದ ಬಗ್ಗೆ ತಿಳಿಸುತ್ತದೆ. ನಾಗಲದೇವಿಯ ಉಲ್ಲೇಖವಿದೆ.

ಆ್ಯರಿಇಎ, 1944-45, ಸಂ. ಬಿ 81.

ಸಂಕಲಾಪುರ

ಸಂ. 450

ಗ್ರಾಮದಲ್ಲಿಯ ಕಲ್ಲಿನ ಮೇಲೆ

ವಿಜಯನಗರ, ಕೃಷ್ಣರಾಯ

ಶಕ 1435, ಶ್ರೀಮುಖ, ಭಾದ್ರಪದ ಬ. 6, ಮಂಗಳವಾರ = ಕ್ರಿ.ಶ. 1513, ಸೆಪ್ಟೆಂಬರ್ 20, ಮಂಗಳವಾರ

ಸಂಸ್ಕೃತ ಮತ್ತು ಕನ್ನಡ

ವಿಜಯನಗರದಲ್ಲಿ ದೇವೇರಿ ಬೀದಿಯ ಪೂರ್ವಕ್ಕಿರುವ ಕೋಟ-ವಿನಾಯಕ (ಕೋಟೆಯಲ್ಲಿರುವ ವಿನಾಯಕ) ದೇವಸ್ಥಾನಕ್ಕೆ ಅರಸನು ಸಂಕಲಾಪುರ ಗ್ರಾಮವನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1895-96, ಸಂ. 1896 ರ 398; ಎಇ, IV, ಪು. 266-269; ಸೌಇಇ, V, ಸಂ. 1353.

ಸೋಮಲಾಪುರ

ಸಂ. 451

ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

--

ವಿಳಂಬಿ, ಶ್ರಾವಣ ಬ. 1

ಕನ್ನಡ

ಹಾಳಾಗಿದೆ. ವರದಾಜಮ್ಮನ ಪೇಟೆಯ ರಘುನಾಥದೇವರ ದೇವಸ್ಥಾನಕ್ಕೆ ದಾನ ನೀಡಿದ್ದನ್ನು ತಿಳಿಸುತ್ತದೆ. ಅಚ್ಯುತರಾಯ ಮಲ್ಲಪಣ್ಣ ಮತ್ತು ಸೇನಬೋವ ರಂಗಪ ಮತ್ತು ಸೋಮಲಾಪುರ ಗ್ರಾಮಗಳ ಪ್ರಸ್ತಾಪವಿದೆ.

ಆರಿಸೌಇಎ, 1922-23, ಸಂ. 1922 ರ 730.

ಸುಲ್ತಾನಪುರ

ಸಂ. 452

ಗ್ರಾಮದ ಪಶ್ಚಿಮಕ್ಕೆ ಹೊಲದಲ್ಲಿ ನಿಲ್ಲಿಸಿದ ವೀರಗಲ್ಲಿನ ಮೇಲೆ

--

--

ಕನ್ನಡ (ಪ್ರಾಚೀನ)

ಹಾಳಾಗಿದೆ. ಜಯಕಾಮ, ಆತನ ಮಗ ಬಿಜಯಿತಿ . . . ಯರ ಪ್ರಸ್ತಾಪವಿದೆ. ಜಯಕಾಮ ಬಿಕ್ಕಿಯು ಎರೆಯಮ-ಕಾಪೆಯ ಸೈನ್ಯದ ಮೇಲೆ ದಾಳಿ ಮಾಡಿದ ಉಲ್ಲೇಖವಿದ್ದಂತೆ ತೋರುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 731.

ತಿಮ್ಮಲಾಪುರ

ಸಂ. 453

ಗೋಪಾಲಕೃಷ್ಣ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1461, ವಿಕಾರಿ, ಭಾದ್ರಪದ ಶು. 12 = ಕ್ರಿ.ಶ. 1539, ಆಗಸ್ಟ್ 26

ಕನ್ನಡ

ಬಯಕಾರ ರಾಮಪ್ಪಯ್ಯನು ತನ್ನ ತಂದೆ ಹಿರಿಯ ತಿಮ್ಮರಸಯ್ಯ ಮತ್ತು ತಾಯಿ ಹಿರಿಯ ಲಕ್ಕಲೀಶಮ್ಮರಿಗೆ ಪುಣ್ಯವಾಗಲೆಂದು ಗೋಪಿನಾಥ ದೇವರ ದೇವಸ್ಥಾನವನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 302.

ಸಂ. 454

ಅದೇ ದೇವಸ್ಥಾನದ ಹತ್ತಿರ ನಿಲ್ಲಿಸಿದ ಅದೇ ಕಲ್ಲಿನ ಮೇಲೆ

--

ಶಕ 1461, ವಿಕಾರಿ ನಭಸ್ = ಕ್ರಿ.ಶ. 1539

ಸಂಸ್ಕೃತ ಮತ್ತು ಕನ್ನಡ

ಅಚ್ಯುತದೇವರಾಯನಿಂದ ಕೊಂಡವೀಡು ದೇಶದ ಆಡಳಿತವನ್ನು ತೆಗೆದುಕೊಂಡ ರಾಮಯ ಮಂತ್ರಿಯ ವಂಶಾವಳಿ ಇದೆ. ಆತನ ಧರ್ಮಕಾರ್ಯಗಳಾದ ದೇವಸ್ಥಾನ, ಕೆರೆ ಕಟ್ಟಿಸಿದ್ದು ಮುಂತಾದವುಗಳ ಉಲ್ಲೇಖವಿದೆ.

ಆ್ಯರಿಎ, 1918-19, ಸಂ. 1918 ರ 303.

ಸಂ. 455

ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1461, ವಿಕಾರಿ, ಭಾದ್ರಪದ ಶು. 1[3] = ಕ್ರಿ.ಶ. 1539, ಆಗಸ್ಟ್ 27

ಕನ್ನಡ

ಬಯಕಾರ ರಾಮಪ್ಪಯ್ಯನ ಅಧಿಕಾರಿಯಾದ ನಮಶ್ಶಿವಾಯನು ತನಗೆ ಪುಣ್ಯವಾಗಲೆಂದು ಮಲ್ಲಿಕಾರ್ಜುನ ದೇವಸ್ಥಾನ ಕಟ್ಟಿಸಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 304.

ಸಂ. 456

ಅದೇ ಕಲ್ಲಿನ ಮೇಲೆ

--

ಶಕ 1461, ವಿಕಾರಿ ನಭಸ್ = ಕ್ರಿ.ಶ. 1539

ಸಂಸ್ಕೃತ ಮತ್ತು ಕನ್ನಡ

ಶಾಸನ ಸಂ. 454 ರ ನಕಲು

ಆ್ಯರಿಎ, 1918-19, ಸಂ. 1918 ರ 305.

ಸಂ. 457

ಶಿವ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1461, ವಿಕಾರಿ, ಭಾದ್ರಪದ ಶು. 12 = ಕ್ರಿ.ಶ. 1539, ಆಗಸ್ಟ್ 26

ಕನ್ನಡ

ಬಯಕಾರ ರಾಮಪ್ಪಯ್ಯನು ತನ್ನ ಚಿಕ್ಕಪ್ಪ ಬಾಚರಸಯ್ಯ, ಚಿಕ್ಕಮ್ಮ ಅಮ್ಮಾಜಮ್ಮ ಮತ್ತು ತನ್ನ ಸಹೋದರ ಕೃಷ್ಣಪ್ಪರಿಗೆ ಪುಣ್ಯವಾಗಲೆಂದು ಬಾಚೇಶ್ವರ, ಅಮ್ಮೇಶ್ವರ ಮತ್ತು ಕೃಷ್ಣೇಶ್ವರ ದೇವಸ್ಥಾನಗಳನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1918-19, ಸಂ. 1918 ರ 306.

ಸಂ. 458

ಅದೇ ಕಲ್ಲಿನ ಮೇಲೆ

--

ಶಕ 1461, ವಿಕಾರಿ ನಭಸ್ = ಕ್ರಿ.ಶ. 1539

ಸಂಸ್ಕೃತ ಮತ್ತು ಕನ್ನಡ

ಶಾಸನ ಸಂ. 454ರ ನಕಲು.

ಆ್ಯರಿಎ, 1918-19, ಸಂ. 1918 ರ 307.

ಸಂ. 459

ಪಾಳುಬಿದ್ದ ಕೋಟೆಯೊಳಗೆ ಬಾವಿಯ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1461 = ಕ್ರಿ.ಶ. 1539

ಕನ್ನಡ, ಸಂಸ್ಕೃತ; ಕನ್ನಡ

ಬಯಕಾರ ರಾಮಪ್ಪನು ತನ್ನ ಮಗ ಲಿಂಗಾಲಯ್ಯನಿಗೆ ಪುಣ್ಯವಾಗಲೆಂದು ಬಾವಿಯನ್ನು ಕಟ್ಟಿಸಿ ಅದಕ್ಕೆ ಲಿಂಗಾಲಯ್ಯ-ಬಾವಿ ಎಂದು ಹೆಸರಿಟ್ಟಿದ್ದನ್ನು ತಿಳಿಸುತ್ತದೆ.

ಅಪ್ರಕಟಿತ.

ಸಂ. 460

ಗೋಪಾಲಕೃಷ್ಣ ದೇವಸ್ಥಾನದ ವಾಯುವ್ಯಕ್ಕೆ ಕೋಟೆಯ ಬಾಗಿಲಿನ ಹತ್ತಿರದ ಕಲ್ಲಿನ ಮೇಲೆ

--

ಶಕ 1469 = ಕ್ರಿ.ಶ. 1547

ಕನ್ನಡ

ಅಸ್ಪಷ್ಟ.

ಅಪ್ರಕಟಿತ.

ಸಂ. 461

ಹೆದ್ದಾರಿಯ ಪಕ್ಕದ ಜಂಬಯ್ಯನಕೆರೆಯ ತೂಬಿನ ಹತ್ತಿರದ ಕಲ್ಲಿನ ಮೇಲೆ

--

(ಕ್ರಿ.ಶ. 1539)

ಕನ್ನಡ, ಸಂಸ್ಕೃತ; ಕನ್ನಡ

ಬಯಕಾರ ರಾಮಪ್ಪನು ತನ್ನ ಚಿಕ್ಕಪ್ಪ ಬಾಚರಸಯ್ಯನಿಗೆ ಪುಣ್ಯವಾಗಲೆಂದು ಕೆರೆಯನ್ನು ಕಟ್ಟಿಸಿ ಅದಕ್ಕೆ ಬಾಚಸಮುದ್ರವೆಂದು ನಾಮಕರಣ ಮಾಡಿದ್ದನ್ನು ತಿಳಿಸುತ್ತದೆ.

ಇದ, 11, ಪು. 124-125.

ವಂಟಿಗೋಡು

ಸಂ. 462

ತಾಂಡದಕೆರೆಯ ತೂಬಿನ ಹತ್ತಿರದ ಕಲ್ಲಿನ ಮೇಲೆ

--

(ಕ್ರಿ.ಶ. 1539)

ಕನ್ನಡ, ಸಂಸ್ಕೃತ; ಕನ್ನಡ

ಬಯಕಾರ ರಾಮಪ್ಪನು ತನ್ನ ಪತ್ನಿ ವೀರಮ್ಮನಿಗೆ ಪುಣ್ಯವಾಗಲೆಂದು ಕೆರೆಯನ್ನು ಕಟ್ಟಿಸಿ ವೀರಸಮುದ್ರ ಎಂದು ಹೆಸರಿಟ್ಟದ್ದನ್ನು ತಿಳಿಸುತ್ತದೆ.

ಇದ, 11, ಪು. 124-125.

ಕೂಡ್ಲಿಗಿ ತಾಲೂಕು

ಅಮ್ಮನಕೇರಿ

ಸಂ. 463

ಬೀದಿಯಲ್ಲಿಯ ಕಟ್ಟೆಯ ಮೇಲೆ ನಿಲ್ಲಿಸಿದ ಕಲ್ಲಿನ ಮೇಲೆ

--

--

--

ಪ್ರಾಚೀನ. ಅಕ್ಷರಗಳು ವಟ್ಟೆಳುತ್ತು ವಿನಂತೆ ಕಾಣುತ್ತವೆ.

ಆ್ಯರಿಸೌಇಎ, 1924-25, ಸಂ. 1925 ರ 303.

ಬೆಣ್ಣೆಕಲ್

ಸಂ. 464

ಕಲ್ಲೇಶ್ವರ ದೇವಸ್ಥಾನದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ಹೊಯ್ಸಳ, ವೀರ-ನರಸಿಂಹದೇವ (II)

ಶಕ 1448, ವ್ಯಯ, ಚೈತ್ರ ಶು. 11, ಆದಿತ್ಯವಾರ, ಉತ್ತರಾಯಣ-ಸಂಕ್ರಮಣ, ವ್ಯತಿಪಾತ = ಕ್ರಿ.ಶ. 1226, ಮಾರ್ಚ್ 11, ಬುಧವಾರ (ರವಿವಾರವಲ್ಲ ಮತ್ತು ಸಂಕ್ರಮಣದ ದಿನವಲ್ಲ)

ಕನ್ನಡ (ಗದ್ಯ ಮತ್ತು ಪದ್ಯ)

ಹೊಯ್ಸಳ ವಂಶದ ಸ್ತುತಿ ಇದೆ ಮತ್ತು ಇದರ ಕುಲವು ಸಳನಿಂದ ಮುಂದುವರಿದು ಬಂದುದನ್ನು ತಿಳಿಸುತ್ತದೆ. ಭಾರದ್ವಾಜ ಗೋತ್ರ ಮತ್ತು ಕಾಣ್ವ-ಅನ್ವಯದ ಮಹಾಪ್ರಧಾನ ಅಮಿತಯ್ಯ-ದಂಡನಾಯಕನು ನೊಣಂಬವಾಡಿ-ನಾಡಿನ ಭಾಗವಾದ ಕೋಗಳಿ-500ರಲ್ಲಿರುವ ಬೆಣ್ಣೆಕಲ್ಲು-12 ರ ಉಪವಿಭಾಗದ ಮುಖ್ಯ ಪಟ್ಟಣವಾದ ಬೆಣ್ಣೆಕಲ್ಲಿನಲ್ಲಿ ಪದ್ಮಲೇಶ್ವರ, ಅಮೃತೇಶ್ವರ, ಲಕ್ಷ್ಮೀನಾರಾಯಣ, ವಾಮೇಶ್ವರ, ಬಲ್ಲಾಳೇಶ್ವರ ಮತ್ತು ನರಸಿಂಹ ದೇವರ ದೇವಸ್ಥಾನಗಳನ್ನು ಕಟ್ಟಿಸಿ ಅವುಗಳ ಪೂಜೆ, ನಿರ್ವಹಣೆ ಮತ್ತು ಜೀರ್ಣೋದ್ಧಾರಕ್ಕೆ ಅನೇಕ ಗ್ರಾಮಗಳಲ್ಲಿ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಈ ದಾನವನ್ನು ಅರಸನು ವಜ್ರೇಶ್ವರ ಮತ್ತು ಸೋಮನಾಥ ದೇವರ ಸನ್ನಿಧಿಯಲ್ಲಿ ಶೈವ ರಾಜಗುರು ಖಳೇಶ್ವರ ದೇವರ ಪಾದ ತೊಳೆದು ಮಾಡಿದನು.

ಆ್ಯರಿಸೌಇಎ, 1924-25, ಸಂ. 1925 ರ 280; ಸೌಇಇ, IX i, ಸಂ. 343.

ಚಿನೆನಹಳ್ಳಿ
(ಕಾಳಾಪುರದ ಉಪಗ್ರಾಮ)

ಸಂ. 465

ಹನುಮಾನ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1627, ಪಾರ್ಥಿವ, ವೈಶಾಖ ಶು. 5 = ಕ್ರಿ.ಶ. 1705, ಏಪ್ರಿಲ್ 17

ಕನ್ನಡ

ಶೇಷಮ್ಮನ ಹಳ್ಳಿಯ (ಗಡಿ ಸೀಮೆಗಳನ್ನು ಕೊಡಲಾಗಿದೆ) ಗೌಡಿಕೆ ಸೇನಬೋವಿಕೆಯ ಹಕ್ಕುಗಳು ಯಜುರ್ವೇದ ಮತ್ತು ಮುಲಿಕಿನಾಡು ಸಮಾಜಕ್ಕೆ ಸೇರಿದ ಆಕುಮಳ್ಳ ಜಗನ್ನಾಥ-ಶಾಸ್ತ್ರಿಗೆ ಸೇರಿದ್ದೆಂದು ಮತ್ತು ತಳವಾರಿಕೆಯು ಮಾದಿಹಳ್ಳಿಯ ಬೇಡರ-ಮರಿಯಪ್ಪನಿಗೆ ಮತ್ತು ಬೇರೆ (ಚಿಕ್ಕ) ಕಾರ್ಯಾಲಯಗಳ ಹಕ್ಕುಗಳು ವುಜ್ಜನಿಯ ಕಟ್ಟೆಮನೆಯ ವಂಶದವರಿಗೆ ಸೇರಿವೆಯೆಂದು ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 314.

ಸಂ. 466

ಹನುಮಾನ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

--

--

ಕನ್ನಡ

ತುಂಬ ಹಾಳಾಗಿದೆ. ಒಂದು ದೇವಸ್ಥಾನಕ್ಕೆ ದಾನ ನೀಡಿದ ಬಗ್ಗೆ ತಿಳಿಸುವಂತೆ ತೋರುತ್ತದೆ. ಉಜ್ಜನಿ ಮತ್ತು ಶೇಷಮ್ಮನಹಳ್ಳಿಗಳ ಉಲ್ಲೇಖವಿದೆ.

ಆ್ಯರಿಸೌಇಎ, 1924-25, ಸಂ. 1925 ರ 315.

ದೇವಲಾಪುರ

(ಗಜಪುರದ ಉಪಗ್ರಾಮ)

ಸಂ. 467

ಶಿಥಿಲವಾದ ವಸಂತ ಮಲ್ಲಿಕಾರ್ಜುನ ದೇವಸ್ಥಾನದ ಮುಂದೆ ಬಿದ್ದಿರುವ ಒಡೆದ ಕಂಬದ ಮೇಲೆ

ವಿಜಯನಗರ, ಸದಾಶಿವದೇವ-ಮಹಾರಾಯ

ಶಕ 1474, ವಿರೋಧಿಕೃತ, ಪುಷ್ಯ ಬ. 30, ಸೋಮವಾರ = ಕ್ರಿ.ಶ. 1552, ಜನವರಿ 25, ಸೋಮವಾರ

ಕನ್ನಡ

ಬಯಪ್ಪ-ನಾಯಕನ ಮಗ ಕೃಷ್ಣಪ್ಪ-ನಾಯಕನ ಕಾರ್ಯಕರ್ತನು ಮತ್ತು ವೇಲೂರಿನ ತಿಮ್ಮಪ್ಪ-ನಾಯಕನ ಮಗನಾದ ರಾಮಪ್ಪ-ನಾಯಕನು ದೇವಲಾಪುರದ ವಸಂತ-ಮಲ್ಲಿಕಾರ್ಜುನ ದೇವರಿಗೆ ಪನ್ನುಲ-ಸುಂಕನಹಳ್ಳಿಯನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಈ ಗ್ರಾಮವನ್ನು ಕೋನಯ್ಯ-ರಾವುತನ ಮಗ ಮುಖವೇಣಿಯ ಮುಸಿಯ-ರಾವುತನು ದೇವಸ್ಥಾನದಲ್ಲಿ ಎರಡು ನಾಗಸ್ವರ ಮತ್ತು ಎರಡು ಡೋಲುಗಳನ್ನು ನುಡಿಸುವುದಕ್ಕೆ ಅನುಭೋಗಿಸುವುದೆಂದು ತಿಳಿಸುತ್ತದೆ. ಈ ಶಾಸನವನ್ನು ಕೆತ್ತಿದ ಅಕ್ಕಸಾಲಿಗ ಸಿರಿಯಣ್ಣನಿಗೆ ಗ್ರಾಮದಲ್ಲಿ ಒಂದು ಮಾನ್ಯದ ಭೂಮಿಯನ್ನು ದಾನ ನೀಡಲಾಯಿತು.

ಆ್ಯರಿಸೌಇಎ, 1924-25, ಸಂ. 1925 ರ 305-306; ಸೌಇಇ, IX ii, ಸಂ. 647.

ದೊಂಬರಹಳ್ಳಿ
(ಹೊಸಹಳ್ಳಿಯ ಉಪಗ್ರಾಮ)

ಸಂ. 468

(ಹೊಸಹಳ್ಳಿಯಿಂದ ಹುರಳಿಹಾಳಿಗೆ ಹೋಗುವ ಮಾರ್ಗದಲ್ಲಿ) ಪಾಳುಬಿದ್ದ ಗ್ರಾಮದ ಹತ್ತಿರ ಆಲದ ಮರದ ಕೆಳಗೆ ಬಿದ್ದಿರುವ ಕಲ್ಲಿನ ಮೇಲೆ

--

--

ಕನ್ನಡ

ಹಾಳಾಗಿದೆ. ವಿಮಿಡಿ-ನಾಯಕನು ಯೆಲೆಮಂಚುವಿನ ಗುರಮ್ಮನಿಗೆ ಒಂದು ಗ್ರಾಮವನ್ನು ದಾನ ನೀಡಿದ್ದನ್ನು ದಾಖಲಿಸುವಂತೆ ತೋರುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 300.

ಹಲ್ಯಂ

ಸಂ. 469

ಹನುಮಾನ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

ಶಕ 1085 (1075 ರ ಬದಲಾಗಿ) ಶ್ರೀಮುಖ ಪುಷ್ಯ, ಅಮವಾಸ್ಯೆ, ಸೋಮವಾರ, ಉತ್ತರಾಯಣ-ಸಂಕ್ರಾಂತಿ, ಸೂರ್ಯಗ್ರಹಣ, ವ್ಯತಿಪಾತ = ಕ್ರಿ.ಶ. 1154, ಜನವರಿ 15, ಶುಕ್ರವಾರ (ಸೋಮವಾರವಲ್ಲ ಮತ್ತು ಸೂರ್ಯಗ್ರಹಣವಿಲ್ಲ)

ಕನ್ನಡ (ಪದ್ಯ ಮತ್ತು ಗದ್ಯ)

ತೈಲನಿಂದ ವಿಕ್ರಮಾದಿತ್ಯ (VI) ನವರೆಗಿನ ವಂಶಾವಳಿಯಿದೆ. ಕೋಗಳಿ-500 ಮತ್ತು ಕೊಟ್ಟೂರು-12ಗಳನ್ನು ಕೊಟ್ಟೂರಿನಿಂದ ಆಳುತ್ತಿದ್ದ ಮಯೂರವರ್ಮನ ಸಂತತಿಯಾದ ಕದಂಬ ಕುಲದ ಮಹಾಮಂಡಲೇಶ್ವರ ನಾಚಿದೇವರಸನು ಕೊಟ್ಟೂರಿನ ಉತ್ತರಕ್ಕೆ ಇರುವ ಯೆಳೆಹದ ಆಗಸ್ತೇಶ್ವರ ದೇವಸ್ಥಾನದ ಪೂಜೆ, ನಿರ್ವಹಣೆ, ಜೀರ್ಣೋದ್ಧಾರ ಮುಂತಾದವುಗಳಿಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಇತರ ಅನೇಕ ಜನರು ಭೂಮಿ ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 316; ಸೌಇಇ, IX i, ಸಂ. 264.

ಹುರಳಿಹಾಳು

ಸಂ. 470

ಗ್ರಾಮದ ನೈಋತ್ಯಕ್ಕೆ ಹೊಲದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

--

ಧಾತು, ಆಶ್ವಯುಜ

ಕನ್ನಡ

ಹಾಳಾಗಿದೆ. ಅವುಬಳದೇವರಿಗೆ ನೀಡಿದ ದಾನವನ್ನು ಉಲ್ಲೇಖಿಸುವಂತೆ ತೋರುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 296.

ಜರಮಾಲಿ

ಸಂ. 471

ಬಸವಣ್ಣ ದೇವಸ್ಥಾನದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

--

ವಿಕೃತಿ, ಭಾದ್ರಪದ ಶು. (5)

ಕನ್ನಡ

ಹಾಳಾಗಿದೆ. ಕೆಂಚವೀರದೇವನ ಮಗ ವೀರಪ್ಪಯನಿಗೆ ಭೂಮಿ ದಾನ ನೀಡಿದ್ದನ್ನು ದಾಖಲಿಸುವಂತೆ ತೋರುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 301.

ಕತ್ರಿಕೆಹಟ್ಟಿ
(ತಿಪ್ಪೇಹಳ್ಳಿಯ ಉಪಗ್ರಾಮ)

ಸಂ. 472

ಗ್ರಾಮದ ನೈಋತ್ಯ ದಿಕ್ಕಿಗೆ ಸಿಹಿ ನೀರಿನ ಬಾವಿಯ ಹತ್ತಿರ ಬಿದ್ದಿರುವ ಕಲ್ಲಿನ ಮೇಲೆ

--

--

ಕನ್ನಡ

ಹಾಳಾಗಿದೆ. ಮುದು-ವೀರಪನ ಮಗ ಮುದು-ಬಸಪನು ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 298.

ಕೊಟ್ಟೂರು

ಸಂ. 473

ಗ್ರಾಮದಲ್ಲಿ ಕರ್ಣಮ್‌ನ ಮನೆಯ ಮುಂಭಾಗದ ಗೋಡೆಯಲ್ಲಿ ಕಟ್ಟಿದ ಕಲ್ಲಿನ ಮೇಲೆ

ವಿಜಯನಗರ, ಸದಾಶಿವರಾಯ

ಶಕ 1469, ಪ್ಲವಂಗ, ಮಾಘ ಶು. 10 = ಕ್ರಿ.ಶ. 1548, ಜನವರಿ 20, ಶುಕ್ರವಾರ

ಕನ್ನಡ

ಮಹಾಮಂಡಲೇಶ್ವರ ಅಳಿಯ-ರಾಮರಾಜ-ಮಹಾ-ಅರಸು ಕೊಟ್ಟೂರು ಸೀಮೆಯ ನಾವಿದರಿಗೆ ತೆರಿಗೆ ವಿನಾಯಿತಿ ಮಾಡಿದ್ದನ್ನು ತಿಳಿಸುತ್ತದೆ. ದಾನಕ್ಕೆ ಸಂಬಂಧಿಸಿದ ಆಜ್ಞೆಯು ತಿಮ್ಮೋಜ, ಭದ್ರೋಜ, ಕೊಂಡೋಜ ಮತ್ತು ಇತರ ಪ್ರತಿನಿಧಿಗಳ ಪರವಾಗಿದೆ.

ಆ್ಯರಿಸೌಇಎ, 1924-25, ಸಂ. 1925 ರ 317; ಸೌಇಇ, IX ii, ಸಂ. 628.

ಸಂ. 474

ಕರ್ಣಮ್‌ನ ಮನೆಯ ಮುಂಭಾಗದ ಗೋಡೆಯಲ್ಲಿ ಕಟ್ಟಿದ ಇನ್ನೊಂದು ಕಲ್ಲಿನ ಮೇಲೆ

ವಿಜಯನಗರ, ರಾಮರಾಜಯ್ಯ-ತಿಮ್ಮರಾಜಯ್ಯ (ಆನೆಗೊಂದಿಯಲ್ಲಿ ಆಳುತ್ತಿದ್ದನು)

ಶಕ 1502, ವಿಕ್ರಮ, ಮಾರ್ಗಶಿರ ಬ. 10 = ಕ್ರಿ.ಶ. 1580, ಡಿಸೆಂಬರ್ 1, ಗುರುವಾರ

ಕನ್ನಡ

ಬಾಗುಳಿಯ ಮಾಚಿ-ನಾಯಕನ ಮಗ ವಾದಿ-ನಾಯಕನು ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಬಾಗಳಿಯ ಕಲಿನಾಥ ದೇವರ ಸನ್ನಿಧಿಯಲ್ಲಿ ಹಸ್ತಿನಾವತಿ-ವಳಿತದ ಪಾಂಡ್ಯ-ನಾಡಿನ ಉಪ-ವಿಭಾಗವಾದ ಕೋಗಳಿ ವೇಂಠೆಯ ಉಪ-ಭಾಗವಾದ ಕೊಟೂರು-ಸೀಮೆಯ ಕುರುಬರಿಗೆ ಕುರಿಗಳ ಮೇಲಿನ ತೆರಿಗೆಯ ವಿನಾಯಿತಿ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 318; ಸೌಇಇ, IX ii, ಸಂ. 685.

ಸಂ. 475

ಪಾಳುಬಿದ್ದ ಕಲ್ಲೇಶ್ವರ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ (ವಿಕ್ರಮಾದಿತ್ಯ VI)

ಚಾಲುಕ್ಯ-ವಿಕ್ರಮ ವರ್ಷ 36, ನಂದನ, ವೈಶಾಖ ಶು. 3, ಬೃಹಸ್ಪತಿವಾರ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1112, ಏಪ್ರಿಲ್ 1, ಸೋಮವಾರ

ಕನ್ನಡ

ಮಹಾಮಂಡಲೇಶ್ವರ ತ್ರಿಭುವನಮಲ್ಲ-ಪಾಂಡ್ಯದೇವನು ನೊಣಂಬವಾಡಿ-32000 ವನ್ನಾಳುತ್ತಿದ್ದಾಗ, ಕೋಗಳಿ-500ನ್ನಾಳುತ್ತಿದ್ದ ಕದಂಬ ವಂಶದ ಮಹಾಮಂಡಲೇಶ್ವರ ಘಟ್ಟಿಯರಸನು ಕೊಟ್ಟೂರಿನ ಮೂಲಸ್ಥಾನ-ರಾಮೇಶ್ವರ ದೇವರ ಪೂಜೆಗೆ ಮತ್ತು ನೈವೇದ್ಯಕ್ಕೆ ಭೂಮಿ ಮತ್ತು ಮನೆ-ನಿವೇಶನಗಳನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ದಾನವನ್ನು ದೇವಸ್ಥಾನದ ಆಚಾರ್ಯ ಅಮೃತರಾಶಿ-ಪಂಡಿತನ ಕೈಯಲ್ಲಿ ಆತನ ಪಾದ ತೊಳೆದು ನೀಡಲಾಯಿತು.

ಆ್ಯರಿಸೌಇಎ, 1924-25, ಸಂ. 1925 ರ 319; ಸೌಇಇ, IX i, ಸಂ. 187.

ಸಂ. 476

ಮೂರುಕಲ್ಲು-ಮಠದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

ಹೊಯ್ಸಳ, ಪ್ರತಾಪಚಕ್ರವರ್ತಿ ವೀರ-ನರಸಿಂಹ(II)

ವಿಷ್ಣು, ಆಷಾಢ ಬ. 5, ಆದಿವಾರ = ಕ್ರಿ.ಶ. 1221, ಜುಲೈ 11, ಆದಿವಾರ

ಕನ್ನಡ

ಅರಸರ ಅಧಿಕಾರಿ ಕೇಶವ-ದಂಡನಾಯಕನು ಮಾವಿನಮಾಗೆ ಗ್ರಾಮವನ್ನು ಶಂಕರನಾರಾಯಣ-ಭಟ್ಟ, ಭೇರುಂಡನ-ಬಮ್ಮಯ್ಯ, ಅಚ್ಯುತ-ಭಟ್ಟ ಮತ್ತು ಚೀಲಯ-ನಾಯಕನ (ಮಗ) ನಾಗರಿಗೆ ಸತ್ರದ ನಿರ್ವಹಣೆಗೆ ದಾನ ನೀಡಿದನು ಮತ್ತು ಈ ದಾನದ ಸಂರಕ್ಷಣೆಗೆ ಮುಮ್ಮುರಿದಂಡಗಳಾದ ಹರಿಗ ಕಾಳ-ಬೋವ, ಜಗದ್ದಳ ಬಮ್ಮದೇವನ ಮಗ ಸೋಯಿದೇವ ಮತ್ತು ಘಟ್ಟಿದೇವರನ್ನು ನೇಮಿಸಿದನು. ಈ ಶಾಸನವನ್ನು ಸೇನಬೋವ ಸೋಮಯ್ಯನು ಬರೆದನು ಮತ್ತು ಕಲ್ಲುಕುಟಿಗ ಅಣ್ಣೋಜನು ಕೆತ್ತಿದನು. ಮಂತ್ರಿ ಮುಕ್ತಿದೇವನು ಉಡಕೇಶ್ವರ ದೇವರಿಗೆ ಭೂಮಿ ದಾನ ನೀಡಿದನು.

ಆ್ಯರಿಸೌಇಎ, 1924-25, ಸಂ. 1925 ರ 320; ಸೌಇಇ, IX i, ಸಂ. 338.

ಕುಡಿರಡವು

ಸಂ. 477

ಗ್ರಾಮದಲ್ಲಿ ಪ್ರವೇಶದ್ವಾರದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1673, (ಆಂ)ಗಿರಸ, ಪುಷ್ಯ ಶು. ..... = ಕ್ರಿ.ಶ. 1752 (ಶಕ 1674)

ಕನ್ನಡ

ಹಾಳಾಗಿದೆ. ಚಿನ್ನಯರಾಜನು ಹಿರೆ-ಕುಡಿರಡು ಗ್ರಾಮವನ್ನು ವಿರೂಪಾಕ್ಷ-ವಿದ್ಯಾಭಿನವ ಶಂಕರ-ಭಾರತಿ-ಸ್ವಾಮಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 294.

ಲೋಕಿಕೆರೆ

ಸಂ. 478

ಗ್ರಾಮದ ಹಳೆಯ ಕೆರೆಯ ಹತ್ತಿರ ಬಿದ್ದಿರುವ ಕಲ್ಲಿನ ಮೇಲೆ

--

--

ಕನ್ನಡ

ಇದು (ಕಲ್ಲುದೊರೆತ ಸ್ಥಳ?) ಶ್ರೀ ರತ್ನಭೂಷಣಭಟಾರಕನ ಪ್ರೀತಿಯ ಶಿಷ್ಯ ಲೋಕೆಯಕೆರೆಯ ಮರಗೊಂಡನ ನಿಸಿದಿ ಎಂದು ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 299.

ಮರಬ

ಸಂ. 479

ಗ್ರಾಮದ ಒಂದು ಹೊಲದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ಕೃಷ್ಣರಾಯ

ಶಕ 1450, ಸರ್ವಧಾರಿ, ಶ್ರಾವಣ ಶು. 15, ಶುಕ್ರವಾರ = ಕ್ರಿ.ಶ. 1528, ಜುಲೈ 31, ಶುಕ್ರವಾರ

ಕನ್ನಡ

ಎಲಬರಿಗೆಯ ಮಲ್ಲಪಣ್ಣನು ತನ್ನ ತಾಯಿ ವೀರಮ್ಮಳಿಗೆ ಪುಣ್ಯವಾಗಲೆಂದು ಒಂದು ಮಳಿಗೆಯನ್ನು ಕಟ್ಟಿಸಿ, ಅದನ್ನು ಮಲಪುರದಲ್ಲಿ ನಡೆಯುವ ಜಾತ್ರೆಯಿಂದ ಬಂದ ಸುಂಕದ ಜೊತೆಗೆ ಮತ್ತು ಪಾಂಡ್ಯ-ನಾಡಿನಲ್ಲಿರುವ ಮೊರಬದಲ್ಲಿ ಭೂಮಿಯನ್ನು ಸೂರ್ಯನಾರಾಯಣ ದೇವರಿಗೆ (?) ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 323; ಸೌಇಇ, IX ii, ಸಂ. 523.

ಸಂ. 480

ಗ್ರಾಮದ ಬೀದಿಯಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

--

--

ಪ್ರಾಚೀನ

ಶಾಸನ ಸಂ. 463 ರಂತೆಯೇ ಇದೆ.

ಆ್ಯರಿಸೌಇಎ, 1924-25, ಸಂ. 1925 ರ 324.

481

ಅದೇ ಸ್ಥಳದಲ್ಲಿ ಇನ್ನೊಂದು ಕಲ್ಲಿನ ಮೇಲೆ

--

--

ಪ್ರಾಚೀನ

ಶಾಸನ ಸಂ. 463 ರಂತೆಯೇ ಇದೆ.

ಆ್ಯರಿಸೌಇಎ, 1924-25, ಸಂ. 1925 ರ 325.

ಮೊಲೆನೂರು

(ಕೆಂಚಮಲ್ಲನಹಳ್ಳಿಯ ಉಪಗ್ರಾಮ)

ಸಂ. 482

ಗ್ರಾಮದ ಪ್ರವೇಶದ್ವಾರದಲ್ಲಿರುವ ಕಲ್ಲಿನ ಮೇಲೆ

--

--

ಕನ್ನಡ

ಮಹಾಮಂಡಲೇಶ್ವರ ಘಟ್ಟದೇ(ವರ)ಸನನ್ನೊಳಗೊಂಡ ಕೆಲವು ಜನರ ಉಪಸ್ಥಿತಿಯಲ್ಲಿ ಮಲ್ಲಣನು ಗಡಿಯ ಮೇಲೆ ನಡೆದ ನಂತರ ಮೊಲನೂರು ಗ್ರಾಮದ ಗಡಿಯನ್ನು ಗೊತ್ತುಪಡಿಸಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 297.

ತೂಲಹಳ್ಳಿ.

ಸಂ. 483

ದೇವಸ್ಥಾನದ ಮುಂದೆ ಬಿದ್ದಿರುವ ಒಂದು ಕಲ್ಲಿನ ಮೇಲೆ

--

ಕ್ರೋಧನ, ಕಾರ್ತ್ತಿಕ ಶು. ದಶಮಿ

ಕನ್ನಡ

ಕಣಕುಪ್ಪೆ-ದುರ್ಗದ ಮಹಾನಾಯಕಾಚಾರ್ಯ ತಮ್ಮಲ-ನಾಯಕನ ಮಗ ಯರ್ರಪ-ನಾಯಕನು ಬಸವೇಶ್ವರ ದೇವಸ್ಥಾನ ಕಟ್ಟಿಸಿದ್ದನ್ನು ಉಲ್ಲೆಖಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 311.

ಸಂ. 484

ಗ್ರಾಮದ ಹೊರಗೆ ಬಿದ್ದಿರುವ ಒಡೆದ ನಾಗರ-ಕಲ್ಲಿನ ಮೇಲೆ

--

ಚಾಲುಕ್ಯ-ವಿಕ್ರಮ ವರ್ಷ 18, ಶ್ರೀಮುಖ = ಕ್ರಿ.ಶ. 1093

ಕನ್ನಡ

ಹಾಳಾಗಿದೆ. (ಈ ನಾಗರ ಕಲ್ಲನ್ನು) (ಕು)ಮಾರಶಕ್ತಿ-ಪಂಡಿತನು ಪ್ರತಿಷ್ಠಾಪಿಸಿದನೆಂದು ತಿಳಿಸುವಂತೆ ತೋರುತ್ತದೆ ಮತ್ತು ಶಿಲ್ಪಿ ಕೇತೋಜನನ್ನು ಉಲ್ಲೇಖಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 312.

ಸಂ. 485

ಗ್ರಾಮದ ಹೊರಗೆ ಬಿದ್ದಿರುವ ಒಡೆದ ವೀರಗಲ್ಲಿನ ಮೇಲೆ

--

--

ಕನ್ನಡ

ತುಂಬ ಹಾಳಾಗಿದೆ. ಒಬ್ಬ ವೀರನ ವಿಜಯವನ್ನು ದಾಖಲಿಸುವಂತೆ ತೋರುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 313.

ಉಜ್ಜಿನಿ

ಸಂ. 486

ಸಿದ್ಧೇಶ್ವರ ದೇವಸ್ಥಾನದ ಆವರಣದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

--

ಶಕ (1115?), ಪರಿಧಾವಿ, ಆಶ್ವಯುಜ = ಕ್ರಿ.ಶ. 1194 (ಶಕ 1114)

ಕನ್ನಡ (ಪದ್ಯ)

ಕದಂಬ-ಕುಲದ ಜಗದ್ದಳ-ಪಾಂಡ್ಯನು ಕಲಿದೇವರಿಗೆ ಕೋಗಳಿಯಲ್ಲಿ 400 ಕಂಬ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಬಸವೋಜನ ಮಗ ಅಕ್ಕಾಸಾಲಿಗ ಕೇತೋಜನು ಶಾಸನವನ್ನು ಕೆತ್ತಿದನು.

ಆ್ಯರಿಸೌಇಎ, 1924-25, ಸಂ. 1925 ರ 307.

ಸಂ. 487

ಅದೇ ದೇವಸ್ಥಾನದ ಮಧ್ಯದ ಗುಡಿಯ ಪಕ್ಕದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

ವಿಜಯನಗರ, ಅಚ್ಯುತರಾಯ-ಮಹಾ(ರಾಯ)

ಶಕ 1461, ವಿಕೃತಿ, ಭಾದ್ರಪದ ಶು. 12, ಮಂಗಳವಾರ = ಕ್ರಿ.ಶ. 1539, ಅಗಸ್ಟ್ 26, ಮಂಗಳವಾರ

ಕನ್ನಡ (ಗದ್ಯ) ಮತ್ತು ಸಂಸ್ಕೃತ (ಪದ್ಯ)

ಅರಸನು ಬ್ರಾಹ್ಮಣರಿಗೆ ನೀಡಿದ ಆನಂದನಿಧಿ ದಾನದ ಬಗ್ಗೆ ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 308; ಸೌಇಇ, IX ii, ಸಂ. 594.

ಸಂ. 488

ಅದೇ ದೇವಸ್ಥಾನದ ಮಧ್ಯದ ಗುಡಿಯ ಮುಂದಿನ ಮಂಟಪದಲ್ಲಿ ಕಂಬದ ಮೇಲೆ

ಯಾದವ, ಮಹಾದೇವರಾಯ

ವಿಭವ, ಕಾರ್ತಿಕ ಬ. ಅಮವಾಸೆ, ಸೋಮವಾರ, ಸೂರ್ಯಗ್ರಹಣ = ಕ್ರಿ.ಶ. 1268, ನವೆಂಬರ್ 6, ಮಂಗಳವಾರ

ಕನ್ನಡ

ಮಹಾಪ್ರಧಾನ ಸರ್ವಾಧಿಕಾರಿ ತಿಪ್ಪರಸನ ಅಳಿಯ ಚಾವುಂಡರಸನು ಪಾಂಡ್ಯ-ನಾಡಿನ ಸರ್ವಾಧಿಕಾರಿಯಾಗಿದ್ದನು ಮತ್ತು ಆತನ ಕೆಳಗೆ ಸುಂಕದ ಚವುಡರಸನು ಸುಂಕಾಧಿಕಾರಿಯಾಗಿದ್ದನು. ಚಿಗುಟೇರದ ಸುಂಕದ ಚವುಡರಸ ಮತ್ತು ವುಜ್ಜನಿಯ ಸೇನಬೋವ ಗೋವಿಂದರಸನ ಮಗ ಸುಂಕದ ಬೋಗಯರು ಅಳಿಯ ಚಾವುಂಡರಸನ ಆಜ್ಞೆಯ ಮೇರೆಗೆ, ಗುಡುಗಳು (ಗವುಂಡುಗಳು) ವ್ಯಾಪಾರದ ಮೇಲಿನ ತೆರಿಗೆಯನ್ನು ದಾನ ನೀಡಿದ್ದನ್ನು ಮತ್ತು ಕಗರ ಗೋಪಯನು ಮಲ್ಲಿಕಾರ್ಜುನ ದೇವರ ಸೇವೆಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 309; ಸೌಇಇ, IX i, ಸಂ. 375; ಮಾಕ, 8(1), ಪು. 41-42.

ಸಂ. 489

ಗ್ರಾಮದ ಒಂದು ಹೊಲದಲ್ಲಿ ನಿಲ್ಲಿಸಿದ ಒಡೆದ ಕಲ್ಲಿನ ಮೇಲೆ

--

ಶಕ 1482, ರೌದ್ರಿ, ಆಷಾಢ ಶು. 5 = ಕ್ರಿ.ಶ. 1560, ಜೂನ್ 28

ಕನ್ನಡ

ವೇಲೂರಿನ ಮಾರ್ಗಸಹಾ(ಯ)-ನಾಯಕನು ತನ್ನ ತಂದೆಗೆ ಪುಣ್ಯವಾಗಲೆಂದು ಭೂಮಿ ಮತ್ತು ಎರಡು ಹುಣಸೆ ಮರಗಳನ್ನು ಲಿಂಗಣ್ಣೊಡೆಯನ ಶಿಷ್ಯನಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 310.

ಸಂಡೂರು ತಾಲೂಕು

ಅಂಕಮನಹಾಳು

ಸಂ. 490

ಗ್ರಾಮದ ಪಶ್ಚಿಮಕ್ಕೆ ಪಾಳುಬಿದ್ದ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

--

ನಳ, ಆಶ್ವಿಜ ಶು. 5

ಕನ್ನಡ

ಯೆರೋಜನ ಮಗ ತಿಮ್ಮಣನು ಅಂಕಮನಹಾಳಿನ ತಿರುವೆಂಗಳನಾಥ ದೇವರಿಗೆ ಗರುಡ-ಕಂಭವನ್ನು ಮತ್ತು ತಿಮ್ಮೋಜನ ಮಗ ಕೊಂಡಯ್ಯನು ದೀಪಮಾಲೆ-ಕಂಭವನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 291.

ಅಂತಾಪುರ

ಸಂ. 491

ಶಿಥಿಲವಾದ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1475, ಪ್ರಮಾದೀಚ, ಕಾರ್ತಿಕ ಶು. 12 = ಕ್ರಿ.ಶ. 1553, ಅಕ್ಟೋಬರ್ 18

ಕನ್ನಡ

ಉಟಗಲ ತಿಮ್ಮರಸನು ಸಾದಾಶಿವರಾಯ, ರಾಮರಾಜ ಮತ್ತು ತಿರುಮಲರಾಜರಿಗೆ ಪುಣ್ಯವಾಗಲೆಂದು ಅಂತಾಪುರದ ಮಲ್ಲಿಕಾರ್ಜುನ ದೇವರಿಗೆ ನಿರಂತರ ದೀಪ ಉರಿಸಲು ಕೆಲವು ತೆರಿಗೆಗಳನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 732.

ಸಂ. 492

ಅದೇ ದೇವಸ್ಥಾನದ ಹತ್ತಿರ ನಿಲ್ಲಿಸಿದ ಇನ್ನೊಂದು ಕಲ್ಲಿನ ಮೇಲೆ

ವಿಜಯನಗರ, ಸದಾಶಿವದೇವ-ಮಹಾರಾಯ

ಶಕ 1469, ಪ್ಲವಂಗ, ಆಷಾಢ ಬ. 3 = ಕ್ರಿ.ಶ. 1547, ಜುಲೈ 5

ಕನ್ನಡ

ಹಾಳಾಗಿದೆ. ಹರಪಣ್ಣನು ಗೌಡ, ಸೇನಬೋವ ಮತ್ತು ಗ್ರಾಮದ ಜನರ ಒಪ್ಪಿಗೆ ಪಡೆದು ಆವಿನಮಡುವು ಸೀಮೆಯಲ್ಲಿರುವ ಅನಂತಾಪುರದಲ್ಲಿ ಶಿಥಿಲವಾಗಿದ್ದ ಮಲ್ಲಿಕಾರ್ಜುನ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಿದ್ದನ್ನು ತಿಳಿಸುತ್ತದೆ. ತಿಮ್ಮದಾಸರಿಯನ್ನು ಉಲ್ಲೇಖಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 733.

ಸಂ. 493

ಅದೇ ದೇವಸ್ಥಾನದ ಹತ್ತಿರ ಬಿದ್ದಿರುವ ಮೂರನೆಯ ಕಲ್ಲಿನ ಮೇಲೆ

ವಿಜಯನಗರ, ಸದಾಶಿವದೇವ-ಮಹಾರಾಯ

ಶಕ 1473, ವಿರೋಧಿಕೃತ, ಆಷಾಢ ಶು. 12 = ಕ್ರಿ.ಶ. 1551, ಜೂನ್ 15

ಕನ್ನಡ

ಮಹಾಮಂಡಲೇಶ್ವರ ರಾಮರಾಜ ತಿರುಮಲರಾಜನ ಮಗ ತಿಮ್ಮರಾಜನು ಹಿರಿಯ-ಅಂತಾಪುರದ ಮಲ್ಲಿಕಾರ್ಜುನ ದೇವರಿಗೆ ಆವಿನಮಡುವು ಕೆರೆಯ ಕೆಳಗೆ ಒಂದು ತೋಟ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 734.

ಆವಿನಮಡುಗು

ಸಂ. 494

ಗ್ರಾಮದ ಹತ್ತಿರ ಕೆರೆಯ ಕೆಳಗೆ ಒಂದು ಗುಂಡಿನ ಮೇಲೆ

ವಿಜಯನಗರ, ಸದಾಶಿವದೇವ-ಮಹಾರಾಯ

ಶಕ 1473, ವಿರೋಧಿಕೃತ, ಆಷಾಢ ಶು. 12 = ಕ್ರಿ.ಶ. 1551, ಜೂನ್ 15

ಕನ್ನಡ

ಮಹಾಮಂಡಲೇಶ್ವರ ರಾಮರಾಜ ತಿಮ್ಮರಾಜನ ಮಗ ವಿಠಲರಾಜ ದೇವ-ಮಹಾಅರಸು ಅಂತಾಪುರದ ಮಲ್ಲಿಕಾರ್ಜುನ ದೇವರಿಗೆ ಆವಿನಮಡುವು ಕೆರೆಯ ಕೆಳಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಅಪ್ರಕಟಿತ.

ಬನ್ನಿಹಟ್ಟಿ

ಸಂ. 495

ಹನುಮಾನ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

--

[ಶಕ] 149[5], ಆಂಗಿ ..... = ಕ್ರಿ.ಶ. 1572, (ಶಕ 1494)

ಕನ್ನಡ

ತ್ರುಟಿತ. ಪ್ರಾರ್ಥನೆಯಿರುವ ಭಾಗ ಮತ್ತು ದಿನಾಂಕ ಇರುವ ಒಂದು ಭಾಗ ಮಾತ್ರ ಉಳಿದಿದೆ. ಉಳಿದ ಭಾಗ ನಾಶವಾಗಿದೆ.

ಆ್ಯರಿಸೌಇಎ, 1944-45, ಸಂ. ಬಿ 79.

ಭುಜಂಗನಗರ

ಸಂ. 496

ಸಡೆಕಾರನ ಜಾಗೀರು ಎಂದು ಕರೆಯುವ ಹೊಲದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

--

ಕ್ರಿ.ಶ. 11 ನೆಯ ಶತಮಾನ

ಕನ್ನಡ

ಚೂರಬೊಲ್ಲಿಯ ಜಕ್ಕಗಾವುಡನ ಮಗ ಕಾಳೆಯನು ಹಟ್ಟಿಗೆರೆಯಲ್ಲಿ ನಡೆದ ಒಂದು ದಾಳಿಯಲ್ಲಿ ಹೋರಾಡಿ ಗೆದ ವಿಷಯ ತಿಳಿಸುತ್ತದೆ.

ಆ್ಯರಿಇಎ, 1943-44, ಸಂ. ಬಿ 74.

ಚಿಕ್ಕಕೆರಿಯಾಗಿನಹಳ್ಳಿ

ಸಂ. 497

ಗ್ರಾಮದ ಕೆರೆದಂಡೆಯ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ಅಚ್ಯುತದೇವರಾಯ

ಶಕ 1461, ವಿಕಾರಿ, ಭಾದ್ರಪದ ಶು. 12 = 1539, ಅಗಸ್ಟ್ 26, ಮಂಗಳವಾರ

ಸಂಸ್ಕೃತ, ಕನ್ನಡ; ಕನ್ನಡ

ಬಯಕಾರ ರಾಮಪ್ಪಯ್ಯನು ತನ್ನ ತಾಯಿ ಹಿರಿಯ-ಲಕ್ಕರಸಮ್ಮನ ಹೆಸರಿನಲ್ಲಿ ಹಿರಿಯ-ಲಕ್ಕಸಮುದ್ರ ಕೆರೆಯನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ. ಪೆದ್ದ-ತಿಮ್ಮಯ ಮತ್ತು ಲಕ್ಕಾಂಬಿಕರ ಮಗ, ರಾಮ-ಮಂತ್ರಿ ಮತ್ತು ತೆಲಗಮಾಂಬರ ಮೊಮ್ಮಗ, ಮತ್ತು ಸಿಂಗಯನ ಮಗ ಭಾವಯ-ಮಂತ್ರಿಯ ಮರಿಮಗನಾದ ರಾಮಯನು ಕೊಂಡವೀಡು ವಿಭಾಗದ ಮುಖ್ಯಸ್ಥನಾಗಿದ್ದನೆಂದು ತಿಳಿಸುತ್ತದೆ. ಈತನು ತಿಮ್ಮಾಪುರ, ಚಿನ್ನ-ತಿಮ್ಮಾಪುರ ಮತ್ತು ಮಂಗಿಮಾವಿನಹಳ್ಳಿ ಅಗ್ರಹಾರಗಳನ್ನು ಕಟ್ಟಿಸಿದನು. ಪೆದ್ದ-ತಿಮ್ಮಾಪುರದಲ್ಲಿ ದೇವಸ್ಥಾನಗಳನ್ನು ಕಟ್ಟಿಸಿ ಗೋಪಿನಾಥ, ಬಾಚೇಶ್ವರ, ಕೃಷ್ಣೇಶ, ಅಮ್ಮೇಶ, ಮಲ್ಲಿಕಾರ್ಜುನ, ವೀರಭದ್ರ ಮತ್ತು ವಿಶ್ವನಾಥ ದೇವರನ್ನು ಪ್ರತಿಷ್ಠಾಪಿಸಿ ಈ ದೇವರಿಗೆ ಹೊಳಗುಂದಿ ಗ್ರಾಮವನ್ನು ದಾನ ನೀಡಿದನು. ತನ್ನ ಮಗಳು ಅಚ್ಯುತಮ್ಮನ ಹೆಸರಿನಲ್ಲಿ ಅಚ್ಯುತಮ್ಮಪುರವನ್ನು ಕಟ್ಟಿಸಿ, ಅಲ್ಲಿ ತಾನು ಕಟ್ಟಿಸಿದ ದೇವಸ್ಥಾನದಲ್ಲಿ ಕೃಷ್ಣದೇವರನ್ನು ಪ್ರತಿಷ್ಠಾಪಿಸಿದನು. ಆತನು ಅಚ್ಯುತಮ್ಮಸಮುದ್ರ, ಬಾಚಸಮುದ್ರ, ರಾಮಸಮುದ್ರ, ಅಕ್ಕಸಮುದ್ರ, ಕಾಮಸಮುದ್ರ, ಅಮ್ಮಸಮುದ್ರ, ವೀರಸಮುದ್ರ, ಅಚ್ಯುತೇಂದ್ರಸಮುದ್ರ, ವೆಂಕಟೇಂದ್ರಸಮುದ್ರ, ಪಿನ-ಲಕ್ಕಸಮುದ್ರ, ಚಿನ್ನ-ತಿಪ್ಪಸಮುದ್ರ, ಪೆದ್ದ-ಲಕ್ಕಸಮುದ್ರ, ಲಿಂಗಾಲಯತಟಾಕ, ವೆಂಕಟಯ್ಯತಟಾಕ, ಪೆದ-ತಿಮ್ಮಸಮುದ್ರ ಮತ್ತು ಚಿನ-ಬಾಚಸಮುದ್ರ ಎಂಬ ಹದಿನಾರು ಕೆರೆಗಳನ್ನು ಕಟ್ಟಿಸಿದನು. ಸಂಗೀತದ ಬಗ್ಗೆ ಒಂದು ಪುಸ್ತಕವನ್ನು ಬರೆದನು. ಈತನ ತಂದೆಯ ಸಹೋದರರಾದ ತಿಮ್ಮ-ಮಂತ್ರಿ, ಸುರೇಂದ್ರ, ಭಾಸ್ಕರ-ಚಮೂಪತಿ ಮತ್ತು ಭಾವಯ್ಯರು ಅರಸನ ಕೆಳಗೆ ಉನ್ನತ ಅಧಿಕಾರಿಗಳಾಗಿದ್ದರು.

ಆ್ಯರಿಸೌಇಎ, 1924-25, ಸಂ. 1925 ರ 302; ಸೌಇಇ, IX ii, ಸಂ. 593.

ಸಂ. 498

ಹನುಮಾನ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

--

ಪ್ರಮೋದೂತ, ವೈಶಾಖ ಶು. 1 = (ಕ್ರಿ.ಶ. 1690, ಮಾರ್ಚ್ 31)

ಕನ್ನಡ

ಗುಡೆಕೋಟೆ ಮತ್ತು ಸಂಡೂರಿನ ಇಮ್ಮಡಿ-ರಾಜಪ-ನಾಯಕನು ಹೊರಮಲೆ-ಸೀಮೆಯ ಜನರಿಗೆ ಒಂದು ಪ್ರಕಟಣೆಯನ್ನು ಹೊರಡಿಸಿ ಆದರ ಪ್ರಕಾರ ಗುಡೆಕೋಟೆಯ ಆಡಳಿತದ ಸಮಯದಲ್ಲಿದ್ದಂತೆ ನೋಡಿಕೊಳ್ಳುವುದಾಗಿ ಆಶ್ವಾಸನೆ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 288; ಮೈಆರಿ, 1935, ಸಂ. 52, ಪು. 148-149.

ಸಂ. 499

ವಿರಕ್ತಮಠದ ಮೊಗಸಾಲೆಯಲ್ಲಿ ಕಟ್ಟಿರುವ ಕಲ್ಲಿನ ಮೇಲೆ

--

ನಳ, ಆಶ್ವಿಜ ಶು. 10 = (17 ನೆಯ ಶತಮಾನ)

ಕನ್ನಡ

ಗುಡೆಕೋಟೆ ಮತ್ತು ಸೊಂಡೂರಿನ ರಾಜಶ್ರೀ ರಾಜಪ-ನಾಯಕನ ಆಜ್ಞೆಯ ಮೇರೆಗೆ ಬಮ್ಮಿ-ನಾಯಕನು ಹೊರಮಲೆ-ಸೀಮೆಯ ಜನರಿಗೆ ಒಂದು ಕೌಲು ನೀಡಿ ದೇಶದ ಆ ಭಾಗದಲ್ಲಿ ಹೊಸದಾಗಿ ಹುಟ್ಟಿದ ಮಕ್ಕಳ (ಬಾಲ ತೆರಿಗೆ) ಮತ್ತು ಸತ್ತವರ ಮೇಲೆ ತೆರಿಗೆ (ಮೃತನ-ಗಾಣಿಕೆ) ವಿಧಿಸಬಾರದೆಂದು ತಿಳಿಸಿದನು.

ಆ್ಯರಿಸೌಇಎ, 1924-25, ಸಂ. 1925 ರ 289; ಮೈಆರಿ, 1935, ಸಂ. 50, ಪು. 146-147.

ಸಂ. 500

ವೀರಭದ್ರ ದೇವಸ್ಥಾನದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ಸದಾಶಿವರಾಯ

ಶಕ 1469, ಸಾಧಾರಣ, ಕಾರ್ತಿಕ ಬ. 3 = ಕ್ರಿ.ಶ. 1550, ಅಕ್ಟೋಬರ್ 28 (ಶಕ 1472)

ಕನ್ನಡ

ರಾಜಾಧಿರಾಜ ರಾಜಪರಮೇಶ್ವರ ಶ್ರೀ ಮಲ್ಲಪ-ನಾಯಕನ ಕಾರ್ಯಕರ್ತನಾದ ಬ್ರಂಹ-ರಾವುತನು ಚೋರಮನೂರ ಗೌಡ, ಸೇನಬೋವ, ಬಡಗಿ ಮತ್ತು ಕಮ್ಮಾರರಿಗೆ ಮೂರು ಆಳತೆ ಕಾಳುಗಳನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ. ಅಲ್ಲದೆ ಅವರು ಒಂದು ವರ್ಷಕ್ಕೆ ಮೂರು ವರಹಗಳ ತೆರಿಗೆ ನೀಡಬೇಕೆಂದೂ ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 290; ಮೈಆರಿ, 1935, ಸಂ. 51, ಪು. 147-148.

ದರೋಜಿ

ಸಂ. 501

ಬೆಟ್ಟದ ಮೇಲೆ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಅರೆಗಂಬದ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲ (ವಿಕ್ರಮಾದಿತ್ಯ VI)

ವರ್ಷ 29, ಪಾರ್ಥಿವ, ಕಾರ್ತ್ತಿಕ ಶು. ಪಾಡಿಮೆ, ಬೃಹಸ್ಪತಿವಾರ = ಕ್ರಿ.ಶ. 1105, ಅಕ್ಟೊಬರ್ 10, ಮಂಗಳವಾರ

ಕನ್ನಡ

ಮಹಾಮಂಡಲೇಶ್ವರ ಕಾಚರಸನು ದೊರವಡಿ ಕೋಟೆಯಲ್ಲಿರುವ ರಾಮೇಶ್ವರ ದೇವರಿಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ವಿಪ್ರೊರಿ, 1988-91, ಪು. 245-246.

ಸಂ. 502

ಗ್ರಾಮದ ಕೆರೆಯ ದಂಡೆಯ ಮೇಲೆ ನಿಲ್ಲಿಸಿದ ಕಲ್ಲಿನ ಮೇಲೆ

--

--

ಪರ್ಶಿಯನ್

ಕೆರೆಯ ನೀರನ್ನು ಬಾಯಾರಿ ಬಂದ ಪ್ರಯಾಣಿಕರಿಗೆ ಗುರು ಮುಹಮ್ಮದನ ಶಾಸನದಲ್ಲಿ ಹಂಚಬೇಕು ಎಂದು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 726.

ಸಂ. 503

ಮಸೀದಿಯ ಗೋಡೆಯಲ್ಲಿ ಕಟ್ಟಿದ ಕಲ್ಲಿನ ಮೇಲೆ

--

19ನೆಯ ಶತಮಾನ

ಅರೇಬಿಕ್

ಕುರಾನಿನ ಒಂದು ಭಾಗವಿದ್ದು ನಾಲ್ಕು ಖಲೀಫರ ಹೆಸರುಗಳಿವೆ.

ವಿಪ್ರೊರಿ, 1988-91, ಪು. 246.

ಸಂ. 504

ಇನ್ನೊಂದು ಮಸೀದಿಯ ಗೋಡೆಯಲ್ಲಿ ಕಟ್ಟಿದ ಕಲ್ಲಿನ ಮೇಲೆ

--

19ನೆಯ ಶತಮಾನ

ಪರ್ಶಿಯನ್

ಕಟ್ಟಡ (ಮಸೀದಿ)ವನ್ನು ಟೀಪು ಸುಲ್ತಾನನ ಕಾಲದಲ್ಲಿ ಕಟ್ಟಲಾಗಿದೆ ಎಂದು ತಿಳಿಸುತ್ತದೆ.

ವಿಪ್ರೊರಿ, 1988-91, ಪು. 246.

ಗೆಂತಿಕಟ್ಟೆ
(ಸೋವೇನಹಳ್ಳಿಯ ಉಪಗ್ರಾಮ)

ಸಂ. 505

ಗ್ರಾಮದಲ್ಲಿ ಗಾಳಿಗನ ಕಣ ಎಂದು ಕರೆಯಲ್ಪಡುವ ಸ್ಥಳದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

--

22, ಪ್ರಮಾದಿ, ಜ್ಯೇಷ್ಠ, ಪುಣ್ಣಮಿ, ಮಂಗಳವಾರ

ಕನ್ನಡ

ಸಾವಿಗ ಎಂಬ ವೀರನು ಮೋರದಕೋಟೆಯ ಮೇಲೆ ಮುತ್ತಿಗೆ ಹಾಕಿದ ಸಿಂಗ (?)ನ ಸೈನ್ಯದೊಡನೆ ಹೋರಾಡಿ ಸಾವನ್ನಪ್ಪಿದ್ದನ್ನು ದಾಖಲಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 285.

ಹನುಮನಹಳ್ಳಿ

ಸಂ. 506

ಗ್ರಾಮದ ಒಂದು ಹೊಲದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

--

--

ಕನ್ನಡ

ಮಾನ್ಯ ಭೂಮಿಯು ಹನುಮಾ ಮಾದಯ, ಗಿಡಯ ಮುಂತಾದವರಿಗೆ ಸೇರಿದ್ದೆಂದು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 736.

ಹಿರೇಹಾಳು
(ಕಲಿಂಗೇರಿಯ ಹತ್ತಿರ)

ಸಂ. 507

ಕಲಿಂಗೇರಿ ಮತ್ತು ಹಿರೇಹಾಳುಗಳ ಮಧ್ಯದ ಮಾರ್ಗದಲ್ಲಿರುವ ಒಂದು ಮಸೀದಿಯ ಹತ್ತಿರದ ಬಂಡೆಯ ಮೇಲೆ

--

--

ಕನ್ನಡ

ಈ ಭೂಮಿಯು ವಾಮರಸ ಅಮಿತಯ್ಯ-ದಣ್ಣಾಯಕನ ದಾನ ಎಂದು ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 286.

ಸಂ. 508

ಗ್ರಾಮದಲ್ಲಿ ಕೆರೆಯ ದಂಡೆಯ ಪಶ್ಚಿಮಕ್ಕೆ ನಿಲ್ಲಿಸಿರುವ ಕಲ್ಲಿನ ಮೇಲೆ

--

--

ಕನ್ನಡ

ಅಮಿತಯ್ಯ-ದಣ್ಣಾಯಕ, ಕಲ್ಲೆಯ-ನಾಯಕನ-ಸಾವಿದೇವ, ಹಿರಿಯ ಸಾವಿದೇವ ಮತ್ತು ಇತರ ನಾಯಕರು ಸ್ವಾಮಿದೇವರಿಗೆ ಹಿರಿಹಾಳಿನಲ್ಲಿ (ಶಾಸನ ದೊರೆತ ಸ್ಥಳ?) ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 287.

ಹುಲಿಗುಂಟ

ಸಂ. 509

ಗ್ರಾಮದ ಕೆರೆಯ ದಂಡೆಯಲ್ಲಿ ಕಟ್ಟಿದ ಒಂದು ಕಲ್ಲಿನ ಮೇಲೆ

ವಿಜಯನಗರ, (ಸದಾಶಿವರಾಯ)

ಶಕ 1478, ನಳ, ವೈಶಾಖ ಶು. 3 = ಕ್ರಿ.ಶ. 1556, ಎಪ್ರಿಲ್ 12, ರವಿವಾರ

ಕನ್ನಡ

ಬಯಕಾರ ರಾಮಪ್ಪಯ್ಯನು ತನ್ನ ಮಗಳು ಅಚ್ಚುತಮ್ಮಳಿಗೆ ಪುಣ್ಯವಾಗಲೆಂದು ಬಾಲಕೃಷ್ಣದೇವರ ದೇವಸ್ಥಾನ ಕಟ್ಟಿಸಿದ್ದನ್ನು ಮತ್ತು ಅಚ್ಚುತಾಪುರವನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ, ಮತ್ತು ಸಂ. 497 ರಲ್ಲಿರುವಂತೆ ಶಕ 1461, ವಿಕಾರಿ ಸಂವತ್ಸರದಲ್ಲಿ ಮಾಡಿದ ಧರ್ಮಗಳನ್ನು ಉಲ್ಲೇಖಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 30; ಸೌಇಇ, IX ii, ಸಂ. 660.

ಜಯಸಿಂಘಪುರ

ಸಂ. 510

ಮಾರುತಿ ದೇವಸ್ಥಾನದ ಕೈಪಿಡಿಗೋಡೆಯ ಮೇಲೆ ಇಟ್ಟಿರುವ ಕಲ್ಲಿನ ಮೇಲೆ

--

17 ನೆಯ ಶತಮಾನ

ಕನ್ನಡ

ಹಾಳಾಗಿದೆ ಮತ್ತು ವ್ಯವಸ್ಥಿತವಾಗಿ ಬರೆದಿಲ್ಲ. ಬಹುಶಃ ಹನುಮಾನ ದೇವರಿಗೆ ಭೂಮಿ ದಾನ ನೀಡಿದ ಉಲ್ಲೇಖವಿರಬಹುದು (ವಿವರಗಳು ಸ್ಪಷ್ಟವಾಗಿಲ್ಲ).

ಆ್ಯರಿಇಎ, 1944-45, ಸಂ. ಬಿ 82.

ಜಿಗಿನಹಳ್ಳಿ

ಸಂ. 511

ಹನುಮಾನ ದೇವಸ್ಥಾನದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ

--

--

ಕನ್ನಡ

ಹಾಳಾಗಿದೆ ಮತ್ತು ತ್ರುಟಿತವಾಗಿದೆ. ದಳವಾಯಿ ಬರಿ[ಮಿನಾ]ಯಕನು ಜಿಗುನೆಹ[ಳ್ಳಿ]ಯಲ್ಲಿ ಭೂಮಿ ದಾನ ನೀಡಿದ್ದನ್ನು ದಾಖಲಿಸುವಂತೆ ತೋರುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 295.

ಕೋಡಾಲು

ಸಂ. 512

ಹನುಮಂತರಾಯ ದೇವಸ್ಥಾನದ ಪ್ರಾಕಾರ ಗೋಡೆಯಲ್ಲಿ ಕಟ್ಟಿರುವ ಒಡೆದ ಕಲ್ಲಿನ ಮೇಲೆ

(ವಿಜಯನಗರ), ಸಾದಾಶಿವರಾಯ

ಪರಿಧಾವಿ, ಕಾರ್ತಿಕ ಶು. 11, ಶನಿವಾರ = ಕ್ರಿ.ಶ. 1552, ನವೆಂಬರ್ 12, ಶನಿವಾರ

ಕನ್ನಡ

ತ್ರುಟಿತ. ಅರಸ ಸದಾಶಿವರಾಯನಿಗೆ ಪುಣ್ಯವಾಗಲೆಂದು ದಾನ ನೀಡಿದ್ದನ್ನು ಉಲ್ಲೇಖಿಸುವಂತೆ ತೋರುತ್ತದೆ. ರಾಮರಾಜ ವಿಠಲೇಶ್ವರದೇವ ಮಹಾ-ಅರಸುವಿನ ಉಲ್ಲೇಖವಿದೆ.

ಆ್ಯರಿಸೌಇಎ, 1922-23, ಸಂ. 1922 ರ 737.

ಕೃಷ್ಣನಗರ

ಸಂ. 513

ಕೋಟೆಯಲ್ಲಿಯ ಮಸೀದಿಯ ಪೂರ್ವದ ಗೋಡೆಯ ಬಲಗಡೆಯ ಕಲ್ಲಿನ ಮೇಲೆ

--

--

ಪರ್ಶಿಯನ್, ನಸ್ಕ್

''ಮಸ್ಜಿದ್-ಇ-ಹಸಿನ್'' (ಬಲವಾದ ಮಸೀದಿ) ಎಂದು ಬರೆಯಲಾಗಿದೆ.

ಆ್ಯರಿಸೌಇಎ, 1943-44, ಸಂ. ಬಿ 73; ಆ್ಯರಿಇಎ, 1985-86, ಸಂ. ಸಿ 26.

ಕುರಿಕುಪ್ಪಿ

ಸಂ. 514

ಈಶ್ವರ ದೇವಸ್ಥಾನದ ಮಂಟಪದಲ್ಲಿಯ ಕಂಬದ ಮೇಲೆ

ವಿಜಯನಗರ, ಕೃಷ್ಣರಾಯ-ಮಹಾರಾಯ

ಶಕ 1445, ಸ್ವಭಾನು, ವೈಶಾಖ ಶು. 5, ಸೋ[ಮವಾರ] = ಕ್ರಿ.ಶ. 1523, ಎಪ್ರಿಲ್ 20, ಸೋಮವಾರ

ಕನ್ನಡ

ವಸಿಷ್ಠ-ಗೋತ್ರ, ದ್ರಾಯ್ಯಾಯಣ-ಸೂತ್ರ ಮತ್ತು ಸಾಮ-ಶಾಖೆಯ ಸಂಗಮೇಶ್ವರನ ಹೆಗ್ಗರಸನ ಮಗ, ಘಳಿಯಾರ ಬಾಗಿಲಿನ ಬೆನಕರಸನು ಹಸ್ತಿನಾವತಿ-ವಳಿತದ ದೊರವದಿ-ವೇಂಠೆಯಲ್ಲಿ ಅಗ್ರಹಾರ ಗ್ರಾಮವಾದ, ಅನಂತಸೇತು ಎಂಬ ಉಪನಾಮ ಹೊಂದಿದ, ಕುರಿಯಕುಪ್ಪೆಯಲ್ಲಿ ಒಂದು ದೇವಸ್ಥಾನ ಕಟ್ಟಿಸಿ ಅಲ್ಲಿ ವಿರೂಪಾಕ್ಷ ದೇವರನ್ನು ಪ್ರತಿಷ್ಠಾಪಿಸಿ, ದೇವರ ಸೇವೆಗೆ ಬಸವ-ದೀಕ್ಷೆಯಿಂದ ಕೊಂಡ ಕೆಲವು ವೃತ್ತಿಗಳನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ. ಅಗ್ರಹಾರದ ಮಹಾಜನರೂ ಅದೇ ಉದ್ದೇಶಕ್ಕೆ ತೋಟದ ಭೂಮಿ ದಾನ ನೀಡಿದರು.

ಆ್ಯರಿಇಎ, 1922-23, ಸಂ. 1922 ರ 727; ಸೌಇಇ, IX ii,ಸಂ. 514.

ಸಂ. 515

ಈಶ್ವರ ದೇವಸ್ಥಾನದ ಮಂಟಪದಲ್ಲಿಯ ಇನ್ನೊಂದು ಕಂಬದ ಮೇಲೆ

ವಿಜಯನಗರ, ಕೃಷ್ಣರಾಯ-ಮಹಾರಾಯ

ಶಕ 1445 (ಪ್ರಚಲಿತ), ಸ್ವಭಾನು, ವೈಶಾಖ ಶು. 5, ಸೋಮವಾರ = ಕ್ರಿ.ಶ. 1523, ಎಪ್ರಿಲ್ 20, ಸೋಮವಾರ

ಸಂಸ್ಕೃತ

ಶಾಸನ ಸಂ. 514ರ ನಕಲು ಸಂಸ್ಕೃತದಲ್ಲಿದೆ. ಕುರೆಯಕುಪ್ಪೆಯನ್ನು ಅನಂತಸೇತು ಎಂದು ಈ ಶಾಸನ ಮತ್ತು ಮೇಲಿನ ಒಂದು ಶಾಸನದಲ್ಲಿ ಕರೆಯಲಾಗಿದೆ.

ಆ್ಯರಿಸೌಇಎ, 1922-23, ಸಂ. 1922 ರ 728.

ನಾಗಲಾಪುರ

ಸಂ. 516

ಗ್ರಾಮದಲ್ಲಿ ಶಮಿ ಮರದ ಕೆಳಗೆ ನಿಲ್ಲಿಸಿದ ಕಲ್ಲಿನ ಮೇಲೆ

--

ಸೌಮ್ಯ, ಆಷಾಢ ಶು. 11.

ಕನ್ನಡ

ಜಿಲ್ಲೇಳ ಗೋಪಯದೇವ-ಮಹಾ-ಅರಸು ಕಣುವೆಯ ಜೌಭಳೇಶ್ವರ ದೇವರಿಗೆ ನಾಗಲಾಪುರದಲ್ಲಿ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1922-23 ಸಂ. 1922 ರ 738.

ರಾಮಸಾಗರ

ಸಂ. 517

ಗ್ರಾಮದ ಪಶ್ಚಿಮಕ್ಕೆ ಒಂದು ಬಂಡೆಯ ಮೇಲೆ

ವಿಜಯನಗರ, ವೀರ-ಬುಕ್ಕರಾಯ

--

ಕನ್ನಡ

ಅಪೂರ್ಣವಾಗಿದೆ. ಅರಸನ ಹೆಸರು ಮತ್ತು ಪೆನುಗೊಂಡದ ಉಲ್ಲೇಖವಿದೆ.

ಆ್ಯರಿಸೌಇಎ, 1922-23 ಸಂ. 1922 ರ 735.

ರಾಮಗಢ

ಸಂ. 518

ರಾಮದೇವರ ದೇವಸ್ಥಾನದ ಹತ್ತಿರ ನಿಲ್ಲಿಸಿದ ವೀರಗಲ್ಲಿನ ಮೇಲೆ

--, ಕಂಪಿಲ

ದುಂದುಭಿ, ಫಾಲ್ಗುಣ ಶು. 15, ಸೋಮವಾರ = ಕ್ರಿ.ಶ. 1323, ಫೆಬ್ರವರಿ 21, ಸೋಮವಾರ

ಕನ್ನಡ

ಕಂಪಿಲನ ವಿರುದ್ಧ ಬಲ್ಲಾಳರಾಯನು ಮಾಡಿದ ಯುದ್ಧದಲ್ಲಿ, ಅಶ್ವದಳದ ಮುಖಂಡನಾದ ಬೈಚಯನು, ತನ್ನ ಒಡೆಯ ಕಂಪಿಲನ ಪರವಾಗಿ ಹೋರಾಡಿ ಮಡಿದದ್ದನು ತಿಳಿಸುತ್ತದೆ.

ಆ್ಯರಿಇಎ, 1943-44, ಸಂ. ಬಿ 75; ವಿಪ್ರೊರಿ, 1988-91 ಪು. 240.

ಸಂ. 519

ಅದೇ ದೇವಸ್ಥಾನದ ಮುಂಭಾಗದ ಗೋಡೆಗೆ ನಿಲ್ಲಿಸಿರುವ ಕಲ್ಲಿನ ಮೇಲೆ

ವಿಜಯನಗರ, ಕೃಷ್ಣದೇವ ಮಹಾರಾಯ

ಶಕ 14[50], ಸರ್ವಜಿತ, ಆಶ್ವಿಜ ಶು. 10 = ಕ್ರಿ.ಶ. 1527, ಅಕ್ಟೋಬರ್ 4 (ಶಕ 1449)

ಕನ್ನಡ

ಗೋಪಾಯಿ, ಅವಳ ತಮ್ಮ ರಾಮಣ ಮತ್ತು ಇತರರು ಹೊಸಮಲೆಯ ರಾಮನಾಥ-ಒಡೆಯ ಮತ್ತು ಆತನೊಂದಿಗೆ ಮಡಿದ ವೀರರ ನೆನಪಿನಲ್ಲಿ ಹೊಸಮಲೆದುರ್ಗದಲ್ಲಿ ರಾಮನಾಥ ದೇವರ ದೇವಸ್ಥಾನ ಕಟ್ಟಿಸಿದ್ದನ್ನು ತಿಳಿಸುತ್ತದೆ. ರಾಮನಾಥನು ಮುಮ್ಮಡಿ ಸಿಂಗನ ಮಗನಾದ ಖಂಡೆಯರಾಯ ಕಂಪಿಲರಾಯ ಮತ್ತು ಆತನ ರಾಣಿ ವೀರ-ಗುಜಲ ಹರಿಹರದೇವಿಯ ಮಗನು.

ಆರಿಇಎ, 1943-44, ಸಂ. ಬಿ 76; ವಿಪ್ರೊರಿ, 1988-91 ಪು. 240-241.

ಸಂಡೂರು

ಸಂ. 520

ಕುಮಾರಸ್ವಾಮಿ ಬೆಟ್ಟದ ಮೇಲೆ ಕುಮಾರಸ್ವಾಮಿ ದೇವಸ್ಥಾನದಲ್ಲಿ ಪಾತಾಳೇಶ್ವರ ಗುಡಿಯ ಆವರಣದೊಳಗೆ ಪೀಠದ ಮೇಲೆ

--

ಶಕ 9[6]7, ಪಾರ್ಥಿವ, ವೈಶಾಖ ಶು. 6, ಗುರುವಾರ = ಕ್ರಿ.ಶ. 1045, ಏಪ್ರಿಲ್ 25, ಗುರುವಾರ

ಕನ್ನಡ

ಒವ್ವಾರ್ಯಿಯ ಹಂಪಾಚಾರಿಯ ಮಗ ಅಕ್ಕಸಾಲಿ ಚಂದಾಚಾರಿಯು ನವಿಲನ್ನು (ವಿಗ್ರಹ) ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ. ಬಯ್ಯುಕುಲದ ಉಲ್ಲೇಖವಿದೆ.

ಆರಿಇಎ, 1944-45, ಸಂ. ಬಿ 83.

ಸಂ. 521

ಪಾರ್ವತಿದೇವಿ ಗುಡಿಯ ಉತ್ತರದ ಗೋಡೆಯಲ್ಲಿ ಕಟ್ಟಿದ ಕಲ್ಲಿನ ಮೇಲೆ

--

--

--

ಶಂಖ ಲಿಪಿಯಲ್ಲಿದೆ.

ಆರಿಇಎ, 1944-45, ಸಂ. ಬಿ 84.

ಸಂ. 522

ಅದೇ ಗುಡಿಯ ಉತ್ತರದ ಗೋಡೆಯಲ್ಲಿ ಕಟ್ಟಿದ ಇನ್ನೊಂದು ಕಲ್ಲಿನ ಮೇಲೆ

--

9ನೆಯ ಶತಮಾನ

ಸಂಸ್ಕೃತ, ನಾಗರಿ

ಉತ್ತರ ಭಾರತದ ಲಿಪಿಯಲ್ಲಿದೆ. ವಿವರಗಳು ಸ್ಪಷ್ಟವಾಗಿಲ್ಲ.

ಆರಿಇಎ, 1944-45, ಸಂ. ಬಿ 85.

ಸಂ. 523

ಗ್ರಾಮದ ಹತ್ತಿರ ಕುಮಾರಸ್ವಾಮಿ ಬೆಟ್ಟದ ಮೇಲೆ ಕುಮಾರಸ್ವಾಮಿ ದೇವಸ್ಥಾನದ ಮಂಟಪದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ.

ಹೊಯ್ಸಳ, ವೀರ-ಬಲ್ಲಾಳದೇವ (II)

ಶಕ 1127, ಕ್ರೋಧನ, ಫಾಲ್ಗುಣ ಬ. ಅಮವಾಸ್ಯೆ, ವಡ್ಡವಾರ, ಸೂರ್ಯಗ್ರಹಣ = ಕ್ರಿ.ಶ. 1206, ಮಾರ್ಚ್ 11, ಶನಿವಾರ

ಸಂಸ್ಕೃತ, ಕನ್ನಡ

ಯಾದವ ವಂಶದ ಸ್ತುತಿ ಇದೆ. ಅರಸನ ಆಜ್ಞೆಯ ಮೇರೆಗೆ ಆತನ ಮಹಾಪ್ರಧಾನ ಮತ್ತು ಸೇನಾಪತಿಯಾದ ಮಹಾದೇವ-ದಂಡನಾಯಕನು ರಾಷ್ಟ್ರಕೂಟ ವಂಶದ(?) ಕೃಷ್ಣರಾಜನು ಷಣ್ಮುಖದೇವರ ನಿತ್ಯ ಸೇವೆಗೆ ನೀಡಿದ ಕೆರೆಯಪಳ್ಳಿ ಗ್ರಾಮದ ದಾನವನ್ನು ನವೀಕರಿಸಿ ಅದನ್ನು ವಿಷ್ಣುಕರ-ಬ್ರಹ್ಮಚಾರಿಯ ಕೈಯಲ್ಲಿ ಕೊಟ್ಟಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 739; ಸೌಇಇ, IX i, ಸಂ. 326; ಮೈಆರಿ, 1935, ಸಂ. 49, ಪು. 136-146.

ಸಂ. 524

ಅದೇ ದೇವಸ್ಥಾನದ ಪೂರ್ವ ದಿಕ್ಕಿನ ಗೋಡೆಯಲ್ಲಿ ಕಟ್ಟಿದ ಕಲ್ಲಿನ ಮೇಲೆ

--

--

ಕನ್ನಡ

ಚಗನಕೇರಿಯ ಹಂಪಮಯ್ಯನ ಮಗ ಕಾಚಯ್ಯ ದೇಶಿಗನು (ದೇವಸ್ಥಾನದ) ಉತ್ತರ ದಿಕ್ಕಿಗೆ ಮೆಟ್ಟಿಲುಗಳನ್ನು ಕಟ್ಟಿಸಿದ್ದನ್ನು ದಾಖಲಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 740.

ಸಂ. 525

ಕುಮಾರಸ್ವಾಮಿ ಬೆಟ್ಟದ ಮೇಲೆ ನವಿಲುಸ್ವಾಮಿ ದೇವಸ್ಥಾನದ ಮುಂದೆ ಬಿದ್ದಿರುವ ಕಲ್ಲಿನ ಮೇಲೆ

--

ಸೌಮ್ಯ, ಭಾದ್ರಪದ ಶು. 3, ಸೋಮವಾರ

ಕನ್ನಡ

ದೇವಸ್ಥಾನದ ಮಂಟಪವನ್ನು ಬುಕ್ಕರಾಯನು ಕಟ್ಟಿಸಿದನೆಂದು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 741.

ಸಂ. 526

ಅದೇ ದೇವಸ್ಥಾನದ ಮುಂದೆ ಇನ್ನೊಂದು ಕಲ್ಲಿನ ಮೇಲೆ

ವಿಜಯನಗರ, ವೀರ-ಭೂಪತಿರಾಯ

ಶಕ 1[3]09, ಕ್ಷಯ, ಮಾರ್ಗಶಿರ ಬ. [7] , ಗುರುವಾರ, ಹಸ್ತ, ಸಿದ್ಧಿಯೋಗ, ಶಕುನಿ-ಕರಣ = ಕ್ರಿ.ಶ. 1386, ಡಿಸೆಂಬರ್ 13, ಗುರುವಾರ (ಶಕ 1308)

ಕನ್ನಡ

ಹಾಳಾಗಿದೆ. ಅರಸನ ಸಾಮಂತನು ಸ್ವಾಮಿದೇವರ ದೇವಸ್ಥಾನದ ಹತ್ತಿರ ಎರಡು ಗುಡಿಗಳ ಮಧ್ಯದ ಕಲ್ಲುಹಾಸಿನ ಕಾಲುದಾರಿ ಕಟ್ಟಿಸಿದ್ದನ್ನು ತಿಳಿಸುತ್ತದೆ. ಪ್ರಧಾನಿ ಶಂಕರಸ ವಿಶಪನ ಉಲ್ಲೇಖವಿದೆ.

ಆ್ಯರಿಸೌಇಎ, 1922-23, ಸಂ. 1922 ರ 742.

ಸಂ. 527

ಸ್ಥಳೀಯ ನ್ಯಾಯಾಲಯದ ಆವರಣದೊಳಗೆ ಬಿದ್ದಿರುವ ಕಲ್ಲಿನ ಮೇಲೆ

--

ವಿಕಾರಿ, ಕಾರ್ತಿಕ

ಕನ್ನಡ

ಗುಣಾಬಾಯಿಯ ಮಗ ಸುಭಾನಜಿ ಹಿಂದುರಾವು ಘೋರ್ಪಡೆಯು ಕೃಷ್ಣಾಪುರದ ಕರಿಯಣ್ಣನಿಗೆ ಭೂಮಿಯನ್ನು ಸರ್ವಮಾನ್ಯವಾಗಿ ದಾನ ನೀಡಿದ್ದನ್ನು ತಿಳಿಸುತ್ತದೆ. ದಾನ ನೀಡಿದ ಭೂಮಿಯು ದಾನಿಯು ಉಂಬಳಿಯಾಗಿ ಪಡೆದ ಹೊಸಹಳ್ಳಿ ಗ್ರಾಮದಲ್ಲಿತ್ತು.

ಆ್ಯರಿಇಎ, 1943-44, ಸಂ. ಬಿ 65.

ಸಂ. 528

ಸ್ಥಳೀಯ ನ್ಯಾಯಾಲಯದ ಆವರಣದೊಳಗೆ ಬಿದ್ದಿರುವ ಕಲ್ಲಿನ ಮೇಲೆ

--

ಶಕ 1670, ವಿಭವ, ವೈಶಾಖ ಶು. 10, ರವಿವಾರ = ಕ್ರಿ.ಶ. 1748, ಏಪ್ರಿಲ್ 27, ಬುಧವಾರ

ಕನ್ನಡ

ಸೊಂಡೂರನ್ನು ಜಮುನಗಿರಿಸ್ವಾಮಿಗೆ ಉಮಳಿಗೆಯಾಗಿ ಕೊಟ್ಟಿದ್ದನ್ನು ಮತ್ತು ಆತನ ಸಮಾಧಿಯನ್ನು ಗಿರಿಯಮ್ಮನು ಕಟ್ಟಿಸಿದ್ದನ್ನು ಮತ್ತು ಅವಳಿಗೆ ಯಿಂಚ್ಚಗಿರಿ, ಬಸುವಂತಗಿರಿ ಮತ್ತು ಸಂತೋಜಿಗಿರಿ ಎಂಬ ಮಕ್ಕಳಿದ್ದರು ಎಂಬುದನ್ನು ತಿಳಿಸುತ್ತದೆ.

ಆ್ಯರಿಇಎ, 1943-44, ಸಂ. ಬಿ 67.

ಸಂ. 529

ಅದೇ ಆವರಣದೊಳಗೆ ಬಿದ್ದಿರುವ ಇನ್ನೊಂದು ಕಲ್ಲಿನ ಮೇಲೆ

--

ಶಕ 1630, ಸರ್ವಧಾರಿ, ಚೈತ್ರ ಶು. 1 = ಕ್ರಿ.ಶ. 1708, ಮಾರ್ಚ್ 12

ಕನ್ನಡ

ಹಿರೆ-ಹಿಂದುರಾಯನು ಚಿಕ್ಕ-ಸೊಂಡೂರಿನಲ್ಲಿಯ ಭೂಮಿಯನ್ನು ಜಮುನಾಗಿರಿ ಬಾವಾನಿಗೆ ದಾನ ನೀಡಿದನೆಂದು ತಿಳಿಸುತ್ತದೆ.

ಆ್ಯರಿಇಎ, 1943-44, ಸಂ. ಬಿ 67.

ಸಂ. 530

ಪಿ.ಡಬ್ಲ್ಯೂ.ಡಿ. ಕಛೇರಿಯ ಹತ್ತಿರ ಬಿದ್ದಿರುವ ಕಲ್ಲಿನ ಮೇಲೆ

--

--

ನಾಗರಿ

ಹಾಳಾಗಿದೆ.

ಆ್ಯರಿಇಎ, 1943-44, ಸಂ. ಬಿ 68.

ಸಂ. 531

ಅದೇ ಕಛೇರಿಯ ಹತ್ತಿರ ಬಿದ್ದಿರುವ ಇನ್ನೊಂದು ಕಲ್ಲಿನ ಮೇಲೆ

--

ಶಕ 1625, ಸ್ವಭಾನು, ವೈಶಾಖ ಶು. 12, ರವಿವಾರ = ಕ್ರಿ.ಶ. 1703, ಏಪ್ರಿಲ್ 17, ಶನಿವಾರ

ಕನ್ನಡ

ಹಿಂದುರಾಯನ ಗುರು ಜಮನಾಗಿರಿ-ಬಾವಾನು ರಾಘಪ್ಪಯನ ಮಗ ಶರುಭೈಯನಿಗೆ ಒಂದು ವೃತ್ತಿ ಭೂಮಿಯನ್ನು ಸರ್ವಮಾನ್ಯವಾಗಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1943-44, ಸಂ. ಬಿ 69.

ಸಂ. 532

ಅದೇ ಕಛೇರಿಯ ಹತ್ತಿರ ಬಿದ್ದಿರುವ ಮೂರನೆಯ ಕಲ್ಲಿನ ಮೇಲೆ

ವಿಜಯನಗರ, ಸದಾಶಿವದೇವ ಮಹಾರಾಯ

ಶಕ 1446, ಕ್ರೋಧಿನ್, ಚೈತ್ರ ಶು. 10 = ಕ್ರಿ.ಶ. 1544, ಎಪ್ರಿಲ್ 3 (ಶಕ 1466)

ಕನ್ನಡ

ಮಹಾಮಂಡಲೇಶ್ವರ ರಾಮರಾಜದೇವ ಮಹಾ-ಅರಸನು ಅರಸನ ಆಜ್ಞೆಯ ಮೇರೆಗೆ ಚಿಪ್ಪಗೇರಿಯ ತಿಮ್ಮೋಜ ಮತ್ತು ಕೊಂಡೋಜರ ನಾಯಕತ್ವದಲ್ಲಿ ಸೀಮೆಯ ನಾವಿದರಿಗೆ ಮತ್ತು ಸೊಂಡೂರು-ಸೀಮೆಯ ನಾವಿದ ಸಿವನೋಜನಿಗೆ ಸಿದ್ದಾಯ ಮತ್ತು ಕಾಣಿಕೆ ತೆರಿಗೆಗಳ ರಿಯಾಯಿತಿ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1943-44, ಸಂ. ಬಿ 70.

ಸಂ. 533

ಅದೇ ಕಛೇರಿಯ ಹತ್ತಿರ ಬಿದ್ದಿರುವ ನಾಲ್ಕನೆಯ ಕಲ್ಲಿನ ಮೇಲೆ

--

ಇತ್ತೀಚಿನ ಅಕ್ಷರಗಳಲ್ಲಿ

ನಾಗರಿ

ಶಿವಪುರದ ಶ್ರೀ ಕಾಶಿ ವಿಶ್ವೇಶ್ವರನನ್ನು ಉಲ್ಲೇಖಿಸುತ್ತದೆ.

ಆ್ಯರಿಇಎ, 1943-44, ಸಂ. ಬಿ 71.

ಸಂ. 534

ಅದೇ ಕಛೇರಿಯ ಹತ್ತಿರ ಬಿದ್ದಿರುವ ಐದನೆಯ ಕಲ್ಲಿನ ಮೇಲೆ

--

ರುಧಿರೋದ್ಗಾರಿನ್, ಆಶ್ವಿಜ ಶು... (18 ನೆಯ ಶತಮಾನ)

ಕನ್ನಡ

ಹಾಳಾಗಿದೆ. ಪ್ರಜೆಗಳು ಮೂಲಸ್ಥಾನ ಮಲ್ಲಿಕಾರ್ಜುನ ದೇವರಿಗೆ ಪ್ರತಿಯೊಬ್ಬರಿಗೆ ಒಂದು ವೀಸದಂತೆ ದಾನ ನೀಡಿದ ಉಲ್ಲೇಖವಿದ್ದಂತೆ ತೋರುತ್ತದೆ.

ಆ್ಯರಿಇಎ, 1943-44, ಸಂ. ಬಿ 72.

ಶಂಕರಪುರ
(ಅಥವಾ ಗಂಡಿಬಸಾಪುರ)

ಸಂ. 535

ಗಂಡಿ-ಬಸಪ್ಪನ ದೇವಸ್ಥಾನದ ಮುಂದೆ ಸುಮಾರು 20 ಗಜಗಳ ಅಂತರದಲ್ಲಿಯ ಬಂಡೆಯ ಮೇಲೆ

--

ದರ್ಮತಿ ಮಾರ್ಗಶಿರ ಶು. 1 = (16 ನೆಯ ಶತಮಾನ)

ಕನ್ನಡ

ಹಾಳಾಗಿದೆ. ರಂಗಸಮುದ್ರದ ಮೊಗದವರ ಭಿಕ್ಷಾಮಠಕ್ಕೆ ಭೂಮಿ (ವಿವರಗಳಿಲ್ಲ) ದಾನ ನೀಡಿದ್ದನ್ನು ಉಲ್ಲೇಖಿಸುವಂತೆ ತೋರುತ್ತದೆ.

ಆ್ಯರಿಇಎ, 1944-45, ಸಂ. ಬಿ 76.

ಸೋವೇನಹಳ್ಳಿ

ಸಂ. 536

ಹನುಮನ ದೇವಸ್ಥಾನದ ಮುಂದಿನ ಧ್ವಜಸ್ತಂಭದ ಪೀಠದ ಪೂರ್ವದ ಮುಖದಲ್ಲಿ

--

ಶುಭಕೃತ, ಕಾರ್ತಿಕ ಶು. 1, ಸೋಮವಾರ

ಕನ್ನಡ

ಚೋರಮನೂರು-ಸೀಮೆಯ ಶಿಲ್ಪಿಗಳಾದ ಮಾರೋಜ ಮತ್ತು ಮಲ್ಲೋಜರು ಸೋವಿನಹಳ್ಳಿ ಗ್ರಾಮದಲ್ಲಿ ಕಲ್ಲಿನ ಕಂಬ ನಿಲ್ಲಿಸಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 281.

ಸಂ. 537

ಅದೇ ಪೀಠದ ಮೇಲೆ ಅದೇ ಮುಖದಲ್ಲಿ

--

--

ಕನ್ನಡ

ಹಾಳಾಗಿದೆ. ಹೊರಮಲೆ-ಸೀಮೆಯ ಮಾರೋಜನು ಅದೇ ಕಂಬವನ್ನು (ಬಹುಶಃ ಮೇಲಿನ ಶಾಸನದ ದಾನಿಯ ಸಹಯೋಗದೊಂದಿಗೆ) ನಿಲ್ಲಿಸಿದ್ದನ್ನು ಉಲ್ಲೇಖಿಸುವಂತೆ ತೋರುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 282.

ಸಂ. 538

ಅದೇ ಪೀಠದ ಮೇಲೆ ಉತ್ತರದ ಮುಖದಲ್ಲಿ

--

--

ಕನ್ನಡ

ಚಪರಹಳ್ಳಿ ಮತ್ತು ಅಣ್ಣಿಕುಂಟೆ ಗ್ರಾಮಗಳನ್ನು ಮಾರೋಜನಿಗೆ ಶಿಲ್ಪಿ ಉದ್ಯೋಗಕ್ಕಾಗಿ ವಂಶಪಾರಂಪರ್ಯವಾಗಿ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 283.

ಸಂ. 539

ಅದೇ ಪೀಠದ ಮೇಲೆ ಅದೇ ಮುಖದಲ್ಲಿ

--

--

ಕನ್ನಡ

ಮಾರೋಜ ಮತ್ತು ಮಾಳೋಜರು (ಅದೇ ಸ್ಥಳದಲ್ಲಿ) ಬಸವರಾಜ ದೇವಸ್ಥಾನವನ್ನು ಕಟ್ಟಿದ್ದನ್ನು ಉಲ್ಲೇಖಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 284.

ತಾಳೂರು

ಸಂ. 540

ನಾರಿಹಳ್ಳದ ದಂಡೆಯ ಮೇಲಿರುವ ದೇವಸ್ಥಾನದ ಮಂಟಪದ ಕಂಬದ ಮೇಲೆ

ಹೊಯ್ಸಳ, ವೀರ-ಬಲ್ಲಾಳ (II)

ಬಹುಧಾನ್ಯ, ಜ್ಯೇಷ್ಠ ಬ. 15, ಆದಿವಾರ = ಕ್ರಿ.ಶ. 1218, ಜೂನ್ 4, ಆದಿವಾರ

ಕನ್ನಡ

ಯಗುವಟ್ಟಿಯ ಮಹಾನಾಳ್‌ಪ್ರಭು ಬೊಮ್ಮ-ಗವುಡನು ಬೊಮ್ಮೋಜನಿಗೆ ತಲರದಲ್ಲಿ ಈಶ್ವರ ದೇವಸ್ಥಾನ ಕಟ್ಟಿದ್ದಕ್ಕಾಗಿ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 743; ಸೌಇಇ, IX i, ಸಂ. 335.

ತಾರಾನಗರ

ಸಂ. 541

ನಾರಿಹಳ್ಳ ಯೋಜನೆ ಪ್ರದೇಶದಲ್ಲಿ ಭೂಮಿಯನ್ನು ಸಮತಲ ಮಾಡುವಾಗ ದೊರೆತ ತಾಮ್ರ ಶಾಸನ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ (ಸೋಮೇಶ್ವರ I)

ಶಕ 969, ಸರ್ವಜಿತ್, ಪುಷ್ಯ ಶು. 5, ಬೃಹಸ್ಪತಿವಾರ = ಕ್ರಿ.ಶ. 1047, ಡಿಸೆಂಬರ್ 24, ಗುರುವಾರ

ಸಂಸ್ಕೃತ, ನಾಗರಿ

ಪೊನ್ನುಂಗುಂದ-30 ರಲ್ಲಿರುವ ಗಂಜಿಯಪಾಲ ಗ್ರಾಮದಲ್ಲಿ 300 ನಿವರ್ತನ ಭೂಮಿಯನ್ನು ಮಕರ-ಸಂಕ್ರಾಂತಿಯಂದು, ಗೃಹಾಮಾತ್ಯ ಮುದ್ದಿಮಾರ್ಯನಿಗೆ, ವಿಲ್ವೊಲ-ವಿಷಯದೊಳಗಿನ ಪೊನ್ನುಂಗುಂದ-30 ರೊಳಗಿನ ವೇಹೂರ ಗ್ರಾಮದಲ್ಲಿಯ ತ್ರೈಪುರುಷ ದೇವಸ್ಥಾನದಲ್ಲಿ ನಡೆಯುವ ಪೂಜೆ ಪುನಸ್ಕಾರಗಳಿಗೆ, ಜೀರ್ಣೋದ್ಧಾರಕ್ಕೆ ಮತ್ತು ಅದೇ ದೇವಸ್ಥಾನದಲ್ಲಿ 200 ವಿದ್ಯಾರ್ಥಿ ಮತ್ತು ವಿವಿಧ ಶಾಸ್ತ್ರಗಳ 5 ಶಿಕ್ಷಕರ ಭೋಜನಕ್ಕೆ ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಇಎ, 1974-75, ಸಂ. ಎ 3; ನಾಗರಾಜರಾವ್ ಎಮ್.ಎಸ್., 1983, ''ಗಂಜಿಹಾಳ್ ಪ್ಲೇಟ್ಸ್ ಆಫ್ ಚಾಲುಕ್ಯ ಸೋಮೇಶ್ವರ I ಶಕ 969'', ಚಾಲುಕ್ಯಾಸ್ ಆಫ್ ಕಲ್ಯಾಣ (ಸೆಮಿನಾರ್ ಪೇಪರ್ಸ್), (ಸಂ.) ಎಮ್.ಎಸ್. ನಾಗರಾಜರಾವ್, ದಿ ಮಿಥಿಕ್ ಸೊಸಾಯಿಟಿ, ಬೆಂಗಳೂರು, ಪು. 3-11; ನಾಗರಾಜರಾವ್ ಎಮ್.ಎಸ್. ಮತ್ತು ಕೆ.ವಿ. ರಮೇಶ್ (ಸಂ.), 1985, ಕಾಪರ್ ಪ್ಲೇಟ್ ಇನ್‌ಸ್ಕ್ರಿಪ್ಷನ್ಸ್ ಫ್ರಾಮ್ ಕರ್ನಾಟಕ: ರೀಸೆಂಟ್ ಡಿಸ್ಕವರೀಸ್, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. 52-61.

ಸಂ. 542

ಅದೇ ಸ್ಥಳದಲ್ಲಿ ದೊರೆತ ತಾಮ್ರ ಶಾಸನ

ಹೊಯ್ಸಳ, ವೀರ-ನರಸಿಂಹದೇವ

ಶಕ 1146, ತಾರಣ, ಪುಷ್ಯ ಶು. 11, ಆದಿತ್ಯವಾರ, ಉತ್ತರಾಯಣ ಸಂಕ್ರಮಣ, ವ್ಯತಿಪಾತ = ಕ್ರಿ.ಶ. 1224, ಡಿಸೆಂಬರ್ 22

ಕನ್ನಡ

ಪೆಸಳ-ಹನುಮ ಅಥವಾ ಅಮಿತಯ್ಯ-ದಂಡನಾಯಕನು ಕಲ್ಕಣಿ-ನಾಡಿನಲ್ಲಿರುವ ಶ್ರೀಪುರ ಅಗ್ರಹಾರವನ್ನು ಹೊಯ್ಸಳ ಅರಸ ವೀರ-ಬಲ್ಲಾಳನಿಂದ 20 ಗದ್ಯಾಣಗಳ ತೆರಿಗೆ ಕೊಡಲು ಒಪ್ಪಿದ ನಂತರ, ಕಟ್ಟುಗುತ್ತಗೆ-ಪಿಂಡದಾನವಾಗಿ ಪಡೆದದ್ದನ್ನು ತಿಳಿಸುತ್ತದೆ. ಈತನು ಗ್ರಾಮದ ಮಧ್ಯದಲ್ಲಿ ತ್ರಿಕೂಟ ದೇವಸ್ಥಾನ ಕಟ್ಟಿಸಿ ಅಮೃತೇಶ್ವರ, ವಾಮೇಶ್ವರ ಮತ್ತು ಲಕ್ಷ್ಮೀ-ನಾರಾಯಣ ದೇವರನ್ನು

ಪ್ರತಿಷ್ಠಾಪಿಸಿದನು. ಈತನು ದೇವಸ್ಥಾನದ ಜೀರ್ಣೋದ್ಧಾರ ಮತ್ತು ದೇವರ ಸೇವೆಗೆ ಕೊಂಡುಕ-ಸೀವೂರ ಗ್ರಾಮವನ್ನು ಅರಸನ ಮುಖಾಂತರ ವಜ್ರೇಶ್ವರ ಮತ್ತು ಸೋಮನಾಥ ದೇವರ ಸನ್ನಿಧಿಯಲ್ಲಿ ನೀಡಿದನು.

ಆ್ಯರಿಇಎ, 1974-75, ಸಂ. ಎ 4; ನಾಗರಾಜರಾವ್ ಎಮ್.ಎಸ್. ಮತ್ತು ಕೆ.ವಿ. ರಮೇಶ, 1985, ಕಾಪರ್ ಪ್ಲೇಟ್ ಇನ್‌ಸ್ಕ್ರಿಪ್ಶನ್ಸ್ ಫ್ರಾಮ್ ಕರ್ನಾಟಕ: ರೀಸೆಂಟ್ ಡಿಸ್ಕವರೀಸ್, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. 79-84.

ಸಂ. 543

ಅದೇ ಸ್ಥಳದಲ್ಲಿ ದೊರೆತ ತಾಮ್ರ ಶಾಸನ

ರಾಷ್ಟ್ರಕೂಟ, ಕೃಷ್ಣ ಕನ್ಧರದೇವ

ಪರಾಭವ, ಚೈತ್ರ ಬ. 15, ರವಿವಾರ

ಸಂಸ್ಕೃತ ಮತ್ತು ಕನ್ನಡ, ನಾಗರಿ

ಖೋಟಾ. ಕಂಧಾರಪುರದಿಂದ ಹೊರಡಿಸಲ್ಪಟ್ಟಿದೆ ಮತ್ತು ಕರಡಿಕಲ್ಲು-30ರಲ್ಲಿ ಭೂಮಿ ದಾನ ನೀಡಿದ್ದನ್ನು ಉಲ್ಲೇಖಿಸುವಂತೆ ತೋರುತ್ತದೆ. 13ನೆಯ ಶತಮಾನದ ಲಿಪಿಯಲ್ಲಿದೆ.

ಆ್ಯರಿಇಎ, 1974-75, ಸಂ. ಎ 5.

ಸಂ. 544

ಮುದ್ದಪ್ಪನ-ಬೀಳು ಎಂದು ಕರೆಯುವ ಹೊಲದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

ವಿಜಯನಗರ, ಅಚ್ಯುತರಾಯ ಮಹಾರಾಯ

ದುರ್ಮುಖಿ, ಶ್ರಾವಣ ಶು. [6] = ಕ್ರಿ.ಶ. 1536, ಜುಲೈ 24

ಕನ್ನಡ

ತ್ರುಟಿತವಾಗಿದೆ ಮತ್ತು ಅಪೂರ್ಣವಾಗಿದೆ.

ಆ್ಯರಿಇಎ, 1944-45, ಸಂ. ಬಿ 87.

ಸಂ. 545

ಬುಡ್ಡೆಕಲ್ಲಿನ ಹತ್ತಿರ ಬಿದ್ದಿರುವ ಕಲ್ಲಿನ ಮೇಲೆ

--

16ನೆಯ ಶತಮಾನ

ಕನ್ನಡ

ಹಾಳಾಗಿದೆ.

ಆ್ಯರಿಇಎ, 1944-45, ಸಂ. ಬಿ 88.

ತೋರಣಗಲ್ಲು

ಸಂ. 546

ಗ್ರಾಮದ ಶಂಕರದೇವರ ಗುಡ್ಡದ ಮೇಲೆ 'ತಂಗಮ್ಮನ ಗುಂಡು' ಎಂದು ಕರೆಯುವ ಗುಂಡಿನ ಮೇಲೆ

--

--

ಕನ್ನಡ

ಅಕಳಂಕದೇವನ ಶಿಷ್ಯ ಬಯಿಚಿ-ಸೆಟ್ಟಿಯ ನಿಸಿಧಿಯನ್ನು ಉಲ್ಲೇಖಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 729.

ತುಂಬರಗುಡ್ಡಿ

(ಯರ್ರ್ರಯ್ಯನಹಳ್ಳಿಯ ಉಪಗ್ರಾಮ)

ಸಂ. 547

ಶಿವ ದೇವಸ್ಥಾನದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

--

ಶಾರ್ವರಿ, ಜ್ಯೇಷ್ಠ ಶು. 1

ಕನ್ನಡ

ದುರಬಿ ನರಸಪ್ಪನು ತುಂಬರಗುಡಿಯ ಕಲ್ಲಯ ದೇವರಿಗೆ ದೀಪ ಉರಿಸಲು ತೆರಿಗೆಯಲ್ಲಿ ಪ್ರತಿದಿನ 3 ಕಾಸುಗಳನ್ನು ಮಾನ್ಯವಾಗಿ ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 292.

ಸಂ. 548

ಹನುಮಂತರಾಯ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

--

ಶಾರ್ವರಿ, ವೈಶಾಖ ಶು. 5

ಕನ್ನಡ

ಅದೇ ವ್ಯಕ್ತಿ, ಅದೇ ರೀತಿಯ ದಾನವನ್ನು ತುಂಬರಗುತ್ತಿಯ ಹನುಮಂತದೇವರ ಮುಂದೆ ದೀಪ ಉರಿಸಲು ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1924-25, ಸಂ. 1925 ರ 293.

ಸಿರುಗುಪ್ಪ ತಾಲೂಕು

ಅಗಸನೂರು

ಸಂ. 549

ಆಂಜನೇಯ ದೇವಸ್ಥಾನದ ಆವರಣದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ವಿದ್ಯಾನಗರದಿಂದ ಆಳುತ್ತಿದ್ದ ಸದಾಶಿವರಾಯ

ಶಕ 1473, ವಿರೋಧಿಕೃತ, ಕಾರ್ತಿಕ ಶು. 12, ಉತ್ಥಾನ ದ್ವಾದಶಿ = ಕ್ರಿ.ಶ. 1551, ನವಂಬರ್ 10

ಕನ್ನಡ

ಸೋಮ-ವಂಶ, ಆತ್ರೇಯ-ಗೋತ್ರ, ಆಪಸ್ತಂಬ-ಸೂತ್ರ ಮತ್ತು ಯಜುಶ್ಶಾಖೆಯ ಮಹಾಮಂಡಲೇಶ್ವರ ರಾಮರಾಜ-ಚಿಕ-ಕೊಂಡಯದೇವನ ಮೊಮ್ಮಗ ಮತ್ತು ಕೊನೇಟಿ ತಿಮ್ಮಯ-ಮಹಾ-ಅರಸುವಿನ ಮಗನಾದ ಕೊಂಡಯ ದೇವ-ಮಹಾ-ಅರಸನು ಸಪ್ತಾದ್ರಿವಾಸ-ಲಕ್ಷ್ಮೀ-ನಿವಾಸ-ತಿರುವೆಂಗಳನಾಥ ಮತ್ತು ತಿರುಪತಿಯ ತಿರುವೆಂಗಳನಾಥ ದೇವರ ಅಮೃತಪಡಿ ಸೇವೆಗೆ ಆದವಾನಿಯ ಹತ್ತಿರ ಒಂದು ನದಿಯ (ಹೆಸರು ಸ್ಪಷ್ಟವಾಗಿಲ್ಲ) ದಂಡೆಯ ಮೇಲಿರುವ ಅಸಗನೂರು (ಅಗಸನೂರು) ಗ್ರಾಮವನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 76.

ಸಂ. 550

ಓಬಳೇಶ್ವರ ದೇವಸ್ಥಾನದಲ್ಲಿ ಇಟ್ಟಿರುವ ಒಡೆದ ಕಲ್ಲಿನ ಮೇಲೆ

--

11ನೆಯ ಶತಮಾನ

ಕನ್ನಡ

ಕಂಬಳ ಮಾಯೆ-ಸೆಟ್ಟಿಯು ಉ[ದ]ಯ-ಚಂದ್ರ-ಭಟಾರಕನ ಶಿಷ್ಯ ಎಂದು ತಿಳಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 77.

ಅಕ್ಕತಂಗಿಯರಹಾಳು

ಸಂ. 551

ಅಗಸರ ನರಸಪ್ಪನ ಹೊಲದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

--

ಇತ್ತೀಚಿನ ಅಕ್ಷರಗಳಲ್ಲಿ

ಕನ್ನಡ

ಗ್ರಾಮದಲ್ಲಿಯ ಬಸವಣ್ಣ-ವೊಡೆಯನ ಮಾನ್ಯವನ್ನು ಉಲ್ಲೇಖಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 89.

ಬಾಗವಾಡಿ

ಸಂ. 552

ಮಸೀದಿಯ ಆವರಣದ ಉತ್ತರದ ಗೋಡೆಯ ಹೊರ ಬದಿಯಲ್ಲಿ ಕಟ್ಟಿರುವ ಕಲ್ಲಿನ ಮೇಲೆ

--

ಶಕ 914, ನಂದನ, ಚೈತ್ರ ಶು... ಮಂಗಳವಾರ = ಕ್ರಿ.ಶ. 992 ಮಾರ್ಚ್

ಕನ್ನಡ

ಭಾಗಶಃ ನಾಶವಾಗಿದೆ. ಅನುಮರಸ ಮತ್ತು ಬಿಜ್ಜಯರು ದಾನ ನೀಡಿದ್ದನ್ನು ಮತ್ತು ಬಾಗವಾಡಿಯ ಅಚಯ್ಯನನ್ನು ಉಲ್ಲೇಖಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 78.

ಸಂ. 553

ಆಂಜನೇಯ ದೇವಸ್ಥಾದ ಹತ್ತಿರ ಹಳೆಯ ಕೋಟೆಯ ಪಕ್ಕದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

--

ರೌದ್ರಿ, ಮಾರ್ಗಶಿರ [ಬ]. 12 = (15ನೆಯ ಶತಮಾನ)

ಕನ್ನಡ

ಹಾಳಾಗಿದೆ. ಬಾಗವಾಡಿಯ ಆಡಳಿತಗಾರ ಮತ್ತು ಮಹಾಮಂಡಲೇಶ್ವರ ತಿಮ್ಮಪ್ಪಯದೇವ-ಮಹಾ-ಅರಸುಪನ ಕಾರ್ಯಕರ್ತನಾದ ಚಿಕಣ-ನಾಯಕ ಮತ್ತು ಬಾಗವಾಡಿಯ ಜನರ ಮಧ್ಯ ಗೇಣಿಯನ್ನು ಹಂಚಿಕೊಳ್ಳುವುದು ಮತ್ತು ನಿಯಮಗಳನ್ನು ನಿಗದಿಮಾಡುವ (ವಿವರಗಳು ಹಾಳಾಗಿವೆ) ಬಗ್ಗೆ ಆದ ಒಪ್ಪಂದದ (ಕೌಲು) ವಿವರಗಳನ್ನು ಉಲ್ಲೇಖಿಸುವಂತೆ ತೋರುತ್ತದೆ.

ಆ್ಯರಿಇಎ, 1977-78, ಸಂ. ಬಿ 79.

ಬಗ್ಗೂರು

ಸಂ. 554

ಅರಲಿಗನೂರು ಭೀಮನಗೌಡನ ಹೊಲದ ಹತ್ತಿರ ಸರಕಾರಿ ಭೂಮಿ ಸರ್ವೆ ನಂ. 179ರಲ್ಲಿ ಹೂತಿರುವ ಕಲ್ಲಿನ ಮೇಲೆ

ಚಾಲುಕ್ಯ, ಕಿಸುವೊಳಲ್‌ನಿಂದ ಆಳುತ್ತಿದ್ದ ವಿಜಯಾದಿತ್ಯದೇವ

ಶಕ ...., ಜಯ, ಚೈತ್ರ ಶು. 15, ವ್ಯತಿಪಾತ (11ನೆಯ ಶತಮಾನದ ಅಕ್ಷರಗಳಲ್ಲಿ)

ಕನ್ನಡ

ಹಾಳಾಗಿದೆ. ಬನ್ನಮಯ್ಯ ಎಂಬ ವ್ಯಕ್ತಿಗೆ ಬಗ್ಗವೂರು ಗ್ರಾಮವನ್ನು ಅಗ್ರಹಾರವಾಗಿ ಕೊಟ್ಟಿದ್ದನ್ನು ತಿಳಿಸುತ್ತದೆ. ಮೂವತ್ತು ಮತ್ತರು ಭೂಮಿ ದಾನವನ್ನು ದಾಖಲಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 80.

ಸಂ. 555

ಆಂಜನೇಯ ದೇವಸ್ಥಾನದ ಹಿಂದೆ ಇಟ್ಟಿರುವ ಸತಿಕಲ್ಲಿನ ಮೇಲೆ

ವಿಜಯನಗರ, ದೇವರಾಯ (II)

15ನೆಯ ಶತಮಾನ

ಕನ್ನಡ

ಸವೆದಿದೆ. ಮೂರನೆಯ ಸಾಲಿನಲ್ಲಿ ಅರಸನ ಬಿರುದು ಗಂಡ-ಭೇರುಂಡ ಎಂದು ಇದೆ ಮತ್ತು ಒಬ್ಬ ವ್ಯಕ್ತಿಯನ್ನು (ಹೆಸರು ಇಲ್ಲ) ಅಶ್ವಪತಿ, ಗಜಪ[ತಿ], ನರಪತಿ ಮತ್ತು ಗಜಬೇಂಟೆಕಾರ ಎಂದು ಉಲ್ಲೇಖಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 81.

ಸಂ. 556

ಅದೇ ದೇವಸ್ಥಾನದ ಆವರಣದ ಹೊರಗೆ ಒಂದು ಕಲ್ಲಿನ ಮೇಲೆ

--

15ನೆಯ ಶತಮಾನ

ಕನ್ನಡ

ತುಂಬ ಹಾಳಾಗಿದೆ. ಅಗ್ರಹಾರ ಎಂಬ ಶಬ್ದವಿದೆ.

ಆ್ಯರಿಇಎ, 1977-78, ಸಂ. ಬಿ 82.

ಬಲಕುಂದೆ

ಸಂ. 557

ಸರಕಾರಕ್ಕೆ ಸೇರಿದ ಭೂಮಿಯಲ್ಲಿ ಹೂತಿರುವ ಕಲ್ಲಿನ ಮೇಲೆ

[ರಾಷ್ಟ್ರಕೂಟ], ಅಕಾಲವರ್ಷ (ಕೃಷ್ಣ III)

10ನೆಯ ಶತಮಾನ

ಸಂಸ್ಕೃತ, ಕನ್ನಡ

ತ್ರುಟಿತ. ಜೈನ ದೇವಸ್ಥಾನದ ಜೀರ್ಣೋದ್ಧಾರವನ್ನು ಮಾಡಿದ ಅರಸನ ಆಪ್ತ-ಮಹಾ-ಪ್ರಧಾನನ್ನು (ಹೆಸರು ಇಲ್ಲ) ಉಲ್ಲೇಖಿಸುತ್ತದೆ. ಬಲ್ಲಕುಂದ ವಿಷಯದ ಬಗ್ಗೆ ತಿಳಿಸುತ್ತದೆ.

ಆ್ಯರಿಇಎ, 1985-86, ಸಂ. ಬಿ 60.

ಸಂ. 558

ಅದೇ ಸ್ಥಳದಲ್ಲಿ ಹೂತಿರುವ ಇನ್ನೊಂದು ಕಲ್ಲಿನ ಮೇಲೆ

--

10ನೆಯ ಶತಮಾನ

ಸಂಸ್ಕೃತ, ಕನ್ನಡ

ತ್ರುಟಿತ. ಒಂದು ಪಟ್ಟಣದ (ಹೆಸರು ಇಲ್ಲ) ಉಲ್ಲೇಖವಿದೆ. ಮೇಲಿನ ಶಾಸನದ ಒಂದು ಭಾಗವಿದ್ದಂತೆ ತೋರುತ್ತದೆ.

ಆ್ಯರಿಇಎ, 1985-86, ಸಂ. ಬಿ 61.

ಸಂ. 559

ಅದೇ ಸ್ಥಳದಲ್ಲಿ ಹೂತಿರುವ ಇನ್ನೊಂದು ಕಲ್ಲಿನ ಮೇಲೆ

--

ಶಕ 898, ಪ್ರಚಲಿತ, ಅನಲ, ಮಾಘ ಶು. 1, ಗುರುವಾರ = ಕ್ರಿ.ಶ. 956, ಜನವರಿ 17

ಸಂಸ್ಕೃತ, ಕನ್ನಡ

ವಿವರಗಳಿಲ್ಲ.

ಆ್ಯರಿಇಎ, 1985-86, ಸಂ. ಬಿ 62.

ಸಂ. 560

ಸನಗರಗೌಡ ನಾಗಪ್ಪನ ಹೊಲದಲ್ಲಿಯ ಒಂದು ಕಲ್ಲಿನ ಮೇಲೆ

ರಾಷ್ಟ್ರಕೂಟ, ಅಕಾಲವರ್ಷ (ಕೃಷ್ಣ III)

ಶಕ 878 (ಶಬ್ದಗಳಲ್ಲಿ), ನಳ, ಮಾಘ ಶು. 1, ಪುನರ್ವ್ವ[ಸು], ಗುರುವಾರ = ಕ್ರಿ.ಶ. 957, ಜನವರಿ 5, ಸೋಮವಾರ

ಸಂಸ್ಕೃತ, ಕನ್ನಡ; ಕನ್ನಡ

ತ್ರುಟಿತವಾಗಿದೆ ಮತ್ತು ಹಾಳಾಗಿದೆ. ಒಂದು ಪವಿತ್ರ ತೀರ್ಥದ (ಹೆಸರು ಇಲ್ಲ) ಉಲ್ಲೇಖವಿದ್ದು ಆ ಸ್ಥಳಕ್ಕೆ ಕರಿಊರು ಮತ್ತು ಕಂಥರೀಕಾಗಳ ಜೊತೆಗೆ ವಳಿನೂರಕ ಗ್ರಾಮವನ್ನು ದೇವಭೋಗವಾಗಿ ಮೊದಲು ದಾನ ಕೊಟ್ಟಿದ್ದನ್ನು ತಿಳುಸುತ್ತದೆ. ಕಾಲಾನುಕ್ರಮದಲ್ಲಿ ಆ ದಾನವು ಬಳಕೆಯಲ್ಲಿಲ್ಲದಂತಾಗಿ ನಂತರ ರಾಷ್ಟ್ರಕೂಟ ಚಕ್ರವರ್ತಿಯ ಪ್ರಧಾನ ಶತ್ರುಘ್ನನು ನವೀಕರಿಸಿದನು. ಈ ಪ್ರಧಾನನು ಗಜಜೀವಿ ವಂಶಕ್ಕೆ ಸೇರಿದವನು ಮತ್ತು ಬಲ್ಲಕುಂದೆ-ವಿಷಯವನ್ನು ಆಳುತ್ತಿದ್ದನೆಂದು ವಿವರಿಸಲಾಗಿದೆ.

ಆ್ಯರಿಇಎ, 1977-78, ಸಂ. ಬಿ 83.

ಸಂ. 561

ಫಕ್ರುದ್ದೀನನ ಮನೆಯ ಹತ್ತಿರವಿರುವ ಉಪ್ಪಿನ ಬಾವಿಯ ಹತ್ತಿರ ಬಿದ್ದಿರುವ ವೀರಗಲ್ಲಿನ ಮೇಲೆ

--

ಶಕ 889, ಕ್ಷಯ, ಕಾರ್ತಿಕ ಬ. 14, ಮಂಗಳವಾರ = ಕ್ರಿ.ಶ. 966, ನವಂಬರ್ 13

ಕನ್ನಡ

ಯುದ್ಧದಲ್ಲಿ ಒಬ್ಬ ವ್ಯಕ್ತಿಯು (ವಿವರಗಳು ಸ್ಪಷ್ಟವಾಗಿಲ್ಲ) ಮರಣಹೊಂದಿದ್ದನ್ನು ತಿಳಿಸುವಂತೆ ತೋರುತ್ತದೆ. ದೇಮಪಯ್ಯ [ನನ್ನಿ] ನೊಳಂಬ ಮತ್ತು ಜಿನಮಯ್ಯರ ಉಲ್ಲೇಖವಿದೆ.

ಆ್ಯರಿಇಎ, 1977-78, ಸಂ. ಬಿ 84.

ಸಂ. 562

ಅದೇ ಬಾವಿಯ ಹತ್ತಿರ ಇನ್ನೊಂದು ಕಲ್ಲಿನ ಮೇಲೆ

--

ಶಕ ...., [ಸರ್ವ] ...., [ಮಾರ್ಗ್ಗ]ಸಿರ ಬ. ... = (10ನೆಯ ಶತಮಾನ)

ಕನ್ನಡ

ತುಂಬ ಹಾಳಾಗಿದೆ. ವಿವರ ಸ್ಪಷ್ಟವಾಗಿಲ್ಲ.

ಆ್ಯರಿಇಎ, 1977-78, ಸಂ. ಬಿ 85.

ಸಂ. 563

ಗ್ರಾಮದ ಪ್ರವೇಶದಲ್ಲಿ ಗ್ರಾಮ ಚಾವಡಿ ಎಂದು ಕರೆಯುವ ಮಂಟಪದಲ್ಲಿ ವರ್ತುಲಾಕಾರದ ಕಂಬದ ಮೇಲೆ

ನೊಳಂಬ ಪಲ್ಲವ, ನೊಳಂಬಾಧಿರಾಜ

ಶಕ 930 (ಶಬ್ದಗಳಲ್ಲಿ ಮತ್ತು ಅಂಕೆಗಳಲ್ಲಿ), ಕೀಲಕ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1008

ಸಂಸ್ಕೃತ ಮತ್ತು ಕನ್ನಡ, ಕನ್ನಡ

ಕೌಶಿಕ ಗೋತ್ರದ ಮಾಚಿನಾರ್ಯ್ಯನ ಮಗ ಶ್ರೀಧರಾರ್ಯ್ಯನು ಮತ್ತು ಘಟೆಯಂಕಕಾರ ಮತ್ತು ಚಿತ್ರವೆಡೆಂಗನೆಂದು ವರ್ಣಿಸಲ್ಪಟ್ಟ ಅರಸನ ಒಬ್ಬ ನಿಯೋಗಿಯು ಒಂದು ದೇವಸ್ಥಾನವನ್ನು (ಕೂಟ ಎಂದು ಉಲ್ಲೇಖಿಸಿದೆ) ಕಟ್ಟಿಸಿ ಬಲ್ಲಕುಂದತೀರ್ಥದಲ್ಲಿ ಕಲ್ಲಿನಲ್ಲಿ ಮಾಡಿದ ಜೈನ ವಿಗ್ರಹವನ್ನು ಪ್ರತಿಷ್ಠಾಪಿಸಿ 5 ನಿವರ್ತ್ತನಗಳ ಕಪ್ಪು ಭೂಮಿಯನ್ನು ಉತ್ತರಾಯಣ-ಸಂಕ್ರಾಂತಿಯಂದು ಪೂಜೆಗಾಗಿ ದಾನ ನೀಡಿದರು ಮತ್ತು ದಾನವನ್ನು ಬಲ್ಲಕುಂದ-ನಗರದ ವ್ಯಾಪಾರಿಗಳಾದ ಜಕ್ಕಿಮಾರ್ಯ್ಯ, ಗೋವಿಂದಾರ್ಯ್ಯ ಮತ್ತು ಶ್ರೀ ಸಿಂ[ಹ]ಮಾರ್ಯ್ಯರಿಗೆ ಒಪ್ಪಿಸಿದರೆಂದು ತಿಳಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 86.

ಸಂ. 564

ಕಾಳಿಕಾದೇವಿ ದೇವಸ್ಥಾನದ ಹಿಂಭಾಗದಲ್ಲಿಯ ಕರಿದೋಣೆ ಗುಂಡಿನ ಮೇಲೆ

ಕಲ್ಯಾಣ ಚಾಲುಕ್ಯ, ಜಗದೇಕಮಲ್ಲ

ಶಕ 939, [ಪಿಂಗ]ಳ, ಚೈತ್ರ ಬ. ತ್ರಯೋದಶಿ, ಗುರುವಾರ = ಕ್ರಿ.ಶ. 1017, ಮಾರ್ಚ್ 28

ಕನ್ನಡ

ಹಾಳಾಗಿದೆ. ಪಲ್ಲವಕುಲತಿಲಕ, ಅಮೋಘವಾಕ್ಯ ಮತ್ತು ಕಾಂಚೀಪುರವರೇಶ್ವರ ಎಂಬ ಬಿರುದುಗಳನ್ನು ಹೊಂದಿದ ಅರಸ ಜಗದೇಕಮಲ್ಲ ನೊಳಂಬ-ಪಲ್ಲವ-ಪೆರ್ಮಾನಡಿಯು ನೊಳಂಬವಾಡಿ-30,000, ಕದಂಬಳಿಗೆ-1000, ಕೋಗಳಿ-500, ಬಲ್ಲಕುಂದೆ-300, ಕುಂಡಿಯಪರವಿ-70 ಮತ್ತು ಕರಿವಿಡಿ-30 ಗಳನ್ನಾಳುತ್ತಿದ್ದನೆಂದು ತಿಳಿಸುತ್ತದೆ. ಒಂದು ಕೆರೆ ಮತ್ತು ಭೂಮಿಯನ್ನು ಬಿಟ್ಟವಟ್ಟವಾಗಿ ದಾನ (ಸ್ಥಿತಿ) ನೀಡಿದ್ದನ್ನು ಉಲ್ಲೇಖಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 87.

ಸಂ. 565

ಫಖ್ರುದ್ದೀನ್ ಮನೆಯ ಹತ್ತಿರದ ಕಲ್ಲಿನ ಮೇಲೆ

--

11ನೆಯ ಶತಮಾನ

ಸಂಸ್ಕೃತ ಮತ್ತು ಕನ್ನಡ, ಕನ್ನಡ

ಸಿಂದ ವಂಶದ ಅರಸನು (ಹೆಸರು ಇಲ್ಲ) ಬಲ್ಲಕುಂದ-ವಿಷಯವನ್ನು ಆಳುತ್ತಿದ್ದನು ಮತ್ತು ಅರಸನ ಆಜ್ಞೆಯ ಮೇರೆಗೆ ಕಲ್ಲಿನಲ್ಲಿ ಒಂದು ತೀರ್ಥವನ್ನು ಕಟ್ಟಿಸಿ ಅದಕ್ಕೆ ಒಂದು ಗ್ರಾಮದಲ್ಲಿ (ಹೆಸರು ಸ್ಪಷ್ಟವಾಗಿಲ್ಲ) ಎರಡು [ಖಾ]ರ್ ಭೂಮಿ ದಾನ ನೀಡಿದನೆಂದು ತಿಳಿಸುತ್ತದೆ. ಕುಂದಬ್ಬೆಯು ಸಿಂದ ಅರಸನ (ಹೆಸರು ಇಲ್ಲ) ರಾಣಿಯೆಂದು ಮತ್ತು ಅವಳು ಒಂದು ದಾನ ನೀಡುವುದರಲ್ಲಿ ಭಾಗಿಯಾಗಿದ್ದಳು ಎಂದು ತಿಳಿಸುತ್ತದೆ. ದಾನವನ್ನು ನಂದಿ-ಸಂಘದ ತೀರ್ಥಾಚಾರ್ಯ್ಯನ ಶಿಷ್ಯ, ಕುಂಡ-ಕುಂದಾನ್ವಯ ಮತ್ತು ದೇಶಿಗಣದ ಶಿಷ್ಯರಲ್ಲಿ ಒಬ್ಬನಾದ ವೀರನಂದಿ-ಮುನೀಂದ್ರನಿಗೆ ವಹಿಸಿಕೊಡಲಾಯಿತು. ಈ ಶಾಸನವನ್ನು ಪುಟೆಯಮಯ್ಯನ ಮಗ ಭಟ್ಟಯ್ಯನು ಬರೆದನು.

ಆ್ಯರಿಇಎ, 1977-78, ಸಂ. 88.

ಬೀರಹಳ್ಳಿ

ಸಂ. 566

ಗ್ರಾಮದ ಪೂರ್ವಕ್ಕೆ ಶಂಕರಗೌಡನ ಹೊಲದಲ್ಲಿ ಹೂತಿರುವ ಕಲ್ಲಿನ ಮೇಲೆ

--

13 ನೆಯ ಶತಮಾನ

ಕನ್ನಡ

ರಾಮೇಶ್ವರಭಟ್ಟನಿಗೆ ಸೇರಿದ ಒಂದು ಮತ್ತರು ಭೂಮಿಯು ವಿಶ್ವಾಮಿತ್ರ-ಗೋತ್ರದ ಒಬ್ಬ ವ್ಯಕ್ತಿಯ ವಶದಲ್ಲಿತ್ತೆಂದು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 90.

ಸಂ. 567

ಗ್ರಾಮದ ಆಗ್ನೇಯ ದಿಕ್ಕಿಗೆ ಶ್ರೀಮತಿ ನರಸಮ್ಮನ ಹೊಲದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

--

13 ನೆಯ ಶತಮಾನ

ಕನ್ನಡ

ಈ ಭೂಮಿಯು ಹಾರಿತ-ಗೋತ್ರದ ಕೋಟಿಶಂಕರ-ಭಟ್ಟನಿಗೆ ಸೇರಿದ್ದೆಂದು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 91.

ಸಂ. 568

ಗ್ರಾಮದ ಪೂರ್ವಕ್ಕೆ ಬಸವನಗೌಡನ ಹೊಲದಲ್ಲಿ ಹೂತಿರುವ ಕಲ್ಲಿನ ಮೇಲೆ

--

13 ನೆಯ ಶತಮಾನ

ಕನ್ನಡ

ಈ ಭೂಮಿಯು ಸ್ವಯಂಭು ದೇವರಿಗೆ ಸೇರಿದ್ದೆಂದು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 92.

ಚಿಕ್ಕಬಳ್ಳಾರಿ

ಸಂ. 569

ವೀರಣ್ಣಕಟ್ಟೆಯಲ್ಲಿ ಕಟ್ಟಿದ ಒಂದು ಕಲ್ಲಿನ ಮೇಲೆ

--

14-15 ನೆಯ ಶತಮಾನ

ಕನ್ನಡ

ಬಹುಶಃ ದೇವ-ಗೌಡ ಮತ್ತು ಹಾಲ-ಗೌಡರು ತಿಂ[ಮ]ಣ-ವೊಡೆಯನಿಗೆ ಹಳ್ಳದಬಾವಿಯ ಹತ್ತಿರ ಭೂಮಿಯನ್ನು ಸರ್ವಮಾನ್ಯವಾಗಿ ಕೊಟ್ಟಿದ್ದನ್ನು ದಾಖಲಿಸುವಂತೆ ತೋರುತ್ತದೆ.

ಆ್ಯರಿಇಎ, 1978-79, ಸಂ. ಬಿ 93.

ಸಂ. 570

ಡಾ. ಎಚ್.ಎಮ್. ಸಿದ್ಧಮಲ್ಲಿಕಾರ್ಜುನ ಶಾಸ್ತ್ರಿ ಮತ್ತು ಎನ್. ಶಂಕರಗೌಡರ ಹೊಲಗಳ ಮಧ್ಯ ಬಿದ್ದಿರುವ ಕಲ್ಲಿನ ಮೇಲೆ

--

14-15 ನೆಯ ಶತಮಾನ

ಕನ್ನಡ, ನಾಗರಿ

ತ್ರುಟಿತ. ಬಾಚೋಜ ಮತ್ತು ಒಂದು ಮತ್ತರು ಭೂಮಿಯನ್ನು ಉಲ್ಲೇಖಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 94.

ಡಿ. ಕರೂರ

ಸಂ. 571

ಬೀರಪ್ಪನ ಗುಡಿಯ ಹೊರಗೆ ನಿಲ್ಲಿಸಿದ ಕಲ್ಲಿನ ಮೇಲೆ

--

ಬಹುಧಾನ್ಯ, ಜ್ಯೇಷ್ಠ ಬ ... = (17 ನೆಯ ಶತಮಾನ)

ಕನ್ನಡ

ತುಂಬ ಹಾಳಾಗಿದೆ. ಮಹಾರಾಜಾಧಿರಾಜ ಹನುಮಿನಾಯಕ ಎಂಬ ವ್ಯಕ್ತಿಯ ಉಲ್ಲೇಖವಿದೆ. ಭೂಮಿ ದಾನವನ್ನು ದಾಖಲಿಸುವಂತೆ ತೋರುತ್ತದೆ.

ಆ್ಯರಿಇಎ, 1978-79, ಸಂ. ಬಿ 95.

ಗುಂಡಿಗನೂರು

ಸಂ. 572

ಬಸವನಕಟ್ಟೆಯ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ವೀರ ಸದಾಶಿವರಾಯ

ಶಕ 1465, ಶೋಭಕೃತ, ಭಾದ್ರಪದ ಶು. 6 = ಕ್ರಿ.ಶ. 1542, ಆಗಸ್ಟ್ 16 (ಶಕ 1464)

ಸಂಸ್ಕೃತ, ಕನ್ನಡ; ಕನ್ನಡ

ಪ್ರತಾಪ ದೇವರಾಯನು ಕುರುಗೋಡು ಪ್ರಾಂತದ ಗುಂಡೆಗನೂರು ಗ್ರಾಮವನ್ನು ಹರಿವಾಣದ-ರಾಜನ ಭಂಡಾರದ ಲೆಕ್ಕಕ್ಕೆ ಮತ್ತು ಲಕ್ಷ್ಮೀಕಾಂತ-ದೀಕ್ಷಿತನಿಗೆ ಏಕಭೋಗ-ಅಗ್ರಾಹಾರವೆಂದು ವಿರೂಪಾಕ್ಷ ದೇವರ ಅಮೃತಪಡಿ ಸೇವೆಗೆ ದಾನ ನೀಡಿದ್ದನ್ನು ತಿಳಿಸುತ್ತದೆ. ನಂತರ ಲಕ್ಷ್ಮೀಕಾಂತ ದೀಕ್ಷಿತನ ಕುಟುಂಬವು ಗ್ರಾಮವನ್ನು ಆಡಳಿತಕ್ಕೆ ಮರಳಿಸಿತ್ತು ಮತ್ತು (ಕೆಲವು ಸಮಯದ ನಂತರ) ಸ್ಥಾನಿಕರ ಪರವಾಗಿ ರಾಮರಾಜಯ್ಯನ ವಿನಂತಿಯ ಮೇರೆಗೆ ಸದಾಶಿವರಾಯ-ಮಹಾರಾಯನು ಅರ್ಧ ಗ್ರಾಮವನ್ನು ಮೂಲ ದಾನದ ಉದ್ದೇಶಕ್ಕೆ ತನ್ನ ತಂದೆ ಅಚ್ಯುತರಾಯನಿಗೆ ಪುಣ್ಯವಾಗಲೆಂದು ದಾನ ನೀಡಿದನೆಂದು ತಿಳಿಸುತ್ತದೆ. ಅಂತ್ಯ ಭಾಗದಲ್ಲಿ ಗದ್ದೆ ಮತ್ತು ತೋಟದ [illegible]ದ ಉಲ್ಲೇಖವಿದೆ.

ಆ್ಯರಿಇಎ, 1977-78, ಸಂ. ಬಿ 89.

ಸಂ. 573

ಹನುಮಾನ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

ನೊಳಂಬ-ಪಲ್ಲವ, ಜಗದೇಕಮಲ್ಲ

11 ನೆಯ ಶತಮಾನ

ಕನ್ನಡ

ತುಂಬ ಹಾಳಾಗಿದೆ. ಪಲ್ಲವ ಕುಲತಿಲಕ, ಅಮೋಘವಾಕ್ಯ, ಕಾಂಚೀಪುರವರಾಧೀಶ್ವರ ಮುಂತಾದ ಬಿರುದುಗಳನ್ನು ಪಡೆದ ಅರಸನ ಆಡಳಿತದ ಬಗ್ಗೆ ತಿಳಿಸುತ್ತದೆ. ಉಳಿದ ವಿವರಗಳು ಹಾಳಾಗಿವೆ.

ಆ್ಯರಿಇಎ, 1980-81, ಸಂ. ಬಿ 125.

ಹಳೇಕೋಟೆ
(ಸೀದರಗಡ್ಡದ ಹತ್ತಿರ)

ಸಂ. 574

ಆಂಜನೇಯ ದೇವಸ್ಥಾನದ ಮುಂದೆ ಬಿದ್ದಿರುವ ಕಲ್ಲಿನ ಮೇಲೆ

ಬಾಣ, ತ್ರೈಲೋಕ್ಯಮಲ್ಲ ಬಾಣಾಧಿರಾಜ

ಶಕ 975, ಜಯ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1052, ಡಿಸೆಂಬರ್ 24, ಗುರುವಾರ

ಕನ್ನಡ

ಅರಸನ ಬಿರುದುಗಳಾದ ಮಹಾಮಂಡಲೇಶ್ವರ, ಉದಾರ ಮಹೇಶ್ವರ, [ಪೆ]ಳಿಪ್ಪರ ಗಂಡ, ಬಾಣಮಾರ್ತ್ತಂಡ ಆದಟರಾಂಕುಶ ಮುಂತಾದವುಗಳ ಬಗ್ಗೆ ತಿಳಿಸುತ್ತದೆ. 12 ಮತ್ತರು ಭೂಮಿಯನ್ನು ಸಿಂದವೂರ ಕೂಡಲ ಮಲ್ಲಿಕಾರ್ಜುನ ದೇವರಿಗೆ, 12 ಮತ್ತರು ಭೂಮಿಯನ್ನು ಪಾತ್ರ-ಪಾವುಳಕ್ಕೆ ಮತ್ತು 6 ಮತ್ತರು ಭೂಮಿಯನ್ನು ಬಲದೇವ ಗುರುವಿಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಅಲ್ಲದೆ ಒಕ್ಕಲ ಮಕ್ಕಳಿಗೆ ಗಾಮುಂಡ ಊರೊಡೆಯ ಪ್ರತಿವರ್ಷ ಕೊಡಬೇಕಾದ ಸಂಬಳದ ಕರಾರಿನೊಂದಿಗೆ 6 ಮತ್ತರು ಭೂಮಿ ದಾನ ನೀಡಿದ ಬಗ್ಗೆಯೂ ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 98; ಜಇಸೊಇ, XVII, ಪು. 107-110.

ಸಂ. 575

ಅದೇ ದೇವಸ್ಥಾನದ ಮುಂದೆ ಬಿದ್ದಿರುವ ಕಲ್ಲಿನ ಮೇಲೆ

ವಿಜಯನಗರ, ವೀರ-ಪ್ರತಾಪ ತಿರುಮಲ-ಮಹಾ[ರಾ]ಯ

ಶಕ 1447, [ಪಾರ್ಥಿವ], ಜ್ಯೇಷ್ಠ ಶು. 5 = ಕ್ರಿ.ಶ. 1525, ಮೇ 27

ಕನ್ನಡ

ಹಾಳಾಗಿದೆ ಮತ್ತು ಸವೆದಿದೆ. ತಿಮ್ಮಣ-ನಾಯಕನು ಮಾದಯನಿಗೆ ಸರ್ವ್ವಮಾನ್ಯವಾಗಿ ಭೂಮಿ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಆದವಾನಿ ಅಗ್ರಹಾರವನ್ನು ಉಲ್ಲೇಖಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 99.

ಸಂ. 576

ತಳವಾರ-ಬಸಪ್ಪನ ಹೊಲದಲ್ಲಿ ಹೂತಿರುವ ಕಲ್ಲಿನ ಮೇಲೆ

--

17ನೆಯ ಶತಮಾನ

ಕನ್ನಡ

ಗಂಗಮ್ಮನ ಪಾದಗಳನ್ನು ಹೊನಳಿ ತಿಮ್ಮನು ಮಾಡಿಸಿದನೆಂದು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 100.

ಹಳೇಕೋಟೆ
(ತೆಕ್ಕಲಕೋಟೆಯ ಹತ್ತಿರ)

ಸಂ. 577

ಆಂಜನೇಯ ಮತ್ತು ಈಶ್ವರ ಜೋಡಿಗುಡಿಯ ಆವರಣದಲ್ಲಿ ಇಟ್ಟಿರುವ ತುಂಡುಕಲ್ಲಿನ ಮೇಲೆ

--

12ನೆಯ ಶತಮಾನ

ಕನ್ನಡ

ತುಂಬ ಹಾಳಾಗಿದೆ ಮತ್ತು ಸವೆದಿದೆ. ಸಿಂದ ವಂಶದ ವಂಶಾವಳಿ ಮತ್ತು ಭೋಗಾವತೀಪುರವರಾಧೀಶ್ವರ, ಸತ್ಯರಾಧೇಯ, ಶೌಚಾಂಜನೇಯ ಮುಂತಾದ ಬಿರುದುಗಳ ಉಲ್ಲೇಖವಿದೆ.

ಆ್ಯರಿಇಎ, 1977-78, ಸಂ. ಬಿ 90.

ಸಂ. 578

ಗ್ರಾಮದ ದಕ್ಷಿಣಕ್ಕೆ ಬೆಟ್ಟದ ಮೇಲೆ ಒಂದು ಗುಂಡಿನ ಮೇಲೆ

--

ಇತ್ತೀಚಿನ ಅಕ್ಷರಗಳಲ್ಲಿ

ಕನ್ನಡ

ಇದು ಮಯಲಾರನ ಬರಹ ಎಂದು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 101.

ಹಚ್ಚೊಳ್ಳಿ

ಸಂ. 579

ಕುರವಳ್ಳಿ ಶಂಕರಗೌಡನ ಹೊಲದಲ್ಲಿ ಹೂತಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ (ಸೋಮೇಶ್ವರ I)

ಶಕ 966, ತಾರಣ, ಕಾರ್ತ್ತಿಕ ಶು. 10, ಗುರುವಾರ = ಕ್ರಿ.ಶ. 1044, ನವೆಂಬರ್ 3, ಶನಿವಾರ

ಕನ್ನಡ

ಅರಸನು ಕಾಸಮಳ ನೆಲೆವೀಡಿನ ಪಶ್ಚಿಮಕ್ಕೆ ಪೊರವೀಡಿನ ದೇಹಾರದಲ್ಲಿ ಬೀಡು ಬಿಟ್ಟಾಗ ತನ್ನ ಅಧೀನ ಮಂಡಲಿಕ ವೀರಯ್ಯನ ಮೂಲಕ ತ್ರೈಲೋಕ್ಯಮಲ್ಲಜೀಯರ್‌ಗೆ ಸಿಂದವಾಡಿನಾಡಿನಲ್ಲಿ ಕಿರುದೊರೆಯ ದಂಡೆಯ ಮೇಲಿರುವ ಪಚ್ಚಳಿಯಲ್ಲಿ 100 ಕರಿಯಕೆಯ್ಮತ್ತರು (ಕಪ್ಪು ಭೂಮಿ) ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 91.

ಸಂ. 580

ಹೊಸಮನಿ ಶಿವಬಸವನಗೌಡನ ಮನೆಯ ಮುಂಭಾಗದ ಗೋಡೆಯಲ್ಲಿ ಕಟ್ಟಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭು[ವನಮಲ್ಲ] (ವಿಕ್ರಮಾದಿತ್ಯ VI)

ಚಾಲುಕ್ಯ ವಿಕ್ರಮ ವರ್ಷ 37 (ಪ್ರಚಲಿತ), ನಂದನ, ಪುಷ್ಯ ಶು. 5, ಗುರುವಾರ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1112, ಡಿಸೆಂಬರ್ 25, (ವಾರದ ದಿನ ಬುಧವಾರ)

ಕನ್ನಡ

ಪಟ್ಟಮಹಾದೇವಿಯು ಆದಿತ್ಯ-ದೇವರ-ಕೋಲಿನಿಂದ ಅಳೆದ 3 ಮತ್ತರು ಭೂಮಿಯನ್ನು ಪಿರಿಯ-ಬೆಳ್ಳಹಾರದ ಮೂಲಸ್ಥಾನ ದೇವರಿಗೆ ನೈವೇದ್ಯ ಮತ್ತು ನಿರಂತರ ದೀಪ ಉರಿಸಲು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 92.

ಸಂ. 581

ಡಾ. ಪ್ರಹ್ಲಾದ ರಾವ್ ಅವರ ಹೊಲದ ಹತ್ತಿರ ಬಿದ್ದಿರುವ ಕಲ್ಲಿನ ಮೇಲೆ

--

13 ನೆಯ ಶತಮಾನ

ಕನ್ನಡ

ತ್ರುಟಿತ. ಎಂಟು ಸಮಸ್ತ-ಮೂಲಿಗರು (ಹೆಸರು ಸ್ಪಷ್ಟವಾಗಿಲ್ಲ), ಎಂಟು ಹಿಟ್ಟು ಮುಂತಾದವರು ನಾಗಯನಿಗೆ (ವ್ರಿತ್ತಿ) ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 93.

ಸಂ. 582

ಎಚ್.ಪಿ. ಶಿವಾನಂದ ಅವರ ಮನೆಯ ಅಂಗಳದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

--

13 ನೆಯ ಶತಮಾನ

ಕನ್ನಡ

ತ್ರುಟಿತ. ಭೂಮಿ ದಾನವನ್ನು ಉಲ್ಲೇಖಿಸುವಂತೆ ತೋರುತ್ತದೆ.

ಆ್ಯರಿಇಎ, 1977-78, ಸಂ. ಬಿ 94.

ಸಂ. 583

ಮುತ್ತಿನಪೆಂಡಿಮಠದ ಹಿಂಭಾಗದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

ವಿಜಯನಗರ, --

ಶಕ 1533, ವಿರೋಧಿಕೃತ, [ಪು]ಷ್ಯ ಶು. 5 = ಕ್ರಿ.ಶ. 1611, ಡಿಸೆಂಬರ್ 29

ಕನ್ನಡ

ತುಂಬ ಹಾಳಾಗಿದೆ ಮತ್ತು ಸವೆದಿದೆ. ಹಚ್ಚವಳಿ ಗ್ರಾಮದಲ್ಲಿ ದಾನ ನೀಡಿದ್ದನ್ನು ಉಲ್ಲೇಖಿಸುವಂತೆ ತೋರುತ್ತದೆ. ವಿವರ ಸ್ಪಷ್ಟವಾಗಿಲ್ಲ.

ಆ್ಯರಿಇಎ, 1977-78, ಸಂ. ಬಿ 95.

ಸಂ. 584

ಪಂಪಾಪತಿ ದೇವಸ್ಥಾನದ ಹತ್ತಿರವಿರುವ ಬಾವಿಯ ಗೋಡೆಯಲ್ಲಿರುವ ಕಲ್ಲಿನ ಮೇಲೆ

--

ಇತ್ತೀಚಿನ ಅಕ್ಷರಗಳಲ್ಲಿದೆ

ಕನ್ನಡ

ಆಯಂ[ಣ್ಣ]ನು ಬಾವಿ ಮತ್ತು ದೇವಸ್ಥಾನಗಳನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 96.

ಸಂ. 585

ಜಾತ್ರೆಹೊಲ ಎಂದು ಕರೆಯುವ ಎಡಗಹಾಳು ವೀರಪ್ಪನ ಹೊಲದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

--

11 ನೆಯ ಶತಮಾನ

ಕನ್ನಡ

ತ್ರುಟಿತ. ಒಂದು ಮುತ್ತಿಗೆ ಮತ್ತು ಬಹುಶಃ ಒಬ್ಬ ವ್ಯಕ್ತಿಯ ಮರಣದ ಬಗ್ಗೆ ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 96.

ಸಂ. 586

ಮಾಟೂರಿಗೆ ಹೋಗುವ ಮಾರ್ಗದಲ್ಲಿ ಬಸವಣ್ಣನ ದೇವಸ್ಥಾನದಲ್ಲಿ ಬಸವಣ್ಣನ ವಿಗ್ರಹದ ಪೀಠದಲ್ಲಿಯ ಕಲ್ಲಿನ ಮೇಲೆ

--

16-17 ನೆಯ ಶತಮಾನ

ಕನ್ನಡ

ತ್ರುಟಿತ. ಶಿವ-ಸ್ಥಾನ ಮತ್ತು ವಿಷ್ಣು-ಸ್ಥಾನಗಳನ್ನು ಉಲ್ಲೇಖಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 97.

ಹಾವಿನಹಾಳು

ಸಂ. 587

ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಬಾಗಿಲಿನ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

--

12 ನೆಯ ಶತಮಾನ

ಕನ್ನಡ

ತುಂಬ ಹಾಳಾಗಿದೆ. ತೊಂಡೆಯ ಲಕಣಯ್ಯ, ಕಾಮಣಯ್ಯ ಮತ್ತು ಬಸವಣಯ್ಯ ನವರು ನಾಗಪುರದ ಮೂಲಸ್ಥಾನ ದೇವಸ್ಥಾನದ ಕಲಿದೇವರಿಗೆ 13 ಪೆರಮತ್ತರ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಅಲ್ಲದೆ ಇನ್ನೂ ಕೆಲವು ದಾನಗಳನ್ನು ದಾಖಲಿಸುತ್ತದೆ.

ಆ್ಯರಿಇಎ, 1980-81, ಸಂ. ಬಿ 126.

ಹಿರೇಹಾಳು

ಸಂ. 588

ಗ್ರಾಮದಲ್ಲಿಯ ಹಳೆಯ ಕೋಟೆಯ ಪೂರ್ವದ ಬಾಗಿಲ ಮೇಲೆ

--

ಶಕ 16[7]3, ಪ್ರಜೋತ್ಪತ್ತಿ, ಶ್ರಾವಣ ಬ. 10 = ಕ್ರಿ.ಶ. 1751, ಅಗಸ್ಟ್ 5

ಕನ್ನಡ

ಭಾಗಶಃ ಹಾಳಾಗಿದೆ. ಒಬ್ಬ ನಾಯಕನ ಆಜ್ಞೆಯ ಮೇರೆಗೆ ಶಿವಾಜಿ ಮಲ್ಲಹರಿ-ಪಂತನು ಕಿರೆ-ಹಿರೆಹಾಳಿನಲ್ಲಿ ಕೊತ್ತಳ ಮತ್ತ ಬಾಗಿಲುಗಳನ್ನೊಳಗೊಂಡ ಕೋಟೆ ಕಟ್ಟಿಸಿದನೆಂದು ತಿಳಿಸುತ್ತದೆ.

ಆ್ಯರಿಎ, 1913-14, ಸಂ. 1913 ರ 214.

ಇಬ್ರಾಹಿಮಪುರ

ಸಂ. 589

ಬಾಗವಾಡಿ ಬಸವೇಶ್ವರ ದೇವಸ್ಥಾನದ ಒಳ ಗೋಡೆಯಲ್ಲಿರುವ ಕಲ್ಲುಗಳ ಮೇಲೆ

--

ಶಕ 16(0)9, ಪ್ರಭವ, ಮಾಘ ಶು. 7, ಸೋಮವಾರ = ಕ್ರಿ.ಶ. 1687, ಜನವರಿ 10

ಕನ್ನಡ

ಹಾಳಾಗಿದೆ. ಒಬ್ಬ ವ್ಯಕ್ತಿಯು (ಹೆಸರು ಸ್ಪಷ್ಟವಾಗಿಲ್ಲ) ಬಾಗವಾಡಿ ಬಸವೇಶ್ವರ ದೇವಸ್ಥಾನವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 97.

ಕಲ್ಲುಕುಟಿಗನಹಾಳು

ಸಂ. 590

ಈಶ್ವರ ದೇವಸ್ಥಾನದ ಎದುರಿಗಿರುವ ಆಂಜನೇಯ ದೇವಸ್ಥಾನದ ಧ್ವಜಸ್ತಂಭದ ಆದಿಷ್ಠಾನದಲ್ಲಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಸೋಮೇಶ್ವರ I

ಶಕ 9[8]9, ಪ್ರ(ಪ್ಲ)ವಂಗ, ಫಾಲ್ಗುಣ, ಅಮವಾಸ್ಯ, ರವಿವಾರ, ವ್ಯತಿಪಾತ, ಸೂರ್ಯಗ್ರಹಣ = ಕ್ರಿ.ಶ. 1068, ಮಾರ್ಚ್ 6, ಗುರುವಾರ

ಕನ್ನಡ

ಮಹಾಮಂಡಲೇಶ್ವರ ರೇವಪರಸನ ಕಲ್ಲುಕುಟಿ ಗ್ರಾಮದ ಆಡಳಿತದ ಬಗ್ಗೆ ತಿಳಿಸುತ್ತದೆ ಮತ್ತು ಬೀರಯ-ಗವುಡ ಮತ್ತು ಮುನಿಯಮ-ಗವುಡರು 5 ಮತ್ತರು ಕಪ್ಪು ಭೂಮಿಯನ್ನು ಬಹುಶಃ ಪೊನ್ನೆಯ-ಗಾನುಂಡನ ಬಾವಿಯ ನಿರ್ವಹಣೆಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 102.

ಕಂಚಗಾರ ಬೆಳಗಲ್ಲು

ಸಂ. 591

ಗ್ರಾಮದ ಚಾವಡಿಯ ಹತ್ತಿರ ಬಿದ್ದಿರುವ ಗದ್ದಿಗೆ ಕಲ್ಲಿನ ಮೇಲೆ

--

ಶಕ 1639, ಹೇಮಳಂಬಿ, ಕಾರ್ತಿಕ ಬ. 2, ಶನಿವಾರ, ರೋಹಿಣಿ, ಅಮೃತ-ಸಿದ್ಧಯೋಗ, ತೈತುಲಕರಣ = ಕ್ರಿ.ಶ. 1717, ನವೆಂಬರ್ 9, ಶನಿವಾರ

ಕನ್ನಡ

ಆದವಾನಿಗೆ ಹೋಗುವ ದಾರಿಯಲ್ಲಿ ಭೋಗೇಶ್ವರ ದೇವಸ್ಥಾನ, ಬಾವಿ, ಕೆರೆಯ ನಿರ್ಮಾಣವನ್ನು ಪ್ರಾರಂಭಿಸಿದ್ದನ್ನು ಮತ್ತು ಕಂಚಗಾರ-ಬೆಳಗಲ್ಲಿನ ಕುಲಕರ್ಣಿ ರಾಯಪ್ಪ ನರಸಮ್ಮಳ ಮಗ ಐಯಣನು ಭೂಮಿ ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಎ, 1919-20, ಸಂ. 1919 ರ 709.

ಸಂ. 592

ಆಂಜನೇಯ ದೇವಸ್ಥಾನದ ಹತ್ತಿರ ಬಿದ್ದಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಆಹವಮಲ್ಲದೇವ

ಶಕ 903, ವಿಕ್ರಮ, ವೈಶಾಖ ಶು. 5, ಬೃಹಸ್ಪತಿವಾರ = ಕ್ರಿ.ಶ. 981, ಎಪ್ರಿಲ್ 22, ಗುರುವಾರ

ಕನ್ನಡ

ಅರಸನು ಕಂಚಗಾರ-ಬೆಳಗಲ್ಲಿನ ಮೂರು ಶಿವ ದೇವಾಲಯಗಳಿಗೆ ಹಳೆಯ ಸ್ಥಾನ-ಮಾನ್ಯವನ್ನು ಸ್ಥಿರಪಡಿಸಿದನ್ನು ದಾಖಲಿಸುತ್ತದೆ. ಪಲ್ಲವ ವಂಶದ 'ಕಾಂಚೀಪುರವರೇಶ್ವರ'ಎಂಬ ಬಿರುದು ಪಡೆದ ವೀರ-ನೊಳಂಬ-ಪಲ್ಲವ-ಪೆರ್ಮ್ಮಾನಡಿದೇವನ ಪತ್ನಿ ರೇವಲ ದೇವಿಯು 6 ಮತ್ತರು ಭೂಮಿಯನ್ನು ಕಾಳಪ್ರಿಯದೇವರಿಗೆ ಮತ್ತು ಎರಡು ವಿಷ್ಣುದೇವರ (ದೇವಸ್ಥಾನ)ಗಳಿಗೆ ದಾನ ನೀಡಿದಳು.

ಆ್ಯರಿಎ, 1919-20, ಸಂ. 1919 ರ 710; ಸೌಇಇ, IX i, ಸಂ. 74.

ಸಂ. 593

ಆಂಜನೇಯಸ್ವಾಮಿ ದೇವಸ್ಥಾನದ ಹತ್ತಿರ ಬಾಷೆ-ಗುಂಡು ಎಂದು ಕರೆಯುವ ಗುಂಡಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರೈಲೋಕ್ಯಮಲ್ಲದೇವ

ಶಕ 969, ಸರ್ವಜಿತ, ವೈಶಾಖ ಅಮಾವಾಸ್ಯೆ, ಶುಕ್ರವಾರ, ಸೂರ್ಯ-ಗ್ರಹಣ = ಕ್ರಿ.ಶ. 1047, ಮಾರ್ಚ್ 29, ರವಿವಾರ

ಕನ್ನಡ

ಸಿಂದವಾಡಿ-1000, ಬೆಣ್ಣೆವೂರು-12 ಮತ್ತು ನರುಗುಂದಗಳನ್ನಾಳುತ್ತಿದ್ದ 'ಮಾಹಿಸ್ಮತಿ ಪುರವರೇಶ್ವರ' ಎಂಬ ಬಿರುದು ಪಡೆದ ಮಹಾಮಂಡಲೇಶ್ವರ ಗಂಡರಾದಿತ್ಯರಸನು ಕಂಚಗಾರ-ಬೆಳ್ಗಲಿಯಲ್ಲಿ ವಿಷ್ಣುದೇವರ ಸೇವೆಗೆ 6 ಮತ್ತರ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಎ, 1919-20, ಸಂ. 1919 ರ 711; ಸೌಇಇ, IX i, ಸಂ. 105.

ಸಂ. 594

ಗ್ರಾಮದ ಪ್ರವೇಶದ್ವಾರದ ಹತ್ತಿರ ಗುಂಡಿನ ಮೇಲೆ

--

ಶಕ 1549, ಪ್ರಭವ, ಚೈತ್ರ ಶು. 5 = ಕ್ರಿ.ಶ. 1627, ಮಾರ್ಚ್ 11

ಕನ್ನಡ

ಹಾಳಾಗಿದೆ. ಭೂಮಿ ಮತ್ತು ಬಾವಿಯನ್ನು ದಾನ ಮಾಡಿದ್ದನ್ನು ದಾಖಲಿಸುವಂತೆ ತೋರುತ್ತದೆ. ಮಹಾನಾಯಕಾಚಾರ್ಯ ಕೊಂಡಪ-ನಾಯಕ ಮತ್ತು ಸಿರುಗುಂಪೆ ಮತ್ತು ಕಂಚಗಾರ-ಬೆಳುಗಲ ಗ್ರಾಮಗಳ ಉಲ್ಲೇಖವಿದೆ.

ಆ್ಯರಿಎ, 1919-20, ಸಂ. 1919 ರ 712.

ಸಂ. 595

ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪೂರ್ವಕ್ಕೆ ಬಿದ್ದಿರುವ ಕಲ್ಲಿನ ಮೇಲೆ

14-15 ನೆಯ ಶತಮಾನ

ಕನ್ನಡ

ತ್ರುಟಿತ. ಗರಿಕಪಲಿಕೋಟ ಗ್ರಾಮಕ್ಕೆ ರಕ್ಷಣಾ ಬುರುಜು (ಹುಡೆ) ಕಟ್ಟಿಸಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 103.

ಸಂ. 596

ಹುಸೇನ್‌ಸಾಹಬ್ ದರ್ಗಾದ ತಳಪಾಯದಲ್ಲಿರುವ ಕಂಬದ ಮೇಲೆ

--

17 ನೆಯ ಶತಮಾನ

ಕನ್ನಡ

ಚಿಂತೋಪಂತ-ರುದ್ರೋಪಂತನ ಆಡಳಿತ ಸಮಯದಲ್ಲಿ ರಾಮಣ್ಣನ ಮಗ ರಾಯಣ್ಣ ಶಿಲ್ಪಿಯು ದೇವಸ್ಥಾನ (?) ಕಟ್ಟಿದ್ದನ್ನು ತಿಳಿಸುತ್ತದೆ. ಭೂಮಿ ದಾನವನ್ನು ಸಹ ದಾಖಲಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 104.

ಸಂ. 597

ಮಂಗಲ ಇನಾಮು ಮಲ್ಲಯ್ಯನ ಹೊಲದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

--

17 ನೆಯ ಶತಮಾನ

ಕನ್ನಡ

ಉದ್ದಂಡಯ್ಯನ ಹೆಸರನ್ನು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 105.

ಕೆಂಚನಗುಡ್ಡ

ಸಂ. 598

ಗಂಗಾಧರೇಶ್ವರ ದೇವಸ್ಥಾನದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

--

(i) ಸರ್ವಧಾರಿ, ವೈಶಾಖ ಬ. 12, ಗುರುವಾರ = ಕ್ರಿ.ಶ. 1708, ಮೇ 6; (ii) ಶಕ 1630, ಸರ್ವಧಾರಿ, ಮಾರ್ಗಶಿರ ಶು. 5 = ಕ್ರಿ.ಶ. 1708, ನವಂಬರ್ 6

ಕನ್ನಡ

ಹಜರತಿ ಅಬ್ದುಲ್ಲ-ವಾಹಬ-ಸಾಹೇಬನ ಮಗ ಮಕಿಕೀ-ಸಾಹೇಬನ ಆಡಳಿತ ಕಾಲದಲ್ಲಿ (ಕಾಲಕಿರ್ದ್) ಮುದಕನಗೌಡನು ಸಿರುಗುಪ್ಪೆ-ಸೀಮೆಯ ನಾಡ-ಗೌಡಿಕೆಯನ್ನು ಪಡೆದದ್ದನ್ನು ಮತ್ತು ಆತನ ಮಗ ಕೆಂಚನಗೌಡನನ್ನು ದತ್ತು ಮಗನನ್ನಾಗಿ ಆತನ ಅಣ್ಣ ರಾಮನ ಗೌಡನಿಗೆ ಕೊಟ್ಟದ್ದನ್ನು ತಿಳಿಸುತ್ತದೆ. ಕೆಂಚನಗೌಡನು ವೈರಿ ಸೈನ್ಯವನ್ನು ಹತ್ತಿಕ್ಕಿ ಮಿರಾಸಿಯನ್ನು (ಗ್ರಾಮದಲ್ಲಿ ವಂಶಪಾರಂಪರ್ಯವಾದ ಕಚೇರಿ) ಉಳಿಸಿಕೊಂಡು ಹೊಸೂರು-ದುರ್ಗ್ಗ ಮಂಗಾಪುರಭೂಮಿ ಎಂಬ ಕೋಟೆ ಕಟ್ಟಿಸಿದ್ದನ್ನು ಮತ್ತು ತನ್ನ ಒಳ್ಳೆಯ ಕೆಲಸದಿಂದ ಸರನಾಡ-ಗೌಡಿಕೆಯನ್ನು ಪಡೆದದ್ದನ್ನು ತಿಳಿಸುತ್ತದೆ. ನಂತರ ಆತನು ಮೊದಲನೆಯ ದಿನಾಂಕದಂದು ಮರಣ ಹೊಂದಿದ್ದು ಮತ್ತು ಗೌಡಿಕೆಯ ಪಾಲು ಮಂತಾದವುಗಳ ಬಗ್ಗೆ ತಿಳಿಸುತ್ತದೆ. ಶಾಸನವು ಬೇರೆ ಬೇರೆ ದಿನಾಂಕಗಳಂದು ನಡೆದ ವಿವಿಧ ಘಟನೆಗಳ ಬಗ್ಗೆ ತಿಳಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 98.

ಸಂ. 599

ವಿಜಯನಗರ (ದೇಶನೂರ್) ಅಣೆಕಟ್ಟಿನ ಪೂರ್ವ ಭಾಗದ ನೆಲದಲ್ಲಿರುವ ಕಲ್ಲಿನ ಮೇಲೆ

--

ಶಕ 1388, ವ್ಯಯ, ಮಾಘ ಶು. 10, ಗುರುವಾರ, ರೋಹಿಣಿ, ಬ್ರಹ್ಮಯೋಗ, ... ಜಕರಣ, ಕುಂಭಲಗ್ನ = ಕ್ರಿ.ಶ. 1467, ಜನವರಿ 15

ಸಂಸ್ಕೃತ ಮತ್ತು ಕನ್ನಡ, ಕನ್ನಡ

ಭಾಗಶಃ ಹಾಳಾಗಿದೆ. ಸಾಲುಗುಂಟೆಯ ಸೋವಂಣ-ನಾಯಕ ಮತ್ತು ಬಸವಾಂಬಿಕೆಯರ ಮಗ ಅರಿರಾಯ ತೋಡರಮಲ್ಲ ವೀರಣ-ನಾಯಕ (ವಿಠಣ-ನಾಯಕ)ನು ಪ್ರತಾಪರುದ್ರನ ವಂಶಕ್ಕೆ ಸೇರಿದವನೆಂದು ಮತ್ತು ಜಗತಾಪಿ-ಗುತ್ತಿಯ-

ದುರ್ಗವನ್ನಾಳುತ್ತಿದ್ದನೆಂದು ತಿಳಿಸುತ್ತದೆ. ಆತನು ತನ್ನ ತಂದೆ ಸೋಮಣ-ನಾಯಕ ಮತ್ತು ಅಣ್ಣ ಬಸವಣರಿಗೆ ಪುಣ್ಯವಾಗಲೆಂದು ಒಡೆದ ದೇವರಸನಕಾಲ್ವೆಯ ಅಣೆಕಟ್ಟನ್ನು ಪುನಃ ಕಟ್ಟಿಸಿ, ಕಾಲುವೆ ಮತ್ತು ಭೂಮಿ (ಕಾಲುವೆಯ ಭೋಗ ಮತ್ತು ಬಯಲ-ಭೋಗ) ಗಳನ್ನು ಅನುಭವಿಸುವ ಅಧಿಕಾರವನ್ನು ಗ್ರಾಮದ ಮಹಾಜನರಿಗೆ, ಅರಸನ ದಕ್ಷಿಣಭುಜದಂಡನಾದ ಬಸವರಸನ ಮೂಲಕ ಒಪ್ಪಿಸಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1923-24, ಸಂ. 1923 ರ 434; ಆ್ಯರಿಇಎ, 1977-78, ಸಂ. ಬಿ 105.

ಕೊಂಚಿಗೆರೆ

ಸಂ. 600

ಈಶ್ವರ ದೇವಸ್ಥಾನದ ಹಿಂಭಾಗದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಯಂತಿಪುರದಿಂದ ಆಳುತ್ತಿದ್ದ ತ್ರಿಭುವನಮಲ್ಲದೇವ

ಚಾಲುಕ್ಯ ವಿಕ್ರಮ ವರ್ಷ 45, ಶಾರ್ವರಿ, ಪುಷ್ಯ ಶು. 1, ರವಿವಾರ = ಕ್ರಿ.ಶ. 1120, ಡಿಸೆಂಬರ್ 23, ಗುರುವಾರ

ಕನ್ನಡ

ಸಿಂದ ಅರಸ ಮಹಾಮಂಡಲೇಶ್ವರ ಸೋವಿದೇವನು ಬಲ್ಲಕುಂದೆ-300 ವಿಭಾಗದಲ್ಲಿರುವ ಕೌಚಂಗೆರೆಯಲ್ಲಿ 30 ಮತ್ತರ ಕೃಷ್ಣಭೂಮಿ (ಕಪ್ಪು ಭೂಮಿ) ಮತ್ತು 30 ಕಿಸುಮತ್ತರ, ಒಟ್ಟು 60 ಮತ್ತರ ಭೂಮಿಯನ್ನು ಸ್ವಯಂಭು-ಕಲಿದೇವರ ನಿತ್ಯಪೂಜೆ, ನಿರಂತರ ದೀಪ ಮತ್ತು ಇತರ ಸೇವೆಗೆ, ದೇವರಾಶಿ-ಪಂಡಿತನಿಗೆ ಕೊಟ್ಟಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 99.

ಸಂ. 601

ಅದೇ ದೇವಸ್ಥಾನದ ಹಿಂಭಾಗದಲ್ಲಿ ಬಿದ್ದಿರುವ ಅದೇ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಭೂಲೋಕಮಲ್ಲ (ಸೋಮೇಶ್ವರ III)

ಆಳಿಕೆಯ ವರ್ಷ 13, ಪಿಂಗಳ, ಕಾರ್ತ್ತಿಕ ಶು. [3], ಸೋಮವಾರ = ಕ್ರಿ.ಶ. 1137, ಅಕ್ಟೋಬರ್ 18

ಕನ್ನಡ

ಅಪೂರ್ಣವಾಗಿದೆ. ಮೇಲಿನ ಶಾಸನ ಸಂ. 600 ರ ಮುಂದಿನ ಭಾಗ ಫಣಿ-ಕುಲದ ಮಹಾಮಂಡಲೇಶ್ವರ ರಾಚಮಲ್ಲರಸನು ಬಹುಶಃ ಅದೇ ದೇವರಿಗೆ 100 [ವೀಳ್ಯದೆಲೆ], 50 ಅಡಿಕೆ ಮುಂತಾದವುಗಳನ್ನು ದಾನ ನೀಡಿದ್ದನ್ನು ತಿಳಿಸುವಂತೆ ತೋರುತ್ತದೆ.

ಆ್ಯರಿಇಎ, 1977-78, ಸಂ. ಬಿ 100.

ಸಂ. 602

ಆಂಜನೇಯ ದೇವಸ್ಥಾನದ ಬಲಗಡೆಗೆ ಭೂಮಿಯಲ್ಲಿ ಹೂತಿರುವ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಕಲ್ಯಾಣಪುರದಿಂದ ಆಳುತ್ತಿದ್ದ ಜಗದೇಕಮಲ್ಲದೇವ (II)

ಆಳಿಕೆಯ ವರ್ಷ 5, ದುಂದುಭಿ, ಉತ್ತರಾಯಣ-ಸಂಕ್ರಾಂತಿ = ಕ್ರಿ.ಶ. 1142

ಸಂಸ್ಕೃತ ಮತ್ತು ಕನ್ನಡ, ಕನ್ನಡ

ತ್ರಿಭುವನಮಲ್ಲನಿಂದ ಪ್ರಾರಂಭವಾದ ಅರಸನ ವಂಶಾವಳಿ ಇದೆ ಮತ್ತು ಸಿಂಹಕುಲದ ಮಹಾಮಂಡಲೇಶ್ವರ ರಾಚಮಲ್ಲದೇವ ಮತ್ತು ಆತನ ಪೆರಿಯರಸಿ ಮಾಕಲದೇವಿಯರ ಉಲ್ಲೇಖವಿದೆ. ಭರಮಯ್ಯನ ಮಗ ಮಾನಪ್ಪ ಮತ್ತು ಇತರರು ಭೂಮಿ, ತೋಟ, ಎಣ್ಣೆ ಗಾಣ ಮುಂತಾದವುಗಳನ್ನು ಭೈರವದೇವರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 101.

ಕೋಟೆಹಾಳು

ಸಂ. 603

ಆಂಜನೇಯ ದೇವಸ್ಥಾನದ ಮುಖ ಮಂಟಪದ ಕಂಬದ ಮೇಲೆ

--

ಶಕ 1644, ಶುಭಕೃತ, ಕಾರ್ತ್ತಿಕ ಶು. 5 = ಕ್ರಿ.ಶ. 1722, ನವಂಬರ್ 2

ಕನ್ನಡ

ಹಾಳಾಗಿದೆ ಮತ್ತು ಸವೆದಿದೆ. ದೇವಸ್ಥಾನವನ್ನು ಕಟ್ಟಿಸಿದ್ದನ್ನು ಉಲ್ಲೇಖಿಸುವಂತೆ ತೋರುತ್ತದೆ.

ಆ್ಯರಿಇಎ, 1978-79, ಸಂ. ಬಿ 106.

ಕೋಟೆಹಾಳು ಸೂಗೂರು

ಸಂ. 604

ಕರಿಲಿಂಗದೇವರ ಗುಡಿಯ ಆವರಣದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1617, ಮಾಘ ಶು. 5, ಗುರುವಾರ = ಕ್ರಿ.ಶ. 1696, ಜನವರಿ 26, ಮಂಗಳವಾರ

ಕನ್ನಡ

ಗ್ರಾಮದ ಗೌಡ ಪಾಕಿನಾಟ-ಸೆಟಿಯು ಸೂಗೂರಿನ ಪೋತಲಿಂಗದೇವರ ದೇವಸ್ಥಾನದ ಶಿಖರ ಕಟ್ಟಿಸಿದ್ದನ್ನು ತಿಳಿಸುತ್ತದೆ. ಅಲ್ಲದೆ ಧೋತ್ರಗಾವಿ ರಾಮಣ್ಣನ ಮಗ ಶಿಲ್ಪಿ ದಾನಪನು ಗೋಪುರವನ್ನು ಕಟ್ಟಿ 8 ಮಾನ ಭೂಮಿಯನ್ನು ಸರ್ವ್ವಮಾನ್ಯವಾಗಿ ಪಡೆದದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. 107.

ಕೊತ್ತಲಚಿಂತ

ಸಂ. ·605

ಜಂಗಮರ ದೊಡ್ಡ ಬಸಪ್ಪನ ಹೊಲದಲ್ಲಿ ಹೂತಿರುವ ಕಲ್ಲಿನ ಮೇಲೆ

--

ಹೇಮಳಂಬಿ, ಕಾರ್ತ್ತಿಕ ಶು. 5 (15-16ನೆಯ ಶತಮಾನ)

ಕನ್ನಡ

ಅಳಿಸಿ ಹೋಗಿದೆ. ವೆಂಕಟಾದ್ರಿಗೆ ಭೂಮಿ ದಾನ ನೀಡಿದ್ದನ್ನು ದಾಖಲಿಸುವಂತೆ ತೋರುತ್ತದೆ.

ಆ್ಯರಿಇಎ, 1978-79, ಸಂ. ಬಿ 108.

ಕುರವಳ್ಳಿ

ಸಂ. 606

ರಾಮಲಿಂಗದೇವರ ಗುಡಿಯ ಹೊರ ಭಾಗದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

--

10-11ನೆಯ ಶತಮಾನ

ಕನ್ನಡ

ತ್ರುಟಿತ. ಮೇಲಿನ ಭಾಗವು ಸಂಪೂರ್ಣವಾಗಿ ಹಾಳಾಗಿದೆ. ಮಲ್ಲಿಕಗಾವುಂಡನಿಗೆ ಭೂಮಿ ದಾನ ನೀಡಿದ್ದನ್ನು ದಾಖಲಿಸುವಂತೆ ತೋರುತ್ತದೆ. ದಾನಿಯ ಹೆಸರು ಅಳಿಸಿದೆ. ಪ್ರತಿ ವರ್ಷ ಎರಡು ಜೊತೆ ಜವಳಿ (ಬಟ್ಟೆ)ಯನ್ನು ಊರೂಳುಗೆ ಕೊಡಬೇಕೆಂಬ ನಿಬಂಧನೆಯನ್ನು ವಿಧಿಸುತ್ತದೆ. ರಾರವಿಯ ಕುಲಕರಣಿ ಕಾಳಿಮಯ್ಯನು ಶಾಸನವನ್ನು ಬರೆದನು.

ಆ್ಯರಿಇಎ, 1978-79, ಸಂ. ಬಿ 109.

ಮಲ್ಲಯನಗುಡ್ಡ
(ತೆಕ್ಕಲಕೋಟೆಯ ಹತ್ತಿರ)

ಸಂ. 607

ಮಲ್ಲೇಶ್ವರ ದೇವಸ್ಥಾನದ ಮುಖ ಮಂಟಪದಲ್ಲಿಯ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಕಲ್ಯಾಣಪುರದಿಂದ ಆಳುತ್ತಿದ್ದ ಜಗದೇಕಮಲ್ಲದೇವ

ಶಕ 939, ಚೈತ್ರ ಬ. 13, ಗುರುವಾರ = ಕ್ರಿ.ಶ. 1017, ಮಾರ್ಚ್ 28

ಕನ್ನಡ

ಒಳಗೆ ಸೇರಿಸಿ ಕಟ್ಟಲಾಗಿದೆ. ಮೇಲಿನ ಶಾಸನ ಸಂ. 602 ರ ಅರಸನ ಕೆಲವು ಭಾಗಗಳನ್ನು ಒಳಗೊಂಡಿದೆ ಮತ್ತು ಆತನು ಮೈಲಾರದೇವರಿಗೆ ಬಲ್ಲಕುಂದೆ-300ರ ಒಳಗಿನ ಒಂದು ಹಳ್ಳಿಯನ್ನು (ಹೆಸರು ಸ್ಪಷ್ಟವಾಗಿಲ್ಲ) ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 102.

ಸಂ. 608

ಮಲ್ಲೇಶ್ವರ ದೇವಸ್ಥಾನಕ್ಕೆ ಹೋಗುವ ದಾರಿಯ ಪಕ್ಕದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ಅಚ್ಯುತರಾಯ

ಶಕ [14]60, ವಿಳಂಬಿ, ಪುಷ್ಯ ಬ... = ಕ್ರಿ.ಶ. 1538

ಕನ್ನಡ

ಹಾಳಾಗಿದೆ. ದೇವರ (ಹೆಸರು ಸ್ಪಷ್ಟವಿಲ್ಲ) ಪೂಜೆ ಮತ್ತು ಅಮೃತಪಡಿ ಸೇವೆಗೆ ತೆಕ್ಕಲಕೋಟೆಯಲ್ಲಿ ಭೂಮಿ ದಾನ ನೀಡಿದ್ದನ್ನು ದಾಖಲಿಸುವಂತೆ ತೋರುತ್ತದೆ.

ಆ್ಯರಿಇಎ, 1977-78, ಸಂ. ಬಿ 103.

ಸಂ. 609

ಅದೇ ದೇವಸ್ಥಾನದ ಮುಖ ಮಂಟಪದ ನೆಲಕ್ಕೆ ಹಾಕಿ ಕಟ್ಟಿದ ಕಲ್ಲಿನ ಮೇಲೆ

--

ಶಕ 1632, ವಿಕೃತಿ, ವೈಶಾಖ ಶು. 15, ಸೋಮವಾರ = ಕ್ರಿ.ಶ. 1710, ಮೇ 1

ಕನ್ನಡ

ಬಹಳ ಸವೆದಿದೆ. ತೆಕ್ಕಲಕೋಟೆಯ ಬಹುಶಃ ಕಿಲ್ಲೆದಾರನಾದ ಮಹಾರಾಜಾಧಿರಾಜ ಭೀಮಸಿಂಗ-ಹಡೆಯನನ್ನು ಉಲ್ಲೇಖಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 104.

ಮಣೂರು (ಎಸ್)

ಸಂ. 610

ಆಂಜನೇಯ ದೇವಸ್ಥಾನದ ಪೂರ್ವಭಾಗದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ಪೆನುಗೊಂಡದಿಂದ ಆಳುತ್ತಿದ್ದ ವೆಂಕಟಪತಿದೇವ

ಹೇಮಳಂಬಿ, ಮಾರ್ಗಶಿರ ಶು. 5, ಶನಿವಾರ = ಕ್ರಿ.ಶ. 1597, ಡಿಸೆಂಬರ್ 3

ಕನ್ನಡ

ಮಹಾರಾಜಾಧಿರಾಜ-ರಾಜಶ್ರೀ ಹಂಡೆ ಹನುಮಿ-ನಾಯಕ ಅಂಕುಶರಾಯನು ರಾಜನಿಂದ ಅಮರ-ಮಾಗಣಿಯಾಗಿ ಪಡೆದ ಬಳ್ಳಾರಿ-ಸೀಮೆಯಲ್ಲಿರುವ ಮಣವೂರು ಗ್ರಾಮದ ಆದಾಯದ ಜೊತೆಗೆ ಭೂಮಿಗಳನ್ನು ವೀರಭದ್ರದೇವ, ಕರಿಯ ವೀರಣೊಡೆಯ, ಚೆಂನಮಲ್ಲಿಕಾರ್ಜುನದೇವ ಮತ್ತು ಆತನ ಶಿಷ್ಯ ಕೇದಾರದೇವರಿಗೆ, ಹನುಮಿ-ನಾಯಕನ ಮಗ ರಾಮಪನಿಗೆ ಪುಣ್ಯವಾಗಲೆಂದು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1980-81, ಸಂ. ಬಿ 127.

ಸಂ. 611

ಆಂಜನೇಯ ದೇವಸ್ಥಾನದ ಮುಂಭಾಗದ ಗೋಡೆಯಲ್ಲಿ ಕಟ್ಟಿರುವ ಕಲ್ಲಿನ ಮೇಲೆ

--

16ನೆಯ ಶತಮಾನ

ಕನ್ನಡ

ಶಾಪವಾಕ್ಯ ಮಾತ್ರ ಉಳಿದಿದೆ.

ಆ್ಯರಿಇಎ, 1980-81, ಸಂ. ಬಿ 128; 1985-86, ಸಂ. ಬಿ 63.

ಮಾಟೂರು

ಸಂ. 612

ಶರಣ ಮರಿಸಿದ್ದಪ್ಪನ ಕಟ್ಟೆಯ ಪಕ್ಕದಲ್ಲಿರುವ ಕಲ್ಲಿನ ಮೇಲೆ

--

16ನೆಯ ಶತಮಾನ

ಕನ್ನಡ

ಸರ್ವಮಾನ್ಯವು ಸಿದಯವೊಡೆಯನಿಗೆ ಸೇರಿದೆ ಎಂದು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 110.

ಮಿಟ್ಟೆಸೂಗೂರು

ಸಂ. 613

ಆಂಜನೇಯ ದೇವಸ್ಥಾನದ ಮುಂದೆ ಹೂತಿರುವ ಕಲ್ಲಿನ ಮೇಲೆ

--

13-14ನೆಯ ಶತಮಾನ

ಕನ್ನಡ

ತ್ರುಟಿತ. ಊರೊಡೆಯನಿಂದ (ಹೆಸರು ಸ್ಪಷ್ಟವಿಲ್ಲ) ಇರಿತಕ್ಕೊಳಗಾದ ಕಾಳಿಯ ನೆನಪಿನಲ್ಲಿ ಊರ ಗುಡಿ ಮಾನ್ಯವೆಂದು ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 111.

ಸಂ. 614

ತುರುಮಂದಿ ಬಸವೇಶ್ವರ ದೇವಸ್ಥಾನದ ಉತ್ತರ ದಿಕ್ಕಿನ ಬಾಗಿಲಿನ ಎಡಭಾಗದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ಹೊಯ್ಸಳ, [ವೀರ] ......

ಶಕ .... ದುಂದುಭಿ, ಮಾರ್ಗಶಿರ ಬ. ಸೂರ್ಯಗ್ರಹಣ (14ನೆಯ ಶತಮಾನ)

ಕನ್ನಡ

ತಂಬ ಹಾಳಾಗಿದೆ. ವಿವರಗಳು ಸ್ಪಷ್ಟವಾಗಿಲ್ಲ.

ಆರಿಇಎ, 1980-81, ಸಂ. ಬಿ 130.

ಮುದಟನೂರು

ಸಂ. 615

ಸುಂದರಮ್ಮನ ಮನೆಯ ಎದುರಿಗೆ ನಿಲ್ಲಿಸಿದ ಕಲ್ಲಿನ ಮೇಲೆ

--

ನಂದನ, ವೈಶಾಖ ಶು. 1 (16ನೆಯ ಶತಮಾನ)

ಕನ್ನಡ

ತ್ರುಟಿತವಾಗಿದೆ ಮತ್ತು ಹಾಳಾಗಿದೆ. ಬಾಗೆಲ ವೆಂಗಳಪ್ಪನಾಯಕನು ಮುದುವೆತ್ತೊರದ ನಾಕಲಕ್ಷ್ಮಯನಿಗೆ ಸೇರಿದ 12 ಕುಳವ ತೋಟವನ್ನು ನಾಗಯನಿಗೆ ದಾನ ನೀಡಿದ್ದನ್ನು ದಾಖಲಿಸುತ್ತದೆ. ಮುಂದಿನ ವಿವರಗಳು ಹಾಳಾಗಿವೆ.

ಆರಿಇಎ, 1980-81, ಸಂ. ಬಿ 129.

ಮುದೆನೂರು

ಸಂ. 616

ಚೌಡಮ್ಮನ ಗುಡಿಯ ಪಕ್ಕದಲ್ಲಿ ಹೂತಿರುವ ಕಲ್ಲಿನ ಮೇಲೆ

--

ಶಾರ್ವರಿ, ಆ[ಷಾಢ] ಶು. 1 (16ನೆಯ ಶತಮಾನ)

ಕನ್ನಡ

ಬಹಳ ಹಾಳಾಗಿದೆ. ಒಂದು ದಾನವನ್ನು ದಾಖಲಿಸುವಂತೆ ತೋರುತ್ತದೆ.

ಆರಿಇಎ, 1978-79, ಸಂ. ಬಿ 112.

ಸಂ. 617

ಶಿವಪ್ಪನ ಮನೆಯ ಹತ್ತಿರ ದಾರಿಯ ಪಕ್ಕದಲ್ಲಿ ನಿಲ್ಲಿಸಿದ ವೀರಗಲ್ಲಿನ ಮೇಲೆ

--

16ನೆಯ ಶತಮಾನ

ಕನ್ನಡ

ಸ್ಥಳೀಯ ಕದನದ ಬಗ್ಗೆ ತಿಳಿಸುತ್ತದೆ. ವಿವರ ಸ್ಪಷ್ಟವಾಗಿಲ್ಲ.

ಆರಿಇಎ, 1978-79, ಸಂ ಬಿ 113.

ಸಂ. 618

ನಾಯಕರ ಕನಕಪ್ಪನ ಗದ್ದೆಯ ಹತ್ತಿರ ಬೆಳ್ಳಿಗುಂಡು ಎಂದು ಕರೆಯುವ ಗುಂಡಿನ ಮೇಲೆ

--

--

ಕನ್ನಡ, ನಾಗರಿ

ಇದು ಹಿರಯಹಾಳು ಎಂಬ ಉಪನಾಮವುಳ್ಳ ಲಕ್ಷ್ಮೀಪುರ ಅಗ್ರಹಾರದ ದಕ್ಷಿಣದ ಗಡಿಯನ್ನು ಗುರುತಿಸುತ್ತದೆ ಎಂದು ಹೇಳುವ ವಾಮನ ಕಲ್ಲು.

ಆ್ಯರಿಇಎ, 1978-79, ಸಂ. ಬಿ 114.

ನಾಡಂಗ

ಸಂ. 619

ಕಟ್ಟೆ ಅಯ್ಯನವರ ಮನೆಯ ಹತ್ತಿರ ನಿಲ್ಲಿಸಿದ ಕಲ್ಲಿನ ಮೇಲೆ

--

16ನೆಯ ಶತಮಾನ

ಕನ್ನಡ

ತುಂಬ ಹಾಳಾಗಿದೆ. ಕೆಲವು ಒಪ್ಪಂದಗಳ ಬಗ್ಗೆ ಮಾಹಿತಿಗಳಿವೆ (ವಿವರಗಳು ಹಾಳಾಗಿವೆ).

ಆ್ಯರಿಇಎ, 1977-78, ಸಂ. ಬಿ 106.

ನಾಗಲಾಪುರ

ಸಂ. 620

ಶ್ರೀ ಶಂಕರಾಚಾರ್ಯರ ಮನೆಯ ಒಳಗೆ ಗೋಡೆಯಲ್ಲಿ ಕಟ್ಟಿದ ಕಲ್ಲಿನ ಮೇಲೆ

ವಿಜಯನಗರ, ಸದಾಶಿವ

ಶಕ 147[5], ಪಿಂಗಳ, ಭಾದ್ರಪದ ಶು. 12 = ಕ್ರಿ.ಶ. 1557, ಸೆಪ್ಟೆಂಬರ್ 5 (ಶಕ 1479)

ತೆಲುಗು ಮತ್ತು ಕನ್ನಡ, ಕನ್ನಡ

ಬಹಳ ಹಾಳಾಗಿದ್ದು, ಅಪೂರ್ಣವಾಗಿದೆ. ಮಹಾಮಂಡಲೇಶ... ಶ್ರೀ ರಂಗರಾಜಯದೇವ-ಮಹಾರಾಜ ಮತ್ತು ನಾಗಲಾಪುರಗಳನ್ನು ಉಲ್ಲೇಖಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 107.

ಸಂ. 621

ನಂದೀಶ್ವರ ದೇವಸ್ಥಾನದ ಮುಂದೆ ಇರುವ ಕಲ್ಲಿನ ಮೇಲೆ

--

16-17ನೆಯ ಶತಮಾನ

ಕನ್ನಡ

ಹಾಳಾಗಿದೆ. ಶರಣಗವುಡನ ಮಗ ನಾಗಯನಿಗೆ ಗವುಂಡಿಕೆ ಮತ್ತು ಭೂಮಿ ಕೊಟ್ಟದ್ದನ್ನು ದಾಖಲಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 108.

ನಂದಿಪುರ

(ನಾಗಲಾಪುರದ ಹತ್ತಿರ ಪಾಳುಬಿದ್ದ ಗ್ರಾಮ)

ಸಂ. 622

ನಂದಿ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

--

ಶಕ 1385, ಸ್ವಭಾನು, ಭಾದ್ರಪದ ಬ. 5, ರವಿವಾರ = ಕ್ರಿ.ಶ. 1463, ಸೆಪ್ಟೆಂಬರ್ 4, ವಾರದ ದಿನ ಶನಿವಾರವಿತ್ತು

ಕನ್ನಡ

ಹಾಳಾಗಿದೆ. ಕಾಚಪನಾಯಕನು ತನ್ನ ತಾಯಿ ಮಾಚಳಿಗೆ ಪುಣ್ಯವಾಗಲೆಂದು ವಿಜಯನಗರದ ವಿಠಯದೇವರಿಗೆ ನಂದಿಯಪುರ ಗ್ರಾಮವನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 109.

ನಿಟ್ಟೂರು

ಸಂ. 623

ಚಿಕ್ಕುದ್ದಪ್ಪ (ಸುಕ್ರದಪ್ಪ) ಗುಡ್ಡದ ಹತ್ತಿರ ಎರಡು ಗುಂಡುಗಳ ಮೇಲೆ

ಮೌರ್ಯ, ಅಶೋಕ

ಕ್ರಿ.ಪೂ. 3ನೆಯ ಶತಮಾನ

ಪ್ರಾಕೃತ, ಬ್ರಾಹ್ಮಿ

ಇದು ಎರಡು ಬಂಡೆಗಳ ಮೇಲೆ ಕೆತ್ತಿರುವ ಚಿಕ್ಕ ರಾಜಾಜ್ಞೆ ಶಾಸನವಾಗಿದ್ದು ಎರ್ರಗುಡಿಯ ಶಾಸನವನ್ನು ಬಹಳವಾಗಿ ಹೋಲುತ್ತದೆ. ಶಾಸನವು ದೇವಾ[ನಂ]ಪಿಯೊ ಹೆ[ವಂ] ಆಹ ಎಂಬ ವಿವರಣೆಯೊಂದಿಗೆ ಪ್ರಾರಂಭವಾಗುತ್ತದೆ. ಆತನು (ಅರಸನು) ಬುದ್ಧನ

ಅನುಯಾಯಿಯಾಗಿ ಎರಡೂವರೆ ವರ್ಷಗಳಿಗಿಂತ ಹೆಚ್ಚಾಗಿತ್ತೆಂದು ತಿಳಿಸುತ್ತದೆ. ಜಂಬುದ್ವೀಪದಲ್ಲಿ ಹಿಂದೆ ದೇವರೊಂದಿಗೆ ಬೆರೆಯದ ಜನರು ಆಗ ಬೆರೆಯುತ್ತಿದ್ದರು. ಅದು ಧರ್ಮದ ಕಾರಣದಿಂದಾದ ಆತನ ಶ್ರಮದ ಫಲ. ಅದು ಕೇವಲ ಉನ್ನತ ವ್ಯಕ್ತಿಯು ಪಡೆಯುವಂತಹದು ಮಾತ್ರವಲ್ಲ. ಧರ್ಮದ ಬಗ್ಗೆ ಉತ್ಸಾಹವುಳ್ಳ ಸಣ್ಣ ವ್ಯಕ್ತಿಯೂ ಸಹ ಸ್ವರ್ಗವನ್ನು ಪಡೆಯಬಹುದು. ಉನ್ನತ ಮತ್ತು ಸಣ್ಣ ವ್ಯಕ್ತಿಗಳೆಲ್ಲರೂ ಧರ್ಮದ ಆಚರಣೆ ಮತ್ತು ಪ್ರಚಾರದಲ್ಲಿ ಉತ್ಸಾಹಿಗಳಾಗಿರಬೇಕು, ಇದನ್ನು ಗಡಿಯ ಆಚೆ ಇರುವ ಜನರೂ ತಿಳಿದು, ಅನಂತ ಕಾಲದವರೆಗೆ ಆಚರಣೆಯಲ್ಲಿರುವಂತೆ ನೋಡಿಕೊಳ್ಳಬೇಕೆಂದು ಆತನು ಘೋಷಿಸಿದನು. ಅರಸನು ರಜ್ಜುಕ ಎಂದು ಕರೆಯಲಾಗುವ ಅಧಿಕಾರಿಯು ದೇಶದ ಜನರಿಗೆ ಮತ್ತು ರಾಷ್ಟ್ರಿಕರೆಂಬ ಅಧಿಕಾರಿಗಳಿಗೆ ಕೆಳಗಿನ ಶಬ್ದಗಳಲ್ಲಿ ಆದೇಶ ನೀಡುವರೆಂದು ಆದೇಶವಿತ್ತನು: ತಾಯಿ, ತಂದೆ ಮತ್ತು ಹಿರಿಯರಿಗೆ ವಿಧೇಯರಾಗಿರಬೇಕು. ಪ್ರಾಣಿಗಳಿಗೆ ಕರುಣೆ ತೋರಿಸಬೇಕು. ಈ ಗುಣಧರ್ಮಗಳನ್ನು ಪ್ರಚಾರಮಾಡಬೇಕು. ಮೊದಲನೆಯ ಗುಂಡಿನ ಕೊನೆಯಲ್ಲಿ ಮತ್ತು ಎರಡನೆಯ ಗುಂಡಿನ ಪ್ರಾರಂಭದಲ್ಲಿ ರಾಜಾ ಅಶೋಕ ಎಂದು ಉಲ್ಲೇಖಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 110; ಎಇ, XXXIX, ಪು. 111-116; ಕಭಾ, 10-1, ಪು. 139-143.

ಸಂ. 624

ನದಿಯಲ್ಲಿ ಒಂದು ಗುಂಡಿನ ಮೇಲೆ

--

15ನೆಯ ಶತಮಾನ

ಕನ್ನಡ

ನಿಟೂರ ಹೊಲವೆಂದು ತಿಳಿಸುತ್ತದೆ.

ಅಪ್ರಕಟಿತ.

ರಾರಾವಿ

ಸಂ. 625

ರಾಮಲಿಂಗೇಶ್ವರ ದೇವಸ್ಥಾನದಲ್ಲಿರುವ ನಾಗ ವಿಗ್ರಹದ ಹಿಂಭಾಗದಲ್ಲಿ

ಕಲ್ಯಾಣ ಚಾಲುಕ್ಯ, (ವಿಕ್ರಮಾದಿತ್ಯ VI)

ಚಾಲುಕ್ಯ ವಿಕ್ರಮ ವರ್ಷ 44, ಪ್ಲವ, ಪುಷ್ಯ, ಉತ್ತರಾಯಣ-ಸಂಕ್ರಮಣ = ಕ್ರಿ.ಶ. 1121

ಕನ್ನಡ

ಕಂಪಿಲೆ ರಾಜಧಾನಿಯವರಾದ ತಿಪ್ಪಿ-ಸೆಟ್ಟಿ, ಮಾರಿ-ಸೆಟ್ಟಿ ಮತ್ತು ಸೋವಿ-ಸೆಟ್ಟಿ ಸಹೋದರರು ಹರಿಯಳಕ್ಕೆ ಹೋಗುವ ದಾರಿಯಲ್ಲಿ ಮೂಲಸ್ಥಾನದೇವ ಮತ್ತು ಕರ್ಮ್ಮಟೇಶ್ವರ ದೇವಸ್ಥಾನ, ಒಂದು ಸಭಾಮಂಟಪ ಮತ್ತು ಒಂದು ಕೆರೆ ಕಟ್ಟಿಸಿದ್ದನ್ನು ಮತ್ತು ಅವುಗಳ ನಿರ್ವಹಣೆಗೆ ಭೂಮಿ, ಮನೆ ಮುಂತಾದವುಗಳ ದಾನ ನೀಡಿದ್ದನ್ನು ತಿಳಿಸುತ್ತದೆ. ರಾಜಕುಮಾರ ತೈಲಪದೇವನ ಸರ್ವ್ವ-ನಮಸ್ಯದಗ್ರಹಾರವಾದ ರಾರಾವಿಯಲ್ಲಿ ಈ ದಾನ ನೀಡಲಾಯಿತು.

ಆ್ಯರಿಇಎ, 1977-78, ಸಂ. ಬಿ 111.

ಸಂ. 626

ಕುಲ್ಕರ್ಣಿಯವರ ಹೊಲದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

--

ಚಾಲುಕ್ಯ ವಿಕ್ರಮ ವರ್ಷ 44, ಪ್ಲವ, ಪುಷ್ಯ, ಉತ್ತರಾಯಣ ಸಂಕ್ರಮಣ = ಕ್ರಿ.ಶ. 1121 (14-15ನೆಯ ಶತಮಾನದ ಲಿಪಿಯಲ್ಲಿ)

ಕನ್ನಡ

ಈ ಹೊಲವು ಹಗರನಿಗೆ ಚಂಬೆಯನಿಗೆ ಸೇರಿದ್ದೆಂದು ತಿಳಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 112.

ಸಂ. 627

ರಾಮಲಿಂಗೇಶ್ವರ ದೇವಸ್ಥಾನದ ಗೋಡೆಯಲ್ಲಿ ಕಟ್ಟಿದ ಕಲ್ಲಿನ ಮೇಲೆ

--

ಶಕ 1655, ಪ್ರಮಾದೀಚ, ಆಶ್ವಯುಜ ಶು. 10 = ಕ್ರಿ.ಶ. 1733 ಅಕ್ಟೋಬರ್ 7

ಕನ್ನಡ

ಸಿರುಗುಪ್ಪೆ-ಸೀಮೆಯ ರಾರಾವಿ, ಬೊಗ್ಗೂರು ಮತ್ತು ಶಾಲಿಗನೂರುಗಳ ಗೌಡನಾದ ಹಿರೆ-ನಾಗಣಗೌಡನ ಮೊಮ್ಮಗ ಹಿರೆ-ಕನಕಪ್ಪನ ಮಗ ಗೌಡಪ್ಪನು ತನ್ನ ಪೂರ್ವಿಕರಿಗೆ ಮತ್ತು ವಂಶದ ಜನರಿಗೆ ಪುಣ್ಯವಾಗಲೆಂದು ರಾಮೇಶ್ವರ ದೇವಸ್ಥಾನ ಕಟ್ಟಿಸಿದ್ದನ್ನು ತಿಳಿಸುತ್ತದೆ. ಅಲ್ಲದೆ ದೇವಸ್ಥಾನದ ಕಟ್ಟಡ ಕಟ್ಟುವುದು ಮೇಲೆ ತಿಳಿಸಿದ ದಿನದಂದು ಪ್ರಾರಂಭವಾಗಿ ರಾಕ್ಷಸ ಸಂವತ್ಸರ, ಕಾರ್ತಿಕ ಶು. 12 (ಕ್ರಿ.ಶ. 1735, ಅಕ್ಟೋಬರ್ 17) ರಂದು ಮುಗಿಯಿತು ಮತ್ತು ಅದೇ ಗೌಡಪ್ಪನು ಗೌರೇಶ್ವರ ಮತ್ತು ವಾಹಾದಿ ಬಸವೇಶ್ವರ ದೇವಸ್ಥಾನಗಳನ್ನು ಅದೇ ಗ್ರಾಮದಲ್ಲಿ ಕಟ್ಟಿಸಿದನೆಂದು ತಿಳಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 113.

ಸಂ. 628

ಬಾವಿಯ ಗೋಡೆಯಲ್ಲಿ

ಮೈಸೂರು ಒಡೆಯರು (?) [ಖಾಸ-ಚಾಮರಾಜ] ಒಡೆಯಾರ್ (?)

ಹಿಜರೀ 1185 (ಹಿಂದು ಮುಂದಾಗಿ ಬರೆದಿದೆ) ಷವ್ವಾಲ್ 22 = ಕ್ರಿ.ಶ. 1772, ಜನವರಿ 28

ಆರೇಬಿಕ್ ಮತ್ತು ಪರ್ಶಿಯನ್, ನಸ್ಕ್

ಮೂಲ ಪಾಠ ಮತ್ತು ಬರವಣಿಗೆ ತಪ್ಪಾಗಿದೆ. ಒಡಿಯರ್ ಸಾಹಿಬ್ (?)ನ ಅಧಿಕಾರಿ (ಗುಮಾಸ್ತ)ಗಳಾದ ಮುರ್ತಡಾ ಖಾನ್ ಮತ್ತು ಮೀರಾನ್ ಸಾಹಿಬ್‌ರು ಒಂದು ಮೆಟ್ಟಲು-ಬಾವಿ ಕಟ್ಟಿಸಿದ್ದನ್ನು ದಾಖಲಿಸುವಂತೆ ತೋರುತ್ತದೆ.

ಆ್ಯರಿಇಎ, 1977-78, ಸಂ. ಡಿ 87.

ರಾವಿಹಾಳು

ಸಂ. 629

ಆಂಜನೇಯ ದೇವಸ್ಥಾನದ ಮುಂದೆ ಅಶ್ವತ್ಥ ಕಟ್ಟೆಯಲ್ಲಿ ಕಟ್ಟಿದ ಕಲ್ಲಿನ ಮೇಲೆ

ವಿಜಯನಗರ, ಸದಾಶಿವದೇವ

ಶಕ 1476 (ಪ್ರಚಲಿತ), ಪ್ರಮಾದೀಚ, ಫಾಲ್ಗುಣ ಬ. 1, ರವಿವಾರ = ಕ್ರಿ.ಶ. 1554, ಫೆಬ್ರವರಿ 23

ಕನ್ನಡ

ಶ್ರೀರಂಗರಾಜನ ಮಗ ಅರಸನ ಸಾಮಂತ ಮಹಾಮಂಡಲೇಶ್ವರ ರಾಮರಾಜಯ್ಯನ ಆಜ್ಞೆಯ ಮೇರೆಗೆ ತಿಮ್ಮರಾಜಯ್ಯನು ಅರಸನಿಗೆ ಪುಣ್ಯವಾಗಲೆಂದು ಮಕರ-ಸಂಕ್ರಾಂತಿಯಂದು ತಳವಾರಿಕೆ ಮುಂತಾದವುಗಳ ಮೇಲಿನ ಆದಾಯವನ್ನು ರಾವಿಯಹಾಳಿನ ಅಶೇಷವಿದ್ವನ್ಮಹಾಜನರಿಗೆ ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 115.

ಸಂ. 630

ಬಸವೇಶ್ವರ ದೇವಸ್ಥಾನದ ಪಕ್ಕದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

--

.... ದುಂದುಭಿ, ಭಾ[ದ್ರ]ಪದ ಬ. 10

ಕನ್ನಡ

ರಾವಿಯಪಾಳಿನ ಮಹಾಜನರು, ಗೌಡರು, ಸೇನಬೋವಗಳು ಮತ್ತು ಪ್ರಜೆಗಳು ಸಂಬಗಲ ವೀರಯ್ಯನಿಗೆ ಕಾಣಾಚಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 116.

ಸಾಲಿಗನೂರು

ಸಂ. 631

ಹಳೆಯ ಗ್ರಾಮದಲ್ಲಿ ಆಂಜನೇಯ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ, ಶ್ರೀರಂಗದೇವ

ಶಕ 1496 (1497ರ ಬದಲಾಗಿ), ಯುವ, ಮಾರ್ಗಶಿರ ಶು. 10, ರವಿವಾರ = ಕ್ರಿ.ಶ. 1575, ನವಂಬರ್ 13

ಕನ್ನಡ

ಭಾಗಶಃ ಹಾಳಾಗಿದೆ ಮತ್ತು ಸವೆದಿದೆ. ಭೂಮಿ (ಸೀಮೆಗಳನ್ನು ತಿಳಿಸಲಾಗಿದೆ) ದಾನ ನೀಡಿದ್ದನ್ನು ದಾಖಲಿಸುವಂತೆ ತೋರುತ್ತದೆ.

ಆ್ಯರಿಇಎ, 1978-79, ಸಂ. ಬಿ 117.

ಸಲ್ಲಕೂಡ್ಲೂರು

ಸಂ. 632

ಗುಂಜಹಳ್ಳಿ ವೀರಣ-ಗೌಡ ಮತ್ತು ಗೋನಾಕ-ವೀರಭದ್ರಪ್ಪನವರ ಹೊಲಗಳ ಮಧ್ಯ ಬದ್ದಿರುವ ಕಲ್ಲಿನ ಮೇಲೆ

--

ಇತ್ತೀಚಿನ ಅಕ್ಷರಗಳಲ್ಲಿ

ಕನ್ನಡ

ಅಂಕುಶರಾಯಪಾಡಿಯ ಪಾತ್ರದ-ಬೊಮ್ಮಯಿ ದೇಶಾಯಿಯು ತಳಾರ ನಾಗಣ ಮತ್ತು ಪೋತಯನಿಗೆ ಕೂಡಲೂರಿನಲ್ಲಿ ಮೂರು ಚವರ ಭೂಮಿಯನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 118.

ಸಂ. 633

ಕುರುಬರ ಗಂಗಪ್ಪನ ಹೊಲದಲ್ಲಿ ಬದ್ದಿರುವ ಕಲ್ಲಿನ ಮೇಲೆ

--

ಇತ್ತೀಚಿನ ಅಕ್ಷರಗಳಲ್ಲಿ

ಕನ್ನಡ

ಶಾಸನ ಸಂ. 632ರ ಇನ್ನೊಂದು ಪ್ರತಿ.

ಆ್ಯರಿಇಎ, 1978-79, ಸಂ. ಬಿ 119.

ಸಿರಿಗೆರೆ

ಸಂ. 634

ಸಾಲೆ ನಾಗಪ್ಪನ ಹೊಲದಲ್ಲಿಯ ಗುಂಡಿನ ಮೇಲೆ

ವಿಜಯನಗರ, ಅಚ್ಯುತ ಮಹಾರಾಯ

ಶಕ 1[45]9, ಹೇಮಳಂಬಿ, ಜ್ಯೇಷ್ಠ ಬ. 5 = ಕ್ರಿ.ಶ. 1537, ಮೇ 29, ಮಂಗಳವಾರ

ಸಂಸ್ಕೃತ, ಕನ್ನಡ

ಹಾಳಾಗಿದೆ. ಹಾಂಡ ಹನುಮಿನಾಯ[ಕ], ಕೋಠಿ-ಲಿಂಗಣನಾಯಕ ಮುಂತಾದ ಹೆಸರುಗಳನ್ನು ಉಲ್ಲೇಖಿಸುತ್ತದೆ ಮತ್ತು ದೇವರಿಗೆ (ಹೆಸರು ಹಾಳಾಗಿದೆ) ಮಾನ್ಯ ಭೂಮಿ ದಾನ ನೀಡಿದ್ದನ್ನು ದಾಖಲಿಸುವಂತೆ ತೋರುತ್ತದೆ.

ಆ್ಯರಿಇಎ, 1984-85, ಸಂ. ಬಿ 38; 1985-86, ಸಂ. ಬಿ 64.

ಸಂ. 635

ನೂರ್-ಶೀಮ್ಸ್‌ನ ಅಂಗಡಿಯ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

ವಿಜಯನಗರ (?), --

ಶಕ 15[78], ಹೇಮಳಂಬಿ, ಆ[ಶ್ವಯು]ಜ, ಬ. 10 = ಕ್ರಿ.ಶ. 1657, ಅಕ್ಟೋಬರ್ 22 (ಶಕ 1579)

ಕನ್ನಡ

ತುಂಬ ಹಾಳಾಗಿದೆ ಮತ್ತು ಸವೆದಿದೆ. ವಿಷಯ ಸ್ಪಷ್ಟವಾಗಿಲ್ಲ.

ಆ್ಯರಿಇಎ, 1977-78, ಸಂ. ಬಿ 114.

ಸಂ. 636

ದೇವರ ಬಾವಿಯ ಹತ್ತಿರ ಬಿದ್ದಿರುವ ಕಲ್ಲಿನ ಮೇಲೆ

--

ಶಕ 1627, ಪಾರ್ಥಿವ, ಶ್ರಾವಣ ಶು. 5 = ಕ್ರಿ.ಶ. 1705, ಜುಲೈ 15

ಕನ್ನಡ

ಸಿರಿಗೆರೆಯ ತಿಪಣ್ಣಗೌಡನ ಮಗ ಸಖ[ರೆ]ಪಗೌಡನು ನಾಗನಾಥೇಶ್ವರ ಮತ್ತು ಬಸವೇಶ್ವರ ದೇವಸ್ಥಾನಗಳ ಉಪಯೋಗಕ್ಕಾಗಿ ಮತ್ತು ಜನರಿಗಾಗಿ ಬಾವಿ ಕಟ್ಟಿಸಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 115.

ಸಿರುಗುಪ್ಪ

ಸಂ. 637

ಶಂಭುಲಿಂಗ ದೇವಸ್ಥಾನದ ಆವರಣದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

ಚಾಲುಕ್ಯ ವಿಕ್ರಮ ವರ್ಷ 16, ಪ್ರಜಾಪತಿ, ಕಾರ್ತಿಕ, ಅಮವಾಸ್ಯೆ, ಆದಿವಾರ = ಕ್ರಿ.ಶ. 1091

ಕನ್ನಡ

ಬಲ್ಲಕುಂದೆ-300 ರ ಉಪ-ವಿಭಾಗವಾದ ತೆಕ್ಕೆಕಲ್ಲು-12ರೊಳಗಿನ ಸಿರುಗುಪ್ಪೆ, ಕೊಳನೂರು ಮತ್ತು ಇನ್ನೊಂದು ಗ್ರಾಮಗಳನ್ನಾಳುತ್ತಿದ್ದ ರಾಣಿ ಪಿರಿಯ-ಕೇತಲದೇವಿಯು ಸಿರುಗುಪ್ಪೆಯ ಸ್ವಯಂಭು ಕೇತಲೇಶ್ವರದೇವರ ಪೂಜೆ ಮತ್ತು ದೇವಸ್ಥಾನದ ಸೇವಕರ ನಿರ್ವಹಣೆಗೆ ಸಿರುಗುಪ್ಪೆ, ಸಿರಿಯೂರು ಮತ್ತು ಕೊಳನೂರು ಗ್ರಾಮಗಳಲ್ಲಿ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಭೋಗಾವತಿ ಪುರವರೇಶ್ವರ ಸಿಂದ ವಂಶದ ಮಹಾಸಾಮಂತ ಮನ್ನೆಯ ಚೋಕರಸನು ಬ್ರಾಹ್ಮಣರ ಭೋಜನಕ್ಕೆ ವ್ಯವಸ್ಥೆ ಮಾಡಿದ್ದನ್ನು ಸಹ ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 672; ಸೌಇಇ, IX i, ಸಂ. 159.

ಸಂ. 638

ಅದೇ ದೇವಸ್ಥಾನದ ಆವರಣದಲ್ಲಿ ನಿಲ್ಲಿಸಿದ ಇನ್ನೊಂದು ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ತ್ರಿಭುವನಮಲ್ಲದೇವ

ಚಾಲುಕ್ಯ-ವಿಕ್ರಮ ವರ್ಷ 27, ಚಿತ್ರಭಾನು, ಪುಷ್ಯ ಶು. 6, ಬುಧವಾರ (ಉತ್ತರಾ)ಯಣ-ಸಂಕ್ರಾಂತಿ = ಕ್ರಿ.ಶ. 1102, ಡಿಸೆಂಬರ್ 17, ಬುಧವಾರ

ಕನ್ನಡ

ಹಾಳಾಗಿದೆ. ಅರಸನ ಸಾಮಂತ ತ್ರಿಭುವನಮಲ್ಲ-ಪಾಂಡ್ಯರಸನು ನೊಳಂಬವಾಡಿ-32000 ವನ್ನಾಳುತ್ತಿದ್ದನೆಂದು ತಿಳಿಸುತ್ತದೆ. ಚೊಕ್ಕರಾಯ ಬೀವರಸ, ಲೋಕರಸ ಮತ್ತು ಇತರರು ಸ್ವಯಂಭುದೇವರ ಸೇವೆಗೆ ಭೂಮಿ ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 673; ಸೌಇಇ, IX i, ಸಂ. 167.

ಸಂ. 639

ಶಂಭುಲಿಂಗ ದೇವಸ್ಥಾನದ ಹತ್ತಿರ ಬುರುಜಿನ ಗೋಡೆಯಲ್ಲಿರುವ ಕಲ್ಲಿನ ಮೇಲೆ

--

ಶಕ 1549, ಪ್ರಭವ, ಜ್ಯೇಷ್ಠ ಬ. 30, ರವಿವಾರ = ಕ್ರಿ.ಶ. 1627, ಜೂನ್ 3

ಕನ್ನಡ

ದಲ್‌ಪತ್‌ರಾವ್‌ನು ಠಾನಾದಾರ್‌ನಾಗಿದ್ದಾಗ ಮಲಿಕರೈಹಾನನ ಮಗ ಆದೋನಿ ಕೋಟೆಯ ಮತ್ತು ರಾಯಚೂರ ಜಿಲ್ಲೆಯ (ಮುಆಮಲತ್) ಮತ್ತು ಮುಹಮ್ಮದ್‌ನೂರ ಪಟ್ಟಣದ ಸರ್‌ಹವಾಲ್ದಾರ ಮತ್ತು ಸಿರುಗುಪ್ಪದ ಮೊಖಾಸಾನಾದ ಮಲಿಕ್ ಅಬ್ದುಲ್-ಮುಹಮ್ಮದ್‌ನ ಆಡಳಿತದಲ್ಲಿ ನದಿಯ ಮಧ್ಯದಲ್ಲಿ ಬುರುಜನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ.

ಆ್ಯರಿಸೌಇಎ, 1922-23, ಸಂ. 1922 ರ 674; ಆರಿಇಎ, 1971-72, ಸಂ. ಡಿ 131; ಎಇಅಪಸ, 1953 ಮತ್ತು 1954, ಪು. 43.

ಸಂ. 640

ಅದೇ ಕಲ್ಲಿನ ಮೇಲೆ

--

ಸುಹೂರ್‌ಸನ್ 1028 = ಕ್ರಿ.ಶ. 1627

ಪರ್ಶಿಯನ್, ನಸ್ಕ್

ಸರಗೊಪದಲ್ಲಿ ನದಿಯ ಮಧ್ಯದಲ್ಲಿ ಬುರುಜು ಕಟ್ಟಿಸಿದ್ದನ್ನು ತಿಳಿಸುತ್ತದೆ. ಮಲಿಕ್ ರೈಹನನ ಮಗ ಆದೋನಿ ಕೋಟೆ, ರಾಯಚೂರು ಜಿಲ್ಲೆ ಮತ್ತು ಮುಹಮ್ಮದ್‌ನೂರ್ ಪಟ್ಟಣದ ಸರ್‌ಹವಾಲ್ದಾರ ಮಲಿಕ್ ಅಬ್ದುಲ್ ಮುಹಮ್ಮದ್‌ನ ಉಲ್ಲೇಖವಿದೆ.

ಆ್ಯರಿಸೌಇಎ, 1922-23, ಸಂ. 1922 ರ 675; ಎಇಅಪಸ, 1953 ಮತ್ತು 1954, ಪು. 42.

ಸಂ. 641

ಅದೇ ಕಲ್ಲಿನ ಮೇಲೆ

--

ಸುಹೂರ್‌ಸನ್ 1028 = ಕ್ರಿ.ಶ. 1627

ಮರಾಠಿ, ನಾಗರಿ

ಸಾರಾಂಶವು ಶಾಸನ ಸಂ. 639 ರಲ್ಲಿದ್ದಂತೆ ಇದೆ.

ಆರಿಸೌಇಎ, 1922-23, ಸಂ. 1922 ರ 676; ಎಇಅಪಸ, 1953 ಮತ್ತು 1954, ಪು. 42.

ಸಂ. 642

ಲಾಡ್ ಖಾನನ ಮಸೀದಿಯ ಆವರಣದಲ್ಲಿಯ ಬಿಡಿ ಕಲ್ಲಿನ ಮೇಲೆ

--

ಹಿಜರೀ 1085 = ಕ್ರಿ.ಶ. 1674-75

ಪರ್ಶಿಯನ್ ಪದ್ಯ, ನಸ್ಕ್

ಮಸುದ್‌ಖಾನನ ಸದ್ಗುಣ ಮತ್ತು ಸಾಹಸಗಳ ಹೊಗಳಿಕೆ ಇದೆ ಮತ್ತು ಆತನು ಅದೊನಿಯಲ್ಲಿ ಬಲವಾದ ಬಾಗಿಲು ಕಟ್ಟಿಸಿದ ನಂತರ ಆತುರದಲ್ಲಿ ಸಿರುಗುಪ್ಪದಲ್ಲಿ ಈ ಬಾಗಿಲನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ಆ್ಯರಿಇಎ, 1923-24, ಸಂ. 1923 ರ 435; 1978-79, ಸಂ. ಸಿ 63; ಎಇಮೊ, 1921-22, ಪು. 10-11, ಚಿತ್ರ XV.

ಸಂ. 643

ತುಂಗಭದ್ರ ನದಿಯ ದಂಡೆಯ ಹತ್ತಿರವಿರುವ ಆಂಜನೇಯ ದೇವಸ್ಥಾನದ ಮುಂದೆಇರುವ ಕಲ್ಲಿನ ಮೇಲೆ

--

ಶಕ 1571, ವಿರೋಧಿ, ಮಾರ್ಗಶಿರ ಬ. 7, ರವಿವಾರ, ಷೂಹೂರ್‌ಸನ ಖಮಸ್ಸೈನು, ಅಲಫು ಚಂದ 21 = ಕ್ರಿ.ಶ. 1649, ಡಿಸೆಂಬರ್ 16

ಅರೇಬಿಕ್, ಮರಾಠಿ; ನಾಗರಿ, ಕನ್ನಡ

ಸಿರುಗುಪ್ಪದ ಮೊಖಸಾಇ ಮಲಿಕ್ ಅಬ್ದುಲ್-ವಹ್ಹಾಬ್ ಸಾಹಿಬ್‌ನ ಆಡಳಿತ (ಕಾರಕಿರ್ದ) ಕಾಲದಲ್ಲಿ ರುದ್ರೊ-ಲಿಂಗೋಜಿಯು ಮಜಕೂರು ನದಿಯ ದಂಡೆಗೆ ಹೋಗುವ ಬಾಗಿಲು ಮತ್ತು ಸಾಹಿಬ್ ಬುರ್ಜ್‌ಗಳನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 116.

ಸಂ. 644

ಅದೇ ಕಲ್ಲಿನ ಮೇಲೆ

--

(i) ಷೂಹೂರ್ ಸನ್ 1050 (ಶಬ್ದಗಳಲ್ಲಿ) (ಹಿಜರೀ 1059), ಧು'ಲ್‌ಹಿಜ್ಜಾ 21 = ಕ್ರಿ.ಶ. 1649; (ii) ಹಿಜರೀ 1069, ರಬೀ II ಕೊನೆಯ ದಿನ = ಕ್ರಿ.ಶ. 1650, ಏಪ್ರಿಲ್ 21

ಪರ್ಶಿಯನ್, ನಸ್ತಾಲಿಕ್; ಕನ್ನಡ; ಮರಾಠಿ, ನಾಗರಿ ಮೂರು ಭಾಷೆಯಲ್ಲಿದೆ

ಪ್ರಖ್ಯಾತ ಮಲಿಕ್-ವಹ್ಹಾಬ್ ಅದೃಷ್ಟಶಾಲಿ ಪತಾಕೆ ಉಮ್ದ್ ತುಲಯನ್‌ನ ಮೊಖಾಸದೊಳಗಿನ ಸಿರುಗುಪ್ಪ ಕೋಟೆಯ ನಾಮ್‌ಜಾದ್ ರುದ್ರು ಜಿಂಗೋಜಿಯು ನದಿಯ ಪಕ್ಕದಲ್ಲಿ ಬುರುಜನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ನಿರ್ಮಾಣವು ಮೊದಲ ದಿನಾಂಕದಂದು ಪ್ರಾರಂಭವಾಗಿ ಎರಡನೆಯ ದಿನಾಂಕದಂದು ಮುಗಿಯಿತು. ಕನ್ನಡ ಮತ್ತು ಮರಾಠಿ ಭಾಷಾಂತರಕ್ಕೆ ಶಾಸನ ಸಂ. 643ನ್ನು ನೋಡಿ.

ಆ್ಯರಿಇಎ, 1977-78, ಸಂ. ಡಿ 88.

ತೆಕ್ಕಲಕೋಟೆ

ಸಂ. 645

ಬಸವೇಶ್ವರ ದೇವಸ್ಥಾನದಲ್ಲಿ ಇಟ್ಟಿರುವ ಕಲ್ಲಿನ ಮೇಲೆ

[ಕಲಚೂರ್ಯ], ಬಿಜ್ಜಣ

12ನೆಯ ಶತಮಾನ

ಸಂಸ್ಕೃತ, ಕನ್ನಡ

ಅರಸನ ಸಾಮಂತನಾಗಿ ತನ್ನ ರಾಜಧಾನಿ ಕುರುಗೋಡಿನಿಂದ ಬಲ್ಲಕುಂದೆ-ನಾಡನ್ನಾಳುತ್ತಿದ್ದ ಸಿಂದ ವಂಶದ ರಾಚಮಲ್ಲರಸನ ಅಧಿಕಾರಿ ಕೇತಯ-ಸಾಹಣಿಯು ಸಿದ್ಧನಾಥ, ನಾರಸಿಂಹ ಮತ್ತು ವಿನಾಯಕ ದೇವರಿಗೆ ದೇವಸ್ಥಾನಗಳನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ ಮತ್ತು ಉತ್ತರಾಯಣ-ಸಂಕ್ರಮಣದಂದು ದೇವರ ಪೂಜೆ ಮತ್ತು ನೈವೇದ್ಯಗಳಿಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1985-86, ಸಂ. ಬಿ 65.

ಸಂ. 646

ಭೀಮಯ್ಯನ ಹೊಲದಲ್ಲಿಯ ಗುಂಡಿನ ಮೇಲೆ

--

ಶಕ 943 (ಪ್ರಚಲಿತ), ರೌದ್ರಿ, ಕಾರ್ತ್ತಿಕ ಶು. 1, ಗುರುವಾರ = ಕ್ರಿ.ಶ. 1020, ಅಕ್ಟೋಬರ್ 20

ಕನ್ನಡ

ಮಹಾಸೇನಾಧಿಪತಿ ಬ್ರಹ್ಮಾದಿರಾಜ ಪಾಪೆಕಲ್ಲಿನಲ್ಲಿ ಆಳುತ್ತಿದ್ದುದನ್ನು ಉಲ್ಲೇಖಿಸಿ ಆತನನ್ನು ಮಹಾಪ್ರಚಂಡ-ನಾಯಕ, ಘಟೆಯಂಕಕಾರ ಮುಂತಾದ ಬಿರುದುಗಳಿಂದ ಹೊಗಳಲಾಗಿದೆ. ಪಾಪೆಕಲ್ಲಿನ ಕೃಷಿ ಉತ್ಪನ್ನಗಳ ಮೇಲಿನ ವಾರ್ಷಿಕ ತೆರಿಗೆಗಳ ನಿಯಮಗಳನ್ನು ದಾಖಲಿಸುತ್ತದೆ.

ಆ್ಯರಿಇಎ, 1977-78, ಸಂ. ಬಿ 117; ಎಮ್.ಎಸ್. ನಾಗರಾಜರಾವ್ ಮತ್ತು ಕೆ.ಸಿ. ಮಲ್ಹೋತ್ರ, ದಿ ಸ್ಟೋನ್ ಏಜ್ ಡ್ವೆಲ್ಲರ್ಸ್ ಆಫ್ ತೆಕ್ಕಲಕೋಟ, ಪು. 104-105; ಎನ್.ಎನ್. ಸ್ವಾಮಿ, ''ತೆಕ್ಕಲಕೋಟ ಇನ್‌ಸ್ಕ್ರಿಪ್ಷನ್ ಆಫ್ ಬ್ರಹ್ಮಾದಿರಾಜ, ಶಕ-943'', ಸ್ಟಡೀಸ್ ಇನ್ ಇಂಡಾಲಜಿ, ಪು. 84.

ಸಂ. 647

ವೀರಭದ್ರ ದೇವಸ್ಥಾನದ ಮುಂದೆ ಇಟ್ಟಿರುವ ಕಲ್ಲಿನ ಮೇಲೆ

--

ಶಕ 1681, ಪ್ರಮಾಥಿನ್, ಆಶ್ವಯುಜ ಶು. 1, ಸೂರ್-ಸನ್ 1169 = ಕ್ರಿ.ಶ. 1759, ಸೆಪ್ಟೆಂಬರ್ 22

ಕನ್ನಡ

ಪೇಠೆಸ್ಥಳ, ಪದಸ್ಥಳ, ಮಠಮಹತ್ತು, ಬಸವೌಜ ಮತ್ತು ಹಸೇನುಲ್ಲಖಾನನ ಮಾರ್ಗದ ಉಲ್ಲೇಖವಿದೆ. ದವಸ ಮುಂತಾದವುಗಳ ದಾನವನ್ನು ದಾಖಲಿಸುವಂತೆ ತೋರುತ್ತದೆ.

ಆ್ಯರಿಇಎ, 1977-78, ಸಂ. ಬಿ 118.

ಸಂ. 648

ದಮ್ಮೂರ-ಶಂಕರಪ್ಪನ ಹೊಲದಲ್ಲಿ ಬಿದ್ದಿರುವ ಕಲ್ಲಿನ ಮೇಲೆ

--

16ನೆಯ ಶತಮಾನ

ಕನ್ನಡ

ವೀರಭದ್ರ ದೇವರಿಗೆ ಸೇರಿದ ತೋಟದ ಬಗ್ಗೆ ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. 120.

ಟಿ. ರಾಮಪುರ

ಸಂ. 649

ಈಶ್ವರ ದೇವಸ್ಥಾನದ ಆಗ್ನೇಯ ದಿಕ್ಕಿಗೆ ನಿಲ್ಲಿಸಿದ ಕಲ್ಲಿನ ಮೇಲೆ

ಕಲ್ಯಾಣ ಚಾಲುಕ್ಯ, ಜಯಸಿಂಹ (II)

ಶಕ 944, ದುಂದುಭಿ, ಶ್ರಾವಣ ಶು. 5, ಆದಿವಾರ = ಕ್ರಿ.ಶ. 1022, ಜುಲೈ 6 (ಶುಕ್ರವಾರ)

ಕನ್ನಡ

ತೊಂಡೆಹಾಳಿನ ಕಂಬೆಯನು [ಮ]ಹಾದೇವರನ್ನು ಪ್ರತಿಷ್ಠಾಪಿಸಿದ್ದನ್ನು ಮತ್ತು ಬಾಲಚಂದ್ರಜೀಯನಿಗೆ 6 ಮತ್ತರು ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಆ್ಯರಿಇಎ, 1978-79, ಸಂ. ಬಿ 121.

ಉಡೇಗೊಳ್ಳ

ಸಂ. 650

ಹನುಮಾನ ದೇವಸ್ಥಾನದ ಮುಂದೆ ನಿಲ್ಲಿಸಿದ ಕಲ್ಲಿನ ಮೇಲೆ

--

(ರು)ಧಿರೋದ್ಗಾರಿ, ಶ್ರೀಮುಖ, ಕಾರ್ತಿಕ ಬ. 7

ತೆಲುಗು

ಹಾಳಾಗಿದೆ. ರಾಯದುರ್ಗಂನ ಅಧಿಕಾರಿಗಳಾದ ರಾಮನಾಯಕ ಮತ್ತು ರಾಯದುರ್ಗಂ ತಿಮ್ಮಪ-ನಾಯಕ ಮತ್ತು ಇತರರು ಉಡೇಗೊಳ್ಳಂದ ಸಂಜೀವರಾಯ (ಹನುಮಾನ)ನಿಗೆ ದಾನ ನೀಡಿದ್ದನ್ನು ದಾಖಲಿಸುತ್ತದೆ.

ಆರಿಸೌಇಎ, 1923-24, ಸಂ. 1923 ರ 436.

ಸಂ. 651

ಎರಮಟ್ಟ (ಕೆಂಪು-ಗುಡ್ಡ) ಎಂಬ ಗುಡ್ಡದ ಎರಡು ಗುಂಡುಗಳ ಮೇಲೆ

ಮೌರ್ಯ, ಅಶೋಕ

ಕ್ರಿ.ಪೂ. 3 ನೆಯ ಶತಮಾನ

ಪ್ರಾಕೃತ, ಬ್ರಾಹ್ಮಿ

ನಿಟ್ಟೂರಿನ ಶಾಸನ ಸಂ. 623ರಲ್ಲಿರುವಂತೆ ರಾಜಾಜ್ಞೆ ಇದೆ. ದಿನಾಂಕದವರೆಗಿನ ಭಾಗವನ್ನು ಒಂದು ಗುಂಡಿನ ಮೇಲೆ ಮತ್ತು ಉಳಿದ ಭಾಗವನ್ನು ಇನ್ನೊಂದು ಗುಂಡಿನ ಮೇಲೆ ಕೆತ್ತಲಾಗಿದೆ. ಶಾಸನವು ಅಶೋಕ (ರಾಜ ಅಸೊಕೊ) ದೇವಾನಂಪಿಯ ಎಂಬ ಹೆಸರನ್ನು ತಿಳಿಸುತ್ತದೆ.

ಆರಿಇಎ, 1977-78, ಸಂ. ಬಿ 119; ಎಇ, XXXIX, ಪು. 237-240.

ಸಂ. 652

ಗ್ರಾಮದ ದಕ್ಷಿಣಕ್ಕೆ ಬೆಟ್ಟದ ಮೇಲೆ ಒಂದು ಗುಂಡಿನ ಮೇಲೆ

--

ಇತ್ತೀಚಿನ ಅಕ್ಷರಗಳಲ್ಲಿ (ನವೀನ)

ಕನ್ನಡ

ಇದು ಮ[ಯಿ]ಲಾರನ ಬರಹ ಎಂದು ತಿಳಿಸುತ್ತದೆ.

ಆರಿಇಎ, 1977-78, ಸ.ಂ ಬಿ 120.

ಅನುಬಂಧ

ಕುರುಗೋಡು

ಸಂ. 653

ಸಂಗಮೇಶ್ವರ ದೇವಾಲಯದ ಮಹಾಮಂಟಪದ ಕಂಬದ ಮೇಲೆ

--

13ನೆಯ ಶತಮಾನ

ಕನ್ನಡ

ಸಂಗಮೇಶ್ವರ ದೇವರಿಗೆ ಕೊಟ್ಟ ದಾನಗಳನ್ನು ದಾಖಲಿಸುತ್ತದೆ.

ಪಾಟೀಲ ಚನ್ನಬಸಪ್ಪ ಎಸ್, 1992, ಟೆಂಪಲ್ಸ್ ಆಫ್ ರಾಯಚೂರ್ ಆಂಡ್ ಬಳ್ಳಾರಿ ಡಿಸ್ತ್ರಿಕ್ಟ್ಸ್, ಪು. 159.

ಸಂ. 654

ಊರಿನ ಪಶ್ಚಿಮಕ್ಕೆ ಸುಮಾರು 3 ಕಿ.ಮೀ. ದೂರದಲ್ಲಿರುವ ವಜ್ರದ ಬಸವಣ್ಣನ ದೇವಸ್ಥಾನದ ಹತ್ತಿರದ ಗುಂಡಿನ ಮೇಲೆ

--

15ನೆಯ ಶತಮಾನ

ಕನ್ನಡ

ಜಾತರಸನ ಮಗ ಅನಂತದೇವನ ಮಗಳು ಭಾರತಿಯನ್ನು ಉಲ್ಲೇಖಿಸುತ್ತದೆ.

ಅಪ್ರಕಟಿತ.

ಸಂ. 655

ಅದೇ ಗುಂಡಿನ ಮೇಲೆ

--

15ನೆಯ ಶತಮಾನ

ಕನ್ನಡ

'ವರದಯನು ಬಸವ' ಎಂದು ಬರೆದಿದೆ.

ಅಪ್ರಕಟಿತ.

ಕುರುವತ್ತಿ

ಸಂ. 656

ಈಗ ಫಿಲಡೆಲ್ಫಿಯಾದ ಫೈನ್ ಆರ್ಟ್ಸ್ ಮ್ಯೂಜಿಯಮ್ ನಲ್ಲಿರುವ ಬ್ರಹ್ಮ ವಿಗ್ರಹದ ಪೀಠದ ಮೇಲೆ

--

11ನೆಯ ಶತಮಾನ

ಕನ್ನಡ

ಗುಲುಗೋಜನ ಮಗ ಚಾವುಂಡೋಜನು ಬ್ರಹ್ಮನ ವಿಗ್ರಹವನ್ನು ಕೆತ್ತಿದನೆಂದು ತಿಳಿಸುತ್ತದೆ. ಗುಲುಗೋಜನು ಕುರುವತ್ತಿಯ ತ್ರೈಲೋಕ್ಯಮಲ್ಲೇಶ್ವರ ದೇವಾಲಯದ ಸೂತ್ರಧಾರಿಯಾಗಿದ್ದನೆಂದು ತಿಳಿಸುತ್ತದೆ.

ಜಮ್ಮೆಯು, XXIX-XXX, ಪು. 3-4; ಪಾಟೀಲ ಚನ್ನಬಸಪ್ಪ ಎಸ್, 1992, ಟೆಂಪಲ್ಸ್ ಆಫ್ ರಾಯಚೂರ್ ಆಂಡ್ ಬಳ್ಳಾರಿ ಡಿಸ್ಟ್ರಿಕ್ಟ್ಸ್, ಪು. 59.

ಬಾಗಳಿ

ಸಂ. 657

ಕಲ್ಲೇಶ್ವರ ದೇವಾಲಯದಲ್ಲಿ ಇಟ್ಟಿರುವ ಅನಂತಶಯನ ವಿಗ್ರಹದ ಪೀಠದ ಮೇಲೆ

--

ಶಕ 984, ಶುಭಕೃತ = ಕ್ರಿ.ಶ. 1062

ಕನ್ನಡ

ನಾಗವಮನ ಬಿರುದಗಳನ್ನು (ಚತುರ್ಭಾಷೆ ಬಿರುದ ರೂವಾರಿಗೊಂದಳ ಬಡಿವ ಆದ. ರೂವಾರಿ ಗಂಡ ಗಣಗತ್ತರಿ ಬಿರುದ ಚಿತ್ರಕಲೆ ಸರೋವರದೊಳು ರಾಜಹಂಸ) ತಿಳಿಸುತ್ತದೆ.

ಪಾಟೀಲ ಚನ್ನಬಸಪ್ಪ ಎಸ್, 1992, ಟೆಂಪಲ್ಸ್ ಆಫ್ ರಾಯಚೂರ್ ಆಂಡ್ ಬಳ್ಳಾರಿ ಡಿಸ್ಟ್ರಿಕ್ಟ್ಸ್, ಪು. 59, 65, 119.

ಪದಸೂಚಿ

(ಈ ಪದಸೂಚಿಯಲ್ಲಿ ಕೆಳಗಿನ ಸಂಕೇತಾಕ್ಷರಗಳನ್ನು ಉಪಯೋಗಿಸಲಾಗಿದೆ. *ಅ* = ಅರಸ, ಅರಸಿ; *ಅಧಿ* = ಅಧಿಕಾರಿ, ಅಧಿಕಾರ; *ಆ ವಿ* = ಆಡಳಿತ ವಿಭಾಗ; *ಊ* = ಊರು; *ಕ* = ಕಲಚೂರ್ಯ; *ಕೆ* = ಕೆರೆ; *ಗಂ* = ಗಂಡಸು; *ಚಾ* = ಚಾಲುಕ್ಯ; *ಜೈ* = ಜೈನ; *ತೆ* = ತೆರಿಗೆ; *ದೇ* = ದೇವತೆ; *ದೇವಾ* = ದೇವಾಲಯ; *ಪ* = ಪತ್ನಿ; *ಪೌ* = ಪೌರಾಣಿಕ; *ಬಿ* = ಬಿರುದು; *ಮಂ* = ಮಂತ್ರಿ; *ಯ* = ಯತಿ; *ಯಾ* = ಯಾದವ; *ರಾ* = ರಾಷ್ಟ್ರಕೂಟ; *ರಾಕು* = ರಾಜಕುಮಾರ, ರಾಜಕುಮಾರಿ; *ರೂ* = ರೂವಾರಿ; *ಲೇ* = ಲೇಖಕ; *ವಿ* = ವಿಜಯನಗರ; *ವೈ* = ವೈಷ್ಣವ; *ಸ್ಥ* = ಸ್ಥಳ; *ಶೈ* = ಶೈವ; *ಹೆಂ* = ಹೆಂಗಸು; *ಹೊ* = ಹೊಯ್ಸಳ. ಸಂಖ್ಯೆಗಳು ಶಾಸನ ಸಂಖ್ಯೆಗಳನ್ನು ಸೂಚಿಸುತ್ತವೆ.)

ಅ

ಆ

ಖ

ಗ

ಘ

ಚ

ಥ

ಪ

ಫ

ಭ

ಮ

ಯ

ರ

ಹ